# ಅನೂಹ್ಯ

ಕೆ. ಎಸ್. ರಾಧಾಕೃಷ್ಣ

ಪುಸ್ತಕ ಚಿಲುಮೆ
ತಿಲಕ್‌ನಗರ ಮೈಸೂರು–570001

*ANOOHYA*—a novel by K. S. Radhakrishna, Lecturer in English. B.E.S. College, Jayanagar, Bangalore. Published by Pustaka 'Chilume 1860, Ratthansingh Main I, Tilak Nagar Mysore-570001. p.p. 140

First Edition 1978

©*K. S. Radhakrishna*

Cover Credit : *Chandranath*

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್,
ಮೈಸೂರು

# ಅರ್ಪಣೆ

ತನ್ನ ಸರಳತೆಯಿಂದ ಬದುಕಿನ ಭವ್ಯತೆಯ ಪರಿಚಯ ಮಾಡಿಕೊಟ್ಟ

**ಎಂ. ಎಲ್. ಮಂಜುನಾಥ್**

ಮತ್ತು

ತಮ್ಮ ವಾತ್ಸಲ್ಯದ ಔದಾರ್ಯದಿಂದ ಮನಸೂರೆಗೊಂಡ

**ಸೈಯದ್ ಸುಲ್ತಾನ್ ಹೈದರ್**

**ಪುಷ್ಪ**

ಇವರಿಗೆ

ಕೃತಜ್ಞತೆಗಳು :

ಸು. ರುದ್ರಮೂರ್ತಿಶಾಸ್ತ್ರಿ
ಗುತ್ತಿಗೇರಿ ಮಾನಪ್ಪ
ಎನ್. ಹೆಚ್. ನಾಗರಾಜ್
ಶ್ರೀಧರಮೂರ್ತಿ
ಚಂದ್ರನಾಥ್

ಇದು ನನ್ನ ಮೊದಲ ಕಾದಂಬರಿ; ಪ್ರಕಾಶಿತ ಕೃತಿಯೂ ಹೌದು. ಸಹಜವಾಗಿಯೆ 'ಅನೂಹ್ಯ' ಪ್ರಥಮ ಕೃತಿಯ ದೋಷ ಗಳೆಲ್ಲವನ್ನು ಮತ್ತು ನನ್ನ ಅಭಿವ್ಯಕ್ತಿಯ ಎಲ್ಲ ದೌರ್ಬಲ್ಯಗಳನ್ನೂ ಒಳಗೊಂಡಿರಬಹುದೆಂಬ ಅರಿವು ನನಗಿದೆ.

ಕಾದಂಬರಿಯನ್ನು ಓದಿದ ಕೆಲವು ಸ್ನೇಹಿತರು ಇಂಥ ಬದುಕು ನಮ್ಮ ಸಮಾಜದಲ್ಲಿ ವಿಚಿತ್ರವಾಗಿ ಕಾಣುತ್ತದೆ ಎಂದು ಅಭಿಪ್ರಾಯ ಪಟ್ಟರು ಪ್ರತಿಯೊಂದು ರೀತಿಯ ಬದುಕು ಪ್ರತಿಯೊಂದು ಸಮಾಜ ದಲ್ಲೂ ವಿಚಿತ್ರವಾಗಿ ಕಾಣುತ್ತದೆ ಬದುಕೇ ಅಂಥದು ಅದು ನಮ್ಮೆಲ್ಲರ ಕಲ್ಪನೆಯ ಒಟ್ಟು ವೈಶಾಲ್ಯಕ್ಕಿಂತಲೂ ಹೆಚ್ಚು ಹರಹುಳ್ಳದ್ದು ಅದರ ತೀವ್ರತೆಯನ್ನು ಅನುಭವಿಸಬೇಕಾದರೆ ಅದರ emotional Content ನೊಂದಿಗೆ ನಮ್ಮನ್ನು ಒಂದಾಗಿಸಿಕೊಳ್ಳಬೇಕು. ಹಾಗಲ್ಲ ದಿದ್ದರೆ ಅದರ ಸೊಬಗು ಸಾವಿಗೆ ಸಾಮೀಪ್ಯ ಹೊಂದಿದ ಚಿತ್ರ ಹಿಂಸೆಯಾಗುತ್ತದೆ ಎಂದು ನನ್ನ ಭಾವನೆ. ನಮ್ಮ ಸಮಾಜದಲ್ಲೂ ಇಂಥ ಬದುಕನ್ನು ಕಾಣುವುದು ಸಾಧ್ಯ; ಕಡೆಯ ಪಕ್ಷ ಸಾಧ್ಯ ವಾಗಬೇಕು. ಏಕೆಂದರೆ ಅಂತರಂಗ ಜೀವನಕ್ಕೂ, ಬಾಹ್ಯ ಬದು ಕಿಗೂ ವ್ಯತ್ಯಾಸವಿರುವಂಥ ಜಗತ್ತಿನಲ್ಲಿ ಯಾವುದನ್ನು ಅಸಾಧ್ಯ ಎಂದು ತಿಳಿಯಬೇಕು ಎನ್ನುವುದು ನನಗೆ ಅರ್ಥವಾಗುವುದಿಲ್ಲ.

ಇನ್ನೂ ಕೆಲವು ಸ್ನೇಹಿತರು ಕಾದಂಬರಿಯ ಮೊದಲ ಕೆಲವು ಪುಟಗಳಲ್ಲಿರುವ ಕೀರ್ತಿಯ ಕಥೆ Gone with the windನ ನಾಯಕಿಯ ಕಥೆಯಂತೆಯೇ ಇದೆ ಎಂದರು. ಆಗ ಮತ್ತೆ ಆ ಕಾದಂಬರಿಯನ್ನು ಓದಿದೆ ನನ್ನ ಕಾದಂಬರಿಯ ಮೊದಲ ಕೆಲವು ಪುಟಗಳು Scarlet ಳ ಜೀವನಕ್ಕೆ ಸಾಮೀಪ್ಯ ಹೊಂದಿದ್ದರೂ,

ಕಥೆಯ ಒಟ್ಟು ಅರ್ಥ ಅದಕ್ಕಿಂತ ಭಿನ್ನವಾದುದು ಎನಿಸಿತು. ಆದುದರಿಂದ ಅದನ್ನೂ ಹಾಗೆಯೇ ಬಿಟ್ಟಿದ್ದೇನೆ. ಮಾರ್ಗರೆಟ್ ಮಿಚಲ್‌ಳ ಮಹಾಕಾದಂಬರಿಯ ನಾಯಕಿಗಿಂತ ಹಾರ್ಡಿಯ ಯೂಸ್ಟೇಶಿಯ ಪಾತ್ರದ ಪ್ರಭಾವ ಕೀರ್ತಿಯ ಪಾತ್ರ ಚಿತ್ರಣದ ಮೇಲಾಗಿರಬಹುದೆಂಬ ಸಂಶಯ ನನಗಿದೆ.

Nought's had all'spent, where our desire is got without content tis safer to be that which we destroy than by destruchim dwell in doubtful joy.

*Macbeth*
iii, ii, 4-7

# ಅನೂಹ್ಯ

ಕೀರ್ತಿರಾವ್ ನೋಡುವುದಕ್ಕೆ ಸುಂದರಿಯೆ. ಅವಳಿಗೂ ಅದು ತಿಳಿದಿತ್ತು. ಅಲ್ಲವೆಂದು ಯಾರಾದರೂ ಅಂದರೆ ಹಲ್ಲು ಮುರಿಯುತ್ತಿದ್ದಳು. ತನ್ನಂತೆ ಯಾವ ಹುಡುಗಿಯೂ ಇರಬಾರದೆಂಬ ಬಯಕೆ, ತನ್ನಂತೆ ಯಾರೂ ಇಲ್ಲವೆಂಬ ನಂಬಿಕೆಯಿಂದ ವೃದ್ಧಿಯಾಗಿ ಅವಳಿಗೆ ಅತಿಮೋಹ ಬಂದಿತ್ತು.

ಅವಳ ಅಪ್ಪನಿಗೆ ಒಬ್ಬಳೇ ಮಗಳು. ಅವರ ಅಕ್ಕರೆಯಿಂದ ದಪ್ಪವಾಗಿದ್ದಳು. ಅವಳ ತಂಗಿಯರೂ ತನ್ನ ಮಕ್ಕಳೇ ಎಂಬುದು ಚಂದ್ರಾನಿಲ ರಾಯರಿಗೆ ಮರೆತುಹೋಗಿತ್ತು. ನಲವತ್ತು ದಾಟಿದ ಅವರಿಗೆ ತಮ್ಮ ಮಗಳು ಇಪ್ಪತ್ತರ ಕೀರ್ತಿ—ಕಪ್ಪು ಬಟ್ಟಲು ಕಂಗಳ, ನೀಳ ಕೂದಲಿನ, ಅಂಗೈ ನಡುವಿನ ಕೀರ್ತಿಯನ್ನು ಯಾವಾಗ ಕಂಡರೂ ಅಬ್ಬಾ ಇವಳು ನನ್ನ ಮಗಳು ಎಂದು ಆಶ್ಚರ್ಯ, ನನ್ನ ಮಗಳೇ ಎಂದು ಅನುಮಾನ. ಕೀರ್ತಿಗೆ ತಂದೆ ತಾಯಿಯರ ಪ್ರೀತಿ, ಬೇಕಾದಾಗ ಕಾಸು, ಮಾಡಿದ್ದನ್ನೆಲ್ಲ ಕ್ಷಮಿಸುವುದಕ್ಕೆ ಮನಸ್ಸು—ಇಷ್ಟು ಮಾತ್ರಕ್ಕೆ ಬೇಕು, ಅಷ್ಟೆ. ಹಳೆಯ ಕಾಲದವರಿಗೂ ಅವಳಿಗೂ ಯಾವ ಸಂಬಂಧವೂ ಇಲ್ಲ. ಚಂದ್ರಾನಿಲ ರಾಯರೂ, ಪ್ರತಿಮಾದೇವಿಯರೂ ಹಳೆಯ ಕಾಲದವರಲ್ಲವಾದರೂ ಹಳಬರು, ಕೀರ್ತಿಗೆ ಹಳೆಯ ಕಾಲದವರೆ.

ಅವಳ ಕಲಾಭಿಜ್ಞತೆಯೆಲ್ಲ ಸಾಕಾಗುವಷ್ಟು ಸಿನಿಮಾ ನೋಡಿ ಅಲ್ಲಿನ ಪ್ರೇಮಸನ್ನಿವೇಶಗಳನ್ನು ಅಭ್ಯಾಸಮಾಡುವುದರಲ್ಲಿ ಲೀನವಾಗಿತ್ತು. ಸಾಧ್ಯವಾದಷ್ಟೂ ಪ್ರೇಮಿಗಳನ್ನು ಸಂಪಾದಿಸಿ, ಅವರು ತನಗಾಗಿ ಸಾಯುವುದನ್ನು ನೋಡಬೇಕು. ತನ್ನ ಸೌಂದರ್ಯದ ಉಪಯೋಗ ಪಡೆದು ಗಂಡುಗಳ ಮೇಲೆ ತನ್ನ ಪ್ರಭುತ್ವ ಸಂಪಾದಿಸಿಬಿಡಬೇಕೆಂಬುದು ಅವಳ ಜೀವನ ಧ್ಯೇಯ. ಅವಳಿಗೆ ಇಲ್ಲಿಯವರೆಗೂ ಸೋಲಾಗಿರಲಿಲ್ಲ.

ಕೀರ್ತಿಗೆ ಓದುವುದೆಂದರೆ ಎಲ್ಲಿಲ್ಲದ ತಲೆನೋವು. ಓದಿ ಬರೆಯುವುದಕ್ಕಿಂತ ಹೆಚ್ಚಾಗಿ ಬರುತ್ತಿದ್ದರೂ ಅವಳಿಗೆ ಅಷ್ಟೇ ತಿಳಿದದ್ದು. ಹೈಸ್ಕೂಲು ದಾಟುವ ವೇಳೆಗಾಗಲೇ ವಿದ್ಯೆಯು ಎಷ್ಟು ನಿಷ್ಪ್ರಯೋಜಕ ಅನ್ನುವುದು ಅವಳಿಗೆ ಅರಿವಾಗಿತ್ತು. ಅದು ತಂದೆಗೂ ತಿಳಿಯುವ ಹಾಗೆ ನಾಲ್ಕು ಸಲ ಫೇಲಾದಳು. ಮೂರು ವರ್ಷಗಳ ಹಿಂದಷ್ಟೇ ವಿದ್ಯೆಯ ಮಹತ್ವವನ್ನು ಪ್ರತಿಪಾದಿಸುತ್ತಿದ್ದ ಚಂದ್ರಾನಿಲರಾಯರು ಓದುವವರ, ಓದಬೇಕನ್ನುವವರ ದಡ್ಡತನವನ್ನು ಹಾಡತೊಡಗಿದರು. ಸಿಕ್ಕ ಸಿಕ್ಕವರಿಗೆ ಕೊರೆದರು. ಅದೂ ಅಲ್ಲದೆ ಒಂದು ಹುಡುಗಿಗೆ ಬೇಕಾಗಿದ್ದುದು ರೂಪ, ಹಣ, ಚುರುಕು ಬುದ್ಧಿ, ಅಷ್ಟೆ. ಅವೆಲ್ಲವೂ ಮಗಳಿಗಿತ್ತು. ಶ್ರೀನಿವಾಸಯ್ಯನ ಮಗಳು

ಶಾರದಾ ಎರಡನೇ ಬಾರಿಗೆ ಹೈಸ್ಕೂಲು ಪಾಸುಮಾಡಿದಾಗ, ನನ್ನ ಮಗಳು ಅಗಲಿಲ್ಲವಲ್ಲ ಅಂತ ಅನಿಸಿದರೂ, ನನ್ನ ಮಗಳು ರೂಪವಂತೆ ಎಂದು ತೃಪ್ತಿಪಟ್ಟುಕೊಂಡರು. ಶಾರದಾಗೆ ಉಬ್ಬುಹಲ್ಲು ಅಂತ ಆನಂದ ಪಟ್ಟರು. ಕೀರ್ತಿಯಂತು ಓದಿದವರು ಯಾರೂ ಮದುವೆಯಾಗಿಲ್ಲ ಎಂದು ಹೇಳಿಬಿಟ್ಟಳು. ನಿನಗೆ ಉಬ್ಬುಹಲ್ಲು ನಿನ್ನನ್ನು ಯಾರು ಮದುವೆಮಾಡಿ ಕೊಳ್ಳೋರು ? ನಿನ್ನ ಮ್ಯಾಟ್ರಿಕ್‌ನಿಂದ ಏನು ಪ್ರಯೋಜನ ? ಅದನ್ನೇ ಪ್ರೀತಿಸ್ತೀಯಾ? ನಿನಗೆ ಮೊಲೆಗಳೇ ಇಲ್ಲ. ನೀನೇನು ಪ್ರೀತಿ ಮಾಡ್ತೀಯ? ಬಾರೊ ಚಂದ್ರು ಹೋಗೋಣ." ಶಾರದಾ ಅಳುತ್ತಅಮ್ಮನ ಬಳಿಗೆ ಹೋದಿದಾಗ ಅದು ವಿದ್ಯೆಯ ನಿಜವಾದ ಸೋಲು. ಚಂದ್ರಶೇಖರನಿಗೆ ಏನು ಹೇಳಬೇಕೋ ತಿಳಿಯಲಿಲ್ಲ. ಆದೂ ಅಲ್ಲದೆ ಕೀರ್ತಿ ಹೇಳುವುದರಲ್ಲಿ ಅರ್ಥವಿಲ್ಲದೆಯೂ ಇರಲಿಲ್ಲ. ಅವಳು ಮ್ಯಾಟ್ರಿಕ್‌ನಲ್ಲಿ ನಾಲ್ಕು ಸಲ ಫೇಲಾಗಿದ್ದರೂ ಅವಳ ಮೂಗಂತೂ ಅತ್ಯಂತ ಮನಮೋಹಕವಾಗಿತ್ತು. ಏನು ಹೇಳಬೇಕೆಂದೂ ಅವನಿಗನಿಸಲಿಲ್ಲ. ಸರಳನಾಗಿ ಹೇಳಿದ : ಬಾರೆ, ಲವ್ ಮಾಡೋಣ ".

ತೀರ ಕ್ಷುಲ್ಲಕ ವಿಷಯಗಳಿಂದ ಅತ್ಯಂತ ಮಹತ್ವದ ಸಂಗತಿಗಳವರೆಗೆ ಸ್ವಾರ್ಥಿಯಾಗಿದ್ದ ಕೀರ್ತಿಗೆ ತಂಗಿಯರ ಬಗೆಗೆ ಅಕ್ಕರೆ ಇರಲಿಲ್ಲ. ಚಂದ್ರಾನಿಲರಾಯರಂತೆ, ಅವಳಿಗೂ ಕ್ಷೇಮು, ಶೀಲ ತನ್ನ ತಂಗಿಯರು ಎಂಬುದು ಮರೆತೇಹೋಗಿತ್ತು. ಒಮ್ಮೊಮ್ಮೆ ತಾಯಿ ತನ್ನ ತಂಗಿಯರ ಬಗ್ಗೆ ತೋರುತ್ತಿದ್ದ ಆಸ್ಥೆ, ಕಳವಳದಿಂದ ಕೀರ್ತಿಗೆ ತಳಮಳವುಂಟಾದರೂ, ಅವರಿಬ್ಬರೂ ತನ್ನಷ್ಟು ಸುಂದರಿಯರಲ್ಲ ಎಂದು ಸಮಾಧಾನ ಪಟ್ಟು ಕೊಳ್ಳುತ್ತಿದ್ದಳು. ಕ್ಷೇಮುಗೆ ಸೊಂಟ ದಪ್ಪವಾಗಿದ್ದರೆ, ಶೀಲಗೆ ಮೊಲೆಗಳೇ ಬೆಳೆದಿರಲಿಲ್ಲ, ಹದಿನಾರು ಕಳೆದರೂ. ಶೀಲಳ ಅಸಹ್ಯ ಹುಟ್ಟಿಸುವ ಅಚ್ಚ ಬಿಳುಪು ಬಣ್ಣ ಅವಳನ್ನು ಕುರೂಪಿಯಾಗಿಸಿತ್ತು. ಕನ್ನಡಿಯ ಮುಂದೆ ನಿಂತಾಗಲೆಲ್ಲ ತಾನು ಸ್ವಲ್ಪ ಕಪ್ಪಿದ್ದರೆ ತನ್ನಕ್ಕ ತನ್ನನ್ನು ಹೀಗೆ ನಡೆಸು ತ್ತಿರಲಿಲ್ಲ ಎಂದು ಅವಳಿಗೆ ಹೊಟ್ಟೆ ಉರಿ. ಅವಳ ಹೊಟ್ಟೆ ಉರಿದಾಗಲೆಲ್ಲ ಅವಳ ಮುಖ ಇನ್ನಷ್ಟು ಉದ್ದವಾಗಿ, ಮುದುಕಿಯರ ಸ್ತನಗಳಂತೆ ಇಳಿ ಬಿದ್ದು ಇನ್ನಷ್ಟು ಅಸಹ್ಯವಾಗುತ್ತಿತ್ತು. ಕೀರ್ತಿಗೆ ಅವಳನ್ನು ಆ ಸ್ಥಿತಿಯಲ್ಲಿ ಕಂಡು ಆತ್ಮಾನಂದ. ಅವಳಿಗೆ ಹೆದರಿಕೆ ಹುಟ್ಟಿಸುವ ಸಂಗತಿಯೆಂದರೆ ಕ್ಷೇಮು ಓದಿನಲ್ಲಿ ತೋರುತ್ತಿದ್ದ ಆಸಕ್ತಿ ಮತ್ತು ಅವಳಿಗೆ ಸಹಜವಾದ ನಿಃಸ್ವಾರ್ಥ ಮನೋಭಾವ. ಅವಳು ಮನೆಯ ಆಳುಮಕ್ಕಳ ಅಕ್ಕರೆಯ ಮಗಳು. ಅವಳಾಗಲೇ ಕಾಲೇಜು ಹತ್ತಿದ್ದಳು.

ಚಂದ್ರಶೇಖರ ಪದವೀಧರ, ನಿರುದ್ಯೋಗಿ. ಕೆಲಸಕ್ಕೆ ಕಾದು ಬೇಸರ ವಾಗಿ, ಬೇರೇನೂ ತೋರದೆ ಕೀರ್ತಿಯನ್ನು ಪ್ರೀತಿಸುವುದಕ್ಕೆ ಶುರುಮಾಡಿದ.

ಅದಕ್ಕೆ ಪ್ರತಿಮಾದೇವಿಯರ ಮೌನ ಆಶೀರ್ವಾದವೂ ಇತ್ತು ಎಂದು ಹೇಳಲು ಬರುವುದಿಲ್ಲವಾದರೂ ಪ್ರತಿಭಟನೆಯಂತೂ ಇರಲಿಲ್ಲ. ಚಂದ್ರಾನಿಲರಾಯರಿಗೆ ಮಾತ್ರ ಚಂದ್ರಶೇಖರನ ಕೃಶಕಾಯ ಕಂಡರೆ ಆಗದು. ಮಗಳು ಅವನನ್ನು ಪ್ರೀತಿಸಬಾರದೆಂದು ಸ್ಪಷ್ಟವಾಗಿ ಹೇಳಿದ್ದರು. ಆದರೂ ಮಗಳು ಅವನ ಜೊತೆ ತಿರುಗಿದಾಗ ಪ್ರತಿಮಾದೇವಿಯರು ಸುಮ್ಮನಿದ್ದುದನ್ನು ಕಂಡುಅವರೂ ಸುಮ್ಮನಾಗಿಬಿಡುತ್ತಿದ್ದರು. ಅವರಿಗೆ ಹೆಂಡತಿಯ ಮಾತು ಭಗವದ್ಗೀತೆ.

ಚಂದ್ರಶೇಖರನಿಗೆ ಕೀರ್ತಿಯನ್ನು ಕಂಡರೆ ಭಯ. ಅವಳ ಮನೆಗೆ ಹೋದಾಗ ಅವಳು ಬೇರೆ ಯಾರ ಜೊತೆ ಮಾತನಾಡುತ್ತಿರುತ್ತಾಳೋ, ತನ್ನನ್ನೆಲ್ಲಿ ಹಾಸ್ಯ ಮಾಡುತ್ತಾಳೋ ಎಂದು ಆತಂಕ. ಅವಳ ಬಳಿಯೇ ಯಾವಾಗಲೂ ಇರಬೇಕೆಂಬ ಅವನ ಮಹತ್ವಾಕಾಂಕ್ಷೆ ಅವನನ್ನು ಅವಳಿಂದ ಸಾಧ್ಯವಾದಷ್ಟು ದೂರ ಇಡುತ್ತಿತ್ತು. ಎಷ್ಟೋ ಸಾರಿ ಕ್ಷೇಮಾನ ಪ್ರೀತಿಸುವುದು ತನ್ನಿಂದ ಸಾಧ್ಯವಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅಂದುಕೊಳ್ಳುತ್ತಿದ್ದ. ಪ್ರೀತಿಸುವುದು ಅವನಿಂದ ಸಾಧ್ಯವಿರಲಿಲ್ಲ ಎಂದರೆ ಅವನು ಅವಳ ದಪ್ಪದಾದ ನಡುವಿನ ಬಗ್ಗೆಯಾಗಲೀ ಅಥವಾ ಅವಳ ಒಳ್ಳೆಯತನದ ಬಗ್ಗೆಯಾಗಲೀ ಯೋಚನೆ ಮಾಡಿಕೊಂಡವನು ಎಂದಲ್ಲ. ಅವಳ ನಡು ದಪ್ಪವಾಗಿಲ್ಲ, ಅವಳು ತನ್ನನ್ನು ತಿರಸ್ಕರಿಸುವಷ್ಟು ಒಳ್ಳೆಯವಳಲ್ಲ ಎಂದು ಅವನಿಗೇ ಅನಿಸಿತ್ತು. ಆದರೂ ಇದೆ, ಹೌದು ಎಂದು ಸಮಾಧಾನ ಪಟ್ಟುಕೊಳ್ಳುತ್ತಿದ್ದ. ಶೀಲಳ ಬಣ್ಣ ತನ್ನ ಮಟ್ಟಕ್ಕೆ ಮೀರಿದ್ದು, ಐ.ಎ.ಎಸ್. ಅಧಿಕಾರಿ ಮಾತ್ರ ಅವಳ ಕೈ ಹಿಡಿಯಲು ಅರ್ಹ ಎಂಬುದು ಅವನ ಖಚಿತ ಅಭಿಪ್ರಾಯ. ಅವರಿಬ್ಬರನ್ನೂ ಪ್ರೀತಿಸುವುದು ಸಾಧ್ಯವಾಗಲಾರದು, ಆಗಬಾರದು ಎಂದೇ ಅವನು ಅವರಿಂದ ದೂರವಿದ್ದರೂ, ಕೀರ್ತಿಯನ್ನು ಕಂಡಾಗಲೆಲ್ಲ ಅವರಿಬ್ಬರನ್ನೂ ಪ್ರೀತಿಸಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದುಕೊಳ್ಳುತ್ತಿದ್ದ.

ಆದಷ್ಟು ಹುಡುಗರನ್ನು ತನ್ನ ಹಿಂದೆ ಸುಳಿದಾಡುತ್ತಿರುವಂತೆ ಮಾಡಬೇಕೆಂಬ ಕೀರ್ತಿಯ ಆಸೆ ಅದಮ್ಯ. ತನ್ನ ಹಿಂದೆ ಗಂಡುಮಕ್ಕಳ ಚಾಮರ ಸೇವೆ ನಡೆಯುತ್ತಿರಬೇಕಾದರೆ ಬೇರೆ ಹುಡುಗಿಯರಿಗೆ ಆಗುತ್ತಿದ್ದ ದುಃಖ, ಹೊಟ್ಟೆನೋವು ಅವಳಿಗೆ ಆನಂದ ಕೊಡುತ್ತಿದ್ದವು. ಆನಂದ ಚಿಕ್ಕಮಗುವೊಂದು ಮಳೆಯಲ್ಲಿ ಆಡುವಾಗ ಸಿಗುವ ಸಂಭ್ರಮಕ್ಕೆ ಹೋಲಿಸಬಹುದಂಥಾದ್ದು. ಅದು ಸರಿಯೇ, ಇಲ್ಲವೇ ಎಂಬ ಗೋಜಿಗೆ ಅವಳು ತನ್ನ ಬುದ್ಧಿಗೆ ನಿಲುಕಿದಷ್ಟೂ ಸಾಧ್ಯವಾದಷ್ಟೂ ಹೋಗುತ್ತಿರಲಿಲ್ಲ. ಏಕೆಂದರೆ ಅದರ ಸರಿ ತಪ್ಪುಗಳ ವಿಮರ್ಶೆ ಅವಳಿಗೆ ಭಯಂಕರ ತೊಂದರೆ ಕೊಡುತ್ತಿದ್ದವು. ತಾಯಿಯ ನಿರ್ಜೀವ ಪ್ರತಿಭಟನೆ, ತಂದೆಯ ಪ್ರೀತಿಯ

ಕುಮ್ಮಕ್ಕು, ತಂಗಿಯರ ಪೆದ್ದುತನ, ಗಂಡುಮಕ್ಕಳ ಅತ್ಯುತ್ಸಾಹ ಇತ್ಯಾದಿಗಳು ಕೀರ್ತಿ ತನ್ನ ಬಗ್ಗೆ ತನಗೇ ಸಂಪೂರ್ಣ ನಂಬಿಕೆ ವ್ಯಕ್ತಪಡಿಸಿಕೊಳ್ಳುವುದಕ್ಕೆ ಕಾರಣವಾಗಿದ್ದುವು.

* * *

ಚಂದ್ರಶೇಖರ—ಕೀರ್ತಿ ಮನೆಯ ಮುಂದಿನ ವಿಶಾಲವಾದ ತೋಟಿಗೆ ಬಂದಾಗ ಚಂದ್ರಾನಿಲರಾಯರು ಯಾರೊಡನೆಯೋ ಮಾತನಾಡುತ್ತಿದ್ದರು. ನೀಟಾಗಿ ಸೂಟು ಧರಿಸಿ, ಕೈಯಲ್ಲಿನ ಪುಟ್ಟದಾದ ಸೂಟ್ ಕೇಸೊಂದನ್ನು ಬದಿಯಲ್ಲಿರಿಸಿ ಮಾತನಾಡುತ್ತಿದ್ದ ವ್ಯಕ್ತಿಯನ್ನು ಕಂಡೊಡನೆಯೇ ಕೀರ್ತಿಯ ಕೆನ್ನೆಯ ಗುಳಿಗಳು ಆಳವಾಗತೊಡಗಿದುವು. ತಂದೆಯೊಡನೆ ಮಾತನಾಡುತ್ತಿದ್ದವನ ಬದಿಯಲ್ಲಿ ಕುಳಿತಿದ್ದ ಶೀಲಳನ್ನು ಕಂಡು ಅವಳ ಎದೆಯಲ್ಲಿ ಚಮ್ಮಗೆ ಕುಳಿರೂದಿದಂತಾಗಿ ಅವಳ ಅಸೂಯೆ ಉರಿಯಿತು. ಆಕಾಂಕ್ಷೆ ಪುಟಿಯಿತು. ದೊಡ್ಡದಾದ ಚಿಟ್ಟೆಯೊಂದನ್ನು ಕಂಡಾಗ ಮಗುವಿಗಾಗುವ ಆಶ್ಚರ್ಯ ಉಲ್ಲಾಸ ಕೀರ್ತಿಯ ಉಗುರುಗಳಲ್ಲಿ ಪುಟಿದು ಅವು ಕೆಂಪಗಾದವು.

ಚಂದ್ರಶೇಖರ ತಾನು ಕಂಡ ಯಾವುದೇ ಸಿನಿಮಾದಲ್ಲಿನ ಲವ್ ಮೇಕಿಂಗ್ ಕುರಿತು ಹೇಳುತ್ತಿದ್ದ. "ನೋಡು ಕೀರ್ತಿ, ಅಲ್ಲಿ ಏನ್ಮಾಡ್ತಾನೆ ಗೊತ್ತ, ಅವನು ? ! ಅವಳನ್ನ ಕರೀತಾನೇ. ಕಿಸ್ ಮಾಡಲ ಅಂತಾನೆ. ಅವಳೂ ಹೂಂ ಅಂತಾಳೆ. ಅದು ಸರಿ ಅಂತೀಯ?" "ಹೂಂ". ಚಂದ್ರುಗೆ ಅನುಮಾನ ಬಲವಾಗಿ ಗಂಟಲು ಆರಿತು. ಎಂದೂ ನನ್ನ ಮಾತಿಗೆ ಲಕ್ಷ್ಯ ವೀಯದ ಕೀರ್ತಿ ಇಂದೇಕೆ ಇಷ್ಟೊಂದು ಆಸಕ್ತಿಯಿಂದ ನನ್ನ ಮಾತು ಕೇಳಿದಳು ? ಹುಂ ಎಂದಂದಳು ಬೇರೆ.! ಛೆ, ಥೆ. ಇವಳನ್ನ ಪ್ರೀತಿಸುವುದಕ್ಕೆ ನನಗೇ ಗೊತ್ತಿರಲಿಲ್ಲ. ಈ ಥರದ ಒಂದು ಸಿನಿಮಾ ಮೊದಲೇ ಹೇಳಿದ್ದರೆ, ಯಾವಾಗಲೋ ಮದುವೆಯಾಗಿ . . . ತನ್ನ ದಡ್ಡತನಕ್ಕೆ ಬೆಂಕಿ ಬೀಳಲಿ. ತನ್ನನ್ನು ಕೊಂದುಕೊಳ್ಳಬೇಕೆನ್ನುವಷ್ಟು ಬೇಜಾರಾಯಿತು ಅವನಿಗೆ. ಈಗಲೂ ತಡ ಆಗಿಲ್ಲ.

ಕೀರ್ತಿ, ಕೀರ್ತಿ, ನಾನು ನಿನ್ನ ಪ್ರೀತಿಸ್ತೀನಿ ಕೀರ್ತಿ.

'ಹೂಂ' ಅವಳ ಕಣ್ಣುಗಳು ಮಿನುಗುತ್ತಿದ್ದುವು. ಕೆನ್ನೆಯಲ್ಲಿನ ಗುಂಡಿಗಳು ಹವಳದ ಹಾಗೆ ಆಳವಾಗಿದ್ದುವು.

ನೀನೂ ನನ್ನ ಪ್ರೀತಿಸ್ತೀಯ, ಕೀರ್ತಿ !

'ಹೂಂ' ಅವಳು ಭಯಂಕರ ಚೆನ್ನಾಗಿದ್ದಳು. ಅವಳ ಗಮನ ಚಂದ್ರಾನಿಲರಾಯರ ಜೊತೆಯಲ್ಲಿದ್ದವನ ಬಳಿಯಲ್ಲಿ ಬಿಗಿಯಾಗಿ.

ಚಂದ್ರಶೇಖರನಿಗೆ ಇಂಥ ಛಾನ್ಸು ಬಿಡಬಾರದು. ಬಿಟ್ಟರೆ ಮತ್ತೆ ಬರುವುದಿಲ್ಲ ಎಂದು ಅನಿಸಿತು. ಬಂದರೂ ಕೀರ್ತಿಯ ಮನಸ್ಸು ಹೀಗೇ

ಎಂದು ಹೇಳಲು ಬರುವುದಿಲ್ಲ. 'ಅವಳಿಗೆ ಯೋಚಿಸುವುದಕ್ಕೂ ಬಿಡ ಬಾರದು. ಅವಳ ಕಣ್ಣು ಬೆಳಗುತ್ತಿದೆ. ಮೂಗು ಅತ್ಯಂತ ಸೂಕ್ಷ್ಮವಾಗಿ ಸ್ಪಂದಿಸುತ್ತಿದೆ. ಕೆನ್ನೆ ಆಳವಾಗಿ, ಕೆಂಪಾಗಿ...ಛೆ! ಅವನಿಗೆ ತನ್ನ ಎದುರಿಗೇ ಇನ್ನೊಂದು ಗಂಡು ನಿಂತಾಗ ತಾನು ಕೀರ್ತಿಯ ಕೈ ಹಿಡಿಯಲು ಬೇಕಾದ ತನ್ನಲ್ಲಿರುವ ಅರ್ಹತೆಗಳ ಬಗೆಗೆ ಹೇಳಿಕೊಳ್ಳಬೇಕು ಅಥವಾ ತಾನಾದರೂ ಯೋಚಿಸಬೇಕು ಅನಿಸಲಿಲ್ಲ. ಸುಮ್ಮನೆ ಸರಳವಾಗಿ ಕೇಳಿದ—ಕೀರ್ತಿ, ನನ್ನ ಮದುವೆ, ಕೀರ್ತಿ...'ಹುಂ'. ಚಂದ್ರಾನಿಲರಾಯರು ಅವಳ ಕಡೆ ಕೈ ತೋರಿಸುತ್ತಿದ್ದರು. ಅವನೂ ಅವಳತ್ತ ಮುಖ ಮಾಡಿ ನಕ್ಕ. ಅವರಿಗೇನೋ ಹೇಳಿದ ಕಿವಿಯತನಕ ಬಗ್ಗಿ. ಕೀರ್ತಿಯ ಗುಂಡಿಗೆ ಧಡಕ್ಕ್, ಧಡಕ್ಕ್ ಬಾರಿಸಿತು. ಎದೆ ಚಿಮ್ಮಿ ಬಂತು. ಬಿಗಿಯಾಗಿ ಒತ್ತಿ ಹಿಡಿದುಕೊಂಡಾಗ ಕೆನ್ನೆಯಲ್ಲಿ ಬಿಸಿಯಾಗಿ......ತಲೆ ಬಾಗಿಸಿದಳು.

ನಿಜವಾಗಿಯೂ ಕೀರ್ತಿ . . ಚಂದ್ರು ಅನುಮಾನಿಸಿದ.

ಅವನಿಗೆ ಸತ್ತೇ ಹೋಗುವಷ್ಟು ಆನಂದವಾಗಿತ್ತು. ಬದುಕಿದ್ದೀನ ಅಂತ ಭಯವಾಯ್ತು. ಕುದುರೆ ಪಂದ್ಯಗಳಲ್ಲಿ ಜಾಕ್‌ಪಾಟ್ ಬಂದೆ ಎಷ್ಟೋ ಮಂದಿ ಸತ್ತು ಹೋಗುತ್ತಾರೆಂದು ಅವನು ಕೇಳಿ ತಿಳಿದಿದ್ದ. ಅವಳ ಕೈ ಹಿಡಿದು ಬೇಡಿದ :

'ಕೀರ್ತಿ, you are my angel, aren't you? Please, ಮನೆಗೆ ಬಾ. ಬರಲ್ಲ ಅನ್ನಬೇಡ. ನೀನು ಒಳ್ಳೆಯವಳಲ್ವ?"

'ಅಗಲಿ'...ಏನು ಅಳ್ತಾ ಇದಾನೆ ಇಷ್ಟು ಹೊತ್ತು?

ಓ beautiful my Goddess. ಅವಳ ಕೈ ತೆಗೆದುಕೊಂಡು ಹಿಸುಕಿ ತೊಂದರೆ ಕೊಟ್ಟ. ಚಂದ್ರಾನಿಲರಾಯರೂ, ಅವನೂ ಇಬ್ಬರೂ ಇವರತ್ತ ಬರುತ್ತಿದ್ದರು. ಇವರ ಮಾತು ಕಿವಿಗೆ ಬೀಳುವಷ್ಟು ಸನಿಯ. ಕೀರ್ತಿಗೆ ನಾಗರಾಜನನ್ನು ಕಂಡ ಕೂಡಲೆ ಎದೆ ಗಕ್ಕನೆ ಬಾಯಿಗೆ ಬಂತು. ಓ ಆನಂದವೆ! ಈ ಮಂಗ ಏನೋ ಕೈ ಹಿಡಿದುಕೊಂಡು ಕುಣಿದು ಅವಮಾನ ಮಾಡ್ತಾ ಇದೆಯಲ್ಲ. ನಾಚಿಕೆಯಾಗಿ ಬೈಯುವ ಹಾಗೆ ಚಂದ್ರುವತ್ತ ಕಣ್ಣು ಹರಿಸಿದಳು. ಚಂದ್ರು ಕಕ್ಕತ್ತಿದ. ಅಗಲೇ ತಮ್ಮ ಹತ್ತಿರಕ್ಕೆ ಅವರು ಬಂದುಬಿಟ್ಟಿದ್ದಾರೆ. ಅವನಿಗೆ ತಾನು ಹೇಳಿದ್ದನ್ನೆಲ್ಲ ಅವರೆಲ್ಲಿ ಕೇಳಿಕೊಂಡರೋ ಎಂದು ಹೆದರಿಕೆಯಾಯ್ತು. ಆದರೂ ಅವನು ಕಾಲೇಜಿನಲ್ಲಿ ಓದಿದ ಐಚ್ಛಿಕ ಕನ್ನಡ ಅವನ ಕೈ ಬಿಡಲಿಲ್ಲ. ಎದ್ದು ನಿಂತ. ನಮಸ್ಕಾರ ಸಾರ್ ಅಂದ. ಚಂದ್ರಾನಿಲರಾಯರ ಪ್ರತಿವಂದನೆಗೂ ಕಾಯಲಿಲ್ಲ. ಕೀರ್ತಿ ನಾ ಹೇಳಿದ್ನಲ್ಲ...ಅದೇ ಆ ಪುಸ್ತಕ ಓದು ತುಂಬ ರಿಲವೆಂಟಾಗಿದೆ. ಬರ್ತೀನಿ. ಮರೀಬೇಡ, ಎಂದವನೆ ಹಗುರ ಹೆಜ್ಜೆ ಹಾಕುತ್ತ ಹೋಗಿಬಿಟ್ಟ. ಚಂದ್ರಾನಿಲರಾಯರು ಅವನತ್ತಲೇ ನೋಡು

ತ್ತಿದರು. ಕೀರ್ತಿಯ ತಲೆಯಲ್ಲಿ ನಾಗರಾಜ ತುಂಬಿ ಅದು ಭಾರವಾಗಿತ್ತು. ಅವನು ಮಾತ್ರ ತುಂಟ ನಗು ನಗುತ್ತಿದ್ದ.

'ಏನು ಹುಡುಗಿ,' ಯಾರೋ ಅಬ್ಬೇಪಾರಿಗೆ ಮೋಡಿ ಹಾಕ್ತಾ ಇರೋ ಹಾಗಿದೆ, ನಾಗಾರಾಜ ಕೇಳಿದ. ತನ್ನ ಮಾತು ಕೀರ್ತಿಗೆ ಸಂತೋಷ ತರುತ್ತದೆಂದು ಅವನಿಗೆ ಗೊತ್ತಿತ್ತು. ಅದರಿಂದ ಅವಳಿಗೆ ಖುಶಿಯೂ ಆಯ್ತು ಎನ್ನಲು ಅಡ್ಡಿ ಇಲ್ಲ. ಆದರೆ ಅವನು ಅದನ್ನು ಹೇಳಿದ ಧ್ವನಿ ಅವಳಿಗೆ ಹಿಡಿಸಲಿಲ್ಲ. ಅವನು ಸಿಟ್ಟಿನಲ್ಲಿ, ಅಸೂಯೆಯಿಂದ ಹೇಳಿದರೆ ಅವಳಿಗೆ ಆಗುತ್ತಿದ್ದ ಆನಂದ ಈಗಿನ ಖುಶಿಗೆ ಹೋಲಿಸುವಂಥದ್ದಲ್ಲ. ಕೀರ್ತಿ ಯಾರಿಗೂ ಅನುಮಾನ ಬರದ ಹಾಗೆ ನಾಗರಾಜನನ್ನು ಪ್ರೀತಿಸುತ್ತಿದ್ದಳು. ಅತನನ್ನ ಮದುವೆಯಾಗಬೇಕೆಂಬುದು ಅವಳ ಉತ್ಕಟೇಚ್ಛೆ ಎಂದು ಹೇಳುವಂತಿಲ್ಲ. ಏಕೆಂದರೆ ಮದುವೆಯ ವಿಷಯವನ್ನು ಅವಳು ಎಂದೂ ಗಂಭೀರವಾಗಿ ಯೋಚಿಸಿದವಳಲ್ಲ. ನಾಗರಾಜನ ಬಗ್ಗೆಯೂ ಅಷ್ಟೆ. ಆದರೆ ನಾಗರಾಜನ ನೀಳವಾದ ಆಕೃತಿ, ತೂಕವಾದ ರೆಪ್ಪೆಗಳು, ಸ್ವಲ್ಪ ಮುಂಗೋಪವನ್ನು ಸೂಚಿಸುತ್ತಿದ್ದ ಮೂಗು ಅವಳಿಗೆ ಅತ್ಯಂತ ಪ್ರಿಯವಾಗಿದ್ದುವು. ಯಾವಾಗಲೂ ಅರಳುತ್ತಿದ್ದ ಅವನ ತುಟಿಗಳನ್ನೂ, ನಗುತ್ತಿದ್ದ ಕಣ್ಣುಗಳನ್ನೂ ಅವಳು ಮನಸ್ಸಿನಲ್ಲೇ ಸಾವಿರಸಾರಿ ಮುತ್ತಿಟ್ಟಿದ್ದಳು. ಅಂದರೆ ಅವಳು ಇಷ್ಟಪಡದ ವಿಷಯಗಳು ಅವನಲ್ಲಿರಲಿಲ್ಲವೆಂದಲ್ಲ. ಅವನು ಹೇಳುತ್ತಿದ್ದ ಗಂಭೀರವಾದ ವಿಷಯಗಳು, ಪುಸ್ತಕ ಪಿಶಾಚಿತ್ವ— ಇಷ್ಟು ಸಾಕು ಅವಳು ಅವನನ್ನು ದ್ವೇಷಿಸುವುದಕ್ಕೆ. ಆದರೆ ಅವನ ಓದಿನ ಬಗ್ಗೆ ಅವಳಿಗಿದ್ದ ತಿರಸ್ಕಾರದಲ್ಲಿ ಅವನು ತನ್ನ ಬಲೆಗೆಲ್ಲಿ ಬೀಳುವುದಿಲ್ಲವೊ ಎಂಬ ಗಾಬರಿಯೂ ಇತ್ತು. ಏಕೆಂದರೆ ನಾಗರಾಜ ಒಬ್ಬನೇ ಅವಳ ಕಣ್ಣರೆಪ್ಪೆಯ ಭಾರದಲ್ಲಿ ಬಿದ್ದು ಸಪ್ಪೆಯಾಗದಿದ್ದವನು. ಅವಳಿಗೆ ಅನಿಸುತ್ತಿತ್ತು : ಅವನು ದೂರ, ತನ್ನಿಂದ ಬಹುದೂರ. ಯಾವಾಗಲೂ ನುಣುಚಿಕೊಳ್ಳುತ್ತಾನೆ, ಯಾವಾಗಲೂ ಹೊಸದಾಗಿ ಕಾಣುತ್ತಾನೆ.

ಅವಳ ಮುಖದಲ್ಲಿ ಬರೆದಿದ್ದ ಅತೃಪ್ತಿ ಅವನಿಗೆ ಅರ್ಥವಾಯಿತು. ಅವಳನ್ನು ಸ್ವಲ್ಪ ನೋಯಿಸಿದೆ ಎಂದೆನಿಸಿದರೂ ಕಸಿವಿಸಿಯೇನೂ ಆಗಲಿಲ್ಲ. ಅವಳನ್ನು ಆ ಹೊತ್ತು ಕಂಡವನಲ್ಲ. ಹತ್ತು ವರ್ಷಗಳಿಂದ ಅರಿತವನು. ಹೇಳಿದ: ಹೇಗಿದ್ದೀಯ ? ಅಪ್ಪ ಏನೋ ತಲೆನೋವು ಅಂತಿದ್ದರು.

'ಚೆನ್ನಾಗಿದೀನಿ' ಕೀರ್ತಿಗೆ ಬೋರು.

ಅವಳ Spirit cheerup ಮಾಡಬೇಕೆಂದು ಅವನಿಗನಿಸಿತು. 'ಬಾ ಹೋಗೋಣ.' ನಿನಗೊಂದು gift ತಂದಿದೀನಿ. ಅವಳ ಕಣ್ಣು ಕಿವಿ ಚುರುಕಾದವು. ಆದರೆ ತನ್ನ ಆಸಕ್ತಿ ತೋರಿಸಿಕೋಬಾರದೂಂತ : ಅಮ್ಮ ಹೇಗಿದಾರೆ ? ಇದೇನು ಇಲ್ಲಿಯವರೆಗೂ ಬಂದೆ ಪರೀಕ್ಷೆ ಏನಾಯ್ತು ?

ಒಂದಕ್ಕೊಂದು ಸಂಬಂಧವಿಲ್ಲದ ಪ್ರಶ್ನೆಗಳು ಅವಳ ಗಲಿಬಿಲಿಯಲ್ಲಿ ಹೊರಕ್ಕೆ ಬಂದುಬಿಟ್ಟವು. ಅವನು ಹೇಳಿದ : ನೋಡು ಕೀರ್ತಿ, ನಿನಗೆ ನಾನು ತಂದಿರೋ gift ಬೇಕು, ಬೇಡ ಅಂತ ಯಾಕೆ ತೋರಿಸ್ಕೋತೀಯ? ಬಾ' ಎಂದು ರಟ್ಟೆ ಹಿಡಿದೆಳೆದ. ಅವಳಿಗೆ ಹೋಗಬಾರದೆಂದು ಮನಸ್ಸಿದ್ದರೂ ತನ್ನ ಕೈಹಿಡಿದಿದ್ದಾನೆ, ಅವನೇ ಮೊದಲು. ನಾನೇನೂ ಅವನ ಹಿಂದೆ ಓಡ್ತಾ ಇಲ್ಲವಲ್ಲ, ಎಂದು ಸಮಾಧಾನ ಪಟ್ಟುಕೊಂಡಳು. ಅವನ ಹಿಡಿತ ಬಿಗಿಯಾಗಿತ್ತು. ಬಿಸಿಯಾಗಿ, ಮಳೆಗಾಲದ ರಾತ್ರಿಯ ಬಿಸಿನೀರಿನ ಸ್ನಾನದಂಥ ಅಪೂರ್ವ ಹಿತ ಅವಳ ಅನುಭವ: ತನ್ನನ್ನು ಪ್ರೀತಿಸಿದ, ಚುಂಬಿಸಿದ, ಅಪ್ಪಿದ ಯಾರೂ ಇಂಥ ಹಿತ ಕೊಟ್ಟಿಲ್ಲ. ಗುಗ್ಗು ಚಂದ್ರಶೇಖರನಿಗೂ, ನಾಗರಾಜನಿಗೂ, ಬೆಕ್ಕಿಗೂ ಬೆಳೆದ ಮನುಷ್ಯರಿಗೂ ಇರುವ ವ್ಯತ್ಯಾಸ. ಹೋಲಿಕೆ ಸರಿ ಇಲ್ಲದಿರಬಹುದು. ಆದರೆ ಅದು ಅವಳ ಮನಸ್ಸಿಗೆ ಬಂತು.

ಅವನು ತಂದಿದ್ದ ರಕ್ತವರ್ಣದ ಫ್ರಾಕ್ ಅವನು ನಿಜವಾಗಿಯೂ ಗಂಡಸು ಎಂದು ಅವಳಿಗೆ ಸಾರಿ ಸಾರಿ ಹೇಳಿತು. ಅಂದರೆ ಅದೇ ಬಣ್ಣದ, ಅದಕ್ಕಿಂತ ದುಬಾರಿ ಬೆಲೆಯ ಬಟ್ಟೆಯನ್ನು ಅವಳಿಗೆ ಯಾರೂ ತಂದು ಕೊಟ್ಟಿರಲಿಲ್ಲವೆಂದಲ್ಲ. ಅಥವಾ ಅದನ್ನು ಎಲ್ಲಕ್ಕಿಂತಲ್ಲೂ ಹೆಚ್ಚು ಬಯಸುತ್ತಿದ್ದಳು ಎಂದೂ ಅಲ್ಲ. ಅವಳಿಗೆ ತುಂಬ ಖುಶಿಯಾಯಿತು ಅನ್ನುವ ಮಾತು. ಅವನು ಅದನ್ನು ಮಡಿಸಿಟ್ಟಿದ್ದ ಪೆಟ್ಟಿಗೆಯನ್ನು ಅವಳ ಕೈಗಿತ್ತು ನೋಡು ಏನೂ ಹೇಳಬೇಡ. ನಿನ್ನ ರೂಮಿಗೆ ಹೋಗು. ಚೆನ್ನಾಗಿದ್ದರೆ ಕೂಡಲೆ ಉಪಯೋಗಿಸು ಎನ್ನುತ್ತ ಅವಳ ಮೈಯುದ್ದಕ್ಕೂ ಕಣ್ಣು ಹರಿಸಿದ. ಅವನ ನೋಟ ಅವಳೆದೆಯ ಮೇಲೆ ಚುಚ್ಚಿ ಕಚಕುಳಿ ಇಡುತ್ತಿತ್ತು. ಅವನು ಅವಳನ್ನು ದಿಟ್ಟಿಸುತ್ತಿದ್ದಂತೆಯೆ ಅವಳು ಆನಂದದಿಂದ ಉಬ್ಬಿ, thank you ! ಅನ್ನುವ ಹಾಗೆ ತಲೆಬಾಗಿಸಿದಳು. ಮರುಕ್ಷಣದಲ್ಲಿ ತನಗಾಗಿರುವ ಸಂತೋಷ, ತನಗೆ ಅವನಲ್ಲಿರುವ ಆಸಕ್ತಿ ಅವನಿಗೆ ತಿಳಿಯಬಾರದೆಂದು ಕೀರ್ತಿ ಮುಖ ಎತ್ತಿ ನಿಂತಳು. ಅವಳ ಕಣ್ಣು ಕುಣಿಯುತ್ತಿತ್ತು. ನಾಸಿಕ ಸ್ವಲ್ಪವೇ ಬಾಗಿ, ಸ್ಪಂದಿಸಿ ಅತಿ ಮೋಹಕವಾಗಿತ್ತು.

ನಾಗರಾಜ ಹೇಳಿದ : ಕೀರ್ತಿ, ನಾನು ನಿನ್ನನ್ನು ಏನೋ ಅಂತ ತಿಳಿದುಕೊಂಡಿದ್ದೆ. ನಿನ್ನೆ ಸಂಜೆ ನಿನಗೊಂದು surprise gift ತರಬೇಕೂಂತ ಅಂಗಡಿಗೆ ಹೋದಾಗ ತುಂಬ ಚೆನ್ನಾಗಿ ನೋಡಿ ತರಬೇಕು ಅಂತ ಅನ್ನಿಸ್ತು. ನೋಡೋದಿಕ್ಕೆ ತುಂಬಾ ಸಾಮಾನ್ಯ ಹುಡುಗಿ, ಫ್ರಾಕ್ ಬಹಳ ಚೆನ್ನಾಗಿರಬೇಕು ಅಂತ ಅಂಗಡಿಯವನ ಕೈಲಿ ಹೇಳಿದೆ. ಈಗ ನೋಡಿದರೆ ನಿನ್ನ ರೂಪ ಸಾಮಾನ್ಯ ಹುಡುಗಿಯದಲ್ಲ ಅಂತ ಅನ್ನಿಸುತ್ತೆ.

ಅವಳ ಅಭಿಮಾನ ಕುದಿಯಿತು. ತನ್ನನ್ನು ಚೆನ್ನಾಗಿಲ್ಲ ಅನ್ನುವುದಕ್ಕೆ ಅವನ ಸೊಕ್ಕು ಎಷ್ಟಿರಬೇಕು ? ಅವಳಲ್ಲಿದ್ದ ಚಂದ್ರಾನಿಲರಾಯರ ರಕ್ತ ಉಕ್ಕಿ ಬಂತು. ಕೈಯಲ್ಲಿದ ಪೊಟ್ಟಣವನ್ನು ಬೀಸಾಡಿ ಸಿಂಹಿಣಿಯಾದಳು. ಕೋಣೆಗೆ ನುಗ್ಗಿದಳು. ಹಾಸಿಗೆಯ ಮೇಲುರುಳಿ ಮುಳುಮುಳು ಅತ್ತಳು. ಅವಳ ದುಃಖದಲ್ಲಿ ಅವಳಿಗಿದ್ದ ಒಂದೇ ಸಮಾಧಾನವೆಂದರೆ ತನ್ನ–ನಾಗರಾಜನ ನಡುವೆ ನಡೆದ ಶೀತಲ ಯುದ್ಧಕ್ಕೆ ಪ್ರೇಕ್ಷಕರಾಗಿ ಅಲ್ಲಿ ಯಾರೂ ಇರಲಿಲ್ಲವೆನ್ನುವುದು.

ನಾಗರಾಜ ಕಳ್ಳನ ಹಾಗೆ ಕೋಣೆ ಹೊಕ್ಕಿದ್ದು ಅವಳ ಗಮನಕ್ಕೆ ಬರಲಿಲ್ಲ, ಹಾಸಿಗೆಯ ಬಳಿ ನಿಂತವನಿಗೆ ಛೆ, ತಮಾಶೆ ಮಾಡಲು ಹೋಗಿ ಅವಳ ಮನ ನೋಯಿಸಿದೆನಲ್ಲ ಎನಿಸಿತು. ಹಾಗೆಂದು ಹೇಳಿದರೂ ಅವಳು ನಂಬುವುದಿಲ್ಲ. ಅವಳ ಜಾಯಮಾನವೇ ಹಾಗೆ. ಅವಳ ಹಠಮಾರಿತನ ಮೇಲುನೋಟಕ್ಕೆ ಅವಳಿಗೆ ಸದ್ಯ ಸಂತೋಷವನ್ನು ತರುತ್ತಿದ್ದರೂ, ಅದರ ಆಳದಲ್ಲಿ ಹರಿಯುತ್ತಿದ್ದ ದುರಂತ ಛಾಯೆ ಯಾರ ಗಮನಕ್ಕೂ ಬರುವುದು ಸಾಧ್ಯವಿರಲಿಲ್ಲ. ಅವಳ ಸಂಸ್ಕೃತಿ, ವಿದ್ಯೆಗಳಿಗಂತೂ ಅದು ಸಂಪೂರ್ಣ ಮಾಯಾವಿ.

ನಾಗರಾಜ ಕಿವಿಯಲ್ಲಿ ಉಸಿರಿಡಬೇಕೆಂದು ಎರಡು ಮೂರು ಬಾರಿ ಬಗ್ಗಿ ಬೇಡವೆಂದು ತಲೆ ಎತ್ತಿದಾಗ, ಬಿಸಿಯುಸಿರು ತಾಗಿ, ಅವಳಿಗೆ ಅರ್ಥವಾಯಿತು—ಅವನು ಬಂದಿದ್ದಾನೆ ಎಂದು. ಅವಳ ದೃಷ್ಟಿಯಲ್ಲಿ ಅದು ಮಹದ್ವಿಜಯ. ಅವನಾಗೆ ಬಂದಿದ್ದಾನೆ—ತಪ್ಪು ಕೇಳಿಕೊಳ್ಳಲು. ಅವನು ಬಾಗಿದಾಗ ಅವಳ ಕೆನ್ನೆಯಂಚಿನಲ್ಲಿ ಅವನ ಬಿಸಿಯುಸಿರು ಹಿತವಾಗಿ ಬೀಸಿತು.

ಕೀರ್ತಿ ಅವನು ಮೃದುವಾಗಿ, ಹಿತವಾಗಿ ಉಚ್ಚರಿಸಿದ. ಅವನ ಧ್ವನಿಯಲ್ಲಿ ಪ್ರೀತಿಯಿತ್ತು, ಮಾದಕತೆ ಇತ್ತು ; ಕಾಣುವಂಥ ಸೋಲಿತ್ತು.

ಕೀರ್ತಿ ತಲೆ ಎತ್ತಲಿಲ್ಲ. ಅವನೇ ತನ್ನ ಕಾಲಡಿಯಲ್ಲಿ ಬೀಳಲಿ ಎಂಬ ಆಸೆ. ಮಿಗಿಲಾಗಿ ಮತ್ತಷ್ಟು ಸಾರಿ ಕೀರ್ತಿ ಎಂದು ಕರೆಯಲಿ ಎಂಬ ಬಯಕೆ. ಅವನ ಸ್ವರದಲ್ಲಿ ಯಾವಾಗಲೂ ಇರುತ್ತಿದ್ದ ಅಲಭ್ಯತೆ, ಅಲಿಪ್ತತೆಯನ್ನು ಸುಟ್ಟು ಗೆದ್ದು ಬಂದ ಫೀನಿಕ್ಸ್—ಅವನ ಅಪೂರ್ವ ಪ್ರಣಯ ಧ್ವನಿ.

ಅವಳು ತನ್ನನ್ನು ಎತ್ತಿ ನಿಲ್ಲಿಸಲು ಪ್ರಯತ್ನಿಸುತ್ತಿದ್ದ ನಾಗರಾಜನ ಭಾರವನ್ನು ಕೆಳಗೆಳೆಯುತ್ತಿದ್ದಳು. ಅವಳ ನಿರಾಕರಣ ಕೀರ್ತಿಯ ಸುಪ್ತ ಸ್ವಪ್ನಗಳ ವಿಜಯ. ಅದನ್ನು ಅರಿತುಕೊಳ್ಳುವ ಮೊದಲೇ ಅವನ ತೋಳ ತೆಕ್ಕೆಯಲ್ಲಿ ಬಂಧಿಯಾಗಿ ತನ್ನ ಕೆಂಪು ತುಟಿಗಳನ್ನು ಅವನಿಗೆ ನೀಡಿದ್ದಳು. ಆ ಮಿಲನ ಇಬ್ಬರೂ ತಂತಮ್ಮ ಅಹಂಕಾರವನ್ನು ತ್ಯಜಿಸಿ ಪರಸ್ಪರರ

ಭಾವನೆಗಳನ್ನು ಪೂಜೆ ಮಾಡಿದ ಪುಣ್ಯ ಕ್ಷಣ.

ಅವನು ಅವಳನ್ನು ಚುಂಬಿಸಿದ. ಕೀರ್ತಿಯ ಸೊಂಟಕ್ಕೆ ಕೈಯಿಟ್ಟು, ಅವಳ ದೇಹವನ್ನು ತನ್ನುದ್ದಕ್ಕೂ ಎಳೆಯುವವನಂತೆ ಎತ್ತಿ ಸಾಂಭೋಗ್ಯವಾಗಿ ತನ್ನ ತುಟಿಯನ್ನು ಅವಳದರ ಮೇಲೂರಿದ. ಮತ್ತೆ ಮತ್ತೆ ಚುಂಬಿಸಿದ.

ಅವಳು ಅದನ್ನು ಅನುಭವಿಸುತ್ತಿದ್ದಳು. ಅವಳ ದೇಹದ ತಿರುವುಗಳಲ್ಲಿ ಬಿಸಿ ಹರಿಯುತ್ತಿದ್ದಂತೆಯೇ ನಾಗರಾಜನ ಕಣ್ಣುಗಳಲ್ಲಿ ಪಾತಾಳದಿಂದೆದ್ದು ಬಂದಂಥ, ಅವಳಿಗೆ ಪರಿಚಿತವಾದ, ಅಸ್ಪರ್ಶ, ಅಲಭ್ಯ, ದೂರ, ದುರಂತ ದೃಷ್ಟಿ ಅವಳ ದೇಹದಲ್ಲಿ ನಡುಕ ಹುಟ್ಟಿಸಿತು. ಸ್ವಲ್ಪ ಬೂದು ಎನ್ನಬಹುದಾದ ಕಣ್ಣುಗಳ, ಗಂಭೀರ, ಪುಸ್ತಕ ಪಿಶಾಚಿ ನಾಗರಾಜ. ಇನ್ನೂ ಅವನ ತೋಳ ಕಟ್ಟಿನಲ್ಲಿರುವಂತೆಯೆ ಅವಳಿಗೆ ನಾಗರಾಜ ದೂರವಾಗಿಬಿಟ್ಟ ಅನಿಸಿ ಹೆದರಿಕೆಯಾಯಿತು. ರಾಜಾ ಎಂದು ಕೂಗಿಬಿಟ್ಟಳು. ಅಪ್ಪುಗೆ ಬಿಗಿ ಮಾಡಿದಳು.

ನಾಗರಾಜ ಅವಳ ಹಿಡಿತ ಕಡಿದು, ಸಿಡಿದು ದೂರ ನಿಂತ. ಈಗ ಅವನ ಕಣ್ಣುಗಳಲ್ಲಿ ಕೀರ್ತಿ ಹಲವು ಬಾರಿ ಕಂಡಿದ್ದ ಅಮಾಯಕ ಭಯ, ದುರಂತ ಛಾಯೆ. ಅವನು ಅವಳನ್ನೇ ನೋಡುತ್ತಿದ್ದ. ಅವನ ಅಸಹಾಯಕತೆ ಅವನ ಕೈಕಾಲ ಒದರಾಟದಲ್ಲಿ ಪ್ರತಿಫಲಿಸಿತ್ತು.

ಕೀರ್ತಿ. ಕೀರ್ತಿ.

ಅವಳು ತಲೆ ಎತ್ತಲಿಲ್ಲ. ಅವಳ ತಲೆ ಹಿಡಿದೆತ್ತಲೆಂದು ಬಂದವನು ಮತ್ತೆ ತಪ್ಪಿತಸ್ಥನಂತೆ ದೂರನಿಂತ. ಅವಳು ಮುಖವೆತ್ತಿ ಅವನ ಕಣ್ಣಲ್ಲಿ ಕಣ್ಣು ನೆಟ್ಟಳು.

'ಕ್ಷಮಿಸು ಕೀರ್ತಿ. ನಾನು ಮಾಡಬಾರದ್ದು ಮಾಡಿದೆ.' ಅವಳಿಗೆ ಮತ್ತೆ ಹಳೇ ರಾಗ ತೆಗೆದನಲ್ಲ ಎಂದು ಬೋರಾಯಿತು, ಭಯವಾಯಿತು. ನನ್ನ ತಪ್ಪಿನಲ್ಲಿ ನೀನೂ ಭಾಗಿ ಎಂದು ತಪ್ಪುಬೆರಳು ಮಾಡುತ್ತಿದ್ದಾನೆ ಎಂದು ಅವಮಾನವಾಯಿತು. ಹೇಳಬೇಕೆಂದು ಬಾಯಿತೆರೆದಳು. ನಾಗರಾಜ ಅವಳನ್ನ ತಡೆದ : ನನ್ನ ಮಾತು ಮುಗಿಸುವವರೆಗೂ ಮಾತನಾಡಬೇಡ. ಒಂದು ಕ್ಷಣ ನೋವು. ನಿಶ್ಶಬ್ದ. ನಾಗರಾಜ ತಡೆದು ತಡೆದು ಹೇಳಿದ :

ನೋಡು, ಕೀರ್ತಿ, ನೀನು ನನ್ನ ಪ್ರೀತಿಸ್ತೀಯ ಅಂದರೆ ಅದು ನಂಗೆ ಗೊತ್ತಾಯ್ತಲ್ಲ ಅಂತ ನಿಂಗೆ ಕೋಪ ಬರುತ್ತೆ. ಆದರೆ ವಾಸ್ತವಾಂಶ ಒಪ್ಪಿಕೊಳ್ಳೋದು ಇಬ್ಬರಿಗೂ ಒಳ್ಳೇದು. ನೀನು ನನ್ನನ್ನು ನಾನು ನಿನ್ನನ್ನು ಮದುವೆ ಮಾಡಿಕೊಳ್ಳೋದು ಪಾಪ. ನಾ ಬದುಕೋ ಪ್ರಪಂಚ ನಿನ್ನದಕ್ಕಿಂತ ಸಂಪೂರ್ಣವಾಗಿ ಬೇರೆ ರೀತಿಯದು. ಅಲ್ಲಿ ಹಣಕ್ಕಿಂತ,

ರೂಪಕ್ಕಿಂತ ಮುಖ್ಯವಾಗಿ, ಸಂಸ್ಕೃತಿ ಜ್ಞಾನ ಮುಖ್ಯ. ಅಂದರೆ ಇವು ನಿಂಗೆ ಇಲ್ಲ ಅಂತ ನಾ ಹೇಳ್ತಾ ಇಲ್ಲ. ಅಥವಾ ಅವು ಇಲ್ಲದಿರೋದು ತಪ್ಪು ಅಂತಾನೂ ಅಲ್ಲ. ಅದಕ್ಕೇ ನಿನ್ನ ರೀತಿ ಸರೀನೋ, ನನ್ನ ರೀತಿ ಸರೀನೋ ನಿರ್ಣಯ ತೆಗೆದುಕೊಳ್ಳೋದು ನನಗಿನ್ನೂ ಆಗ್ತಿಲ್ಲ. ನೀನೇ ಸರಿ ಇರಬಹುದು. ಸರಿ ಇದ್ದ ಮೇಲೆ ಯಾಕೆ ನಿನ್ನ ಮದುವೆ ಮಾಡಿಕೋ ಬಾರದು ಅಂತ ನೀನು ಕೇಳಿದರೆ ನನ್ನ ಹತ್ತಿರ ಉತ್ತರ ಇಲ್ಲ. ಹೀಗೆ ಮಾತಾಡೋ ನಾನು ಹಿಪೋಕ್ರಿಟ್ ಅಂತ ನನಗೇ ಅನ್ನುತ್ತೆ. ನನ್ನ ಬುದ್ಧಿವಂತಿಕೆ, ನಿಜವಾಗಿ ಕಿಲಾಡಿತನದ ಅಥವಾ ಮೋಸಗಾರಿಕೆಗೆ ಸುಂದರವಾದ ಸಾಧನ ಅಂತಾನೂ ಅನ್ನಿಸಿದೆ. ಆದರೇನುಮಾಡಲಿ ಕೀರ್ತಿ? ನನ್ನ ಪ್ರಪಂಚದಲ್ಲಿ ನಾನ್ನೊಬ್ಬನೇ ಇರೋದಿಕ್ಕೆ ಸಾಧ್ಯ. ಅದು ಸತ್ತ ಜಗತ್ತು. ಅಲ್ಲಿ ಯಾರೂ ಇಲ್ಲ. ಕ್ಷಮಿಸು, ಕೀರ್ತಿ, ನಿನ್ನ ಘನವಾದ, ತೂಕವಾದ ಮನಸ್ಸಿಗೆ, ಭಾವನೆಗಳಿಗೆ ಸತ್ಯವಾಗಿ ನಡೆದುಕೊಳ್ಳುವ ವ್ಯಕ್ತಿತ್ವ ನನಗಿಲ್ಲ. ನಿನ್ನ ಪ್ರೀತಿಸಿದರೂ ನಾನು ಸತ್ತು ಹೋಗ್ತೀನಿ. ನನ್ನಂಥವರನ್ನು ಬಿಟ್ಟು ಬೇರೆ ಎಲ್ಲಿಯೂ ನಾನು ಬದುಕಲಾರೆ...ಅವನು ಅಳುತ್ತ ಹೊರಟುಹೋದ.

ಅವನು ಹೇಳಿದ್ದರಲ್ಲಿ ಬಹಳಷ್ಟು ಅವಳಿಗೆ ಅರ್ಥವಾಗಲಿಲ್ಲ. ಅವನು ತನ್ನಂತಲ್ಲ. ತುಂಬ ದುರ್ಬಲ ಎಂದಷ್ಟೇ ಅರ್ಥವಾಗಿದ್ದು. ಆದರೂ ಅವನ eloquence ಬಗ್ಗೆ ಮೆಚ್ಚಿಕೆಯಾಯ್ತು. ತಾನು ಅಷ್ಟೊಂದು ಮೆಚ್ಚಿದ ಗಂಡು ಗಳಗಳನೆ ಬಿಕ್ಕಳಿಸಿದ್ದು ಕಂಡು ದುಃಖವಾಯಿತು. ತನ್ನದೇ ತಪ್ಪು, ತಾನು ಹಾಗೆ ಮಾಡಬಾರದಿತ್ತು ಅಂತ ಮಂಕು ಕವಿಯಿತು.

ನಡೆದದ್ದು ಅವಳು ಯಾರಿಗೂ ಹೇಳಲಿಲ್ಲ. ನಾಗರಾಜ ಈ ಘಟನೆ ನಡೆದ ಎರಡು ದಿನ ಇದ್ದ. ಅವನು ಇದ್ದಷ್ಟು ಸಮಯ ಕೀರ್ತಿ ಸಾಧ್ಯವಾದಷ್ಟೂಮಟ್ಟಿಗೆ ತನ್ನ ಅವನ ನಡುವಿನ ಸಂಭಾಷಣೆಯನ್ನು ತನ್ನಿಂದ ಮುಚ್ಚಿಟ್ಟುಕೊಳ್ಳಲು ಪ್ರಯತ್ನಿಸಿದಳು. ಹೊಟ್ಟೆಯಲ್ಲಿ ಬೆಂಕಿಬಿದ್ದು, ಕತ್ತಲ ಒಲೆಯಲ್ಲಿ ಮೈ ಬೆಚ್ಚಗೆ ಮಾಡಿಕೊಳ್ಳಲು ಮಲಗಿ, ಒದ್ದಾಡುವ ಬೆಕ್ಕಿನ ಮರಿಯಂತೆ ಅವಳ ಸ್ಥಿತಿ. ತನ್ನ ಹಿಂದಿನ ಸ್ಥಿತಿ ಬೇರಾವ ದಿನ ಬಂದಿದ್ದರೂ ಅವಳು, ಕ್ಷೇಮ, ಶೀಲ ಇಬ್ಬರಿಗೂ ಅಕ್ಕಂದಿರ ಕೂಡ ಹುಟ್ಟಬಾರದೆನ್ನುವ ಹಾಗೆ ಮಾಡಿ, ಪ್ರತಿಮಾದೇವಿ, ಚಂದ್ರಾನಿಲರಾಯರಿಬ್ಬರಿಗೂ ಜೀವನ ಮಾಯೆ ಅನ್ನುವ ನಂಬಿಕೆ ಮೂಡಿಸಿಬಿಡುತ್ತಿದ್ದಳು. ನಾಗರಾಜ ಇರುವಷ್ಟು ದಿನ ಅವಳು ತನ್ನ ಅಂತರ್‌ಕಲಹವನ್ನು, ಗೊಂದಲವನ್ನು ಯಾರಿಗೂ ತೋರಿಸುವುದಿಲ್ಲ. ಅವನು ತನ್ನಂತೆ ಧೀರನಲ್ಲ. ಅಮಾಯಕನೊಬ್ಬ ಆರೋಪಕ್ಕೆ ಸಿಕ್ಕಿದವನಂತೆ ಓಡಾಡುತ್ತಿದ್ದ. ಅವನನ್ನು ಕಂಡು ಕೀರ್ತಿ ಸಾಧ್ಯವಾದ ಮಟ್ಟಿಗೂ ತನ್ನ ದುಃಖವನ್ನು ಹೂತಿಟ್ಟಳು.

ನಾಗರಾಜ ಹೊರಟು ನಿಂತಾಗ ಅವಳ ಕಣ್ಣಲ್ಲಿ ನೀರುಬಂತು. ನಿಜಕ್ಕೂ ಅಕೆ ಅತ್ತಿದ್ದು ವಿರಳ. ತಾನು ಸೋತವಳಾಗಿದ್ದರೆ ಅವಳಿಗೆ ಸಿಟ್ಟು ಬರುತ್ತಿತ್ತು. ಆಕ್ರೋಶ ತುಂಬುತ್ತಿತ್ತು. ನಾಗರಾಜನಿಂದ ತಿರಸ್ಕೃತವಾದ, ತಾನು ಅವನಿಗೆ ಸಮನಲ್ಲವೆಂಬ ಮಾತಿನ ಅಪಮಾನ ಅವಳನ್ನು ಕೊಂದಿತ್ತು. ಭಾಗಶಃ ಅವಳು ಚಂದ್ರಾನಿಲರಾಯರ ಮಗಳು, ಗಂಡು ಹುಡುಗರನ್ನು ಗೆದ್ದು ತುಳಿದಿದ್ದ ಕೀರ್ತಿಯೇ ಆಗಿರಲಿಲ್ಲ. ಅನೇಕ ಮುಖ್ಯ ಪಂದ್ಯಗಳನ್ನು ಗೆದ್ದ ಕುದುರೆ, ಅತಿ ಮುಖ್ಯ ಪಂದ್ಯದಲ್ಲಿ ಓಡುವಾಗ ಜಾರಿ, ಕಾಲು ಮುರಿದುಕೊಂಡು, ತನ್ನದೆ ಆಗಬೇಕಿದ್ದರೂ ಕಳೆದು ಹೋದ ಪಂದ್ಯವನ್ನು ಆಸೆಯ ಸೋಂಖಿನ ಕಣ್ಣುಗಳಿಂದ ನೋಡುವಂತೆ ಅವಳ ಸ್ಥಿತಿ.

ನಾಗರಾಜ ಹೋರಟುಹೋದ ನಂತರದ ಮೂರು ದಿನಗಳು ಅವಳು ಊಟ ಬಿಟ್ಟಳು. ನೀರು ಬಿಟ್ಟಳು, ಯೋಚಿಸಿದಳು, ನಾಲ್ಕನೆಯ ದಿನ ಚಂದ್ರಶೇಖರನ ಮನೆಗೆ ಹೋಗಿಬಂದಳು.

ತಿಂಗಳೊಳಗಾಗಿ ಕೀರ್ತಿ, ಚಂದ್ರಶೇಖರನ ಮಡದಿಯಾದಳು. ಮತ್ತೆ ಮೂರು ತಿಂಗಳಲ್ಲಿ ಅವನ ವಿಧವೆಯಾದಳು. ಕೀರ್ತಿಯ ಪ್ರೇಮ ಗೆಲ್ಲಬೇಕೆಂದು, ನಾಗರಾಜ ತಂದಂಥದೇ ಫ್ರಾಕ್ ತರಲೆಂದು ಮೋಟರ್ ಸೈಕಲ್ ಹತ್ತಿ ಹೊರಟ ಚಂದ್ರು ಮತ್ತೆ ಬರಲಿಲ್ಲ. ಅವಳ ಜೊತೆಗಿನ ಜೀವನದ ದುಃಖ ಬೇಡವೆಂದಿರಬೇಕು. ಅನಿರೀಕ್ಷಿತವಾಗಿ ನಡೆದುಬಿಟ್ಟ.

ಚಂದ್ರಶೇಖರ ಸತ್ತುಕೊಂಡಾಗ ಕೀರ್ತಿಗೆ ದುಃಖ ಉಮ್ಮಳಿಸಿ, ಅಳು ಬಂತು. ಅವನು ಸತ್ತನೆಂದಲ್ಲ. ಮದುವೆಯಾದ ಮೂರು ತಿಂಗಳ ನಂತರದ ಜೀವನದಲ್ಲಿ ಅವನು ಪೆದ್ದ, ಉಪಯೋಗಕ್ಕೆ ಬಾರದವನು ಎಂಬ ಸ್ಪಷ್ಟ ಅಭಿಪ್ರಾಯ ಅವಳಲ್ಲಿ ಬೆಳೆದಿತ್ತು. ಅಂದರೆ ಮದುವೆಗೆ ಮೊದಲು ಅವಳ ಅಭಿಪ್ರಾಯ ಬೇರೆಯಾಗಿತ್ತು ಎಂದಲ್ಲ. ಆದರೆ ಮದುವೆಯಾದ ನಂತರ ಅವನ ಸಖ್ಯ, ಬೆವರು ಹರಿಯುವ ವೈನೊಡನೆ ಕೂಡಿದಂತಿತ್ತು. ಆದರೆ ತಾನು ಇನ್ನೆಂದಿಗೂ ವಿಧವೆಯಾಗಿಬಿಟ್ಟೆ ಎಂಬ ತಿಳಿವಳಿಕೆ ಮೂಡಿದಾಗ ಅವಳಿಗೆ ಚಂದ್ರಶೇಖರನ ಮೇಲೆ ಮೂಡಿದ ಸಿಟ್ಟು ಅವಳನ್ನು ಅಸಹಾಯಕಳನ್ನಾಗಿ ಮಾಡಿಬಿಟ್ಟಿತು. ಕೀರ್ತಿರಾವ್ ತನ್ನ ಇಪ್ಪತ್ತು ಸಂವತ್ಸರದ ಜೀವನದಲ್ಲಿ ಅಸಹಾಯಕತೆ ಏನೆಂಬುದೇ ತಿಳಿಯದೆ ಬೆಳೆದ ಹುಡುಗಿ. ಚಂದ್ರಾನಿಲರಾಯರಂತೆ ಕೂಗಾಡಿ, ಹಾರಾಡಿ ಅಹಂಕಾರದಿಂದ ಊದಿಕೊಳ್ಳುವ ಸಾಮರ್ಥ್ಯವೂ, ಪ್ರತಿಮಾದೇವಿಯರಿಂದ ನಿಷ್ಕೃಷ್ಟತೆ, ನಿರ್ಧಾರ ಮನಸ್ಸೂ ಅವಳಿಗೆ ಬಂದಿತ್ತು. ಆದುದರಿಂದಲೇ ಅವಳು ಒಬ್ಬ ಹುಡುಗನನ್ನು ತನ್ನ ಹಿಂದೆ ಹಾಕಿಕೊಳ್ಳಬೇಕೇಂದೆನಿಸಿದ ಕೂಡಲೆ, ಹಾಕಿಕೊಳ್ಳುತ್ತೇನೆಂಬ ನಿರ್ಧಾರ ಮಾಡುತ್ತಿದ್ದಳು. ಹಠ ಸಾಧಿಸುತ್ತಿದ್ದಳು. ಅವಳ ಜೀವನದಲ್ಲಿ ಸೋಲಿನ ರುಚಿಯೇ ಅವಳಿಗಾಗಿರಲಿಲ್ಲ. ಅವಳು ನಿರಾಶಳಾಗಿದ್ದು ನಾಗರಾಜನಿಂದ ಮಾತ್ರ.

ಈಗ ಚಂದ್ರಶೇಖರನ ಕಾಟ ತಪ್ಪಿದ ಮೇಲೆ ಅವಳಿಗೆ ಸ್ವಲ್ಪ ನಿರಾಳವಾಯಿತು. ಇನ್ನು ಮುಂದೆ ತಾನು ಗಂಡ ಸತ್ತ ಮುಂಡೆ ಆದರೂ ಬೇಡವಾಗಿದ್ದವನು ಹಾಳಾಗಿ ಹೋದನಲ್ಲ ಎಂಬ ಸಂತಸ ಅವಳ ಮುಖದಲ್ಲಿ ಅರಳಿತು. ಈಗೀಗ ಉಲ್ಲಾಸದಿಂದ ಉಬ್ಬಿ, ಆಕಾಶದವರೆಗೂ ಹಾರುವ ಹಕ್ಕಿಯಂತೆ ಕೀರ್ತಿಯ ಆಸೆಗಳು ಚಿಗುರತೊಡಗಿದುವು. ನೀವು ಎಂಥ ಬಯಕೆಗಳು ಎಂದು ಕೇಳಿದರೆ, ಉತ್ತರ ಅವಳಿಗೆ ಗೊತ್ತಿಲ್ಲ. ತನ್ನ ಮನದಲ್ಲಿ ದಿನಾಲು ಮೊಗ್ಗು ಮಾಡುವ ಗಿಡ ಎಂಥದು, ಎಂದು ಪರೀಕ್ಷಿಸಿ, ಅದು ಇಂಥದೇ ಎಂದು ಸ್ಪಷ್ಟರೂಪ ಕೊಡುವ ತಾಳ್ಮೆ ಅವಳಿಗಿರಲಿಲ್ಲ. ಅದು ಅವಳಿಗೆ ದಕ್ಕುತ್ತಿದ್ದ ತಿಳಿವಳಿಕೆಯೂ ಅಲ್ಲ. ಆದರೂ ಈಗ ಆರೋಗ್ಯವಾಗಿದ್ದೇನೆ ಎಂದೆನಿಸುತ್ತಿತ್ತು. ಈ ಮೂರು ತಿಂಗಳು ಕಾಡಿದ್ದ ನಾನೂ ಇನ್ನೆಂದಿಗೂ ಇವನ ಮಕ್ಕಳಾಟದಂಥ ಪ್ರೇಮಕ್ಕೆ ಮಾತ್ರ ವಸ್ತುವಾಗಿಬಿಟ್ಟೆ ಎಂಬ ದುರ್ವ್ಯಸನ ಅವನ ಸಾವಿನ ಸುಖದ ಸನ್ನಿಯಲ್ಲಿ ಮಂಗಳವಾಯಿತು.

ಚಂದ್ರಶೇಖರನ ಮಡದಿಯಾಗಿ ಅವಳಿಗೆ ಅವನ ಬಗ್ಗೆ ಇದ್ದ ಅಭಿಪ್ರಾಯಗಳು ಉತ್ಪ್ರೇಕ್ಷೆಯಂತೆ ಕಾಣುತ್ತಿದ್ದವು. ಅವನೊಬ್ಬ ಗೂಬೆ, ಹಂದಿ, ದನ.

ಒಟ್ಟಿನಲ್ಲಿ ಪ್ರಾಣ, ಅವಳ ದೃಷ್ಟಿಯಲ್ಲಿ. ಅವನು ಊಟ ಮಾಡುತ್ತಿದ್ದುದು ಹಾಗೆ, ಅಷ್ಟು. ಅವನ ಪ್ರೇಮ ಅವಳಿಗೊಂದು ಶಿಕ್ಷೆಯಾಗಿತ್ತು. ಕೆಲಸ ವಿಲ್ಲದ, ಬಾರದ ಅವನು ಎಲ್ಲಾದರೂ ಹೊರಟಾಗ ಬಾ, ಜೊತೆಗಾಗಲಿ ಅನ್ನುತ್ತಿದ್ದ—ಅತ್ಯಾಸೆಯಿಂದ, ಭಯದಿಂದ. ಕೀರ್ತಿ, ನಾನು ಬರುವುದಿಲ್ಲ. ನನಗೆ ಒಳ್ಳೆಯ, ಬೇರೆ ಕೆಲಸವಿದೆ, ನೀನು ಹೋಗು ಅನ್ನುತ್ತಿದ್ದಳು. ನಿರಾಶೆತುಂಬಿದ ಅವನು ಕೇಳಲೂ ಆರ, ಅವಳು ಬರದೆ ಹೋಗಲೂ ಒಲ್ಲ. ತನ್ನ ಇಬ್ಬಂದಿಯಲ್ಲಿ ಅತ್ತಿಂದಿತ್ತ, ಏನಾದರೂ ಹುಡುಕುವನಂತೆ ಪರದಾಡುತ್ತಿದ್ದ. ಕೊನೆಗೆ ಕೀರ್ತಿ, ನಿರ್ದಯವಾಗಿ ಎಲ್ಲಿಗೊ ಹೋಗ ಬೇಕೆಂದಿದ್ದೆಯಲ್ಲ. ಹೋಗು ಹಾಳಾಗಿ ಎಂದಾಗ ಆತ ಅಪಮಾನದಿಂದ ನಡುಗುತ್ತ, ವಿಧಿಯಿಲ್ಲದೆ ಹೊರಟುಹೋಗುತ್ತಿದ್ದ. ಅವನು ಹೋಗು ವಾಗ, ಹುಲಿಯ ಹಿಡಿತಕ್ಕೆ ಸಿಕ್ಕ ಜಿಂಕೆಯ ಕಣ್ಣುಗಳಲ್ಲಿನ ಆರ್ತತೆ ಅವನ ಕಣ್ಣುಗಳನ್ನು ತೋರಿಸುತ್ತಿತ್ತು. ಕೀರ್ತಿಗೆ ಛೆ, ನಾ ಹಾಗೆ ಮಾಡಬಾರದಿತ್ತು, ನಾ ಬರಲಾರೆ ಎಂದು ನಯವಾಗಿ ಹೇಳಬಹುದಿತ್ತಲ್ಲ ಎಂದೆನಿಸಿ ಅವನು ನೊಂದುಕೊಳ್ಳುತ್ತಿದ್ದಂತೆಯೇ ಅವಳೂ ಅಂದು ಕೊಳ್ಳುತ್ತಿದ್ದಳು. ಈ ರಾತ್ರಿ ನನ್ನ ನಿರ್ದಯತೆಗೆ ಸಂಪೂರ್ಣ ವಿರಾಮ ಹಾಕಿ, ನಯವಾಗಿ ನಡೆದುಕೊಳ್ಳುತ್ತೇನೆ ಅಂದುಕೊಳ್ಳುತ್ತಿದ್ದಳು.

ಮನೆಗೆ ಹಿಂತಿರುಗುವಾಗ ಅವನು ತರುತ್ತಿದ್ದ, ಅವಳಿಗೆ ಪ್ರಿಯವಾದ ದೂದ್‌ಪೇಡ, ಖಾರಸೇವೆ ಅವಳಿಗೆ ಬೇಡವಾಗಿರಲಿಲ್ಲ. ಆಸೆಯಿಂದ ಪೊಟ್ಟಣಗಳಿಗೆ ಕೈ ನೀಡುತ್ತಿದ್ದಳು. ಕೂಡಲೆ ಅವನು ಮೈ ಮೇಲೆ ದೆವ್ವ ಬಂದವನಂತೆ ಕೀರ್ತಿ, My darling, how I love you! ಎಂದು ಕುಪ್ಪಳಿಸುತ್ತಿದ್ದ. ಅವನ ಕೋಡಂಗಿಯಂಥ, ಭಯಂಕರ ದೊಂಬ ರಾಟವನ್ನು ಕಂಡು ಅವಳಿಗೆ ನಗು ಬರುತ್ತಿತ್ತು. ಸಹಾನುಭೂತಿ ಹುಟ್ಟು ತ್ತಿತ್ತು. ತನ್ನ ಯಕ್ಷಗಾನ ಕುಣಿತದಿಂದ ಸುಸ್ತಾದ ಅವನು ಅವಳ ಮೈ ಮೇಲೆ ಊದುತ್ತಿದ್ದ ಬಿಸಿಯುಸಿರು ಕೀರ್ತಿಯಲ್ಲಿ ಆಗತಾನೆ ಮೊಳೆಯು ತ್ತಿದ್ದ. ಪ್ರೇಮದ ಬಳ್ಳಿಯನ್ನು ಸುಟ್ಟುಬಿಡುತ್ತಿತ್ತು. ಆಕೆಗೆ ಸಿಟ್ಟು ಬಂದು ಹೇಳುತ್ತಿದ್ದಳು : ನಾಚಿಕೆಯಾಗಲ್ಲ, ಈ ವಯಸ್ಸಿನಲ್ಲಿ ಈ ಥರ ಆಡೋದಿಕ್ಕೆ? Love making ಅಂದರೆ ಈರನ ಥರ ದೊಂಬರಾಟ ಆಡಬೇಕ? ಅದೂ ಬರದಿದ್ದ ಮೇಲೆ ಇನ್ನೇನು ಬರುತ್ತೋ? ಅದರ ಉಪಯೋಗ ಪಡೆಯಬೇಕಾದರೆ ಅದು ಚೆನ್ನಾಗಿ ಬರುವವರ ಹತ್ತಿರ ಹೋಗಬೇಕು, ಎಂದು ಶೀಲಳ ಮುಖ ನೋಡುತ್ತಿದ್ದಳು. ಚಂದ್ರು ದಂಗಾಗಿ ಮರವಟ್ಟು ಹೋಗುತ್ತಿದ್ದ. ಈಗ ಅವನು ಸತ್ತು ಮೂರುವಾರ ಕಳೆದಿದ್ದರೂ ಅವಳ ನೆನಪಲ್ಲಿ ಉಳಿದುದು : ಅವನು ಹೆದರಿ ತಲೆಬಾಗಿ ತಪ್ಪಿತಸ್ಥನಂತೆ ಕಾತ್ತೆಗೆಯುತ್ತಿದ್ದುದು ; ಮರೆಯಲಾಗಲಿಲ್ಲ.

ಪ್ರತಿಮಾದೇವಿಯರು ಅಂದುಕೊಳ್ಳುತ್ತಿದ್ದರು : ಅವಳ ಗಂಡ ಸತ್ತು ಮನೆಯಲ್ಲಿ ಒಂದು ಥರ ಶಾಂತಿ ನೆಲಸಿದೆ. ಆದರೆ ಈ ಶಾಂತಿಗಾಗಿ ಕೊಟ್ಟ ಮಾನ ಅಪಾರ. ಚಂದ್ರಾನಿಲರಾಯರಾದರೋ ಯಾವ ಯೋಚನೆಯೂ ಇಲ್ಲದವರಂತಿದ್ದರು. ಅವರಿಗೆ ಅವಳ ಗಂಡ ಇದ್ದರೂ ತೊಂದರೆಯಿಲ್ಲ. ಇಲ್ಲ—ಅದೂ ಅಡ್ಡಿ ಇಲ್ಲ. ಈಗೀಗ ಮಗಳ ಸಖ್ಯ ಹೆಚ್ಚು ಲಭಿಸಿ ಒಂದು ಥರ ಸಮಾಧಾನ ಅವರಿಗೆ.

* * *

ಈಗ ಚಂದ್ರು ಸತ್ತುಕೊಂಡಿದ್ದಾನೆ. ತನಗೆ ಇನ್ನು ಮೇಲೆ ಪ್ರಾರಬ್ಧ ಕಾಟ ತಪ್ಪಿತು. ಆರಾಮವಾಗಿರಬಹುದು ಎಂದು ಅವಳಿಗೆ ಹಾಯೆನಿಸಿತು. ಆದರೆ ಸತ್ತು ಅವನು ಸಾಧಿಸಿದ್ದಾರೂ ಏನು ? ಅವನ ಸಾವಿನಿಂದ ತನಗೆ ನಿಜವಾಗಿಯೂ ಉಪಯೋಗವಾಯಿತೆ ಅನ್ನುವ ಗೊಡವೆಗೆ ಅವಳು ಹೋಗುತ್ತಿರಲಿಲ್ಲ. ಅಂದರೆ ಹೋಗಲಿಲ್ಲವೆಂದಲ್ಲ. ಆ ರೀತಿಯ ತಲೆನೋವು ಅವಳಿಗೆ ಹಲವು ಬಾರಿ ಬಂದದ್ದುಂಟು. ಕೀರ್ತಿಗೆ ಅಂಥ ಪ್ರಶ್ನೆಗಳಿಗೆ ತಟಕ್ಕನೆ ಉತ್ತರ ಸಿಗುತ್ತಿರಲಿಲ್ಲ. ತಟಕ್ಕನೆ ಉತ್ತರ ಸಿಗದ ಪ್ರಶ್ನೆಗಳಿಗೆ ಉತ್ತರ ಹುಡುಕಿಕೊಳ್ಳುವ ಗೋಜಿಗೆ ಅವಳು ಹೋಗುತ್ತಿರಲಿಲ್ಲ.

ಈ ಮಧ್ಯೆ ನಾಗರಾಜನ ಸವಿಮುತ್ತು ಸಿಹಿಯಾಗಿ ಆಗಾಗ ಕಾಡುತ್ತಿತ್ತು. ಅವಳ ತುಟಿ ಅರಳಿ, ಎದೆಯೆಲ್ಲ ಹಗುರ. ಏಕಾಂತಕ್ಕೆ ಸಂಗಾತಿ ಅವಳ ನೆನಪು. ನಾಗರಾಜ ತನಗೆ ನಿಲುಕದ ವ್ಯಕ್ತಿ. ಆದರೂ ಯಾಕೆ ತಾನು ಅವನ ಬಗ್ಗೆ ಇಷ್ಟೊಂದು ಗೊಂದಲಗೊಳ್ಳಬೇಕು ಎಂದು ಅವಳೆಂದೂ ಅಂದುಕೊಳ್ಳಲಿಲ್ಲ. ತನ್ನ ಗಂಡ ಸತ್ತಿರುವಾಗ ನಾಗರಾಜನ ಬಗ್ಗೆ ತಾನು ಸವಿ ನೆನಪ ಮೆಲ್ಲಬಹುದೆ ಎಂಬ ಅಪ್ರಾಮಾಣಿಕ ನೀತಿ ಅವಳ ತಲೆಯಲ್ಲಿ ಸುಳಿಯಲು ಅವಕಾಶ ನೀಡುವಷ್ಟು ಮನುಷ್ಯತ್ವ ಅವಳಿನ್ನೂ ಕಳೆದುಕೊಂಡಿರಲಿಲ್ಲ. ಅವಳ ಜಾಡೇ ಹಾಗೆ : ತನಗೆ ಬೇಕಾದುದನ್ನು ಅಂದುಕೊಳ್ಳುತ್ತಿದ್ದಳು. ಪಡೆಯಲು ಸಾಧ್ಯವಾದಷ್ಟು ಪ್ರಯತ್ನಿಸುತ್ತಿದ್ದಳು. ಬೇಡವಾದುದನ್ನು ಬೇಕೆಂಬುದಾಗಿ ಅವಳೆಂದೂ ಸುಳ್ಳು ಹೇಳಿರಲಿಲ್ಲ. ಚಂದ್ರಶೇಖರ ಸತ್ತುಹೋದಾಗ ಅವಳಿಗೆ ದುಃಖವಾಗಿರಬಹುದೆಂದೆನಿಸಿ ಸಂತಾಪ ಸೂಚಿಸಿದ ಜನ ಕಂಡಾಗ ಇವರೇನು ಮನುಷ್ಯರೋ, ಮಂಗಗಳೋ ಎಂದು ಚಂದ್ರಾನಿಲರಾಯರನ್ನು ಕೇಳಿದ್ದಳು. ಅವಳ ಪ್ರಶ್ನೆ ಅವರಿಗೆ ಅರ್ಥವಾಗಿತ್ತು. ಎಂದು ಹೇಳಲೂ ಬರುವುದಿಲ್ಲವಾದರೂ ಅವಳ ಪ್ರಶ್ನೆ ಸರಿ ಅನ್ನುವ ಹಾಗೆ ಬೆನ್ನು ತಟ್ಟಿದ್ದರು, ಆ ತಂದೆ. ಪ್ರತಿಮಾದೇವಿಯರು ಕ್ಷೇಮ ಇಬ್ಬರೇ ಅವಳನ್ನು ಅರ್ಥಮಾಡಿಕೊಳ್ಳದವರು. ಶೀಲಳಿಗಂತೂ ಚಂದ್ರುವಿನ ಮರಣದಿಂದ ದುಃಖವೇ ಆಗಿತ್ತು.

ಅವನು ಸತ್ತನೆಂದಲ್ಲ. ಬೇರೆ ಕಾರಣಕ್ಕೆ. ಅವನೊಬ್ಬನೇ ಅವಳಿಗೆ ಗಮನ ಕೊಟ್ಟವನು. ತಾನು ಎಷ್ಟು ಚೆನ್ನಾಗಿ ಪ್ರೇಮಿಸಬಲ್ಲೆ ಎಂದು ಅವನಿಗೆ ಅರ್ಥವಾದ್ದು, ಅವಳ ಕೈ ಹಿಡಿದು, ಬೆರಳು ಮುರಿದು, ಮೊಲೆಯಮುಕಿದಾಗಲೆ. ಅವಳಿಗೂ ತನ್ನ ಸಖ್ಯ ಹಿತ ಕೊಡುತ್ತದೆ ಎಂದು ಅವನಿಗೆ ತಿಳಿದುದ್ದು ಅವಳ ಬಾಯಿಂದಲೆ. ಕೀರ್ತಿ ತನ್ನನ್ನು ಯಾಕೆ ನಿರಾಕರಿಸುತ್ತಾಳೆ ಎಂಬುದು ಅವನಿಗೆ ಅರ್ಥವಾಗದಿದ್ದುದಕ್ಕೆ ಕಾರಣ ಅವಳು ಯಾಕೆ ಎಂದು ಹೇಳಿರಲಿಲ್ಲ. ಅವಳ ಬಳಿ ಹೋದಾಗಲೆಲ್ಲ 'ನೋಡು ಅಲ್ಲಿ ಬಿಳೀ ಕೋತಿ ಇದೆಯಲ್ಲ, ಅದನ್ನ ಮಜಾಮಾಡು. ಇಲ್ಲೇನಾದರೂ ಇನ್ನೊಂದು ಸಾರಿ ಬಂದರೆ ಹುಟ್ಟಲಿಲ್ಲ ಅನ್ನಿಸುತ್ತೀನಿ ಎಂದು ಒಂದು ಸಾರಿ ಹೇಳಿಯೂ ಬಿಟ್ಟಿದ್ದಳು. ಅವಳ ದೃಷ್ಟಿಯಲ್ಲಿ ಶೀಲ ಮಾತ್ರ ಚಂದ್ರುವಿನಂಥ ಗುಳ್ಳೆಲಕ್ಕನಿಗೆ ಲಾಯಕ್ಕಾದವಳು.

ತಂಗಿಯನ್ನು ಪ್ರೀತಿಸುವಂತೆ ಚಂದ್ರುವನ್ನು ತಾನೇ ಉತ್ತೇಜಿಸುವುದರಲ್ಲಿ ಕೀರ್ತಿಯ ಸ್ವಾರ್ಥವೂ ಇತ್ತು. ಚಂದ್ರು ತನ್ನಿಂದ ನಿರಾಕೃತನಾಗಿ, ತನ್ನ ತಂಗಿಯನ್ನೇ ಪ್ರೇಮಿಸತೊಡಗಿದರೆ ತನ್ನ ಕೈ ಸಂಪೂರ್ಣ ಅವನ ಮೇಲಿರುತ್ತದೆ. ತನ್ನ ಹತೋಟಿಯೊಳಗೇ ಬಿದ್ದು ನರಳುತ್ತಾನೆ. ಅನ್ನುವ ಅವಳ ಧೋರಣೆ ಸತ್ಯವಾಗಿತ್ತು.

ಈಗ ಚಂದ್ರು ಸತ್ತು ಹೋಗಿದ್ದಾನೆ. ಬೇಡವೆಂದರೂ ಅವನ ನೆನಪು ನುಗ್ಗಿ ಬರುತ್ತದೆ—ಸುಂದರವಾದ ತೋಟವನ್ನು ಧಾಳಿಮಾಡುವ ಮತ್ತೇಭದ ಹಾಗೆ. ಅವನ ದೈನ್ಯ ತುಂಬಿದ ವಿಶಾಲವಾದ ಕಣ್ಣುಗಳು ನೆನಪಲ್ಲಿ. ಅವಳಿಗೆ ಕರುಳು ಕಿವಿಚಿದಂತಾಯಿತು. ತನ್ನ ಅವನ ನಡುವಿನ ಸಂಬಂಧ ನಾಲ್ಕು ದಿನಗಳಾದರೂ ಸಂತೋಷದಾಯಕವಾಗಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದೂ ಅನಿಸಿತು. ನಾನು ತಪ್ಪು ಮಾಡಿದೆ ನಿಜ. ಆದರೆ ಅವನಾದರೂ ಗಂಡಸರ ಥರ ಇರಬೇಡವಾಗಿತ್ತೆ? ಗಂಡಸೇ ಅಲ್ಲದಿದ್ದ ಅವನನ್ನು ನಾನು ಹೇಗೆ ಪ್ರೀತಿಸಬಹುದಾಗಿತ್ತು? ನಾಗರಾಜನ ಧೀಮಂತ ವ್ಯಕ್ತಿತ್ವ! ಓ.

ನಾಗರಾಜನ ನೆನಪು ಬಂದ ಕೂಡಲೆ ಅವಳು ಹಳೆಯ ಕಹಿಯೆಲ್ಲ ಮರೆತು ಬಿಡುತ್ತಿದ್ದಳು. ಅವನು ಒಂದು ಕಳೆದು ಹೋದ ವಸ್ತುವಿನಂತೆ. ಅದು ಮತ್ತೆ ಸಿಗುವವರೆಗೂ ಬೇರೊಂದರಲ್ಲಿ ತೃಪ್ತಿ ಪಟ್ಟುಕೊಳ್ಳಬೇಕು. ಇಲ್ಲವೆ ಬಲವಂತದಿಂದ ಆಕರ್ಷಿತಳಾಗಬೇಕು. ನಾಗರಾಜನ ನೆನಪು ಬಂದ ಕೂಡಲೆ ಅವಳ ದುಃಖ ಮರೆಯಾಗಿಬಿಡುತ್ತಿತ್ತು. ಚಂದ್ರಶೇಖರ ನಿಜವಾಗಿಯೂ ಸತ್ತಿದ್ದ. ಅವನೂ ಒಂದು ಒಳ್ಳೆಯ ಕೆಲಸ ಮಾಡಿಬಿಟ್ಟನಲ್ಲ ಎಂದು ಕೀರ್ತಿ ಅಚ್ಚರಿ ಪಡುತ್ತಿದ್ದಳು.

ಪ್ರತಿಮಾದೇವಿಯರಿಗೆ ಮಗಳ ಮನಸ್ಸು ಅರ್ಥವಾಗದೆ ಇರಲಿಲ್ಲ.

ಅವರಿಗೆ ತಿಳಿದಿತ್ತು : ತಮ್ಮ ಬದುಕೂ ಹೀಗೇ. ಆದರೆ ಚಂದ್ರಾನಿಲ ರಾಯರಲ್ಲಿ ಅವರು ತಮ್ಮ ಹಿಂದಿನನುಭವದ ಕಹಿ ಮರೆಯುವುದು ಸಾಧ್ಯವಾಗಿತ್ತು. ಮಗಳಿಗೆ ಆಗಲಿಲ್ಲ. ಆದರೂ ನೋಡುವವರ ಕಣ್ಣಿಗಾದರೂ ಮಗಳು ಕೆಲದಿನದ ಮಟ್ಟಿಗೆ ಅತೀವ ಆನಂದ ತೋರದಿದ್ದರೆ ಚೆನ್ನಾಗಿರುತ್ತದೆ. ಅವರು ಹೇಳಲಾರರು, ಹೇಳದಿರಲಾರರು.

* * *

ಪ್ರತಿಮಾದೇವಿಯರೂ ವಿದ್ಯಾವತಿಯೆ ; ರೂಪಸಿಯೂ ಹೌದು. ಹಾಗೆ ನೋಡಿದರೆ ಅವರ ವ್ಯವಹಾರ ಜ್ಞಾನ, ನೈಸರ್ಗಿಕ ಅನುಸಂಧಾನಗಳು ಕೀರ್ತಿಗೆ ಬಂದಿರಲಿಲ್ಲವೆಂದೇ ಹೇಳಬಹುದು. ಅವಳಿಗೆ ಬರುತ್ತಿದ್ದುದು ನಾಲ್ಕು ನಾಲ್ಕು ಎಂಟು ಅನ್ನುವುದಷ್ಟೆ ಎನ್ನುವುದು ಉತ್ಪ್ರೇಕ್ಷೆಯಾದರೂ ಅಸತ್ಯವಂತೂ ಅಲ್ಲ. ಆ ದೃಷ್ಟಿಯಿಂದ ಅವಳು ಚಂದ್ರಾನಿಲರಾಯರ ಮಗಳು. ತಾಯಿಯಿಂದ ಅವಳಿಗೆ ಬಂದದ್ದು ಕೊಲೆ ಮಾಡುವಂಥ ಸೌಂದರ್ಯ, ಓಹ್ ಎಂದು ಶಾಕ್ ಹೊಡೆಸುವಂಥ ಮೈ ಕಟ್ಟು.

ಒಂದು ಕಾಲಕ್ಕೆ ಪ್ರತಿಮಾದೇವಿಯರು, ಕೀರ್ತಿಯಷ್ಟು ಅಲ್ಲದಿದ್ದರೂ ಖಂಡಿತವಾಗಿಯೂ ಮೈ ನವಿರೇಳಿಸುವಂಥವರೆ. ನಿಸ್ಸಂದೇಹವಾಗಿಯೂ ಸುಂದರಿ. ಬಡತನವೇನೆಂಬುದೇ ಅರಿಯದ ಹೊಟ್ಟೆಯಲ್ಲಿ ಹುಟ್ಟಿ ಅಂಥದೇ ವಾತಾವರಣದಲ್ಲಿ ಬೆಳೆದು ದೊಡ್ಡವರಾದ ಸ್ವೇಚ್ಛಾಮಣಿ. ಅವರಿಗೂ ಹುಡುಗರನ್ನು ಕಂಡಾಗ ಎದೆ ಧುಮ ಧುಮ ಎಂದು ಲಾಗ ಹಾಕುವ ವೇಳೆಗಾಗಲೆ ಕಾಲೇಜು ಮುಟ್ಟಿದ್ದರು. ನೂರು ಕಣ್ಣುಗಳು ತಮ್ಮ ಕಡೆ ಕದ್ದು ಹಾಯುವಾಗ ಅವರ ಮೈ ರಕ್ತ ಪುಟಿದು, ಓಕುಳಿಯಾಗಿ, ತುಟಿ ಕಿತ್ತಳೆ ತೊಳೆಯಂತೆ ಬಿರಿದು, ಜೀವನ ಎಂದರೆ ಇದು ಅನ್ನಿಸುತ್ತಿತ್ತು. ಇದನ್ನು ಸಂಪೂರ್ಣ ಅನುಭವಿಸಬೇಕು. ಇದನ್ನು ಮಜಾ, ಮಾಡಬೇಕು ಎನ್ನುತ್ತಿತ್ತು ಮನಸ್ಸು. ಹಣವಿದೆ. ರೂಪವಿದೆ. ಅದನ್ನು ಉಪಯೋಗಿಸಿಕೊಳ್ಳುವಷ್ಟು ಬುದ್ಧಿ ಇದೆ. ಇನ್ನೇನು ಬೇಕು ?

ಅವರು ಒಮ್ಮೆ ಕಾಲೇಜಿನಲ್ಲಿ ಫೇಲಾದಾಗ ಗಳಗಳನೆ ಅತ್ತುಬಿಟ್ಟರು. ಅವರಿಗೆ ಮರ್ಮಾಘಾತವಾಗಿತ್ತು. ಮೂರು ದಿನ ಸರಿಯಾಗಿ ಊಟ ಮಾಡಲೂ ಆಗದೆ ಅವರ ತಂದೆ ಪರದಾಡುವ ಸ್ಥಿತಿ ಬಂದಿತ್ತು. ಅಂದರೆ ಫಲಿತಾಂಶದ, ಹೆಚ್ಚು ಎನ್ನಬಹುದಾದ, ನಿರೀಕ್ಷೆ ಸುಳ್ಳಾದಾಗ ಮುರಿದು ಬಿದ್ದರು ಪ್ರತಿಮಾದೇವಿ ಎಂದು ಅರ್ಥವಿಲ್ಲ. ಇದು ಹೀಗೇ ಆಗುತ್ತದೆಂದು ಅವರಿಗೆ ತಿಳಿದಿತ್ತು. ಅದು ಒಂದು ಅರ್ಥದಲ್ಲಿ ಪ್ರಿಯವೂ ಆಗಿತ್ತು. ಯಾಕೆಂದರೆ ಅವರು ಆಗ ತಾವು ಮತ್ತು ಕಾರ್ತೀಕ ಓದುತ್ತಿದ್ದ ತರಗತಿಯಿಂದ ಮುಂದೆ ಹೋಗುವುದಕ್ಕೆ ಇಷ್ಟಪಟ್ಟಿರಲಿಲ್ಲ. ಬೇಕೆಂದಾಗ ಮುಂದಿನ ತರಗತಿಗೆ ಹೋಗಬಹುದು, ಹಿಂದಕ್ಕೆ ಬರುವುದಾಗುತ್ತವೆಯೆ ?

ಮತ್ತು ಕಾರ್ತೀಕ ಏನೆಂದರೂ ಮುಂದಿನ ತರಗತಿಗೆ ಹೋಗುವವನಲ್ಲ. ಪರೀಕ್ಷೆಯಲ್ಲಿ ಪಾಸು ಮಾಡುವುದನ್ನು ಕಂಡರೆ ಅವನಿಗೆ ಆಗದು. ಪ್ರತಿಮಾದೇವಿಯರಿಗೆ ಅವನ ಸಖ್ಯ ಕಳೆದುಕೊಳ್ಳುವುದು ಬೇಕಿರಲಿಲ್ಲ. ಆದರೂ ಇತರ ಹುಡುಗಿಯರು ರಾಣಿ ಫೇಲು ಕಣೆ ಎಂದು ಗುಸುಗುಸುಗುಟ್ಟಿದಾಗ ಏನೂ ಮಾಡಲಾರದ ಅಸಹಾಯಕತೆಯಿಂದಾಗಿ ಪ್ರತಿಮಾ ಅತ್ತುಬಿಟ್ಟರು.

ಕಾರ್ತೀಕನೂ ಶ್ರೀಮಂತನಲ್ಲದಿದ್ದರೂ ಬಡನನಲ್ಲ. ಅವನಿಗೆ ಪ್ರತಿಮಾ ದೇವಿಯರ ತಂದೆ ವಿಶ್ವಾಸರಾಯರ ಎಸ್ಟೇಟಿನ ಚಿನ್ನವಿರಲಿಲ್ಲ. ಅವನ ತಂದೆ ಕಿರಾಣಿ ಅಂಗಡಿಯ ಮಾಲಕರು. ಅವನಿಗೆಂದು ತಿಂಗಳಿಗೆ ಮಾಸ ಲಿಡುತ್ತಿದ್ದ ಹಣ 15 ರುಪಾಯಿ. 15 ರುಪಾಯಿಯಲ್ಲಿ ಅವನು ಎಷ್ಟೆಂದು ಖರ್ಚು ಮಾಡಿಯಾನು? ತರಗತಿಯಲ್ಲಿ ಕೂತು ಕಡ್ಡಿ ಚುಚ್ಚಿಕೊಳ್ಳಬಹುದಾದಂಥ ಮಾಂಸ ತಿನ್ನುವುದಕ್ಕೆಂದೇ, ಬೀಡಿ ಸಿಗರೇಟು ಸೇದುವುದಕ್ಕೆಂದೇ, ಅಥವಾ ಪ್ರತಿಮಾಳಿಗೆ ತೋರಿಸಲೆಂದು ಅತ್ತರು ಲಗತ್ತಿಸಿರುವ ಪತ್ತಲಗಳಿಗೆಂದೇ ? ಒಂದೊಂದು ಸಾರಿ ಹೋಟೆಲಿನಲ್ಲಿ ಸಾಕಷ್ಟು ತಿಂದು, ಬಿಲ್ಲು ಕೊಡಲು ಹಣ ಸಾಲದೆ ಸಾಲವಾಗಬೇಕಾದ ಪ್ರಸಂಗವೂ ಇರುತ್ತಿತ್ತು. ಆದರೇನು ಮಾಡಲಿಕ್ಕೆ ಬರುತ್ತದೆ? ಒಂದೇ ತರಗತಿಯಲ್ಲಿ ನಾಲ್ಕೈದು ವರ್ಷ ಕೂತು, ತನ್ನೆಲ್ಲ ಸಹಪಾಠಿಗಳಿಗಿಂತಲೂ ಸೀನಿಯರ್ ಕೂಡ ಇರಬೇಕೆಂದು ಆಸೆಯುಳ್ಳವನು ಈ ಸಣ್ಣ ಪುಟ್ಟ ತೊಂದರೆಗಳನ್ನು ಅನುಭವಿಸಲೇ ಬೇಕು.

ಒಂದು ದಿನ ಪ್ರತಿಮಾದೇವಿ ಕಾಲೇಜಿಗೆ ಬಂದು ಸೇರಿದಾಗ ಅವಳಿಗೆ ತಾನು ಜನನಾಯಕಿಯಾದೆ ಎಂಬ ಭಾವನೆ ಬೆಳೆದು ಬಿಟ್ಟಿತು. ತನ್ನ ಸುತ್ತೆಲ್ಲ ಹುಡುಗರು. ದೂರದಲ್ಲಿದ್ದರೂ ಹುಡುಗಿಯರಿಗೆ ಅವಳ ಬಗ್ಗೆ ಅಸೂಯೆ. ಅವಳ ಜನಪ್ರಿಯತೆಗೆ ಅದಕ್ಕಿಂತ ಬೇರೆ ಕುರುಹೇನು ಬೇಕು ? ಉಪಾಧ್ಯಾಯರೂ ಕೂಡ ಅವಳಿಗೆ ಗಮನ ನೀಡುತ್ತಾರೆ. ಎಷ್ಟಾದರೂ ಅವಳು ಸುಂದರಿ ಖಂಡಿತ. ಅವಳಿಗೆ ಆ ತರಗತಿಯ ಬಗ್ಗೆಯೇ ಅಭಿಮಾನ ಬಂತು. ನಾನಿದ್ದಷ್ಟು ಕಾಲವೂ ಇದೇ ತರಗತಿಯಲ್ಲಿದ್ದು ಬಿಡಬೇಕು ಅನಿಸಿತು.

ಪ್ರತಿವರ್ಷ ಕಾಲೇಜು ಪ್ರಾರಂಭವಾದ ಹತ್ತು ದಿನಗಳು ಸರಿಯಾಗಿ ಕಾಲೇಜಿಗೆ ಬಂದು ತರಗತಿಯ ಎಲ್ಲ ಹುಡುಗಿಯರ ಅಟೆಂಡೆನ್ಸ್ ತೆಗೆದುಕೊಳುತ್ತಿದ್ದ ಕಾರ್ತೀಕನಿಗೆ ಪ್ರತಿಮಾದೇವಿಯನ್ನು ಕಂಡಾಗ ತಲೆ ತಿರುಗಿಬಂತು. ಸೌಂದರ್ಯ ಪೀಯೂಷ ಪಾನದಿಂದ ಉನ್ಮತ್ತನಾಗಿ ಬವಳಿಬಂತು. ಅಂದಿನಿಂದ ಅವನು ಎಲ್ಲ ತರಗತಿಗಳಲ್ಲೂ ಹಾಜರಿದ್ದುದು ಮಾತ್ರವಲ್ಲದೆ, ಬಹಳ ವಿಧೇಯ ವಿದ್ಯಾರ್ಥಿಯಾಗಿಬಿಟ್ಟ. ಉಪಾಧ್ಯಾಯರುಗಳನ್ನೆಷ್ಟೋ ಮಂದಿಯನ್ನು ಜಯಿಸಿ ನಡುಗಿಸಿದ್ದ, ಗುರುಧ್ವಂಸಿಯೆಂಬ ಬಿರುದಾಂಕಿತನಾಗಿದ್ದ ಅವನು ಭಿಕ್ಷುವಾದುದನ್ನು ಕಂಡು ಕೃತಾರ್ಥರಾದ ಅವನ ಗುರು

ಗಳು ಪ್ರತಿಮಾದೇವಿಯನ್ನು ಮನಸ್ಸಿನಲ್ಲೇ ವಂದಿಸಿ, ಅದೆಷ್ಟೇ ಕಷ್ಟವಾದರೂ ಅವಳತ್ತ ಕಣ್ಣು ಹಾಯಿಸುವುದನ್ನು ಬಿಟ್ಟುಬಿಟ್ಟರು. ಕಾರ್ತೀಕ ದಿನಾ ಕೂಡುತ್ತಿದ್ದುದು ಆರನೆಯ ಡೆಸ್ಕಿನಲ್ಲಿ ಗೋಡೆಯ ಕಡೆ; ಪ್ರತಿಮಾದೇವಿ, ಐದನೆಯ ಬೆಂಚಿನಲ್ಲಿ ಗೋಡೆಯ ಪಕ್ಕ. ಅವನ ಕಣ್ಣು ಅವಳ ಫಳ ಫಳ ಹೊಳೆಯ ಬ್ಲಾಸಿನ ಎತ್ತರದಲ್ಲಿ ಕಾಣುವ ಬೆನ್ನಿನಲ್ಲಿ ಮಿರುಗುತ್ತಿದ್ದುವು.

ಕಾಲೇಜಿನಲ್ಲಿ ಎಲ್ಲ ಹುಡುಗರ ಕಣ್ಮಣಿಯಾಗಿ, ಹುಡುಗಿಯ ಕೇಂದ್ರವಾಗಿದ್ದ ಪ್ರತಿಮಾದೇವಿಗೂ ನಿರಾಸೆಯಾಗಿತ್ತು. ಇಲ್ಲಿಯವರೆಗೆ ಯಾವ ಹುಡುಗನೂ ತನ್ನನ್ನು ಮಾತನಾಡಿಸುವ ಧೈರ್ಯ ಮಾಡಿರಲಿಲ್ಲ. ಹುಡುಗಿಯರು ಅಸೂಯೆಪಟ್ಟರೂ ಬಾಯಿಬಿಟ್ಟು ಹೇಳುತ್ತಿರಲಿಲ್ಲ. ಹುಡುಗರಿಗಾದರೂ ಭಯ. ಅವಳ ಪ್ರೀತಿ ಇಲ್ಲದಿದ್ದರೂ ಸರಿ, ಅವಳ ದ್ವೇಷ ಬೇಡವಾಗಿತ್ತು. ಅವಳಿಗೆ ತನ್ನನ್ನು ಧೈರ್ಯವಾಗಿ ಮಾತನಾಡಿಸಿ, Prathima, I love you ಅನ್ನುವ ಗಂಡು ಬೇಕಾಗಿತ್ತು.

ಒಂದು ದಿನ ತರಗತಿಯಲ್ಲಿ ಕುಳಿತು ಏನೋ ಯೋಚಿಸುತ್ತಿರಬೇಕಾದರೆ ಹಿಂದಿನಿಂದ ಹಾರಿಬಂತು ಒಂದು ಪುಟ; ಪ್ರತಿಮಾ ಕೈಗೆತ್ತಿಕೊಂಡಳು. ಮುದ್ದಾದ ಅಕ್ಷರಗಳು: ನಾನು ಇಲ್ಲಿಯವರೆಗೂ ಯಾವ ಹುಡಿಗಿಗೂ ಸೋತದ್ದಿಲ್ಲ. ಇಂದು ನಿಮ್ಮ ಕಾಲಮೇಲೆ ಬಿದ್ದಿದ್ದೇನೆ. ನಾನು ನಿಮ್ಮನ್ನು ಒತ್ತಾಯಿಸುವುದಿಲ್ಲ. ನನಗೆ ಎಲ್ಲ ಹುಡುಗಿಯರೂ ಅಕ್ಕ ತಂಗಿಯರ ಹಾಗೆ. ನನ್ನನ್ನು ಪ್ರೀತಿಸಬಲ್ಲಿರಾ? ಕಾರ್ತೀಕನ ಬಗ್ಗೆ ಅವಳಿಗೆ ಮೆಚ್ಚಿಕೆಯಾಯಿತು.

ತರಗತಿಯಲ್ಲಿ ಕಾರ್ತೀಕ ಕೂಡುತ್ತಿದ್ದದು ಪ್ರತಿಮಾದೇವಿ ಅಲ್ಲಿರುತ್ತಿದ್ದಳೆಂಬ ಒಂದೇ ಕಾರಣಕ್ಕಲ್ಲ. ಅವಳು ಅನಾಯಸ ಹಿಂದೆ ಬಾಗುವಳು ಅವನು ಮುಂದೆ ಬಾಗುವನು. ಪ್ರತಿಮಾ ಮನೆಗೆ ಬಂದೊಡನೆಯೆ ಕೋಣೆಯ ಬಾಗಿಲು ಮುಚ್ಚಿ ಬ್ಲೌಸಿನ ಹಿಂಭಾಗದಿಂದ ಪತ್ರವೊಂದನ್ನು ತೆರೆಯುವಳು, ನೂರು ಸಾರಿ ಓದಿ ಮುತ್ತಿಡುವಳು. ಓದಿ ಪೆಟ್ಟಿಗೆಯಲ್ಲಿ ಬೈತಿಡುವಳು. ಕಾರ್ತೀಕ ಬರೆಯುತ್ತಿದ್ದ. ಅನೇಕ ಪ್ರೇಮಿಗಳ ಪ್ರೇಮ ಭಟ್ಟಿ ಇಳಿಸಿದ, ಶುದ್ಧ ಸಾಹಿತ್ಯಕ ಪತ್ರಗಳನ್ನು ಅವಳೆಂದೂ ನಿಕೃಷ್ಟವಾಗಿ ಕಾಣಲಿಲ್ಲ ಹರಿದು ಬೀಸಾಡಿರಲಿಲ್ಲ. ಪೆಟ್ಟಿಗೆಯಲ್ಲಿ ಸ್ಥಳವಿಲ್ಲದಿದ್ದಾಗ ಹಾಸಿಗೆಯ ಕೆಳಗೆ ಮುಚ್ಚಿಡುತ್ತಿದ್ದಳು.

ವಿಶ್ವಾಸರಾಯರು ಪಿತೃವಾತ್ಸಲ್ಯದಿಂದ ರಾತ್ರಿ ಅಷ್ಟು ಹೊತ್ತು ಓದಬೇಡ ಮಗು. ಆರೋಗ್ಯ ಕೆಟ್ಟೀತು ಎಂದು ಕಳಕಳಿಯಿಂದ ಮಾತನಾಡಿದಾಗ ಅವಳು ಅಪ್ಪಾ ಎಂದು ಕಣ್ಣೀರು ಹಾಕುವಳು. ತಾಯಿಯಿಲ್ಲದ ಅನಾಥ ಮಗು ಹಾಗೆ ಕಣ್ಣೀರು ಸುರಿಸುವುದನ್ನು ಕಂಡಾಗ ಅವರಿಗೆ

ಹೇಗೆ ಹೇಗೋ ಆಗುವುದು. ಓದಿಕೋ ಮಗು. ಈಗ ನಿಮ್ಮಮ್ಮ ಬದುಕಿದ್ದರೆ ಅವಳಿಗೆಷ್ಟು ಸಂತೋಷವಾಗುತ್ತಿತ್ತೊ! ಎಂದು ಕಣ್ಣೊರಿಸಿ ಕೊಳ್ಳುತ್ತ ತಮ್ಮ ಕೋಣೆಯತ್ತ ಹೋಗುವರು. ಇವಳು ಕಿಟಕಿ ಬಾಗಿಲು ಮುಚ್ಚಿ ಮತ್ತೆ ಪತ್ರ ಓದುವಳು ಅಥವಾ ಬರೆಯುವಳು. ವ್ಯಾಕರಣ ಸರಿಯಾಗಲಿಲ್ಲವೆಂದು ಹರಿದುಹಾಕುವಳು.

ಪ್ರತಿನಿತ್ಯ ಪ್ರತಿಮಾದೇವಿ ಕಾರ್ತೀಕ ಸುತ್ತಾಡುವರು. ಅವರದು ಒಂದು ರೀತಿಯ ಮಾತಿಲ್ಲದ ಪ್ರೇಮ ಎಂದರೂ ನಡೆದೀತು. ಮಾತಲ್ಲಿ ಹೇಳಬೇಕಾದುದನ್ನೆಲ್ಲ ಕಾಗದದಲ್ಲಿ ಇಲ್ಲವೆ ನಡತೆಯಲ್ಲಿ ತೋರಿಸಿಬಿಡುತ್ತಿದ್ದರು. ಅವನು ಅವಳನ್ನು ಅವಳು ಅವನನ್ನು, ಕಣ್ಣಿನಲ್ಲಿ, ತುಟಿಯಲ್ಲಿ, ಕೈಯಲ್ಲಿ, ಕಾಲಲ್ಲಿ, ಉಟ್ಟ ಬಟ್ಟೆಯಲ್ಲಿ ಇಲ್ಲವೆ ಅನಿರ್ವಚನೀಯ ಜ್ವಲಂತ ಪ್ರೇಮದಲ್ಲಿ ಬಂಧಿಸಿ ಖುಶಿಪಡುತ್ತಿದ್ದರು. ಇಬ್ಬರ ವ್ಯಕ್ತಿತ್ವದಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಆಗದಿದ್ದರೂ, ಪ್ರತಿಮಾದೇವಿಯ ಜೀವನಾಸ್ತೆ ತೀವ್ರವಾಗುತ್ತಿತ್ತು, ಜೀವನದಲ್ಲಿ ಸಾರವಿದೆ ಅನ್ನುವ ಅನುಭವವಾಗುತ್ತಿತ್ತು. ಕಾರ್ತೀಕನಿಗೆ ಈ ವರ್ಷ ಪಾಸುಮಾಡಬೇಕು ಅನ್ನುವ ಆಸೆ ಹುಟ್ಟುತ್ತಿತ್ತು. ಆದರೆ ಈ ಪ್ರೇಮ ಅವನಿಗೆ ಇನ್ನೊಂದು ಪಾಠವನ್ನು ಕಲಿಸಿತ್ತು : ಪ್ರೇಮ ಮಾಡುವುದು ತಾನೆಂದುಕೊಂಡಷ್ಟು ಸುಲಭವಲ್ಲ; ಹುಡುಗಿಯರೆಲ್ಲ ಹೆದರುವವರಲ್ಲ; ತನ್ನ ಪ್ರೇಮಕ್ಕೆ ಪ್ರತಿಯಾಗಿ ಅವರಿಂದ ಪ್ರತಿಕೂಲ ಪ್ರತಿಕ್ರಿಯೆ ಬರದಿದ್ದರೆ ಭಯಂಕರ ಪೀಕಲಾಟ ಬರುತ್ತದೆ ಅನ್ನುವುದು. ನಾನು ಅವಳಿಗೆ ಮೊದಲ ಪತ್ರದಲ್ಲಿ ಬರೆದಂತೆ ನಾನು ಸೋತವನೆ ನಿಜ ಅನ್ನಿಸುತ್ತಿತ್ತು.

ಒಂದು ದಿನ ಪ್ರತಿಮಾ ಅವನನ್ನ ಮೋಹಕ ನಗೆಯಲ್ಲಿ ಬಂಧಿಸಿದ್ದಾಗ, ಅಲ್ಲಿಯವರೆಗೂ, ಪ್ರತ್ಯಕ್ಷ ಅವಳೊಡನೆ ಮಾತನಾಡದ (ಅವನೊಬ್ಬನೆ ಇದ್ದಾಗ, ಅವಳು ಇರದಿದ್ದಾಗ, ದಿನಾಲು ಸಾವಿರ ಸಾರಿಯಾದರೂ ಅವಳ ಕೂಡ ಮಾತನಾಡುತ್ತಿದ್ದ) ಅವನು ಇದ್ದಕ್ಕಿದ್ದಂತೆ ಮಾತನಾಡಿ ರಸಾಭಾಸ ಮಾಡಿದ : "ಪ್ರತಿಮಾದೇವಿ ನನ್ನ ಮದುವೆ ಮಾಡಿಕೋತೀರ?" ಇದು ಅವನು ಸಾವಿರಸಾರಿ ಕೇಳಬೇಕೆಂದುಕೊಂಡ,—ಹೇಳ ಬೇಕೆಂದುಕೊಂಡ ಅಂದರೂ ಆದೀತು—ಮಾತು. ಪ್ರತಿದಿನ rehearse ಮಾಡಿಕೊಂಡದ್ದು. ಅವಳನ್ನು ಭೆಟ್ಟಿ ಮಾಡುವ ಪ್ರತಿಹೊತ್ತು ಅವನು ಇದರ ಜೊತೆಗೆ ಪೂರ್ವ ಪೀಠಿಕೆಯೊಂದನ್ನು ಸಿದ್ಧಮಾಡಿಕೊಂಡಿರುತ್ತಿದ್ದ. ಪೀಠಿಕೆಯಿಲ್ಲದ ನೇರಮಾತು—ಪ್ರತಿಮಾದೇವಿಯೊಂದಿಗೆ—ಕಲ್ಪಿಸಿಕೊಳ್ಳಲೂ ಕಷ್ಟ ಅವನಿಗೆ. ಹಾಗೆ ಹೇಳಿದರೆ ಕೆಲಸ ಕೆಟ್ಟಿತು ಎನ್ನುವ ಮಾತು ಅವನಿಗೆ ಎಂದೋ ಹೊಳೆದಿತ್ತು. ಯಾಕೆಂದರೆ ಯಾವ ಗಳಿಗೆಯಲ್ಲಿ ಅವಳು ಏನು ಹೇಳುತ್ತಾಳೆಂದು ಅವನಿಗೆ ಇಂದೂ ಅರಿವಾಗಿಲ್ಲ. ಅವಳೇ ಒಂದು

ಲೆಖ್ಖದ ಪುಸ್ತಕ. ಅವನಿಗೆ ಲೆಖ್ಖವೆಂದರೆ ಬಂಡೆ. ಇಷ್ಟೆಲ್ಲ ಸಿದ್ಧತೆಗಳನ್ನು ಮಾಡಿಕೊಂಡರೂ, ಅವನಿಗೇಕೋ ಇಲ್ಲಿಯವರೆಗೂ ಧೈರ್ಯ ಬಂದಿರಲಿಲ್ಲ. ಆದರೆ ಇಂದು ಹಾಗೆ ಅವನ ಉತ್ಕಟ ಪ್ರೇಮ ಅವನಿಗರಿವಿಲ್ಲದಂತಯೆ ಪೂರ್ಣ ಬತ್ತಲಾಗಿ ಅಭಿವ್ಯಕ್ತಿಗೊಂಡಾಗ ಅವನಿಗೆ ಅಚಾತುರ್ಯ ವಾಯಿತು ಎನ್ನಿಸಿತು. ಹೆದರಿ ಬೆವರಿದ. ಅವಳ ಮುಖವನ್ನೇ ನೋಡಿದ.

ಅವಳು ಅವನನ್ನು ನೋಡಿದಳು. ಅವನಿಗೆ ಅರ್ಥವಾಗಿ ಹೋಯಿತು. ದೇವರೆ, ಅವಳು ಅದನ್ನು ಅರ್ಥಮಾಡಿಕೊಳ್ಳಲಿ, ಹೇಳದಿರಲಿ ಅವಮಾನ ಮಾಡದಿರಲಿ ಎಂದು ಪ್ರಾರ್ಥಿಸಿದ. ಅವಳು ಮಾತ್ರ ನಿರ್ವಿಕಾರವಾಗಿ ಹೇಳಿದಳು : 'ಕಾತೀ' (ಅದು, ಅವಳು ಅವನಿಗಿಟ್ಟ ಪ್ರೀತಿಯ ಹೆಸರು). 'ನೀನು ಸಂಭಾವಿತ ಅಂದುಕೊಂಡು ನಿನಗೆ ಕಾಗದ ಬರೆದೆ; ನಿನ್ನ ಕೂಡ ತಿರುಗಿದೆ. ನೀನು ಗೌರವ ಬಿಟ್ಟು ನನ್ನಮದುವೆ ಮಾಡಿಕೊ ಎನ್ನುತ್ತೀಯಾ? ನನಗೆ ಬಹಳ ನೋವಾಗಿದೆ. ಇನ್ನೊಂದು ಹೆಂಗಸಿಗೂ ಹೀಗೆ ಕೇಳುವು ದಿಲ್ಲ ಎಂದು ಏನು ಗ್ಯಾರಂಟಿ ?'

ಅವನಿಗೆ ಭಯವಾಯಿತು. ತನ್ನ ಮಾತಿನಲ್ಲಿ ಅಂಥ ಸೂಚನೆಯಿತ್ತು ಅಥವ ಅವಳಿಗೆ ಗೋಚರಿಸಿತು ಎಂದು ದುಃಖವಾಯಿತು. ಥು, ನನ್ನ ಬೆಂಕಿ ಜೀವವೆ ! ಇಷ್ಟು ವರ್ಷ ಓದಿಯೂ ಒಂದು ಅನ್ಯಸೂಚನೆಯಿಲ್ಲದ ಮಾತು ಹೇಳುವುದು ಕಲಿಯಲಿಲ್ಲವೆ ? ಈಗ ಅವನಿಗೆ, ನಾನು ಚೆನ್ನಾಗಿ ಓದಿ ಕಲಿತಿದ್ದರೆ, ಸಾಹಿತ್ಯ ಓದಿಕೊಂಡಿದ್ದರೆ ಎಷ್ಟು ಚೆನ್ನಾಗಿತ್ತು ಅನ್ನಿ ಸಿತು. ತನ್ನ ವಿದ್ಯೆ ತನ್ನ ಸಹಾಯಕ್ಕೆ ಬರುತ್ತಿತ್ತು. ಈಗ ನನ್ನ ಜೀವವೆ ಆದ ಪ್ರತಿಮಾಗೆ ನೋವು ಮಾಡಿಬಿಟ್ಟೆ ಎಂದು ಮಮ್ಮಲ ಮರುಗಿದ.

'ನನ್ನ ಕ್ಷಮಿಸಿ ಪ್ರತಿಮಾದೇವಿ, ತಪ್ಪಾಯಿತು' ಎಂದು ತಲೆತಗ್ಗಿಸಿದ. ಅವಳು 'ನಿನ್ನದು ತಪ್ಪಾಯಿತು ಅಂತ ನಿನಗೆ ತಿಳಿದ್ದಿದರೆ ಸಾಕು. ನಾನು ನಿಮ್ಮ ತಂದೆಗೇನೂ ಹೇಳುವುದಿಲ್ಲ. ಮತ್ತೆ ನೀನು ನಿನ್ನ ಮುಖ ತೋರಿಸ ಬೇಡ, ಕಾತಿ,' ಎಂದಳು.

ಅವನು ಅವಮಾನದಿಂದ, ತನ್ನ ಬಗ್ಗೆ ಜುಗುಪ್ಸೆಯಿಂದ ಹಿಂಡಿಹೋದ. ತನ್ನ ಪ್ರೇಮಕ್ಕೆ ಸತ್ಯವಾಗಿರಬೇಕು. ತಾನು ಅವಳಿಗಂತೂ ಸತ್ಯವಾಗಲಿಲ್ಲ ಎಂಬ ನಿರ್ಧಾರದೊಡನೆ ಹೊರಟುಹೋದ. ಮತ್ತೆ ಕಾಲೇಜಿಗೆ ಹೋಗ ಲಿಲ್ಲ ಅವನು.

ಆಮೇಲೆ ವಿಶ್ವಾಸರಾಯರು ಅವಳಿಗೆ ಹೇಳ ಹತ್ತಿದರು. 'ಚೆನ್ನಾಗಿ ಓದಿಕೋ, ಮಗು. ಓದಬಾರದೆಂದು ನಾನು ಹೇಳಲಿಲ್ಲ. ಆರೋಗ್ಯದ ಕಡೆ ಗಮನ ಇರಲಿ, ಅಷ್ಟೆ". ಅವರಿಗೆ ಸಂತೋಷವಾಗಿತ್ತು, ಮಗಳು ಈಗ ಬೇಗ ದೀಪವಾರಿಸಿ ಮಲಗುತ್ತಾಳೆಂದು.

ಜೀವನವನ್ನು ,ಪ್ರತಿಮಾದೇವಿಯಷ್ಟು ನಿರ್ವಿಕಾರತೆಯಿಂದ ತೆಗೆದು

ಕೊಳ್ಳುವುದು ನಮಗೆ ಸಾಧ್ಯವಾಗದಿರಬಹುದು. ಅವಳಿಗಿದ್ದ ಸ್ವಾತಂತ್ರ್ಯ ನಮಗೆ ಸಿಕ್ಕಾಗಲೂ ಕೂಡ ನಾವು ಪುಕ್ಕರಾಗಿಬಿಡಬಹುದು. ಬದುಕನ್ನು ರಸೋಲ್ಲಾಸವಾಗಿ ಮಾಡುವುದಕ್ಕೆ ಬೇಕಾದುದು ಚೈತನ್ಯ. ಈ ಜೀವ ಚೈತನ್ಯ ತನ್ನಲ್ಲಿ ಇರುವವರೆಗೂ ಒಬ್ಬನಿಗೆ ಮುಪ್ಪಿಲ್ಲ.

ಆದರೆ ಪ್ರತಿಮಾದೇವಿಗೆ ಮುಪ್ಪು ಬಂತು ಅವಳ–ತಾರುಣ್ಯದಲ್ಲೆ. ವಿಶ್ವನಾಥ ಅವಳ ಜೀವನವನ್ನು ಪ್ರವೇಶಿಸಿದ.

ಅವನದು ಕೃಶವೆನಬಹುದಾದ ಕಾಯ. ವಿಶೇಷ ಆಕರ್ಷಣೆ ಇಲ್ಲವಾದರೂ ಹೊಳೆಯುವ ಮುಖ. ಏನೋ ಒಂದು ವಿಚಿತ್ರ ಕಳೆಯಿಂದ ಕೂಡಿದ ಕಣ್ಣುಗಳು ಸ್ವಭಾವತಃ ಗಂಭೀರನಲ್ಲದಿದ್ದರೂ ಜೀವನದ ದುಃಖಗಳೆಲ್ಲವೂ ಅವನನ್ನೇ ಅಮುಕಿ ತುಳಿದಿವೆಯೆಂಬ ಭಾವನೆ ಕೊಡುವ ತೇಜಸ್ಸು. ಅವನು ನಕ್ಕಾಗ, ಅವನ ಮುಖದಲ್ಲಿ ಮಲ್ಲಿಗೆಯ ಹೂವಿನಂತೆ ತುಟಿಗಳ ನಡುವೆ ಅರಳುತ್ತಿದ್ದ ದಂತಪಜ್ಕ್ತಿ ಅವಳನ್ನು ಸೂರೆಗೊಂಡಿತ್ತು. ಅವನ ನೀಳವಾದ ಕೈಗಳು, ಮಡಚಲಿಕ್ಕೆ ಬಾರದವೇನೋ ಎಂಬಂತೆ (ಅವಳು, ಅವನು ಇಬ್ಬರೇ ಇದ್ದಾಗಲೂ) ಸೆಟೆದುಕೊಂಡ ರೀತಿ ಅವಳಲ್ಲಿ ಕುತೂಹಲ ಹುಟ್ಟಿಸಿದ್ದವು. ಅವನ, ಸ್ವಲ್ಪ ನೀಲಿ ಎನ್ನಬಹುದಾದ ಯಾರನ್ನು ಬೇಕಾದರೂ ಕೊಂದುಬಿಡಬಲ್ಲಂಥ ಕಣ್ಣುಗಳು ಅವಳಲ್ಲಿ ಭಯ ಹುಟ್ಟಿಸಿದ್ದವು.

ಅವನು ವಿಶ್ವಾಸರಾಯರ ಗೆಳೆಯ ಧರ್ಮತೇಜರ ಮಗ. ತಂದೆ ತಾಯಿಯರೊಂದಿಗೆ ದೂರದ ಪಟ್ಟಣದಲ್ಲಿದ್ದ. ಈ ಊರಿಗೆ ಯಾವುದೋ ಕಾರ್ಯಾರ್ಥ ಬಂದವನು, ತಂದೆಯ ಮಾತು ಮೀರಲಾರದೆ, ಇಷ್ಟವಿಲ್ಲದೆ ಒಂದು ದಿನಕ್ಕೆಂದು ವಿಶ್ವಾಸ ರಾಯರನ್ನು ಕಾಣಲು ಬಂದ. ಆತ ಬಂದಾಗ ಪ್ರತಿಮಾದೇವಿ ಮನೆಯಲ್ಲಿರಲಿಲ್ಲ. ಕಾರ್ತೀಕನ ಕೂಡ ಕೊನೆಯ ಬಾರಿ ಮಾತನಾಡಲು ಹೋಗಿದ್ದಳು. ವಿಶ್ವಾಸರಾಯರು ಆದರದಿಂದ ಬರಮಾಡಿಕ್ಕೊಂಡು ಉಪಚರಿಸಿದ್ದರು. ಅವರಿಗೂ ಅವನ ನಿಶ್ಚಲನೇತ್ರಗಳೆಂದರೆ ಒಂದು ಥರ ದಿಗಿಲು.

ಪ್ರತಿಮಾದೇವಿ ಮನೆಗೆ ಬಂದಾಗ ಸಂಜೆ ಸೂರ್ಯದೇವರು ಭವ್ಯವಾಗಿ ಅವರ ಎಸ್ಟೇಟಿನ ಮನೆಯ ಮೇಲೆ ಕುಳಿತಿದ್ದ. ಆರಕ್ತವಾಗಿದ್ದ ರವಿಯ ಮುಖದಲ್ಲಿ ಒಂದು ಥರ ಯಾತನೆ, ಭಯ. ಮನೆಗೆ ಬರುತ್ತಿದಂತೆಯೆ ತಂದೆ ಯಾರ ಬಳಿಯೋ ನಗುತ್ತ ತಮ್ಮ ಸ್ವಭಾವಜನ್ಯ ಚಳಿ, ಮುಜುಗರ ಬಿಟ್ಟು ಹರಟೆ ಹೊಡೆಯುತ್ತ ಕುಳಿತಿದ್ದುದನ್ನು ಕಂಡು ಆಶ್ಚರ್ಯವಾಯಿತು. ಅವರು ಅಷ್ಟು ಹರಟೆಯನ್ನು ತಾವೇ ಮಾಡುತ್ತಿದ್ದರು. ಅವನು ಮಾತ್ರ ಅವರ ಮಾತುಗಳನ್ನು ಕಣ್ಣಿನಲ್ಲೇ ನುಂಗುತ್ತ, ಆಗೊಮ್ಮೆ ಈಗೊಮ್ಮೆ ಹೌದು–ಇಲ್ಲಗಳನ್ನಷ್ಟೇ ಹೇಳುತ್ತ ಕುಳಿತಿದ್ದ.

ಅವನನ್ನು ಅವಳಿಗೆ ವಿಶ್ವಾಸರಾಯರು ಪರಿಚಯಿಸಿದರು. ಅವನು ಎದ್ದು ನಿಂತು How are you ! ಎಂದು ತುಸುವೆ ಬಾಗಿ ಅವಳ ಕಣ್ಣಲ್ಲಿ ಕಣ್ಣು ಕೂಡಿಸಿದಾಗ ಅವಳಿಗೆ ಭಯ, ಲಜ್ಜೆ ಕಾತರ ಏಕಕಾಲ ದಲ್ಲಿ ಉಂಟಾಗಿ, ಮೂರ್ಛೆ ಬರುವಂತಾಗಿತ್ತು. ಅವಳನ್ನು ಅವನು ಗೆದ್ದಿದ್ದ.

ಸಂಜೆ ವಿಶ್ವಾಸರಾಯರು ಪೇಟೆಗೆ ಹೋಗಬೇಕು, ಬರುವುದಾದರೆ ಬನ್ನಿ ಎಂದು ಇಬ್ಬರನ್ನೂ ಆಹ್ವಾನಿಸಿದಾಗ ವಿಶ್ವನಾಥ 'ಕ್ಷಮಿಸಬೇಕು. ಆಯಾಸಗೊಂಡಿದ್ದೇನೆ. ಸ್ವಲ್ಪ ವಿಶ್ರಮಿಸಿಕೊಳ್ಳುವೆ' ಎಂದು ಕಣ್ಣು ತೇಲಿಸಿದಾಗ ಅವರು ಏನೂ ಹೇಳಲು ತೋಚದವರಾಗಿ ಸಣ್ಣಗೆ ನಡುಗಿ ದರು. ಪ್ರತಿಮಾದೇವಿಗೆ ಅಲ್ಲಿಂದೆದ್ದು ಓಡಿಬಿಡಬೇಕೆನ್ನಿಸಿತು. ತಂದೆಯೊ ಡನೆ ತಾನು ಹೋಗುತ್ತೇನೆ ಎಂದು ಹೇಳಬೇಕೆಂದುಕೊಂಡು ಪರದಾಡಿ ದಳು. ಅವಳ ಅನಿಶ್ಚಯತೆಯನ್ನು ಗಮನಿಸಿದ ಅವನು ಹೇಳಿದ 'ನಿಮ್ಮದು, ಅವರದೂ ಅಭ್ಯಂತರವಿಲ್ಲದಿದ್ದರೆ, I must request her to be here with me ಸಮಯ ಕಳೆಯಲಿಕ್ಕಾದೀತು. ಒಬ್ಬನಿಗೇ ಬೇಸರ,' ಎಂದು ಪ್ರತಿಮಾದೇವಿಯರ ಕಣ್ಣಲ್ಲಿ ತನ್ನ ದೃಷ್ಟಿಯನ್ನು ನಟ್ಟ. ಪ್ರತಿಮಾ ಚಡಪಡಿಸಿದಳು. ಅವಳ ಅಂತರಾತ್ಮ ಹೂಂ ಎಂದಿತು, ಬೇಡ ಎಂದಿತು. ತಂದೆಯ ಮುಖ ನೋಡಿದಳು. ಅಲ್ಲೊಂದು ಪ್ರಶ್ನೆ. ನಿರ್ಜೀವ ಪ್ರತಿ ಭಟನೆಯೋ, ಪ್ರೋತ್ಸಾಹವೋ ಎಂಥದೋ ಒಂದು. ಅಥವ ಎರಡೂ ಇದ್ದೀತು. ಅವನೇ ಹೇಳಿದ : "ಆಗಬಹುದು, ಅಲ್ಲವೆ ?" 'ಆಗಬಹುದು' ಅವಳು ಹೇಳಿದಳು. ಅಲ್ಲೇ ಇದ್ದ ಸೋಫಾದ ಮೇಲೆ ಕುಳಿತಳು.

ವಿಶ್ವಾಸರಾಯರ ಜೀಪು ಹೊರಟುಹೋಯಿತು.

ಅವನು ಅವಳತ್ತ ನೋಡುತ್ತಲೇ ಇರಲಿಲ್ಲ. ಅವಳು ಅವನನ್ನೇ ನೋಡುತ್ತಿದ್ದಳು. ಅವಳಿಗೆ ಅಂದು ಕಾರ್ತೀಕನೊಡನೆ ಇದ್ದ ಸ್ನೇಹಕ್ಕಿಂತ ಇದು ಬೇರೆ ರೀತಿಯ ಸಂಬಂಧ ಎನ್ನಿಸಿತು. ಕಾರ್ತೀಕನ ಅಸ್ತಿತ್ವ ಅವಳೆ ದುರಿಗೆ ಮಾತ್ರ. ಅವಳು ಕಣ್ಣು ಮುಚ್ಚಿದರೆ ಅವನು ಸತ್ತುಹೋಗುತ್ತಿದ್ದ. ಅವನ ಮುಖದಲ್ಲಿ ಭಯ, ಲಜ್ಜೆ, ಕಾತರತೆ. ಅವನ ಪ್ರೀತಿ ಹುಟ್ಟಿಸು ತ್ತಿದ್ದ ಕಾವನ್ನು ಅವನ ಲಜ್ಜೆ ನಿರಾಸೆಗೊಳಿಸುತ್ತಿತ್ತು. ಇವನು ಅವಳ ಅಂಗಾಗದೊಳಗೆಲ್ಲ. ಅವಳ ಗುಪ್ತ ಕವಾಟಗಳಲ್ಲಿ ಇವನ ಮೋಲಿನ ಆಸೆಯ ಧ್ವನಿ, ಬಡಿತ ಖುರಪುಟದ ತೀಕ್ಷ್ಣತೆ.

ಅವನು ತಲೆ ಎತ್ತಿ ಅವಳು ತನ್ನನ್ನೇ ನೋಡುತ್ತಿರುವುದನ್ನು ಕಂಡು ಮುಗಳ್ನಕ್ಕ. ಹೂವಿನಂತೆ ಅರಳಿದ ಅವನ ತುಟಿಗಳ ನಡುವೆ ದಂತಪಙ್ಕ್ತಿ ಹೊಳೆದುವು. ಅವಳಲ್ಲಿ ಕಾವು ತುಂಬಿ ಸುಡತೊಡಗಿತು. ಅವನನ್ನೇ ದಿಟ್ಟಿಸುತ್ತಿದ್ದಳು. ಅವನು ಕೈಗಳನ್ನು ಸ್ವಲ್ಪವೇ ಎತ್ತಿ ಹಾಗೇ ನಿಲ್ಲಿಸಿದ.

ಪ್ರತಿಮಾಗೆ ಆಶ್ಚರ್ಯ, ಭಯ, ಕುತೂಹಲ, ಬಯಕೆ ಏನೋ ಹೇಳ ಬೇಕೆಂದಿದ್ದಳು. ಅವನು ತಡೆದ : Please don't. I love you and I know you love me. You are the most enchanting and defiant girl I' he seen. ಅವಳ ಹೃದಯ ತುಂಬಿಬಂತು. ಅವನ ನೇರವಾತು ಅವಳನ್ನು ಗೆದ್ದಿತು.

ಎದ್ದು ನಿಂತಳು. ಅವನತ್ತ ನಡೆದಳು. ಕುಳಿತಿದ್ದ ಅವನನ್ನು ಹಾಗೆಯೆ ಎತ್ತಿ ನಿಲ್ಲಿಸಿ, ಸೊಂಟದ ಸುತ್ತ ಕೈಯಿಕ್ಕಿ, ತಲೆ ಹಿಂದಕ್ಕೆ ಬಾಗಿಸಿ, ಕಣ್ಣು ಮುಚ್ಚಿ, ತುಟಿಗಳನ್ನೆತ್ತಿ ಅವನಿಗೆ ನೀಡಿದಳು, ಅವನು ಅವುಗಳನ್ನು ಸ್ವೀಕರಿಸಿದ.

ಅವಳನ್ನು ಅವನು ಬಳಸಿದಾಗ, ಕೃಶವಾಗಿ ಕಂಡ, ಸೆಟೆದುಕೊಂಡಂತಿದ್ದ ಅವನ ಬಾಹುಗಳಲ್ಲಿ ಇದ್ದ ದೈತ್ಯಶಕ್ತಿಯನ್ನು ಅನುಭವಿಸಿ ರೋಮಾಂಚನಗೊಂಡಳು. ಓ ನನ್ನ ಕೊಲ್ಲು. ನಿನ್ನಜೊತೆ ಒಂದು ನಿಮಿಷಕ್ಕಾಗಿ ಒಂದು ಯುಗ ಹಾಳಾಗಲಿ. you are a true lover. You know how to love, to, to, to,... ಹೇಳಹೊರಟಳು. ಅವನ ಹಿಡಿತ ಇದ್ದಕ್ಕಿದಂತೆ ಬಿಗಿಯಾಗಿ ಅವಳ ಉಸಿರುಕಟ್ಟಿ, ಸಾಯುತ್ತೇನೆಂಬ ಅನುಭವವಾಯಿತು. ಮಾತುಗಳು ಗಂಟಲಲ್ಲಿ ಸಿಕ್ಕಿಕೊಂಡವು. ಪ್ರತಿಮಾದೇವಿ ಸತ್ತು ಬದುಕಿದಳು.

ಒಂದು ದಿನಕ್ಕೆಂದು ತೀರ್ಮಾನಿಸಿಕೊಂಡವನು ಎಂಟು ದಿನ ತಂಗಿದ. ಅವನು ಇದ್ದಷ್ಟು ದಿನ ಪ್ರತಿಮಾದೇವಿ, ವಿಶ್ವನಾಥ ವಿಶ್ವಾಸರಾಯರನ್ನು ಗಣನೆಗೆ ತೆಗೆದುಕೊಳ್ಳದೆ ಹೊಂದಿಕೊಂಡರು. ಅವರಿಗೂ ಖುಶಿಯಾಗಿರಬೇಕು. ಪ್ರತಿಭಟನೆಯನ್ನು ನಿರ್ಜೀವವಾಗಿಯಾದರೂ ತೋರಿಸಲಿಲ್ಲ.

ಅವನ ಸಂಗ ಪ್ರತಿಮಾಗೆ ಪ್ರೇಮ ಎಂದರೇನು ಅನ್ನುವುದನ್ನು ಕಲಿಸಿತು. ಅವನ ಜೊತೆ ಮಲಗುವುದು, ಅವನ ಕೂಡ ಲಲ್ಲೆ ಹಾಕಿ ನಗುವುದು, ಅವನನ್ನು ಕೀಟಲೆ ಮಾಡುವುದು, ಅವನು ನೊಂದುಕೊಂಡಾಗ ಭಯಪಟ್ಟುಕೊಳ್ಳುವುದು, ಅವನು ಸ್ನಾನದ ಕೋಣೆಗೆ ಹೋದಾಗ ಅವನ ಅಂಗಾಂಗ ತಾನು ಕಂಡಂತೆ ಮನದಲ್ಲೇ ಚಿತ್ರಿಸಿಕೊಳ್ಳುವುದು, ಅವನಿಗಾಗಿ ತಂದೆಯನ್ನು ಅಣಕಿಸುವುದು...ಅವನು ತನ್ನ ನೀಲಿ ಕಣ್ಣುಗಳಿಂದ ತನ್ನ ಸೌಂದರ್ಯವನ್ನು ಹೀರುತ್ತ, ಒಂದೂ ಮಾತನಾಡದೆ ಅವಳ ಕಣ್ಣಲ್ಲಿ ಕಣ್ಣಿಟ್ಟು ಸೆಳೆದಾಗ ಪ್ರತಿಮಾಗೆ ಅವನನ್ನು ಗೆದ್ದೆ, ಅವನಿಗೆ ಸೋತೆ, ಸೋತುಗೆದ್ದೆ, ಇನ್ನಿಲ್ಲವಾದೆ ಎನ್ನಿಸಿ ಆನಂದದಿಂದ ಕಣ್ಣು ಮುಚ್ಚಿ ಮಂಚದ ಮೇಲೆ ಒರಗುವಳು. ಮರುಕ್ಷಣ ಅವನ ಬಿಸಿಯುಸಿರು ತನ್ನ ಪುಟಿಯುವ ಕುಚಗಳ ಮೇಲೆ ಕಚಕುಳಿಯಿಟ್ಟು ಆನಂದ ಮಾಗಿ ಕಣ್ಣು ಬಿರಿಯುವುದು. ಅವನು ತನ್ನ ಬಾಯನ್ನು ಅವಳ ವಕ್ಷಃಸ್ಥಲ

ದಲ್ಲಿ ಹುದುಗಿಸಿ ಹೇಳುವನು : Prathima, I shall speak to these breasts that take me straight to your heart they make a passage, as it were, they are marvellous. I haven't seen breasts so lovely and plenty as these. ಅವಳಿಗೆ ಸ್ವರ್ಗೀಯ ಸುಖ.

ಈ ಸುಖ ಹೆಚ್ಚು ದಿನ ಬಾಳಲಿಲ್ಲ. ಬಾಳುತ್ತದೆಂದೂ ಅವಳಂದು ಕೊಂಡೂ ಇರಲಿಲ್ಲ. ಬಾಳಲಿ ಎಂದು ಬಯಸಿದ್ದಳು ಮಾತ್ರ. ಅವನು ಒಂದು ದಿನ ಹೊರಟ. ಹೋಗುವಾಗ ಹೇಳಿದ. Prathima, I love you, I worship you. Could I marry you? ಎಂದ. ಈ ಪ್ರಶ್ನೆ ಅವಳನ್ನು ಸಾವಿರ ಸಾರಿ ಕಾಡಿತ್ತು. ಯಾವೊಂದು ಬಾರಿಯೂ ಉತ್ತರ ದೊರಕಿರಲಿಲ್ಲ. ಈಗ ಹೇಳುವುದೇನು ?—ಚಡಪಡಿಸಿದಳು. ಅವಳ ವಿದ್ಯೆ ಅವಳಿಗೆ ಸಹಾಯಕವಾಗಲಿಲ್ಲ. ಅವನು ಅವಳನ್ನು ಕಣ್ಣು ಗಳಿಂದ ತಿನ್ನುತ್ತಿದ್ದ ಅವನ ಕಣ್ಣಲ್ಲಿ ದೃಷ್ಟಿ ಇಟ್ಟಳು. ಅಲ್ಲಿದ್ದ ನಿರ್ಜೀವತೆ, ನಿಸ್ಸಂದೇಹ ರೂಕ್ಷತೆ ಅವಳಲ್ಲಿ ಭಯ ಹುಟ್ಟಿಸಿ ತತ್ತರ ನಡುಗಿದಳು. ಸಣ್ಣಕೆ ಸೆಟೆದುಕೊಂಡಿದ್ದ ಅವನ ಕೈಗಳಲ್ಲಿನ ಭಯಂಕರತೆಯ ನೆನಪು ಬಂದು ನಾಲಿಗೆ ಒಣಗಿತು.

'ಬೇಡ' ಎಂದಷ್ಟೇ ಹೇಳಿದಳು.

ಅವನಿಗೂ ಅದು ಅನಿರೀಕ್ಷಿತವಾಗಿರಲಿಲ್ಲ. ಅದರಿಂದ ಆಶ್ಚರ್ಯವೂ ಆಗಲಿಲ್ಲ. ನಿಧಾನ ಹೇಳಿದ : Come, let me kiss you. ಅವಳು ಅವನಿಗೆ ತುಟಿ ನೀಡಿದಳು. ಎರಡು ಜೀವಗಳು ಬಿಗಿದುವು. ಒದ್ದಾಡಿದುವು. ಈ ಒದ್ದಾಟದಲ್ಲೇ ಆನಂದ. ಅವನು ನಿಧಾನ ತನ್ನ ತುಟಿಗಳನ್ನು ಅವಳದರಿಂದ ಕಿತ್ತುಕೊಂಡ. ಅವಳನ್ನು ಹಿಂದಕ್ಕೆ ಬಗ್ಗಿಸಿ ಅವಳ ವಕ್ಷಃಸ್ಥಲದಲ್ಲಿ ತನ್ನ ಮುಖವನ್ನು ಊರಿದ.

ಹೊರಗೆ ವಿಶ್ವಾಸರಾಯರು ಗ್ಯಾರೇಜಿನಿಂದ ತಂದು ನಿಲ್ಲಿಸಿದ ಜೀಪ್ ಸದ್ದಾಯಿತು. ಅವನು ತಿರುಗಿ ನೋಡದೆ ಹೋಗಿಬಿಟ್ಟ. ಅವನನ್ನೇ ನೋಡುತ್ತಿದ್ದಳು ಪ್ರತಿಮಾ ವಿಮನಸ್ಕಳಾಗಿ. ಅವನ ಬೂಟಿನ ಸಪ್ಪಳ ಮಾತ್ರ ಹಾಲಿನಲ್ಲಿ ಪ್ರತಿಧ್ವನಿಸುತ್ತಿತ್ತು. ಅವನ ಕಿವಿಯಲ್ಲಿ ಅವಳೆದೆಯ ಬಡಿತ ಖುರಪುಟದಂತೆ ಮಥಿಸುತ್ತಿತ್ತು.

ಅವನು ಹೊರಟು ಹೋದ. ತನ್ನನ್ನು ಕದ್ದೊಯ್ದ. ತನ್ನನ್ನು ಕೊಂದು ಬದುಕಿಸಿ ಹೋದ. ಬದುಕಿದ್ದರೂ ಸತ್ತುಹೋದುದರ ನೆನಪು ಹಚ್ಚಹಸುರಾಗಿ, ರಮ್ಯರಮಣೀಯವಾಗಿ ಅವಳ ಮನದಲ್ಲಿ ಹಾಸಿತ್ತು. ಜೀವನದ ಪ್ರತಿಯೊಂದು ನಿಮಿಷದಲ್ಲೂ ಆ ರಮಣೀಯತೆಯನ್ನು ಅನುಭವಿಸಿ ಕುಡಿದು ಆಮೇಲೆ ತಾನು ಗಾಳಿಯಾಗಿ ಬಿಡಬೇಕು. ಹಾಯಾಗಿ ಹಾರಾಡಬೇಕು.

ಮತ್ತೆ ಕೆಲವು ದಿನ ಕಾಲೇಜಿಗೆ ಹೋದಳು. ವಿಶ್ವನಾಥನ ಭವ್ಯ ವ್ಯಕ್ತಿತ್ವದ ಜ್ವಲಂತತೆಯ ಎದುರಿನಲ್ಲಿ ತನ್ನ ಸಹಪಾಠಿಗಳೆಷ್ಟು ಕ್ಷುದ್ರರೆನಿಸಿತ್ತು ಅವಳಿಗೆ. ಇಷ್ಟು ದಿನ ಅವರೆಲ್ಲ ಭವ್ಯ ಗೋಮುಟರೆ ಎಂದು ಅವಳಿಗೆ ನಿಸಿತ್ತೆಂದು ಈ ಮಾತನ್ನು ಹೇಳಲಿಲ್ಲ. ಇಷ್ಟು ನಿಜ: ಇಲ್ಲಿಯವರೆಗೂ ಅವರು ಅವಳನ್ನು ಕಂಡು ಬೆಚ್ಚಿದಾಗ, ಹೊಟ್ಟೆಯಲ್ಲಿ ನುಲಿದು, ನರಳಿದಾಗ ಅವಳಿಗೆ ಖುಶಿಯಾಗುತ್ತಿತ್ತು. ಈಗ, ವಿಶ್ವನಾಥನಲ್ಲಿ ಕರಗಿ ಹೋದ ಮೇಲೆ ಅವಳಿಗೆ ಅವರೆಷ್ಟು ನಿಕೃಷ್ಟರು ಅನ್ನಿಸಿತು. ಕಾಲೇಜು ಬೇಸರವಾಯಿತು. ಶರಣು ಹೊಡೆದಳು.

ಮುಂದೇನು? ಮುಂದೇನು? ಅವಳಿಗೆ ತೋಚಲಿಲ್ಲ. ವಿಶ್ವನಾಥನನ್ನು ಮದುವೆ ಮಾಡಿಕೊಳ್ಳುವುದು ಖಂಡಿತ ಸಾಧ್ಯವಿಲ್ಲ. ಅವನನ್ನು ಮದುವೆಯಾಗಿ ನಾನು ಪ್ರತಿಮಾದೇವಿಯಾಗಿರಲು ಸಾಧ್ಯವೇ ಇಲ್ಲ. ಅವನ ರೂಕ್ಷತೆ, ಅವನ ತೀಕ್ಷ್ಣವಾದ, ಭಯಂಕರ ಪ್ರೀತಿ ನನ್ನನ್ನು ಕೊಂದು ಹಾಕಿಬಿಡುತ್ತದೆ. ಅವನಿಂದ ನನಗೆ ಬೇಕಾದುದು ಅವನ ತುಟಿ ಹರಿಯುವಂಥ ಮುತ್ತು, ಉಸಿರುಕಟ್ಟಿಸುವ ಆಲಿಂಗನ ಮತ್ತು ಅವನು ವಿಚಿತ್ರ ರೀತಿಯಲ್ಲಿ ತಲೆಯಿಟ್ಟು ಕೇಳುವ ನನ್ನ ಹೃದಯವೀಣೆ. ಇಷ್ಟಕ್ಕೆ ಅವನನ್ನು ಮದುವೆಯಾಗಲೇ ಬೇಕೆಂದಿಲ್ಲ. ಯಾರನ್ನು ಮದುವೆಯಾದರೂ ವಿಶ್ವನಾಥನಿಂದ ಅದನ್ನು ನಾನು ಪಡೆದುಕೊಳ್ಳಬಲ್ಲೆ. ನನ್ನ ಗಂಡನೆಂಬ ಪ್ರಾಣಿ ಇದ್ದಾಗಲೂ ಅವನೆದುರಿನಲ್ಲೇ ವಿಶ್ವನಾಥ ಅಲ್ಲಿಗೆ ಬಂದಾಗ ಅವನೊಡನೆ ಕಣ್ಣುಮುಚ್ಚಾಲೆಯಾಡಬಲ್ಲಷ್ಟು ರೂಪ, ಜವ್ವನ ನನ್ನಲ್ಲಿದೆ. ನನ್ನ ಗಂಡನನ್ನು ಕೃತಜ್ಞತೆಯಿಂದ ಹೂಳಬಲ್ಲೆ.

ಕೆಲವು ತಿಂಗಳಲ್ಲಿ ಚಂದ್ರಾನಿಲರಾಯರ ಕಡೆಯಿಂದ ಲಗ್ನ ಪ್ರಸ್ತಾಪವಿದೆಯೆಂದು ತಂದೆ ತಿಳಿಸಿದಾಗ ಅವಳು ಬೇಡವೆನ್ನಲಿಲ್ಲ. ಯಾರಾದರೇನು? ನನಗೆ ಬೇಕಾದವನನ್ನು ನಾನು ಮದುವೆಯಾಗಕೂಡದು. ವಿಶ್ವನಾಥನನ್ನು ಮದುವೆಯಾಗಲು ಧೈರ್ಯವಿಲ್ಲ. ಹಾಗಿದ್ದಾಗ ಯಾರನ್ನೇ ಆದರೂ ಆದೀತು. ಕಾರ್ತೀಕ ಅಥವಾ ಚಂದ್ರಾನಿಲರಾಯ. ಹೆಚ್ಚು ದುಡ್ಡಿದ್ದವನಾದರೆ ಸ್ವಲ್ಪವಾಸಿ. ಚಂದ್ರಾನಿಲರಾಯ ದೊಡ್ಡ ಎಸ್ಟೇಟಿನ ಮಾಲಕ. ಇನ್ನೂ ಯುವಕನಿದ್ದಾನೆ. ಕಾರ್ತೀಕನಿಗಿಂತ ಮೇಲು. ನನ್ನ ವಿಶ್ವನಾಥ ನನ್ನಲ್ಲಿಗೆ ಬಂದಾಗ, ಚಂದ್ರಾನಿಲರಾಯರ ಅಸ್ತಿತ್ವ ಅಳಿಸಿ ಅವನೊಂದಿಗೆ ವಾಸ್ತವ್ಯ ಹೂಡುತ್ತೇನೆ.

ಮದುವೆ ಅದ್ದೂರಿಯಿಂದ ನಡೆಯಿತು.

ಪ್ರತಿಮಾದೇವಿಯರಿಗೆ ತಾವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ತಾರು ದೊರಕಿತು ಚಂದ್ರಾನಿಲರಾಯರಲ್ಲಿ. ಚಂದ್ರಾನಿಲರಾಯರು ವಿಶ್ವನಾಥನಂತೆ ಉಸಿರುಕಟ್ಟಿಸುವಷ್ಟು ಬಿಗಿಯಾಗಿ ಆಲಿಂಗಿಸದಿದ್ದರೂ ಅವಳನ್ನ ಕಣ್ಣ

ನಲ್ಲೇ ಕೊಲ್ಲಲು ಅರಿಯದವರಾದರೂ, ಅವಳ ವಕ್ಷದ ಮೇಲೆ ತಲೆಯಿಟ್ಟು ಅದರ ಮಂಜುಳಗಾನಕ್ಕೆ ಕಿವಿಗೊಡದಿದ್ದರೂ, ಅವರಲ್ಲಿಯೂ ಒಂದು ರೀತಿಯ ಕಾಡು ಮನುಷ್ಯವ್ಯಕ್ತಿತ್ವ ಇತ್ತು. ಅದು ಪ್ರತಿಮಾದೇವಿಗೆ ಅತ್ಯಂತ ಪ್ರಿಯವಾಯಿತು. ಚಂದ್ರಾನಿಲರಾಯರ ಆವೇಶ, ನಿಷ್ಕಾಪಟ್ಯ, ದೈಹಿಕ ಬಲಕ್ಕೆ ಕೊಡುವ ಬೆಲೆ, ನೀರಿನಂತೆ ದುಡ್ಡನ್ನು ಬೀಸಾಡುತ್ತಿದ್ದ ಅವರ ಮಾನಸಿಕ ಶ್ರೀಮಂತಿಕೆ, ಎಲ್ಲಕ್ಕಿಂತ ಮಿಗಿಲಾಗಿ ಪ್ರತಿಮಾದೇವಿಯರ ಮುಂದೆ ತಮ್ಮ ಭಕ್ತಸ್ಥಿತಿಯನ್ನು ಇದ್ದಂತೇ ಬಣ್ಣಿಸಿಟ್ಟು ಅವರ ಆಚರಣೆಯಲ್ಲೇ ಕೃತಾರ್ಥತೆ ಪಡೆಯುವ ನೇರ ನಡತೆ ಪ್ರತಿಮಾದೇವಿಯರಿಗೆ ಇಷ್ಟವಾದುವು. ಅವರು ತಮ್ಮ ಪತಿಯನ್ನು ಮೆಚ್ಚಿಯೂ ಮೆಚ್ಚಿಕೊಂಡರು. ಗಂಡನ ಬಗ್ಗೆ ಗೌರವವೂ ಹುಟ್ಟಿತು. ಅಂದುಕೊಂಡರು : ವಿಶ್ವನಾಥ ನನ್ನ ಬಾಳಿನ ಆದರ್ಶ. ಅವನನ್ನು ಮದುವೆಯಾಗುವ ಧೈರ್ಯ ನನಗಿಲ್ಲ. ಚಂದ್ರಾನಿಲರಾಯ ವಿಶ್ವನಾಥನಿಗೆ ಮಾತ್ರ ಎರಡನೆಯವನು. ವ್ಯಾವಹಾರಿಕವಾಗಿ ನೋಡಿದರೆ ಇದೇ ನನ್ನ ನೈಜಸ್ಥಿತಿಯ ಸೌಭಾಗ್ಯ ಪರಾಕಾಷ್ಠೆ. ತಮ್ಮ ಎಲ್ಲ ಅಸಹಾಯಕ ಸ್ಥಿತಿಯನ್ನು ಮರೆಯುವುದಕ್ಕೆ ಹೀಗೆ ತಾರ್ಕಿಕವಾಗಿ ಪ್ರಯತ್ನಿಸಿದರು ಪ್ರತಿಮಾದೇವಿ. ಕೆಲವೇ ವರ್ಷಗಳಲ್ಲಿ ಅವರ ಕಣ್ಮಣಿ ಕೀರ್ತಿ ಜನಿಸಿದಳು. ಬೆಳೆಯುತ್ತಿದ್ದ ಅಹಂಕಾರಿ, ಸ್ವೇಚ್ಛಾ, ನಿಷ್ಕಪಟ, ದೃಢ ಕೀರ್ತಿಯಲ್ಲಿ ಪ್ರತಿಮಾದೇವಿ ತಮ್ಮನ್ನೇ ಕಂಡರು.

ಕೀರ್ತಿ ಬೆಳೆದಂತೆಲ್ಲ ಅವಳಲ್ಲಿ ಸ್ಪಷ್ಟವಾಗಿ ರೂಪುಗೊಳ್ಳುತ್ತಿದ್ದ ಹಳೆಯ ವರ್ಷಗಳ ಪ್ರತಿಮಾದೇವಿಯನ್ನು ಕಂಡಾಗ ಅವರಿಗೇ ಆಶ್ಚರ್ಯವಾಗುತ್ತಿತ್ತು. ತಾವು ಇದ್ದುದಕ್ಕಿಂತಲೂ ಒಂದು ಕೈ ಮೇಲು ಎನ್ನುವ ಅವಳ ಸ್ವರ್ಗೀಯ ರೂಪ ಅವರಿಗೇ ಹುಚ್ಚು ಹಿಡಿಸುತ್ತಿತ್ತು. ಅದಕ್ಕೂ ಹೆಚ್ಚಿನ, ಅವರು ಮೆಚ್ಚಿದ ವಿಶೇಷವೆಂದರೆ ಅವಳ ಸೌಂದರ್ಯ ಪ್ರಜ್ಞೆ. ಸೌಂದರ್ಯ ಪ್ರಜ್ಞೆ ಎಂದರೆ ರಸಋಷಿಗಳೂ, ಕವಿಸಾರ್ವಭೌಮರೂ ಹೇಳಿರುವ ನಿಸರ್ಗದ ಸೌಂದರ್ಯ ಪ್ರಜ್ಞೆಯೆಂದಾಗಲೀ, ವೈಚಾರಿಕ ಸೌಂದರ್ಯವೆಂದು ಬೊಗಳುವ ಸಮಾಜವಾದಿ ವ್ಯವಹಾರ ಚತುರರ ಅರ್ಥವೆಂದಾಗಲೀ ಅಲ್ಲ. ಅವಳಿಗೆ ಗೊತ್ತಿತ್ತು : ತಾನು ತುಂಬ ಸುಂದರಿ. ಯಾರನ್ನು ಬೇಕಾದರೂ ನನ್ನ ಸೌಂದರ್ಯದಿಂದ ಗೆಲ್ಲಬಲ್ಲೆ. ರಾಣಿಯಾಗುವ ತಾಕತ್ತು, ಅರ್ಹತೆ ನನ್ನಲ್ಲಿದೆ ಎಂದು.

ಕೀರ್ತಿಯ ಸೌಂದರ್ಯದ ಜೊತೆಯಲ್ಲಿ ತಾವೇ ಅವಳಿಗೆ ವರವಾಗಿ ದಯಪಾಲಿಸಿದ್ದ ನಿರ್ಧಾರಕ ನಿಷ್ಕೃಷ್ಟ ಧೋರಣೆ, ಮತ್ತು ಕರಾರುವಾಕ್ಕಾದ ಸನ್ನಿವೇಶ ಪ್ರಜ್ಞೆಯ ಜೊತೆಗೆ ತಮ್ಮ ಪತಿ ಚಂದ್ರಾನಿಲರಾಯರು ನೀಡಿದ್ದ, ಆವೇಶಗೊಳ್ಳಲು, ಅಸೂಯೆಪಡಲು ಬರುವಂಥ ಪ್ರಾಮಾಣಿಕತೆ, ನಿಷ್ಕಾಪಟ್ಯಗಳು ಅವಳನ್ನು ಅದ್ವಿತೀಯಳನ್ನಾಗಿಸಿವೆ ಎಂದೆನಿಸಿತು

ಆ ತಾಯಿಗೆ. ಅವಳು ತನ್ನ ತಂಗಿಯರ ಬಗ್ಗೆ ತೋರುತ್ತಿದ್ದ ಅಸಡ್ಡೆ,
ಗಂಡು ಹುಡುಗರ ಬಗ್ಗೆ ಹೊಂದಿದ್ದ ಕಲ್ಲುಹೃದಯ ಮತ್ತು ಸ್ವಾರ್ಥ
ಅವಳ ರೂಪನ್ನು ಇಮ್ಮಡಿಗೊಳಿಸಿದ್ದುವು. ಅವರಿಗೊಂದೇ ಭಯ, ಕಾತರ :
ಈ ರೂಪು, ಹಠಗಳೇ ಮಗಳನ್ನು ದುಃಖಿಯನ್ನಾಗಿಸುವುದಿಲ್ಲವೆ ? ತಮ್ಮ
ಬದುಕಿನ ಹಾಗೆ ? ತಮಗಾದರೂ ಚಂದ್ರಾನಿಲರಾಯನಲ್ಲಿ ಸಮಾಧಾನ
ವನ್ನು ಕಾಣುವುದು ಸಾಧ್ಯವಿತ್ತು. ತೃಪ್ತಿಯ ಮಾತು ಭೇದ. ತೃಪ್ತಿಯ
ರಸಬೇಕಾದರೆ ತಾವು ವಿಶ್ವನಾಥನನ್ನೇ ಮದುವೆಯಾಗಬೇಕು. ಹಾಗಾದರೆ
ಅತೀ ಆನಂದದಿಂದ ಜನಸಿದ ತೃಪ್ತಿ ನನ್ನ ಸರ್ವನಾಶವನ್ನು ಸಾರುತ್ತಿತ್ತು,
ಅವರೇನಾದರೂ ಹಾಗೆ ಮಾಡಿದ್ದರೆ ಕೀರ್ತಿಗೆ ಇದನ್ನು ತಿಳಿಹೇಳುವುದು
ಹೇಗೆ ? ಅವಳ ವಿದ್ಯೆ ಸಂಸ್ಕಾರಗಳಿಗಂತು ಅವು ಪಕ್ಕುವುದೇ ಇಲ್ಲ.
ಅವಳಿಗೆ ವಿವೇಕ ಹೇಳುವಂತೆಯೂ ಇಲ್ಲ. ಯಾರ ಮಾತನ್ನೂ ಕೇಳುವವ
ಳಲ್ಲ ಆಕೆ. ತನಗನಿಸಿದ್ದನ್ನು ಪಡೆದೇತೀರುತ್ತಾಳೆ. ಒಂದು ವೇಳೆ ಪಡೆ
ಯಲು ಸಾಧ್ಯವಾಗದಿದ್ದರೆ ? ದುರಂತ ಕಟ್ಟಿಟ್ಟ ಬುತ್ತಿ. ಆದುದರಿಂದಲೇ
ಅವರು ಕೀರ್ತಿ ಹುಡುಗೆರನ್ನು ತನ್ನ ಹಿಂದೆ ಸುತ್ತಿಸಿಕೊಂಡು ಕೇಕೆ ಹಾಕಿ
ದಾಗಲೂ ಒಂದು ಮಾತನ್ನಾಡಲಿಲ್ಲ. ಅವರಿಗೆ ಗೊತ್ತಿತ್ತು, ಕೀರ್ತಿಯ
ಮನದಲ್ಲಿ ನಾಗರಾಜ ತನ್ನ ಇರವೆಲ್ಲವನ್ನು ಕಳೆದುಕೊಂಡು, ಅನಿಲರೂಪಿ
ಯಾಗಿ ಸುಳಿದಾಡುತ್ತಿದ್ದಾನೆ ಎನ್ನುವ ಸಂಗತಿ. ಅವನನ್ನು ಮದುವೆ
ಯಾದರೆ ಅವಳು ಖಂಡಿತ ದುಃಖಿಯಾಗುತ್ತಾಳೆ ಅನ್ನುವುದು ಅವರು
ಅರಿಯದ ವಿಷಯವಲ್ಲ. ತಮ್ಮದೇ ಉದಾಹರಣೆ ಇದೆ. ಇತರ ಯಾರ
ಬಗ್ಗೆಯಾದರೂ ಅವಳಿಗೆ ಆಸಕ್ತಿ ಕುದರಲಿ ಎಂಬುದೇ ಅವರ ಆಸೆ.
ಅದಕ್ಕೆಂದೇ ಅವರು ಮಗಳಿಗೆ ಸ್ವಾತಂತ್ರ್ಯ ದಯಪಾಲಿಸಿದ್ದರು.

ಹೀಗೆ ಅವರು ನೀಡಿದ್ದ ಸ್ವಾತಂತ್ರ್ಯದ ಹಣ್ಣು ಚಂದ್ರಶೇಖರನಿಗೆ
ದಕ್ಕುತ್ತದೆಂದು ಅವರೆಂದೂ ಬಗೆದಿರಲಿಲ್ಲ. ತಮ್ಮ ಪಾಲಿಗೆ ಚಂದ್ರಾನಿಲ
ರಾಯ ಆಸರೆಯಾಗಿ ನಿಂತ. ಆದರೆ ಕೀರ್ತಿಗೆ ಚಂದ್ರ ಆಸರೆಯಾಗಬಲ್ಲನೆ?
ಅವಳ ದುಃಖಕ್ಕೆ, ನಿರಾಸೆಯ ಬೆಳಕಿಗೆ ಬೀಳುವ ಬಲಿಪಶು ಅವನಲ್ಲವೆ
ಎಂದು ಎಷ್ಟೋ ಸಾರಿ ಅವರೆಂದುಕೊಂಡಿದ್ದರು. ಮದುವೆಯಾದ ನಂತ
ರವೂ. ತಮ್ಮ ಪತಿಗೆ ತಮ್ಮ ಮಾತು ವೇದವಾಕ್ಯವಾದರೂ ಅವರು
ತಮಗೆ ಭಕ್ತನಂತೆ. ಬಲಿಪಶು ಖಂಡಿತವಲ್ಲ. ಚಂದ್ರು ಕೀರ್ತಿಯನ್ನು
ಮದುವೆಯಾಗಿ ತನಗೂ ದುಃಖ ತಂದುಕೊಂಡ, ಅವಳ ದುಃಖವನ್ನು
ಶಮನಮಾಡದಾದ ಎಂದು ಎಷ್ಟೋಬಾರಿ ಅಂದುಕೊಂಡಿದ್ದರು. ಅವನು
ಅವಳಿಂದ ತಿರಸ್ಕೃತನಾಗಿ, ಬೈಸಿಕೊಂಡು, ಅವಹೇಳನಗೊಂಡು ಅವ
ಮಾನದಿಂದ ಜರ್ಝರಿತನಾಗಿ ಅಳುಮೋರೆಯಲ್ಲಿ ಹೊರಬಂದಾಗ ಅವರಿಗೆ
ಎಷ್ಟೋ ಬಾರಿ ದುಃಖವಾಗುತ್ತಿತ್ತು. ಅವನಿಗಾಗಿ, ಅದಕ್ಕಿಂತ ಮಿಗಿಲಾಗಿ,

ಮಗಳಿಗಾಗಿ. ಸಿಂಹದ ಮರಿಯೊಂದಿಗೆ ನಾಯಿಕುನ್ನಿಯೊಂದನ್ನು ಬಿಟ್ಟಂತಾಗಿತ್ತು ಅವನ ಸ್ಥಿತಿ. ಹೇಳಲಾರ, ಅನುಭವವಿಸಲಾರ. ಅದೇ ಸ್ಥಿತಿ ಪ್ರತಿಮಾರಿಗೂ. ಅವರಿಗೆ ಅವನು ಸತ್ತದ್ದರಿಂದ ಅವನಿಗಾಗಿ ದುಃಖವಾದರೂ ಮಗಳಿಗಾಗಿ, ಬದುಕಿಗಾಗಿ ದುಃಖವಾಗಲಿಲ್ಲ. ಅವನೇ ಪುಣ್ಯವಂತನಲ್ಲವೆ ಎಂತಲೂ ಅನಿಸಿತ್ತು. ಅವನು ಸತ್ತ ನಂತರ ಸ್ವೇಚ್ಛೆಯಾಗಿ ಓಡಿಯಾಡುವ ಹೊಟ್ಟೆತುಂಬ ಉಂಡು, ಕಣ್ತುಂಬ ನಿದ್ದೆ ತೆಗೆದು, ನಗುನಗುತ್ತ ಕುಲುಕುವ ಕೀರ್ತಿಯನ್ನು ಕಂಡಾಗ ಅಭಿಮಾನವಾಯಿತು. ಆದರೂ ಮಗಳು ಗಂಡ ಸತ್ತ ಹೊಸದರಲ್ಲೇ ಹೊರಗಿನವರೆದುರಿಗೆ ಹಾಗಿರುವುದು ಸರಿ ಅಲ್ಲ ಎಂದು ಅವರ ವ್ಯವಹಾರ ಜ್ಞಾನ ನುಡಿಯುತ್ತಿತ್ತು.

ಅವೆಲ್ಲಕ್ಕಿಂತ ವಿಶೇಷವೆಂದರೆ, ಅವರಿಗೆ ಒಂದೊಂದು ಸಾರಿ ಭಯವಾಗುತ್ತಿತ್ತು ಕೀರ್ತಿಯನ್ನು ತನ್ನಂತೆಯೇ ಇರುವ ತಮ್ಮ ಮಗಳು ಕೀರ್ತಿಯನ್ನು ಕಂಡರೆ ನನಗೆ ಭಯವಿರಬಹುದೆ ಎಂದು.

ಅಂದೊಂದು ದಿನ, ಇನ್ನೂ ಚಂದ್ರು ಸತ್ತು ಹೋಗದೆ ಇದ್ದಾಗ ಮನೆಗೆ ವಿಶ್ವನಾಥ ಬಂದಿದ್ದ.

* * *

ಅವನು ಬಂದ ಪ್ರತಿಮಾದೇವಿಯರು ಮದುವೆಯಾದ ಮೇಲೆ ಇದೇ ಮೊದಲಬಾರಿ ಅವನು ಬಂದುದಲ್ಲ. ಹಲವು ಸಾರಿ ಬಂದಿದ್ದ. ಪ್ರತಿಸಾರಿ ಬಂದಾಗಲೂ ಚಂದ್ರಾನಿಲರಾಯರು ಗುರುಗುಡುತ್ತಿದ್ದರು ಅವನ ಎದುರಿಗೇ, ಅವನಿಗೆ ಸ್ಪಷ್ಟವಾಗಿ ತಿಳಿಯುವಂತೆಯೆ. ಪ್ರತಿಮಾದೇವಿಯರಿಗೆ ಗಂಡನ ಬಗ್ಗೆ ಅಭಿಮಾನ: ಗಂಡ ತನ್ನ ಪ್ರಿಯಕರ ಬಂದಾಗ ಬಾಯಿ ಕಟ್ಟಿದ ನಾಯಿಯಂತಿರುವುದಿಲ್ಲವಲ್ಲ ಎಂದು. ತನ್ನ ಯೌವನದ ಬಗ್ಗೆಯೇ ಹೆಮ್ಮೆ ಮೂಡಿಸುತ್ತಿತ್ತು ಅವರಿಗೆ ಚಂದ್ರನಿಲರಾಯರ ವರ್ತನೆ. ಆದರೆ ಅವರು ವಿಶ್ವನಾಥನ ಮೇಲೆ ಹಾರಾಡಿದರೂ ಒಮ್ಮೆಯೂ ಅದು ಪ್ರತಿಮಾದೇವಿಯರ ಮುಂದೆ ನಡೆದಿಲ್ಲ. ಅದಕ್ಕಾಗಿ ಪ್ರತಿಮಾದೇವಿಯರ ಬಗ್ಗೆ ತನ್ನ ಭಕ್ತನ ಬಗ್ಗೆ ವಿಶ್ವಾಸವೂ ಉಂಟು.

ವಿಶ್ವನಾಥ ಬಂದೇ ಬರುವನು. ಚಂದ್ರನಿಲರಾಯರು ತನ್ನ ಎದುರಿಗೆ ಗುರುಗುಡುವುದಕ್ಕು, ತನಗೂ ಯಾವ ಸಂಬಂಧವೂ ಇಲ್ಲ ಎಂದು ಅವನು ತಿಳಿದಂತಿತ್ತು. ಅವನ ಪಾಡಿಗೆ ಅವನು ಬಂದು, ಪ್ರೇಮಮಾಡಿ ಹೊರಟು ಬಿಡುತ್ತಿದ್ದ. ಅವನು ಹೊರಟು ಹೋದ ನಂತರ ಪ್ರತಿಮಾದೇವಿಯರು ಗಂಡನ ಕೂಡ ವಾತ್ಸಲ್ಯ ಹೂಡುತ್ತಿದ್ದರು.

ಅಂದು ವಿಶ್ವನಾಥ ಬಂದಾಗ ಚಂದ್ರು ಮನೆಯಲ್ಲೆ ಇದ್ದ. ವಿಶ್ವನಾಥನನ್ನು ಕಂಡೊಡನೆಯೆ ಚಂದ್ರುವಿಗೆ ಭಯ. ಮನೆಗೆ ಯಾರಾದರೂ ಬಂದರೆ ಕೀರ್ತಿ ತನಗೆ ಮದುವೆಯಾಗಿದೆ ಎಂಬುದನ್ನು ಮರೆಯುತ್ತಿ

ದ್ದಳು. ಬಂದವರ ಕೂಡ ಗಂಡನ ಬಗ್ಗೆ ಒಂದು ಮಾತೂ ಆಡುವುದಿಲ್ಲ; ಅವನನ್ನು ಹತ್ತಿರ ಬರಗೊಡುವುದಿಲ್ಲ. ಯಾರಾದರೂ ಮನೆಯಲ್ಲಿ ಬರುವ ವೇಳೆಗೆ ಚಂದ್ರು ಮನೆಯಲ್ಲಿರಕೂಡದೆಂದು ಅವಳ ಕಟ್ಟಾಜ್ಞೆ.

ಅವನಿಗೂ ಅವಳಾಜ್ಞೆ ಮೀರಬೇಕೆಂಬ ಹಠವೇನಿಲ್ಲ. ತನ್ನಿಂದ ಅವಳಿಗೆ ಅವಮಾನವಾಗದಿದ್ದರೆ ಸಾಕು. ಆದರೆ ವಿಶ್ವನಾಥನಾಗಲಿ ನಾಗರಾಜನಾಗಲಿ ಎಂದು ಬರುವವರೆಂದು ತಿಳಿಸಿ ಬರುವವರಲ್ಲ. ಬಂದವರು ಬರುವರು. ಅಷ್ಟೆ. ಇಂದು ವಿಶ್ವನಾಥ ಬಂದಾಗ ಚಂದ್ರು ಮನೆಯಲ್ಲಿದ್ದ. ಅದು ಅವನ ತಪ್ಪಲ್ಲ. ಕೀರ್ತಿಗೆ ಅದು ಮುಖ್ಯವಲ್ಲ. ಅವನು ಇದ್ದ. ಅದೇ ತಪ್ಪು.

ಬಾಗಿಲಲ್ಲಿ ಸಪ್ಪಳಾದಾಗ ಮನೆಯವರೆಲ್ಲ ಹಾಲಿನಲ್ಲೇ ಕುಳಿತಿದ್ದರು. ಬಂದವರು ಹೊಸಬರೆಂದು ಮೈಯೆಲ್ಲ ಕಿವಿಯಾಗಿದ್ದ ಚಂದ್ರುವಿಗೆ ತಿಳಿದು ಹೋಯಿತು. ಭಯದಿಂದ ನಡುಗಿದ. ಕೀರ್ತಿ ನಾನು ಓದುತ್ತಿದ್ದ ಯಾವುದೋ ಕಾದಂಬರಿಯ ಹಾಳೆ ತಿರುವುತ್ತಿದ್ದಳು. ಅವಳಿಗೆ ವಿಶ್ವನಾಥ ಬಂದುದು ಗೊತ್ತಿಲ್ಲ. ಚಂದ್ರುವಿಗಾದರೋ ಕಾಲು ತಿರುಗಿಸಿ ಓಡುವುದರಲ್ಲಿ ವಿಶ್ವನಾಥ ಬಾಗಿಲಲ್ಲಿ ನಿಂತಿದ್ದಾನೆ. ಹಲೋ ಎಂದ. ಚಂದ್ರು ಎಂದೂ ಅವನನ್ನು ಹತ್ತಿರ ಕಂಡವನೇ ಅಲ್ಲ. ಅವನು ಬಂದ ಕೂಡಲೆ ಪಕ್ಕದ ಕೋಣೆಗೋ ಹಿಂಬಾಗಿಲಿನಿಂದಲೋ ಓಡಿಬಿಡುವನು.

ವಿಶ್ವನಾಥನ ಮುಖ ಕಂಡು ಅವನಿಗೆ ಭಯಂಕರ ಭಯವಾಯಿತು. ಜೀವನದ ದುಃಖಗಳು ಒಟ್ಟಿಗೆ ಅವುಚಿಕೊಂಡಂತಿದ್ದ ಅವನ ಮುಖದ ನಿರ್ವಿಣ್ಣತೆ ಚಂದ್ರುವಿಗೆ ತುಂಬ ಖುಶಿಯಾಯಿತು. ಮಾತನಾಡಲೂ ಆಗದೆ ಅಲ್ಲೆ ನಿಂತ.

ಕೀರ್ತಿ ವಿಶ್ವನಾಥನ ಧ್ವನಿ ಕೇಳಿ ಮುಖವೆತ್ತಿದಳು. ಓಡಿಹೋಗಿ ಅವನನ್ನು ತಬ್ಬಿಕೊಂಡಳು. ಅವನು ಹೇಳಿದ "ಹೇಗಿದ್ದೀಯ ಮರಿ? Your husband? Let me speak with him."

ಕೀರ್ತಿಗೆ ಜುಗುಪ್ಸೆಯಾಯಿತು. ಗಂಡಸು ವೀರ್ಯಸ್ಖಲನವನ್ನು ಕೃತಕವಾಗಿ ಮಾಡಿಕೊಳ್ಳುತ್ತ, ಅನುಭವಿಸುತ್ತ ಇದ್ದಕ್ಕಿದ್ದಂತೆ ಅಸಹ್ಯ ಪಟ್ಟುಕೊಳ್ಳುವಂಥ ಜುಗುಪ್ಸೆ. ಚಂದ್ರುವತ್ತ ನೋಡಿದಳು. 'ಇಲ್ಲಿಂದ ಓಡು ಸೂಳೆಮಗನೆ ಇಲ್ಲೇಕೆ ನಿಂತಿದ್ದೀಯ ಮಂಗನಹಾಗೆ. ಇರಕೂಡದು ಅಂತ ಹೇಳಿಲ್ಲ.' ಅವಳ ಕೋಪ ಪೂರ್ಣಾವಸ್ಥೆಗೆ ಬರುವ ಹೊತ್ತಿಗೆ ಕೈಯಲ್ಲಿ ಪಾದುಕೆಗಳಿದ್ದುವು. ಚಂದ್ರು ಜಿಗಿದು ಓಡಿಬಿಟ್ಟ.

ಈ ನಾಟಕವನ್ನು ಕುಳಿತುಕೊಂಡೇ ನಿರ್ವಿಕಾರವಾಗಿ ನೋಡುತ್ತಿದ್ದ ಪ್ರತಿಮಾದೇವಿಯರಿಗೆ ಚಂದ್ರುವಿನ ಬಗ್ಗೆಯಾಗಲೀ, ಕೀರ್ತಿಯ ಬಗ್ಗೆಯಾಗಲೀ ಏನೂ ಅನ್ನಿಸಲಿಲ್ಲ. ಇದು ಅನೇಕ ಸಾರಿ ನಡೆದಿರುವಂಥದ್ದು.

ನಡೆಯಬಹುದಂಥದ್ದು. ವಿಶೇಷವೇನೂ ಅಲ್ಲ.

ಅವರೆದೆಯಲ್ಲಿ ಸುಡುತ್ತಿತ್ತು ಬೆಂಕಿ: ವಿಶ್ವನಾಥ ಬಂದಿದ್ದಾನೆಂದು; ಚಂದ್ರುವಿನ ಬಗ್ಗೆ ಕೀರ್ತಿಯ ನಡತೆ ವಿಶ್ವನಾಥನನ್ನು ಗೆದ್ದಿದೆಯೆಂದು.

ಪ್ರತಿಮಾದೇವಿ ಕೀರ್ತಿಯ ತಾಯಿ. ಕೀರ್ತಿಗೆ ಅವಳ ಸ್ವಾಮ್ಯಭಾವ ಬಂದುದು ತಾಯಿಯಿಂದಲೆ. ಪ್ರತಿಮಾದೇವಿಯರ ಹೊಟ್ಟೆ ಕಿವಿಚಿತು. ಚಂದ್ರುವನ್ನು ಕೀರ್ತಿ ತಮ್ಮ ಮುಂದೆ ಬೈದ ಹಾಗೆ ಇನ್ನು ಯಾರ ಮುಂದೆ ಬೈದರೂ ತಮಗೆ ವ್ಯಸನವಾಗಿದೆಯೆಂಬ ನಾಟಕವನ್ನಾದರೂ ಆಡಿಯಾರು. ಆದರೆ ವಿಶ್ವನಾಥ ಹಾಗಲ್ಲ. ಅವನಿಗೆ ಕೀರ್ತಿಯ ನಡವಳಿಕೆಯಿಂದ ಮೆಚ್ಚಿಕೆಯಾಗಿದೆ. ಹೆಮ್ಮೆಯಾಗಿದೆ. ಅವಳು ಅವನನ್ನು ಗೆದ್ದಿದ್ದರೆ ನನ್ನ ಸ್ಥಿತಿ?

ಕೀರ್ತಿಗೂ ವಿಶ್ವನಾಥನಿಗೂ ಇರುವ ವಯಸ್ಸಿನ ಅಂತರ, ಅವರಿಬ್ಬರ ಸಂಬಂಧಕ್ಕೆ ಯಾವ ಚ್ಯುತಿಯನ್ನೂ ತರುವುದಿಲ್ಲವೆಂಬುದು ಆ ತಾಯಿಯ ಹೃದಯಕ್ಕೆ ಸ್ಪಷ್ಟವಾಗಿತ್ತು. ವಿಶ್ವನಾಥನಿಗೆ ಯೌವನವಿಲ್ಲದಿದ್ದರೂ ಮುಪ್ಪು ಬಂದಿಲ್ಲ. ಅವನ ಕಣ್ಣುಗಳು ನಿಶ್ಚಲವಾಗಿ, ದಯಾಹೀನವಾಗಿ, ತಾವು ಮೊದಲಬಾರಿಗೆ ಕಂಡಂತೇ ಇವೆ. ಅವನ ಸೆಟೆದುಕೊಂಡ ಕೈಗಳೂ ಅಷ್ಟೆ. ಅವುಗಳಲ್ಲಿನ ಬಾಹುಬಲ ತಗ್ಗಿರಬಹುದು ಅಷ್ಟೆ. ಅದೂ ಅಭಿಪ್ರಾಯದ ಮಾತಲ್ಲವೆ?

ಪ್ರತಿಮಾದೇವಿಯರಿಗೆ ವಿಶ್ವನಾಥ ನನ್ನವನೂ, ಇನ್ನಾರವನೂ ಆಗಬಾರದೆಂಬ ಬಯಕೆ. ಬಯಕೆಯೇನು ಬಂತು ಮಣ್ಣು, ಹಠ. ಆದುದರಿಂದಲೆ, ಅವನು ಮದುವೆಯಾಗದೆ ಏಕಾಂತದಲ್ಲಿ ಉಳಿದಾಗ ಅವರ ಮನಸ್ಸಿಗೆ ಸ್ವಲ್ಪ ಮುಜುಗರವೆನಿಸಿದರೂ ಸಂತಸವಾಯಿತು. ತನ್ನನ್ನು ಅವನು ಮರೆತಿಲ್ಲ. ಅವನಾದರೂ ನನ್ನ ಜೀವನದ ಆದರ್ಶವಾಗಿ, ಆದರ ತಂತುವಾಗಿ ಉಳಿದಿದ್ದಾನೆ. ಈಗ ಅದು ಮಗಳಿಂದಲೇ ಕಡಿದು ಬೀಳುವಂತಿದ್ದರೆ ಪ್ರತಿಮಾಗೆ ವಿಶ್ವನಾಥನ ಮೇಲೆ ಬಿದ್ದು ಅವನನ್ನು ತುಕ್ಕಡಿ ಮಾಡಿಬಿಡಬೇಕೆನ್ನುವಷ್ಟು ಕೋಪ ಬಂತು.

ಚಂದ್ರುವಿನ ಸ್ಥಿತಿಯನ್ನು ಕಂಡೂ ಅವರಿಗೆ ಮರುಕವಾಯಿತು. ಅಂದರೆ ಇದೇ ಮೊದಲಬಾರಿಗೆ ಅವರಿಗೆ ಹಾಗಾದುದೆಂದಲ್ಲ. ಹಾಗೆ ಹಲವು ಬಾರಿ ಅವರಿಗಾಗಿದೆ. ಯಾರಾದರೂ ಹೊರಗಿನವರು ಬಂದಾಗಲೆಲ್ಲ ಚಂದ್ರುವಿನ ಇಂದಿನ ಸ್ಥಿತಿ ಖಂಡಿತವಾಗಿಯೂ ಅವನದೆ. ಬೇರೆ ಯಾರದ್ದೂ ಅಲ್ಲ. ಪ್ರತಿಮಾದೇವಿಯರು ಅದನ್ನು ಮಗಳೆದುರಿಗೆ ಹಾಗೆಂದು ಆಡಿ ತೋರಿಸದಿದ್ದರೂ ತಮ್ಮ ಕಣ್ಣುಗಳಿಂದಲೂ ತೋರಿಸಿದ್ದಾರೆ. ಕೀರ್ತಿಯಲ್ಲಿ ನಡುಕ ಬರುವಂತೆ ಮಾಡಿದ್ದಾರೆ. ಆದರೆ ಇಂದು ತನ್ನ ವಿಶ್ವನಾಥನ ಸಲುವಾಗಿ, ಕೀರ್ತಿ ಚಂದ್ರುವನ್ನು ಹೀಯಾಳಿಸಿದ್ದು

ಆ ಅತ್ತೆಯ ವಾತ್ಸಲ್ಯಪೂರಿತ ಹೃದಯಕ್ಕೆ ಸರಿಕಾಣಲಿಲ್ಲ. ಕೀರ್ತಿಯನ್ನು ಕರೆದರು ! 'ಬಾರೇ ಇಲ್ಲಿ'.

ಕೀರ್ತಿಗೆ ಭಯವಾಯಿತು. ಅವಳಿಗೆ ತಾಯಿಯನ್ನು ಕಂಡರೆ ಮೊದಲಿನಿಂದಲೂ ಭಯ. ಕಾರಣ ಆಕೆ ಎಂದೂ ಕೋಪಕ್ಕೆ ಬಾಯಿ ಮಾತಿನ ಪ್ರತಿಕ್ರಿಯೆ ಕೊಟ್ಟೇ ಇರಲಿಲ್ಲ. ಆಕೆಗೆ ಕೋಪ ಬಂದಾಗಲೆಲ್ಲ ಕಣ್ಣು ಮಾತಿನ ಸಂಕೇತಗಳೇ ಅವರ ಕೋಪದ ಪರಾಕಾಷ್ಠೆಯನ್ನು ಅಭಿವ್ಯಕ್ತಿಗೊಳಿಸುತ್ತಿದ್ದವು. ಹಾಗೆ ಆದಾಗಲಂತೂ ಆಕೆ ನಿಶ್ಚಲವಾಗಿ, ಕಲ್ಲುಬಂಡೆಯಂತೆ, ನಿಶ್ಶಬ್ದದಿಂದ ಕುಳಿತುಬಿಡುತ್ತಿದ್ದರು. ಹಾಗೆ ಅವರು ಅಹಲ್ಯೆಯಾದಾಗ, ಚಂದ್ರಾನಿಲರಾಯರು ಕಸಿವಿಸಿಯಿಂದ, ಉಸಿರುಹಾಕುತ್ತ ಚಿಕ್ಕ ಆಳುಕಾಳುಗಳನ್ನೆಲ್ಲ ಬೈಯುತ್ತ, ಸಣ್ಣಮಕ್ಕಳನ್ನು ಹೊಡೆದು, ಮನೆಯಿಂದಾಚೆ ಹೋಗಬೇಕೆಂಬಾಸೆಯಿಂದ, ಹೋಗಲಾರದಳಲಿನಿಂದ ಕಂದಿಹೋಗುತ್ತಿದ್ದರು. ತಮ್ಮ ಪತ್ನಿಯ ದುಃಖಕ್ಕೆ ಕಾರಣವಾದ ಮಗಳನ್ನೂ ಚಂದ್ರುವನ್ನೂ ಕೊಚ್ಚಿಹಾಕಿಬಿಡಬೇಕೆಂದು ಉದ್ವಿಗ್ನರಾಗುತ್ತಿದ್ದರು. ಆದರೆ ಪ್ರತಿಮಾದೇವಿಯರ ಕಣ್ಣು ನಿಶ್ಚಲವಾಗಿ ತಮ್ಮ ಮೇಲೆ ಬಿದ್ದಾಗ ಉಸಿರುಕಟ್ಟಿದ ಮಗುವಿನಂತೆ ತಹತಹಿಸುತ್ತಿದ್ದರು. ಕೀರ್ತಿ ಚಂದ್ರುವಿಗೆ ಮಾನವರಾಗಿ ಹುಟ್ಟಬಾರದಯ್ಯ ಎನ್ನುವಷ್ಟು ತೂಕದ ತತ್ವದ ಪಾಠವನ್ನೇ ಕಲಿಸಿಬಿಡುತ್ತಿದ್ದಳು.

'ಬಾರೇ ಇಲ್ಲಿ'. ಕೀರ್ತಿಗೆ ಕಳವಳವಾಯಿತು. ತಾಯಿ ಹೀಗೆಂದೂ ಕೋಪಗೊಂಡಿಲ್ಲ. ಆಕೆಯ ಸ್ತಬ್ಧವಾದ ಧ್ವನಿಯಲ್ಲಿ ಅಡಗಿದ್ದ ತೀಕ್ಷ್ಣತೆ ವಿಶ್ವನಾಥನನ್ನೇ ಅಲುಗಿಸಿತು. ಪ್ರತಿಮಾದೇವಿಯರಲ್ಲಿ ಇಷ್ಟು ದಿನ ಮಾತನಾಡದಿದ್ದ ಬೆಂಕಿ ಕಾವೇರುತ್ತಿದ್ದಂತೆ, ಕೀರ್ತಿಯ ಕಣ್ಣುಗಳು ತೇವಗೊಂಡವು. ತಪ್ಪುಮಾಡಿದ ಮಗು ಕ್ರೂರಿ ಉಪಾಧ್ಯಾಯನಿಯ ಮುಂದೆ ಬಂದು ಭಯದಿಂದ ಶಿಕ್ಷೆಗೆ ಸಿದ್ಧಳಾಗುವಂತೆ, ವಿನೀತಳಾಗಿ ತಾಯಿಯ ಮುಂದೆ ನಿಂತಾಗ ಆಕೆಯ ತಾಯಿಯ ವಿವೇಕ ಎಚ್ಚರಗೊಂಡಿತು. ಈಗ ಮಾತನಾಡಿದರೆ, ಇಷ್ಟುದಿನ ಮಾತನಾಡದೆ ಮಗಳನ್ನು ಹೆದರಿಸಿದ ಭಯದ ರಹಸ್ಯ, ಕಟ್ಟು ಸಡಿಲವಾಗುತ್ತದೆಂಬ ಎಚ್ಚರಿಕೆ ಆಕೆಗೆ ಗೋಚರಿಸಿದ್ದು ಕೀರ್ತಿಯ ಬೊಗಸೆಗಂಗಳಲ್ಲಿ ಪುಟಿಯುತ್ತಿದ್ದ ನೀರಿನ ಕಣಗಳಲ್ಲಿ. ಕೂಡಲೆ ಸಾವರಿಸಿಕೊಂಡು ಹೇಳಿದರು ! ನಿಮ್ಮ ತಂದೆ ಕೂಡ ಹೋಗಿ, ತರಕಾರಿ ಆರಿಸಿಕೊಂಡು ಬಾ ! ಕೀರ್ತಿ ನಿಟ್ಟುಸಿರುಬಿಟ್ಟಳು. ಚಂದ್ರಾನಿಲರಾಯರು ಹಾಯಾದರು. ಕೀರ್ತಿಯದು ಭಯ ಆವೇಶಗಳು ದ್ವಿಗುಣಗೊಂಡು ಅವುಗಳ ತೂಕದಿಂದ ಹೊರಬಂದ ಹುಯಿಲು. ಚಂದ್ರಾನಿಲರಾಯರದಾದರೊ ಹೆಂಡತಿ ಶಾಂತಳಾದಳಲ್ಲ ಎಂಬ ಸಮಾಧಾನದ ಉಸಿರು. ಪ್ರತಿಮಾದೇವಿಯರ ಮಾತಿನಲ್ಲಿ ಅರ್ಥವಿಲ್ಲ

ದಿದ್ದರೂ (ಅರ್ಥವಿಲ್ಲವೆಂದು ಯಾಕೆ ಹೇಳಿದೆ ಅಂದರೆ ತರಕಾರಿ ಅರಿಸಿ ತರುವುದಕ್ಕೆ ಬೇಕಾದ ಆಳುಕಾಳು ಬೇರೆ ಇದ್ದರು), ಹಾಗೆಂದು ಅವರಿಗೇ ಗೊತ್ತಿದ್ದರೂ, ಅಜ್ಞೆಯನ್ನು ಹೊತ್ತ ತಂದೆ ಮಗಳು ಎಸ್ಟೇಟಿನ ಹೊರ ವಲಯಕ್ಕೆ ನಡೆದಾಗ ಸಂಜೆಯ ಹೊತ್ತು. ಸೂರ್ಯ ಮುಳುಗುತ್ತಿದ್ದ. ಚಂದಿರ ಪ್ರತಿಮಾದೇವಿಯರ ಕೊರಳಸುತ್ತ ಇದ್ದ ಚಿನ್ನದ ಫಲಕದಲ್ಲಿ ಬಿದ್ದು ಬಿದ್ದು ನಗುತ್ತಿದ್ದ. ವಿಶ್ವನಾಥನ ಮುಖದಲ್ಲಿದ್ದ ಹೆಪ್ಪು ನೋವು ಗಳನ್ನು ಕೂಗಿ ಹೇಳುವುದಕ್ಕೆಂದೇ ಸಿದ್ಧವಾಗಿದ್ದ ಕಾಗೆಗಳು ಏಕಧ್ವನಿಯಲ್ಲಿ ಕಾಕಾಗೈದುವು.

ಇಷ್ಟಕ್ಕೆಲ್ಲ ಕಾರಣನಾಗಿ ಅನಾಥನಾಗಿದ್ದ ಚಂದ್ರು ಎಲ್ಲೋ ಅದೃಶ್ಯ ನಾಗಿಬಿಟ್ಟಿದ್ದ. ಅವನ ಹಾಯಿಯನ್ನು ಕಂಡು ಯಾರಾದರೂ ಅಸೂಯೆ ಪಡಲೇಬೇಕು. ಅವನು ಬದುಕಿದ್ದಾಗ ವಿಶ್ವನಾಥ ಒಂದೇ ಬಾರಿ ಬಂದಿದ್ದ. ಅವನು ಮತ್ತೆ ಬರುವುದರಲ್ಲಿ, ಬಂದು ತನಗೆ ಚಿತ್ರಹಿಂಸೆ ಸಿಗುವುದನ್ನು ನಿಶ್ಚಯಮಾಡುವುದರಲ್ಲಿ ಚಂದ್ರುವೇ ಬೈರಾಗಿಯ ಹಾಗೆ ಪ್ರಪಂಚ ಬಿಟ್ಟು ಪರಲೋಕ ಹಾದಿಯಲ್ಲಿ ನಡೆದುಬಿಟ್ಟ.

ಪ್ರತಿಮಾದೇವಿಯರಿಗೆ ಕೀರ್ತಿ ತಮ್ಮ ಹದ್ದುಮೀರಿಲ್ಲವೆಂಬ ಹೆಮ್ಮೆ ಮೀರಿಯಾಳೆಂಬ ಭಯಕ್ಕು ಕಾರಣವಾಯಿತು. ಚಂದ್ರು ತೀರಿಕೊಂಡ ಮೇಲೆ ವಿಶ್ವನಾಥ ಮತ್ತೊಮ್ಮೆ ಬಂದಿಲ್ಲ. ಬಂದರೂ ಕೀರ್ತಿ ಅವನ ಬಗ್ಗೆ ಆಸಕ್ತಿವಹಿಸಲಾರಳು ಎಂದು ಅವರ ಭರವಸೆ. ತಾಯಿಯ ಹೃದಯ ಮಗಳ ಮನಸ್ಸನ್ನು ಚೆನ್ನಾಗಿ ಅರಿತುಕೊಂಡಿತ್ತು. ಚಂದ್ರು ಸತ್ತು ಮಗಳಿಗೆ ಹಾಯಾದ ಸಂತಸವನ್ನು ನೀಡಿದರೂ, ಅವಳು ಸದಾ ಕುಲು ಕುಲು ನಗುವಂತೆ ಮಾಡಿ ಹೋಗಿದ್ದರೂ ಮಗಳಲ್ಲಿ ಏನೋ ಕೊರತೆ ಯಿತ್ತು. ಅದೇನೆಂದು ಅವರಿಗೆ ಅರ್ಥವಾಗಿರಲಿಲ್ಲ. ಹಲವು ಸಾರಿ ಅಂದುಕೊಂಡಿದ್ದಾರೆ: ಗಂಡ ತೀರಿಕೊಂಡ ಮೇಲೆ ಕೀರ್ತಿ ಹೆಚ್ಚು ಉಲ್ಲಸಿತಳಾಗಿದ್ದಾಳೆ, ಯಾಕೆ? ಕೀರ್ತಿ ಯಾವಾಗಲೂ ಉಲ್ಲಸಿತಳೇ ಹೌದು. ಆದರೆ ಅವಳ ಇತ್ತೀಚಿನ ಸಂತಸ ನಿಜವಾಗಿಯೂ ಆನಂದವೆ? ಅಥವಾ ನಾಗರಾಜನವಳು ತಾನಾಗುವುದಕ್ಕೆ ಅಡ್ಡಿಯಾಗಿದ್ದ ಕತ್ತೆಯೊಂದು ಸತ್ತು ಬಿದ್ದುದಕ್ಕೆ ಈ ಆವೇಶ, ಅತ್ಯುತ್ಸಾಹವೆ? ಅವರಿಗೆ ಬಹಳೇ ಮುಜುಗರವಾಗುತ್ತಿತ್ತು. ಹೀಗೆಲ್ಲ ಪ್ರಶ್ನೆ ಕೇಳಿಕೊಳ್ಳುವಾಗಲೇ ತಮಗೆಲ್ಲಿ ಉತ್ತರ ಸಿಕ್ಕಿಬಿಡುವುದೋ ಎಂದು ಭಯವೂ ಆಗುತ್ತಿತ್ತು. ತಮಗೆ ತಾವೇ ಹೇಳಿಕೊಳ್ಳುವರು: ನಾಗರಾಜನೋ ವಿಶ್ವನಾಥನೋ ಯಾರಾ ದರೂ ಒಬ್ಬರು ಬರಲಿ. ಯಾವುದೂ ಸ್ಪಷ್ಟವಾದೀತು. ಸ್ಪಷ್ಟವಾಗದಿದ್ದರೆ ಒಂದು ಥರ ಹಾಯಿ.

ಅವರ ಸಂಕಟ, ದುಃಖ ಆಳವಾದುವುಗಳು. ಅವುಗಳನ್ನು ಯಾರ

ಲ್ಲಿಯೂ ಹೇಳಿಕೊಳ್ಳುವಂತೆಯೂ ಇಲ್ಲ. ಗಂಡನೆಂಬುವನು ಇದ್ದುದು ತನ್ನ ಗಂಡುಸಾಗಿಯೇ ಹೊರತು ಗಂಡನಂತಲ್ಲ. ಅವರನ್ನೇನೂ ಕೇಳು ವಂತಿರಲಿಲ್ಲ. ಕೇಳಿಕೊಳ್ಳುವಂತೆ ಇರಬೇಕಿಲ್ಲ. ತಾವೇನಾದರೂ ತಮ್ಮ ಪುರುಷರತ್ನವನ್ನು ಕೇಳಿಕೊಂಡರೆ ಆ ಗಂಡಸಿಗೆ ಅತ್ಯಂತ ಅವಮಾನವಾಗಿ, ಅವಮಾನದಿಂದ ದುಃಖಪೀಡಿತರಾಗಿ ಮೂರುನಾಲ್ಕು ದಿನ ತಾನೇನು ತಪ್ಪುಮಾಡಿದೆ ಎಂದು ಹಲವುಬಾರಿ ತಮ್ಮನ್ನೇ ಕೇಳಿಕೊಂಡು, ಅಲ್ಲಿ ಮಾಡಿದೆ, ಇಲ್ಲಿ ಮಾಡಿದೆ ಎಂದು ಉತ್ತರಸಿಗದೆ ಮಂಕುಕವಿಸಿಕೊಂಡು ಬಿಡುತ್ತಾರೆ. ಯಾರಲ್ಲಿಯೂ ಮಾತನಾಡುವುದಿಲ್ಲ. ಅವರ ಬದುಕು ಪ್ರತಿಮಾದೇವಿಯರಿಂದ ಆಜ್ಞೆಗಳನ್ನು ತೆಗೆದುಕೊಂಡು ಶಿರಸಾವಹಿಸಿ ಪಾಲಿಸುವುದಕ್ಕೆ ಎಷ್ಟೊಂದು ಬದ್ಧವಾಗಿತ್ತೆಂದರೆ ಆ ನಿಯಮವನ್ನು ಪ್ರತಿಮಾದೇವಿಯರೇ ಮುರಿದರೂ, ಚಂದ್ರಾನಿಲರಾಯರು ತಪ್ಪು ತಮ್ಮದೇ ಎಂದುಕೊಂಡು ಪ್ರಾಯಶ್ಚಿತ್ತ ದೃಷ್ಟಿಯಿಂದ ಮೂಕರಾಗಿಬಿಡುತ್ತಿದ್ದರು. ಆ ಮನೆಯಲ್ಲಿ ತುಂಬಿ ತುಳುಕುತ್ತಿದ್ದ ಕಳೆಗೆ, ವರ್ಚಸ್ಸಿಗೆ, ಶಾಂತಿಗೆ ಕಾಣಿಕೆ ನೀಡಿದ್ದ ಸಂಗತಿಗಳು ಮೂರು: ಚಂದ್ರಾನಿಲರಾಯರ ಅರ್ಥ ವಿಲ್ಲದ, ಆದರೂ ತಾವು ಅತ್ಯಂತ ನಿಷ್ಠರಾದ ತಂದೆ ಮತ್ತು ಗಂಡನೆಂದು ತೋರಿಸಿಕೊಡುವ ಹುಚ್ಚು ಹಾರಾಟ, ಆರ್ಭಟ; ಒಂದೂ ಮಾತನಾಡದೆ ಯಾರನ್ನು ಬೇಕಾದರೂ ವಿಮರ್ಶಿಸುವ, ಎಲ್ಲರನ್ನೂ ಹೆದರಿಸಿ ಹದ್ದಿನಲ್ಲಿಟ್ಟು ಕೊಂಡಿದ್ದ ಪ್ರತಿಮಾದೇವಿಯರ ಮೌನ ಸಂವೇದನೆ; ಕೀರ್ತಿಯ ಚೈತನ್ಯ ದಾಯೀ ಯೌವನ ತುಂಬಿದ ಓಡಾಟ ಮತ್ತು ಅನಾಥ ಚಂದ್ರುವಿನ ಮೂಕವೇದನೆ. ಈಗ ಚಂದ್ರು ಸತ್ತುಹೋಗಿದ್ದಾನೆ. ಕೀರ್ತಿ ಅತಿ ಉತ್ಸಾಹದಿಂದ ಹಾರಾಡುತ್ತಿದ್ದಾಳೆ. ಚಂದ್ರಾನಿಲರಾಯರು ಮೂಕರಾಗಿಬಿಟ್ಟರೆ ಆ 'ಪ್ರತಿಮಾ ಕೀರ್ತಿ'ಯಲ್ಲಿ ನೆಲಸುವುದೇ ಅಸಹ್ಯವಾಗಿಬಿಡುತ್ತದೆ. ಯಾರಲ್ಲಿ ತಮ್ಮ ಗೋಳನ್ನು ಹೇಳಿಕೊಳ್ಳುವುದು. ವಿಶ್ವನಾಥ ಬಂದಾನು. ಬರಲಿ. ತಮ್ಮ ಕಷ್ಟವನ್ನು ತಾವೇ ಎಂದೂ ನುಂಗದ ಪ್ರತಿಮಾ ಈಗ ದೃಢನಿರ್ಧಾರ ಮಾಡಿದರು: ಇದು ಅತ್ಯಂತ ಮಹತ್ತರವಾದದ್ದು, ಯಾರಲ್ಲಿಯೂ ಹೇಳುವುದಿಲ್ಲ.

ಪ್ರತಿಮಾದೇವಿಯರು ವಿಶ್ವನಾಥನಿಂದ ತಿರಸ್ಕೃತರಾದವರಲ್ಲ. ಅವ ನನ್ನು—ತನ್ನ ಆದರ್ಶವನ್ನು—ಮದುವೆ ಮಾಡಿಕೊಂಡರೆ ಪ್ರತಿಮಾ ತೀರಿಹೋಗುತ್ತಾಳೆಂದು ಅವರಿಗೆ ಗೊತ್ತಿತ್ತು. ಆದುದರಿಂದಲೇ ಅವನು ಮದುವೆ ಮಾಡಿಕೊ ಎಂದಾಗ ಅವನನ್ನು ಅಂದರೆ ಅವನು ತನ್ನ ಗಂಡ ನಾಗುವುದನ್ನು ನಿರಾಕರಿಸಿದರು. ಬುದ್ಧಿ ಇತ್ತು ; ಹಣವಿತ್ತು ; ಎಲ್ಲಕ್ಕಿಂತ ಗಂಡನನ್ನು ಕೃತಜ್ಞತೆಯಲ್ಲಿ ಹೂತುಬಿಡುವಷ್ಟು ರೂಪವಿತ್ತು. ತಮ್ಮ ಸೌಂದರ್ಯರಾಶಿಯ ಮೇಲೆ ನಂಬಿಕೆ ಇಟ್ಟು ಪ್ರತಿಮಾದೇವಿಯರು

ಚಂದ್ರಾನಿಲರಾಯರನ್ನು ಮದುವೆಯಾಗಿದ್ದರು. ಅವರನ್ನು ಮದುವೆಯಾಗಿಯೂ ವಿಶ್ವನಾಥನ ಹೆಂಡತಿಯಾಗುಳಿದರು.

ತಮ್ಮ ಬದುಕಿನ ಘಟನೆಗಳೇ ಕೀರ್ತಿಯ ಬದುಕಿನಲ್ಲೂ ಪುನರಾವೃತ್ತಿಯಾಗುವಂತೆ ಕಾಣುತ್ತಿವೆ. ಆದರೆ ತಾವು ವಿಶ್ವನಾಥನನ್ನು ಆಕರ್ಷಿಸಿ, ಅವನನ್ನು ನಿರಾಕರಿಸಿ, ಅವನಲ್ಲಿ ತಲ್ಲೀನವಾದವರು; ಗಂಡನೊಡಗೂಡಿ ಬಾಳುತ್ತಲೂ ತಮ್ಮ ಆದರ್ಶದಲ್ಲಿ ಕರಗಿ ಹೋದವರು. ಆದರೆ ಕೀರ್ತಿ? ನಾಗರಾಜನಿಂದ ಆಕರ್ಷಿಸಲ್ಪಟ್ಟು, ಅವನಿಂದ ತಿರಸ್ಕೃತಳಾಗಿಲ್ಲವಾದರೂ ಅಪೇಕ್ಷಿತಳಾಗಿಲ್ಲ. ಬದಲಾಗಿ ತಮಗೆ ವಿಶ್ವನಾಥ ಹೇಗಾಗಿಬಿಟ್ಟನೋ ಹಾಗೆ ಕೀರ್ತಿ ನಾಗರಾಜನಿಗಾಗಿಬಿಟ್ಟಳು. ಕೀರ್ತಿ ಅವನ ಆದರ್ಶ: ಅವಳನ್ನು ಮದುವೆಯಾಗಲು ಅವನು ಭಯಬೀಳುತ್ತಾನೆ, ತಮ್ಮಂತೆಯೆ. ಕೈಗೆಟುಕದ, ಎಟುಕಿದರೂ ಸ್ವಂತವಾಗಿ, ಸ್ವಾಸ್ಥ್ಯವಾದಾಗ ದಕ್ಕಿಸಿಕೊಳ್ಳಲಾರದ ಆದರ್ಶವನ್ನು ಯಾವಾಗಲೂ ತಮ್ಮದೇ ಆಗಿರಬೇಕೆಂಬ ಹೆಬ್ಬಯಕೆಯಿಂದ ಅದನ್ನೂ ದೂರವಿಟ್ಟವರು ತಾನು ಮತ್ತು ನಾಗರಾಜ. ಕೀರ್ತಿ? ಕೈಗೆಟಕದ್ದು ಬೇಕೆಂಬ ಆಸೆ ಅವಳದು. ರಾಮುನಿಗೆ ಚಂದ್ರ ದಕ್ಕಿಯಾನೆ? ಅಥವಾ ದಕ್ಕಿ ಬಿಡಬಹುದೆ? ದಕ್ಕಿಬಿಟ್ಟರೆ ನೈರಾಶ್ಯಕಂದರದಾಳ? ಭಯವಾಯಿತು.

ಅವರಿಗೇನೂ ಹೊಳೆಯಲಿಲ್ಲ. ಹೊಳೆಯಬೇಕಾಗೂ ಇರಲಿಲ್ಲ. ಏನು ಯೋಚಿಸಿದರೂ ಅದು ಸರಿಯಾಗಿರಬಹುದಾದ ಆಲೋಚನೆ ಎಂಬುದು ಅನಿಶ್ಚಯವಾದಾಗ ಅದು ತೋರಬೇಕಾದರೂ ಹೇಗೆ? ಯಾಕೆ? ತಮ್ಮಿಂದ ಮೂರು ಅಡಿಯಷ್ಟೆ ಅಂತರದಲ್ಲಿ ಸೋಫಾದ ಮೇಲೆ ಕುಳಿತ ಚಂದ್ರಾನಿಲರಾಯರನ್ನು ಮುಖವೆತ್ತಿ ನೋಡಿದಾಗ ಪ್ರತಿಮಾದೇವಿಯರಿಗೆ ದುಃಖವಾಯಿತು. ಅವರ ಮುಖದಲ್ಲಿ ತಾನು ತಪ್ಪುಮಾಡಿದೆ ಎಂಬ ಪ್ರಾಥಮಿಕ ಶಾಲೆಯ ಮಗುವಿನ ಅನಿಶ್ಚಯತೆ; ತನಗೇನೂ ಅರ್ಥವಾಗುವುದಿಲ್ಲವೆಂಬ ಸ್ವಸಂತಾಪ, ಅರ್ಥವಾಗಲಾರದಷ್ಟು ದಡ್ಡನೆಂಬ ಆತ್ಮನಿಂದೆ ಮತ್ತು ದುಃಖ ಬರೆದಂತೆ ಕಾಣುತ್ತಿದ್ದವು ಪ್ರತಿಮಾದೇವಿಯರು ಅವರ ಮುಖ ನೋಡಿ ಬೇಕಂತಲೇ ಜೋರಾಗಿ, ಶಾಬ್ದಿಕವಾಗಿ ಅಕಳಿಸಿದಾಗ ಚಂದ್ರಾನಿಲರಾಯರಿಗೇನಾಯಿತೋ ಬುಡಬುಡನೆ ಮಲಗುವ ಕೋಣೆಗೆ ಓಡಿಬಿಟ್ಟರು. ಪ್ರತಿಮಾದೇವಿಯರಿಗೂ ಸಂತೋಷವಾಯಿತು.

ಗಂಡನನ್ನು ಹಿಂಬಾಲಿಸಿದರು ಪ್ರತಿಮಾದೇವಿ.

ಒಂದು ದಿನ ಚಂದ್ರು ಸತ್ತು ನಲವತ್ತೆಂಟು ದಿನದ ಮೇಲೆ ನಾಗರಾಜ ಥುತ್ತೆಂದು ಬಂದಿಳಿದ. ಬರಿಕೈಲಿ ಬಂದ. ಉಟ್ಟಬಟ್ಟೆಬಿಟ್ಟು ಬೇರೇನೂ ಇರಲಿಲ್ಲ. ಮುಂಜಾನೆಯ ಕುಳಿರ್ಗಾಳಿ ಹೂಗಳ ಗಮಗಮ ಹೊತ್ತು, ಸಂದುಗೊಂದುಗಳಲ್ಲಿ ಚಪಲ ಹುಟ್ಟಿಸಿತ್ತು ಎಲ್ಲರಿಗು. ಪ್ರತಿಮಾದೇವಿ ಕೀರ್ತಿ,ಚಂದ್ರಾನಿಲರಾಯರು ಮನೆಯ ಹಾಲಿನಲ್ಲೇ ಕುಳಿತಿದ್ದರು.ಅವನು ಬಂದುದನ್ನು ಯಾರೂ ಗಮನಿಸಿರಲಿಲ್ಲ. ಕೀರ್ತಿ ಯಾವುದೊ ಚಲನಚಿತ್ರ ಪತ್ರಿಕೆಯಲ್ಲಿದ್ದ ನಾಯಕಿಯ ಉಡುಗೊರೆಗೆ ತನ್ನ ಯೋಚನೆಯನ್ನು ಸಂಪೂರ್ಣ ಕೊಟ್ಟುಬಿಟ್ಟಿದ್ದಳು. ಚಂದ್ರಾನಿಲರಾಯರು ತಮ್ಮ ಪತ್ನಿಯಿಂದ ಸ್ವಲ್ಪ ದೂರದಲ್ಲಿ ವಿನೀತರಾಗಿ ಕುಳಿತಿದ್ದರು. ಪ್ರತಿಮಾದೇವಿಯರು ಶಾಂತವಾಗಿ ತಮ್ಮ ಮುಂದೆ ಬಟ್ಟಲಲ್ಲಿದ್ದ ಹೂಗಳ ಗಮ ಕುಡಿಯುತ್ತಿದ್ದರು.

ನಾಗರಾಜ ಟಿಕ್ ಟಿಕ್ ಎಂದು ಬಾಗಿಲ ಮೇಲೆ ನಿಧಾನ ಸದ್ದುಗೈದ. ಮೂರು ಜನರು ಒಟ್ಟಿಗೇ ಅವನತ್ತ ನೋಡಿದರು. ನಾಗರಾಜ ಎಲ್ಲರನ್ನೂ ನೋಡಿ ಪ್ರತಿಮಾದೇವಿಯರತ್ತ ನಡೆದ. ಹತ್ತಿರ ಬಂದ. ಕಾಲುಮುಟ್ಟಿದ. ಆಕೆ ಎದ್ದರು. ಅವನು ಅವರನ್ನು ಹಿಂಬಾಲಿಸಿದ. ಆಕೆ ಪಕ್ಕದಲ್ಲಿದ್ದ ಕೋಣೆಯೊಳಕ್ಕೆ ಹೋದರು. ಕೀರ್ತಿ, ಚಂದ್ರಾನಿಲರಾಯರು ಬಿಟ್ಟ ಕಣ್ಣು ಬಿಟ್ಟಂತೆ ಅವರನ್ನೇ ನೋಡುತ್ತಿದ್ದರು. ಎರಡು ದಶಕಗಳನ್ನು ಪ್ರತಿಮಾದೇವಿಯರೊಂದಿಗೆ ಕಳೆದಿದ್ದರೂ, ತಮ್ಮ ಪತ್ನಿ ಎಂಥವರು ಎಂದು ಚಂದ್ರಾನಿಲರಾಯರಿಗೆ ಅರ್ಥವಾಗಿಲ್ಲ. ದಿನ ದಿನವೂ ಬದಲಾಗುವಂಥವರನ್ನೂ, ಹೆಚ್ಚ ಹೊಸದಾಗಿ ಕಾಣಿಸುವಂಥವರನ್ನು ಹೇಗೆಂದು ಅರ್ಥ ಮಾಡಿಕೊಳ್ಳುವುದು ?

ಪ್ರತಿಮಾದೇವಿಯರು ಕೋಣೆಯ ಬಾಗಿಲ ಬಳಿ ನಿಂತರು. ಯಾಕೋ? ನಾಗರಾಜನ ತಲೆ ಸವರಿ ಅವನನ್ನು ಆಲಂಗಿಸಿದರು. ಅವನ ಮುಖವನ್ನು ತಮ್ಮ ವಿಶಾಲವಾದ ವಕ್ಷಃಸ್ಥಲದಲ್ಲಿ ಹುದುಗಿಸಿಕೊಂಡು ಅವನ ಬೆನ್ನು ಸವರುತ್ತ, ಕೈಬಳಸಿ ತಮ್ಮ ಮೈಯ ವಿಪುಲ ಸಂಪತ್ತಿನ ಮೇಲೆ ತನ್ನನ್ನು ಅತುಕೊಂಡಾಗ ನಾಗರಾಜ ಮಗುವಿನಂತಾಗಿಬಿಟ್ಟ. ಅವರ ಅತ್ಯಂತ ಸೂಕ್ಷ್ಮಸಂವೇದಿನಿ ನಾಸಿಕಾಗ್ರದಿಂದ ಬರುತ್ತಿದ್ದ ಸಹಜವಾದ ಪರಿಮಳಯುಕ್ತ ನಿಃಶ್ವಾಸ ಅವನಲ್ಲಿ ಮತ್ತೇರಿಸಿತು. ಆ ಗುಂಗಿನಲ್ಲೂ ಅವನಿಗೆ ಸ್ಪಷ್ಟವಾಗಿ ಕೇಳಿಸುತ್ತಿದ್ದುದು ಅವರ ತೀಕ್ಷ್ಣವಾದ ಆದರೂ ಸ್ಪಷ್ಟವಾದ ಎದೆ ಬಡಿತ. ಆ ಹೃದಯಗೀತೆಯಲ್ಲಿ ಏನೋ ಒಂದು ಮಾರ್ದವತೆ, ಅಸ್ಪಷ್ಟ ಮಾಧುರ್ಯ, ಮೂಕವೇದನೆ. ಆ ಮಂಜುಳ ಧ್ವನಿಯನ್ನು ಕೇಳಲೋಸುಗ ನಾಗರಾಜ ತನ್ನ ಮುಖವನ್ನು ಮತ್ತೆ ಮತ್ತೆ

ಆ ಕ್ಷೀರಸಮುದ್ರದಲ್ಲಿ ಹೂತುಬಿಟ್ಟ. ಅವನ ಆ ವರ್ತನೆ ಕಂಡು ಆನಂದ ವಾಯಿತು ಅವರಿಗೆ. ವಿಶ್ವನಾಥನ ನೆನಪು ಬಂತು. ನನ್ನ ಕೀರ್ತಿ ಬದುಕಿದಳು. ನಾಗರಾಜನನ್ನು ನಾನು ಅವಳಿಗಾಗಿ ಗೆದ್ದುಕೊಂಡೆ ಎಂದುಕೊಂಡರು. ತಮ್ಮ ಹಿಡಿತವನ್ನು ಅವನ ಮೇಲೆ ಮತ್ತಷ್ಟು ಬಿಗಿದರು. ತಮ್ಮ ಹಿಡಿತಕ್ಕೆ ಅವನು ತಾನಾಗಿಯೆ ಅತುಕೊಳ್ಳುತ್ತಿದ್ದುದನ್ನು ಅನುಭವಿಸಿ ಅವರಿಗೆ ಅತ್ಯಾನಂದವಾಯಿತು. ಆದರೆ ಅವನ ಬಾಹುಗಳು ತನ್ನ ಸುತ್ತ ಕ್ರಮೇಣ ಬಿಗಿಯಾದಾಗ ಭಯವೂ ಆಯಿತು. ಇವನೂ ವಿಶ್ವನಾಥನೆ ! ಆ ಹೊತ್ತಿನಲ್ಲಿ ಯಾರಾದರೂ ನಿಮಗೆ ವಿಶ್ವನಾಥ ಬೇಕೋ, ನಾಗರಾಜ ಬೇಕೋ ಎಂದು ಅವರನ್ನು ಕೇಳಿದರೆ ಬಹುಶಃ ಅವರಿಗೆ ಆ ಪ್ರಶ್ನೆ ಅರ್ಥವಾಗುತ್ತಿರಲಿಲ್ಲ. ಒಂದೇ ಒಂದು ಸಮಾಧಾನವೆಂದರೆ ಆ ಪ್ರಶ್ನೆ ಕೇಳುವವರು ಅಲ್ಲಿ ಯಾರೂ ಇಲ್ಲಿರಲಿಲ್ಲ. ಚಂದ್ರಾನಿಲರಾಯರೂ, ಕೀರ್ತಿ ಯಾವೊಂದು ಭಾವನೆಯೂ ಇಲ್ಲದೆ ಮೂಕ ಪ್ರೇಕ್ಷಕರಾಗಿ ಸುಮ್ಮನೆ ಕುಳಿತುಬಿಟ್ಟಿದ್ದರು.

ಪ್ರತಿವಾದೇವಿಯರ ಮನಸ್ಸಿನಲ್ಲಿ ಯಾವ ಭಾವನೆಗಳಿದ್ದುವು ಎನ್ನುವುದು ಯಾರಿಗೂ ಹೇಗೆ ಅರಿವಾಗಿರಲಿಲ್ಲ ಎನ್ನುವುದು ಒಂದು ಪ್ರಶ್ನೆ ಹೌದು. ಅರಿವಾಗಿರಲಿಲ್ಲ ಅನ್ನುವುದಷ್ಟೆ ಉತ್ತರ. ಬಹುಶಃ ಅವರ ಬದುಕನ್ನು ಸುತ್ತುವರೆದಿದ್ದ ರಹಸ್ಯ ಪ್ರಭಾವಳಿಯಲ್ಲಿ ಅರ್ಥವಾಗದ ಪ್ರಶ್ನೆಗಳು ಅನೇಕವಿದ್ದುವು.ಪ್ರಶ್ನೆಗಳು ಪ್ರಶ್ನೆಗಳಾಗಿಯಾದರೂ ಉಳಿದಿದ್ದರೆ ಬಹುಶಃ ಅವರ ಬದುಕಿನ, ವ್ಯಕ್ತಿತ್ವದ ಬಗ್ಗೆ ಕೌತುಕ ಸ್ವಲ್ಪವಾದರೂ ಕಡಿಮೆಯಾಗುತ್ತಿದ್ದವೇನೋ? ಆದರೆ ಅವರ ಜೀವನದಲ್ಲಿ ಹತ್ತಿಕೊಂಡಿದ್ದ ಅನೇಕರಿಗೆ ಪ್ರಶ್ನೆಗಳು ಹೊಳೆದಕೂಡಲೆ ಅವೇ ಪ್ರಶ್ನೆಗಳೇ ಉತ್ತರವಾಗಿಯೂ ಹೊಳೆದುಬಿಡುತ್ತಿದ್ದವು. ಅವರ ಮೌನಜೀವನದ ದಟ್ಟರಹಸ್ಯ ಹೆಪ್ಪುಗೊಂಡು ಮತ್ತಷ್ಟು ಆಳವಾಗುತ್ತಿತ್ತು. ಪ್ರಾಯಶಃ ವಿಶ್ವನಾಥನೊಬ್ಬನಿಗೇ ಆಕೆ ಅರ್ಥವಾಗಿದ್ದು. ಯಾಕೆಂದರೆ ಅವನು ಆಕೆಯನ್ನು ಅರ್ಥಮಾಡಿಕೊಳ್ಳಲು ಎಂದೂ ಪ್ರಯತ್ನ ಪಟ್ಟವನೇ ಅಲ್ಲ. ಅವರನ್ನು ಅವರಿದ್ದಂತೆ ಬಯಸಿದವನು. ಹಾಗೆ ಒಪ್ಪಿಕೊಂಡು ಪುನೀತನಾದವನು.

ಈಗ ನಾಗರಾಜ ಬಂದಿದ್ದಾನೆ. ಅವನಲ್ಲೂ ಒಂದು ಥರ, ಆಕೆಯ ಚಿತ್ತವ್ಯಾಕುಲತೆ. ಯಾವೊಂದು ನಿಷ್ಕೃಷ್ಟವಾದ ದುಃಖವೂ ಇಲ್ಲದೆ, ಯಾವ ಸಂಕಟದ ಅರ್ಥವತ್ತಾದ ಪ್ರತಿರೂಪವೂ ಇಲ್ಲದೆ ಬೇಯುತ್ತಿದ್ದ ಅವನು. ಕೀರ್ತಿಯ ಗಂಡನೆನೆಸಿಕೊಂಡವನು ಸತ್ತುಹೋಗಿ ಆಕೆಯ ಬದುಕಿಗೊಂದು ಅರ್ಥ ನೀಡಿಬಿಟ್ಟಿದ್ದಾನೆ. ಈಗ ತನ್ನದೇನು ಪಾತ್ರ ? ನಾಗರಾಜನಿಗೆ ಕೀರ್ತಿಯ ಬದುಕಿನಲ್ಲಿ ತನ್ನದೂ ಒಂದು ಪಾತ್ರ ಇರಲೇ ಬೇಕು ಏಕೆ ಎಂದು ಹಲವು ಬಾರಿ ಅನಿಸಿದೆ. ಕೆಲವೊಮ್ಮೆ ನಾವು ಇನ್ನೊ

ಬ್ಬರು ಸಂಕಟಕ್ಕೊಳಗಾಗಿದ್ದಾರೆಂದ ಕೂಡಲೆ ನಮ್ಮಲ್ಲಿರುವ ಎಲ್ಲ ನೈತಿಕ ಶಕ್ತಿಗಳನ್ನು ಒಂದುಗೂಡಿಸಿಕೊಂಡು ಅವರನ್ನು ಸಾಂತ್ವನಗೊಳಿಸಲು ಹೊರಟುಬಿಡುತ್ತೇವೆ. ಅವರಿಗೆ ನಮ್ಮ ಅನುಕಂಪದಿಂದ ಚಿತ್ರಹಿಂಸೆ ನೀಡಿ, ಮತ್ತಷ್ಟು ಕಾಟಕೊಡುತ್ತೇವೆ ಎಂದು ಅವನಿಗೆ ಹಲವು ಬಾರಿ ಅನಿಸಿತ್ತು. ಈಗಲೂ ಅನಿಸಿದೆ. ಆದರೂ ಬಂದಿದ್ದಾನೆ.

ನಾನು ಯಾಕೆ ಬಂದೆ? ಕೀರ್ತಿಯ ಗಂಡ ಸತ್ತನೆಂದೆ? ಅವನು ಸತ್ತರೂ, ಬದುಕಿದರೂ ನನಗೇನು ಕಾರುಬಾರು ಮಾಡಲಿಕ್ಕಿದೆ? ಅವಳಿಗೆ ದುಃಖವಾಗಿರಬಹುದೆಂದು ಬಂದೆನೆ? ದುಃಖವಾಗಿರುವುದು ನಿಜವಾದರೂ ನಾನೇನು ಮಾಡಬಹುದು? ಅವನಿಗೆ ಭಯವಾಯಿತು: ಈ ದುಃಖ ನಾನು ತಪ್ಪಿಸಬಹುದಾಗಿತ್ತು ಎಂಬ ಸೂಚನೆ ಬಂದಕೂಡಲೆ ಬೆವರಿದ. ಈಗಷ್ಟೆ ಪ್ರತಿಮಾದೇವಿಯರ ಹೃದಯಸೀಮೆಯಲ್ಲಿ ತಪ್ಪಿಸಿಕೊಂಡಿದ್ದಾಗ, ಕಳೆದುಕೊಂಡ ಏನೋ ಒಂದಕ್ಕೆ ನಾನು ಹುಡುಕುತ್ತಿದ್ದಿರಬಹುದೆ? ಕೀರ್ತಿಯನ್ನೇ ಯಾಕೆ ಹಾಗೆ ತಬ್ಬುವ ಧೈರ್ಯವಿಲ್ಲ? ಹೌದು ಧೈರ್ಯವಿಲ್ಲ. ತನಗೆ ತಾನೆ ಸಮಾಧಾನ ಹೇಳಿಕೊಂಡ: ಕೀರ್ತಿಯನ್ನು ತಬ್ಬುವುದರಲ್ಲಿ ಯಾವ ಸುಖವಿದೆ? ಪ್ರತಿಮಾದೇವಿಯರಲ್ಲಿರುವ ಪಕ್ವವಕ್ಷಮಾಂಸಲ ಸಂಪತ್ತು ಅವಳಲ್ಲಿದೆಯೆ? ಯೋಚನೆ ಬಂದ ಕೂಡಲೆ ಅವನಿಗೇಕೋ ನಾಚಿಕೆಯಾಗಿಬಿಟ್ಟಿತು. ನಿಜವಾದ ಕಾರಣವೆಂದರೆ ಕೀರ್ತಿ ಪ್ರತಿಮಾದೇವಿಯರು–ಇಬ್ಬರ ಶ್ರೀಮಂತ ಧೋರಣೆಯ ಮುಂದೆ ನಿಂತು ಉತ್ತರಿಸುವ ನೈತಿಕ ಧೈರ್ಯ ನನಗಿಲ್ಲ. ಅಷ್ಟೆ. ಆದಕ್ಯಾಕೆ ಈ ನ್ಯಾಯ ನೀತಿಗಳ ಅಸಹ್ಯ ಹೊಣೆ? ತಾನು ಪ್ರತಿಮಾದೇವಿಯರನ್ನು ತಬ್ಬಿಕೊಂಡುದರ ಕಾರಣ ಆಕೆಯ ವಯಸ್ಸಿನ ಮರ್ಯಾದೆಯ ಶ್ವೇತಛತ್ರದಡಿಯಲ್ಲಿ ತನ್ನ ನೀತಿಗೆಟ್ಟತನವನ್ನು ಮುಚ್ಚಿಟ್ಟುಕೊಳ್ಳಬಹುದೆಂದು ಎಂದು ಅವನಿಗನ್ನಿಸಿತು.

ಕೀರ್ತಿಯ ಮುಖವನ್ನೂ ಕಂಡಕೂಡಲೆ ಅವನಿಗೆ ಹೃದಯ ಹತ್ತಿಕ್ಕಿ ಬರುತ್ತಿತ್ತು. ಆಕೆ ತನ್ನಲ್ಲಿ ಒಂದೂ ಮಾತನಾಡದೆ ಸುಮ್ಮನಿದ್ದುದನ್ನು ಕಂಡಾಗ ಅವನಿಗೆ ಭಯವೂ ಆಯಿತು. ಅವಳ ಮುಖಾರವಿಂದದಲ್ಲಿ ಚಿತ್ರಿತವಾಗಿದ್ದ ಶೂನ್ಯತೆಗೇನು ಅರ್ಥವಿದ್ದಿರಬಹುದು? ನೀನು ನನ್ನನ್ನು ಈ ಸ್ಥಿತಿಗೆ ತಂದೆ ಎಂದೆ? ನಾನು ಈ ಸ್ಥಿತಿಗೆ ಬಂದುದರಿಂದ ನೀನು ನನ್ನವನೇ ಆದೆ ಎಂದೆ? ಕೀರ್ತಿ ಈಗ ವಿಧವೆಯಾಗಿದ್ದಾಳೆ. ನಾನು ಇನ್ನು ಅವಳಿಂದ ತಪ್ಪಿಸಿಕೊಂಡು ಓಡುವುದಂತೂ ಸಾಧ್ಯವಿಲ್ಲ ಎಂಬುದು ನಾಗರಾಜನಿಗೆ ತಟಕ್ಕನೆ ಗೋಚರವಾಯಿತು.

ಅಂದು ಸಂಜೆಯವರೆಗು ಕೀರ್ತಿ ನಾಗರಾಜನನ್ನು ನಿರ್ದಾಕ್ಷಿಣ್ಯವಾಗಿ ಕಡೆಗಣಿಸಲೂ ಇಲ್ಲ; ಮೇಲೆ ಬಿದ್ದು ಮಾತನಾಡಿಸಲೂ ಇಲ್ಲ. ಅವನಿಗೆ

ಸಂತೋಷವಾಯಿತು. ಇನ್ನು ಗೆದ್ದೆ ಎಂದುಕೊಂಡ. ಚಂದ್ರಾನಿಲರಾಯರನ್ನು ನಿಮಗೇನೆನ್ನಿಸಿತು ಎಂದು ಯಾರೂ ಕೇಳಲಿಲ್ಲ. ಒಂದು ಥರ ಒಳ್ಳೆಯದೆ. ಅವರಿಗೇನೆನ್ನಿಸಿತು ಎಂದು ಅವರಿಗೇ ಗೊತ್ತಿರಲಿಲ್ಲ. ಕೀರ್ತಿಯ ನಿರ್ಲಿಪ್ತತೆಯನ್ನು ಕಂಡು ಭಯಗೊಂಡವರೆಂದರೆ ಪ್ರತಿಮಾದೇವಿಯರು. ಇಂದು ರಾತ್ರಿಯಲ್ಲಿ ಎಲ್ಲವೂ ತೀರ್ಮಾನವಾಗಿ ಬಿಡುತ್ತದೆ ಎಂದೆನಿಸಿ ಅವರಿಗೆ ಭಯವಾಯಿತು. ಆಗಲಿ. ಹಾಳಾಗಲಿ ಎಂದುಕೊಂಡರು.

ನಾಗರಾಜ ಒಂದು ಕೋಣೆಯಲ್ಲಿ ಕುಳಿತು ಯಾವುದೋ ಪುಸ್ತಕ ತಿರುವುತ್ತಿದ್ದ. (ಪ್ರತಿಮಾದೇವಿಯರು ಓದುವ ಹವ್ಯಾಸವನ್ನು ಕಾರ್ತೀಕನ ಸಂಗ ತೊರೆದಾಗಲೆ ನಿಲ್ಲಿಸಿಬಿಟ್ಟಿದ್ದರೂ ಒಂದು ಅದ್ಭುತ ಪುಸ್ತಕ ಸಂಗ್ರಹವನ್ನುಹೊಂದಿದ್ದರು). ಊಟದ ಸಮಯ. ಇನ್ನೇನು ಕರೆಬರಬಹುದು. ಯಾರೋ ಮುಂದೆ ನಿಂತಂತಾಯಿತು. ತಲೆ ಎತ್ತಿದ. ಕೀರ್ತಿ ಬಾಗಿಲಲ್ಲಿ ನಿಂತಿದ್ದಳು. ಅವನಿಗೆ ಭಯವಾದಂತಾಯಿತು. ಅವನು ಮಾತನಾಡದಿದ್ದರೆ ಇವಳು ಅಸ್ಫೋಟಗೊಳ್ಳುವುದು ಖಂಡಿತ. ಬಾ ಕೀರ್ತಿ ಎಂದು ಕರೆದ. ನಗುನಗುತ್ತ ಕೈಯಾಡಿಸಿ ಕರೆದ: ಅವಳು ಬಂದಳು. ಕೂತುಕೋ ಎಂದ. ಕೂತುಕೊಂಡಳು. ಹೇಗಿದ್ದೀಯ ಎಂದ. ಅವಳಿಗೆ ಕೆನ್ನೆಗೆ ಅಪ್ಪಳಿಸಿದಂತಾಗಿ ದುಃಖ ಒತ್ತರಿಸಿ ಬಂತು ಅದನ್ನು ತೋರಿಸಿಕೊಂಡರೆ ಅವನಿಗೆಲ್ಲಿ ಖುಶಿಯಾಗಿಬಿಡಬಹುದೋ ಎಂದು ಹೆದರಿಕೆಯಿಂದ ಚೆನ್ನಾಗಿದ್ದೇನೆ ಎಂದಳು. ಅವನ ಕಣ್ಣುಗಳಲ್ಲಿ ದೃಷ್ಟಿ ನಟ್ಟಿ, ತನ್ನಲ್ಲಿ ಅಲ್ಲಿಯವರೆಗೂ ಸುಪ್ತವಾಗಿದ್ದ ಶೃಂಗಾರ ಭಾವನೆಗಳನ್ನೆಲ್ಲ ಕೇಂದ್ರೀಕರಿಸಿ ಕೆನ್ನೆಗಳನ್ನುಅಳಗೈದಳು. ಮೂಗನ್ನು ತುಸುವೆ ಬಾಗಿಸಿದಳು. ತುಟಿಗಳನ್ನು ಕೊಂಕು ಮಾಡಿ, ತುಸುವೆ ಗುಂಡಾಗಿಸಿ ಮುಗುಳ್ನಕ್ಕಳು ಅವಳು ಹೆಚ್ಚು ಹೆಚ್ಚು ಸುಂದರಳಾಗುತ್ತಿದಂತೆ ಕ್ಷಣಕ್ಷಣಕ್ಕು ಕಾಮದೇವಿಯನ್ನೂ ಮಿರಿ ಬೆಳೆಯುತ್ತಿದ್ದಂತೆ ನಾಗರಾಜ ಮೂಕನಾಗಿ ಕಲ್ಲಾಗುತ್ತಿದ್ದ. ಅವಳ ಮೋಹಕ ಮುಗುಳ್ನಗುವೂ ಅವಳ ವೈಫಲ್ಯವನ್ನು ಪ್ರತಿಫಲಿಸಿತು. ಉಸಿರು ಕಟ್ಟಿ, ತೊಟ್ಟಿದ್ದ ಫ್ರಾಕಿನಿಂದ ಮುಕ್ಕಾಲು ಭಾಗ ಹೊರಗೆ ಕಾಣುವಂತೆ ಎದೆಯುಬ್ಬಿಸಿ ಕುಳಿತಾಗಲೂ ವಿಶ್ವಾಮಿತ್ರನಂತೆ ಕಣ್ಣುಮುಚ್ಚಿ ಕುಳಿತದ್ದು ಕಂಡು ಅವಳಿಗೆ ಅಳುಬರುವಂತಾಯಿತು. ತನ್ನ ರೂಪವನ್ನು ಧಿಕ್ಕರಿಸಿದನಲ್ಲ ಎಂದು ಅವಳಿಗೆ ರೋಷ ಬಂತು. ದುಃಖ ತಡೆಯಲು ಇನ್ನೊಂದು ಕ್ಷಣವೂ ಸಾಧ್ಯವಿಲ್ಲ. ಅವಳಿಗೆ ಅವನ ಮುಂದೆ ಅಳಲು ಮನಸ್ಸಿಲ್ಲ. ಅಲ್ಲಿಂದ ಓಡಿಬಿಡಬೇಕೆನಿಸಿತು. ಎದ್ದಳು. ಬಾಗಿಲಲ್ಲಿ ಯಾವಾಗಲೋ ಬಂದು ನಿಂತಿದ್ದ ಪ್ರತಿಮಾದೇವಿಯರನ್ನು ಕಂಡು ಅವಮಾನವಾಯಿತು. ತನ್ನ ಸೋಲನ್ನು ಅವಳೂ ಕಂಡಿರಬೇಕು. ರೋಷದಿಂದ ಅವಳ ತುಟಿ

ಗಳು ನಡುಗಹತ್ತಿದವು. ಎದೆ ಮೇಲೆ ಕೆಳಗೆ ಕುಣಿದಾಡಿತು. ಪ್ರತಿಮಾದೇವಿಯರಿಗೆ ತಾವು ಬಂದು ನಿಂತದ್ದರಿಂದ ಎಂಥ ಅನಾಹುತವಾಯಿತೆಂದು ಅರ್ಥವಾಯಿತು. ಊಟಕ್ಕೆ ಬಾರೋ ನಾಗರಾಜ. ಕೀರ್ತಿ ಅವನನ್ನು ಕರೆದುಕೊಂಡು ಬಾ ಎಂದರು. ಕೀರ್ತಿ ಏನೋ ಹುಚ್ಚು ತೀರ್ಮಾನ ಮಾಡಿರಬೇಕೆಂದು ಅವರಿಗರ್ಥವಾಗುತ್ತಿತ್ತು. ಸಿಡಿಲಂತೆ ಅವಳು ಹೇಳಿದಳು : ನನಗೆ ಹಸಿವಿಲ್ಲ. ಅವನಿಗೂ ಹಸಿವಿಲ್ಲ. ನೀ ಹೋಗು. ಅವಳ ಧ್ವನಿಯಲ್ಲಿದ್ದ ನಿಷ್ಠುರತೆಯನ್ನು ಕೇಳಿ ಪ್ರತಿಮಾದೇವಿಯರಿಗೆ ಭಯವಾಯಿತು. ಇಲ್ಲಿಯವರೆಗೂ ಕೀರ್ತಿ ತಮಗೆ ಆ ಧ್ವನಿಯಲ್ಲಿ ಉತ್ತರ ಕೊಟ್ಟಿರಲಿಲ್ಲ. ತಮಗೆ ಹಾಗೆ ಮಾತನಾಡಿದವರು ಯಾರೂ ಇರಲಿಲ್ಲ. ನಾಗರಾಜನ ಮುಂದೆಯೇ ಅವಳು ಹಾಗೆಂದಾಗ ಅವರಿಗೆ ರೋಷ ಕುದಿಯಿತು. ರೂಮಿನೊಳಕ್ಕೆ ಸರಸರ ಬಂದವರೆ ಕೀರ್ತಿಯ ರಟ್ಟೆ ಹಿಡಿದು, ರಪ್ಪೆಂದು ಕಪಾಳಕ್ಕೆ ಬಿಗಿದರು. ಬಹಳ ದಿನಗಳ ಹಿಂದೆ ಕೊಟ್ಟಿದ್ದ ಭಾಷೆಯನ್ನು ಇಂದು ತೀರಿಸಿಕೊಂಡು ಧಡಧಡ ಹೊರಟು ಹೋದರು. ಅವಳ ಹಿಂದೆಯೇ ಕೀರ್ತಿ ಓಡಿದ್ದನ್ನು ಕಂಡು ನಾಗರಾಜನಿಗೆ ಅಯ್ಯೋ ಎಂಥ ನರಕ, ಇಲ್ಲಿ ಯಾಕೆ ನಾನು ಬಂದೆ ಅನಿಸಿಬಿಟ್ಟಿತು. ತಾಯಿಯ ಮೇಲೆಲ್ಲಿ ಕೈ ಮಾಡುತ್ತಾಳೋ ಎಂದು ಭಯವಾಯಿತು ಅವನಿಗೆ. ಆ ತಾಯಿಗೇ ಹಾಗೆನ್ನಿಸಿತು. ಪ್ರತಿಮಾದೇವಿಯರು ಬಾಗಿಲು ದಾಟುವ ಮೊದಲೇ ಕೀರ್ತಿ ಅವರ ದಾರಿಗಡ್ಡ ಗಟ್ಟಿ ಮಗುವಂತೆ ಅಳುತ್ತ ಅವರ ಕಾಲುಗಟ್ಟಿದಳು. ಅಮ್ಮ ಅಮ್ಮ ಎಂದು ಮುಲುಗುಟ್ಟಿದಳು. ಪ್ರತಿಮಾದೇವಿ ಅವಳ ಕೈಹಿಡಿದೆತ್ತಿದರು. ತಲೆಸವರಿ, ಅವಳ ಮುಖ ನೋಡಿದರು. ಏನು ಮಾಡಬೇಕೆಂದಿದ್ದೀಯ ಎನ್ನುವಂತಿತ್ತು ಆ ನೋಟ. ಕೀರ್ತಿ ತಾಯಿಯನ್ನು ಹೊಸ್ತಿಲಾಚೆ ಮೃದುವಾಗಿ ತಳ್ಳಿ ಬಾಗಿಲು ಹಾಕಿಕೊಂಡಳು.

ಅವಳು ನಾಗರಾಜನತ್ತ ತಿರುಗಿದಾಗ, ನೀರು ಹರಿಯುತ್ತಿದ್ದರೂ ಅವಳ ಕಣ್ಣುಗಳಲ್ಲಿದ್ದ ರಕ್ತವನ್ನು ಕಂಡು ನಾಗರಾಜ ಪುಕ್ಕನಾಗಿಬಿಟ್ಟ. ನಿಧಾನವಾಗಿ ಒಂದೊಂದೇ ಹೆಜ್ಜೆ ಇಕ್ಕುತ್ತ, ಒಂದೊಂದು ಹೆಜ್ಜೆಗೂ ಒಂದೊಂದು ಆಕಾಶ ತುಳಿದು ಬರುವಂತೆ ಕೀರ್ತಿ ಬಂದಳು. ನಾಗರಾಜನ ಕೈಹಿಡಿದು, ಕೆನ್ನೆಗೆ ಪಟಪಟನೆ ನಾಕು ಬಿಗಿದಳು. ತಾಯಿಯಿಂದ ತನ್ನ ಜೀವಮಾನದಲ್ಲಿ ಮೊದಲಬಾರಿಗಾದ ಅವಮಾನದ ಗಾಯ ಅಷ್ಟು ಬೇಗ ಆರುವುದಾದರೂ ಹೇಗೆ? ಅಥವಾ ಮಾಗಿದೆಯೆಂದು ತೋರಿಸಿಕೊಳ್ಳಲು ಅವಳಿಗಿಷ್ಟವಿರಲಿಲ್ಲ. ತಾಯಿಯಿಂದ ಬಿದ್ದ ಒಂದಕ್ಕೆ ಹತ್ತಾದರೂ ತೀರಿಸಿಕೊಳ್ಳಬೇಕೆಂದುಕೊಳ್ಳುತ್ತಿರುವಾಗಲೇ ನಾಗರಾಜ ಮುನ್ನುಗ್ಗಿ ಅವಳನ್ನು ಅಪ್ಪಿಬಿಟ್ಟ.

ಕೀರ್ತಿಗೆ ಆನಂದವಾಯಿತು. ಈ ಅಪ್ಪುಗೆಗೆ ಎಷ್ಟು ದಿನ ಕಾದಿದ್ದಳವಳು. ಚಂದ್ರುವನ್ನೇ ಕೊಂದಿದ್ದಳು. ಅಷ್ಟು ಬಿಗಿಯಾಗಿತ್ತು ನಾಗರಾಜನ ಹಿಡಿತ. ಆದರೂ ಅದನ್ನು ತೋರಗೊಡಲು ಇಚ್ಛಿಸಲಿಲ್ಲ ಅವಳು. ಅವನ ಹಿಡಿತ ಕಿತ್ತೊಗೆದು, ಇನ್ನೊಂದು ಬಿಗಿದು ದೂರ ನೂಕಿದಳು. ನಾಗರಾಜ ಮತ್ತೆ ಬಿರುಗಾಳಿಯಂತೆ ನುಗ್ಗಿ ಅವಳನ್ನು ಬಳಸಿದ. ಅವನ ನೀಳಕಾಯಕ್ಕೆ ಬಳ್ಳಿಯಂತಿದ್ದ ಕೀರ್ತಿಯ ದೇಹ ತೇಂಕಿತು. ತನ್ನ ಎದೆಯನ್ನು ಬಿಗಿಯಾಗಿ ಅವನ ಹೊಟ್ಟೆಗೆ ಅಮುಕಿ, ಮೆಲ್ಲಗೆ ಹಾವಿನಂತೆ ತೇಕಿದಳು ಕೀರ್ತಿ, ತುಟಿಗಳನ್ನೆತ್ತಿ, ಅವನ ತುಟಿಗಳತ್ತ ಚಾಚುತ್ತ, ಮುಂಗಾಲ ಮೇಲೆ ನಿಂತಳು. ನಾಗರಾಜ ತನ್ನೆಲ್ಲ ಬಾಹು ಬಲದಿಂದ ಅವಳನ್ನು ಬಳಸಿ, ತನ್ನ ದೇಹಕ್ಕೆ ಅತುಕೊಂಡು, ಅವಳ ತೂಕವನ್ನೆತ್ತಿ ತನ್ನ ತುಟಿಗಳನ್ನು ಅವಳದರೊಂದಿಗೆ ಕೂಡಿಸಿದಾಗ ಅವಳ ಮೊಲೆಗಳು ಭಯಂಕರವಾಗಿ ಬೆಳೆದಂತೆನಿಸಿತು ಅವನಿಗೆ. ತನ್ನ ವಕ್ಷವನ್ನೂ ಮೀರಿ ಹರಡಿದ್ದ ಅವಳ ಬೆಚ್ಚನೆಯ ಮಾಂಸದ ಸ್ಪರ್ಶಕ್ಕೆ ನಾಗರಾಜ ಕರಗಿ ಹೋಗಿದ್ದ. ಕೈಚಾಚಿ, ಅವಳ ನಿತಂಬದಾಚೆ ಚಾಚಲು ಪ್ರಯತ್ನಿಸಿದಾಗ, ಅವು ತನ್ನ ಕೈಯಳತೆಯನ್ನೂ ಮೀರಿ ಬೆಳೆದಿವೆ ಎನಿಸಿತು. ಅವಳ ನಿಃಶ್ವಾಸ ತನ್ನಉಚ್ಛ್ವಾಸವೆನಿಸುವಷ್ಟು ಅವಳ ದೇಹಕ್ಕೆ ಅವನು ಅಂಟಿಕೊಂಡಾಗ ಕಾಲ ಯಾವಾಗಲೊ ನಿಂತಿತ್ತು. ಗಾಳಿ ಹಿತವಾಗಿ ಹರಡಿತ್ತು.

ಕೀರ್ತಿಯ ದೇಹದಲ್ಲಿ ತಾರುಣ್ಯದ ರಕ್ತ. ಅವನಲ್ಲಿ ರಾಮ ಚಂದ್ರನನ್ನು ಹಿಡಿದಾಗ ಉಂಟಾಗಿದ್ದ ಆನಂದ ಸ್ಪಂದನ. ಕಾಲದ ಪರಿವೆ ಇಬ್ಬರಿಗೂ ಇರಲಿಲ್ಲ. ಕೀರ್ತಿ ನಾಗರಾಜನನ್ನು ಬಲಿತೆಗೆದುಕೊಂಡಿದ್ದಳು. ಇಷ್ಟು ದಿನ ತನ್ನ ರೂಪವನ್ನು ಧಿಕ್ಕರಿಸಿ ನಿಂತಿದ್ದ ನಾಗರಾಜ, ಹಸಿದ ಹಾವಿನ ಹಾಗೆ ತನ್ನ ದೇಹಕ್ಕೆ ಅಂಟಿಕೊಂಡಿರುವಾಗ ಅವಳಿಗೆ ಇವನು ನನ್ನ ಗೆದ್ದವನಲ್ಲವೆ ಅನಿಸಿತು. ತನ್ನ ರೂಪದಲುಗಿನ ಹೊಡೆತಕ್ಕೆ ಕಣ್ಣ ಮಾಟಕ್ಕೆ ಎದೆಯ ಅಹಂಕಾರಕ್ಕೆ ಸೋಲದವರೇ ಇರಲಿಲ್ಲ-ಈ ನಾಗರಾಜನೊಬ್ಬನನ್ನು ಬಿಟ್ಟರೆ. ಈಗ ನಾಗರಾಜ ತನ್ನವನೇ ಆಗಿಬಿಟ್ಟ. ಹಾಗೆಂದು ಅವನಿಗೆ ಹೇಳಬೇಕೆನಿಸಿತು. ಹೇಳಿದರೆ ಅವನು ಮಾತನಾಡುತ್ತಾನೆ. ಅವನ ಪ್ರೇಮಯೋಗಕ್ಕೆ ಭಂಗ ಎಂದರೆ ಅವನು ತನ್ನಿಂದಲೇ ದೂರ ಹೋಗಬಹುದು. ಕೀರ್ತಿಗೆ ಅದು ಬೇಕಾಗಿರಲಿಲ್ಲ. ಅವನ ಅಪ್ಪುಗೆಯಲ್ಲಿದ್ದ ಮೋಹಕ ಬಂಧ ಅವನಿಂದ ತನ್ನೆದೆಯೊಳಕ್ಕೆ ಹಾಯುತ್ತಿದ್ದ ಎಂಥದೋ ಒಂದು ಚಂದದ ಸುವಾಸನೆ ಎಲ್ಲಿ ದೂರವಾಗಿ ಬಿಡುತ್ತದೋ ಎಂದು ಭಯವಾಯಿತು. ಇನ್ನಷ್ಟು ಬಿಗಿಯಾಗಿ ಅವನಿಗೆ ನೇತುಹಾಕಿಕೊಂಡಳು.

ಅವಳ ತೂಕ ಪೂರ್ತಿ ತನ್ನ ಮೇಲೆ ಬಿದ್ದಾಗ ನಾಗರಾಜ ಮತ್ತೆ ಥರೆಗಿಳಿದ. ಕೀರ್ತಿ ಅಂದ. ಕೀರ್ತಿಗೆ ಭಯವಾಯಿತು. ಅಂದರೆ ಅವನ ಧ್ವನಿಯಲ್ಲಿ ಪ್ರೇಮವಿರಲಿಲ್ಲವೆಂದಲ್ಲ. ಒಗೊಟ್ಟರೆಲ್ಲಿ ಆ ಧ್ವನಿಯ ಮಾರ್ದವತೆ ಮಾಧುರ್ಯವಾಗಿಬಿಡುತ್ತದೋ ಎಂಬ ಭಯದಿಂದ ಅವಳು ಅವನನ್ನು ಮತ್ತಷ್ಟು ಬಿಗಿಯಾಗಿ ಹಿಡಿದಳು. ನಾಗರಾಜನಿಗೆ ವಿಚಿತ್ರವೆನಿಸಿತು. ಕೀರ್ತಿ. ಕೀರ್ತಿ. ಕೀರ್ತಿ ಭಯದಲ್ಲಿ ಹುದುಗಿ ಹೋಗಿದ್ದಳು. ತಾನು ಅವನನ್ನು ಹೊಡೆದು, ಬಲವಂತದಿಂದ ಗೆದ್ದು ದು ಇಷ್ಟು ಬೇಗ ಕೊನೆ ಮುಟ್ಟಬಹುದೆಂಬ ಅತಂಕ ಅವಳಿಗೆ ಈಗ ತಟಕ್ಕನೆ ಗೋಚರವಾಯಿತು. ತನ್ನ ಆತಂಕದ ಅರಿವು ಅವನಿಗೂ ಇದೆಯೆಂಬ ತಪ್ಪು ತಿಳಿವಳಿಕೆಯಿಂದ ಅದಕ್ಕಿಂತ ಹೆಚ್ಚಾಗಿ ತನ್ನ ಗೊಂದಲ ಅವನಿಗೆ ತಿಳಿದುಬಿಟ್ಟಿತು ಎಂಬ ನಾಚಿಕೆಯಿಂದ ಅವಳು ಇದ್ದಕ್ಕಿದ್ದಂತೆ ಅವನಿಂದ ಹರಿದುಕೊಂಡು ದೂರ ನಿಂತಳು. ಇಲ್ಲದ ಕೋಪವನ್ನು ಮುಖದಲ್ಲಿ ಬರಿಸಿಕೊಂಡಳು. ನಾಗರಾಜ ಅವಳನ್ನು ದಿಟ್ಟಿಸಿದ. ಅವಳು ಕೋಪ ಗೊಂಡಿದ್ದರಿಂದ ಅವನಿಗೆ ನೆಮ್ಮದಿಯಾಯಿತು. ನಿಜವಾದ ಕೀರ್ತಿ ಈಗ ಚಿಪ್ಪು ಕಳೆದುಕೊಂಡು ಹೊರಗೆ ಬರುತ್ತಿದ್ದಾಳೆ ಅನಿಸಿತು. ಹೇಳಿದ: ಯಾಕೆ ಕೀರ್ತಿ? ಕೀರ್ತಿಯಲ್ಲಿ ಉತ್ತರವಿರಲಿಲ್ಲ. ಅವನ ಪ್ರಶ್ನೆ ಎಷ್ಟು ಅವಾಯಕವಾಗಿತ್ತೆಂದರೆ ಚೂಪ್ರಾವೆ ಬಂದು ನಾಗರಾಜನ ಗಂಟಲಲ್ಲಿ ಕೂಗಿದಂತಿತ್ತು.

ಕೀರ್ತಿಗೆ ಅಳು ಬಂದುಬಿಟ್ಟಿತು. ಚಂದ್ರಶೇಖರನ ನೆನಪಿನಿಂದಿರ ಬೇಕು. ಅಥವಾ ಅವನನ್ನು ಪೀಡಿಸಿ ಕೊಂದುಹಾಕಿಬಿಟ್ಟೆ ಎಂಬ ಆತ್ಮಾವ ಹೇಳನದಿಂದಿರಬೇಕು. ಅಥವಾ ನಾಗರಾಜನೂ ಚಂದ್ರುವಂತಾಗಿಬಿಟ್ಟನೆ ಎಂಬ ದಿಗ್ಭ್ರಮೆಯಿಂದಿರಬೇಕು. ಅತ್ತುಬಿಟ್ಟರೆ ಅವನಿಗೆ ತನ್ನ ಬಗ್ಗೆಯೆ ಅನುಮಾನ ಬರಬಹುದೆಂಬ ಅನುಮಾನದಿಂದ ದೂರ ಹೋಗಿ ಹಾಸಿ ಗೆಯ ಮೇಲೆ ಕಲ್ಲುಗೊಂಬೆಯ ಹಾಗೆ ಕುಳಿತುಬಿಟ್ಟಳು.

ನಾಗರಾಜನಿಗೆ ಏಕೆ ಹೇಗೆ ಎಂದು ತಿಳಿಯುದಿರಲಿಲ್ಲ. ಕೀರ್ತಿಗೆ ತನ್ನಿಂದ ಬಹಳ ನಿರಾಸೆಯಾಗಿದೆ ಎಂದು ತಿಳಿದಿತ್ತು. ಅವಳು ಮೈಮೇಲೆ ಬಿದ್ದಾಗಲೂ ತಾನು ನಿರಾಸಕ್ತನಾಗಿ ಉಳಿಯುತ್ತಿದ್ದೆ, ಈಗ ನಾನೇ ಮೈ ಮೇಲೆ ಬಿದ್ದೆ ಎಂದು ಅವಳಿಗೆ ಆಶ್ಚರ್ಯವಾಗಿರಬಹುದು. ನನ್ನ ಮನ ಸ್ಸನ್ನು ಅವಳಿಗೆ ಹೇಗೆ ಹೇಳಲಿ? ಅವನು ಕೀರ್ತಿಯನ್ನು ಚೆನ್ನಾಗಿ ಬಲ್ಲ. ಎದ್ದು ಅವಳ ಬಳಿ ಹೋದ. ಕೀರ್ತಿಗೆ ಅವನು ಬಂದನೆಂಬುದು ಅವನ ಮೈನಲ್ಲಿ ಮುದ್ರಿತವಾಗಿದ್ದ ತನ್ನದೇ ದೇಹದ ಬೆವರ ಸುಗಂಧ ದಿಂದಲೇ ಅರಿವಾಯಿತು. ಅವನೇ ಮಾತನಾಡಿಸಲಿ ಎಂದುಕೊಂಡಳು. ಅವಳು ಹಾಗೆ ಕುಳಿತಾಗ ಅವಳ ಮನಸ್ಸಿನಲ್ಲಿ ಅರ್ಧ ತೃಪ್ತಿಯಾದ

ಬಯಕೆಗಳು, ನಾನ್ಯಾಕೆ ಮಾತನಾಡಿಸಲಿ ಎಂಬ ಅಭಿಮಾನ, ಕೀರ್ತಿಯೊಬ್ಬಳಿಗೇ ಸಹಜವೆನಿಸಬಹುದಾದ, ಈಗ ತಾನೇ ಮಾತನಾಡಿಸುತ್ತಿದ್ದವನನ್ನು ಪರಿಚಯವೇ ಇಲ್ಲದವನೋ ಎಂಬಂತೆ ಉಪೇಕ್ಷಿಸುವ ನಿರ್ಲಕ್ಷ್ಯ.

ಅವನಿಗೂ ಅದು ಗೊತ್ತಿತ್ತು. ಅವಳ ಕೈ ಹಿಡಿದೆತ್ತಿದ. ಅವಳಿಗೆ ಖುಶಿಯಾಯಿತು. ಏಳುವುದಿಲ್ಲವೆಂದು ಮಕ್ಕಳು ಹಠಮಾಡುವ ಹಾಗೆ, ತನ್ನ ತೂಕವನ್ನು ನೆಲಕ್ಕೆ ಹಾಕಿ ಕೂತಳು. ನಾಗರಾಜ ಅವಳು ಕುಳಿತಿದ್ದ ಕುರ್ಚಿಯಲ್ಲಿ ಅವಳನ್ನೂ ಬಿಟ್ಟ. ಕುರ್ಚಿಯ ಮುಂದೆ, ನೆಲದ ಮೇಲೆ ಮಂಡಿಯೂರಿ ಭಕ್ತನಂತೆ ಕೂತ. ಅವಳಿಗೆ ಆನಂದವಾಯಿತು. ಎಂದೂ ಹಾಗೆ ತನ್ನ ಮುಂದೆ ಕೂರದವನು, ಕೂತನಲ್ಲ ಎಂದು ನಿರಾಸೆಯೂ ಆಯಿತು. ಇವನು ನಾನು ಬಯಸಿದ್ದ ನಾಗರಾಜನೆ ಎಂದು ಸಂಶಯವೂ ಆಯಿತು. ತಟ್ಟನೆ ಅವಳಿಗೆ ಚಂದ್ರಶೇಖರನ ನೆನಪು ಬಂದುಬಿಟ್ಟಿತು. ಅವನು ಹೇಳಿದ: ನೋಡು ಕೀರ್ತಿ, ನಾನು ನಿನ್ನ ಯಾಕೆ ಪ್ರೀತಿಸ್ತೀನಿ ಗೊತ್ತ ? ಅವಳಿಗೆ ಸಂತೋಷವಾಯಿತು. ಹಾಗೆ ಬಾ ದಾರಿಗೆ, ನನ್ನ ರೂಪ ಹೊಗಳು ನಾಯಿ ಎಂದುಕೊಂಡಳು. ಅವನು ಏನು ಹೇಳಬಹುದು ಎಂಬ ಕಲ್ಪನೆಯೂ ಅವಳಿಗಿರಲಿಲ್ಲ. ಏನು ಹೇಳಬೇಕೋ ಅದನ್ನು ಹೇಳಬಹುದು ಎಂಬ ಆಸೆ ಮಾತ್ರ.

‘ನೀನು ತಿಳಿದುಕೊಂಡಿದ್ದು ತಪ್ಪು ಕೀರ್ತಿ. ನಿನ್ನ ನಾ ಪ್ರೀತಿಸುವುದು, ನಿನ್ನ ಶೃಂಗಾರಕ್ಕಾಗಿಯಲ್ಲ, ನಿನ್ನ ಸೌಂದರ್ಯಕ್ಕಲ್ಲ. ನಿನ್ನಲ್ಲಿ ಮಾನವರಿಗೆ ಇರಬಾರದು ಎನ್ನುವಷ್ಟು ಸೌಂದರ್ಯವಿದೆ. ಅದನ್ನು ಪ್ರಕಾಶಪಡಿಸುವ ಶೃಂಗಾರವಿದೆ. ಅದೆಲ್ಲ ನನಗೆ ಚೆನ್ನಾಗಿ ಗೊತ್ತು. ಅವುಗಳಿಗಾಗಿ ನಿನ್ನನ್ನು ಪ್ರೀತಿಸುವುದು ಸಾಧ್ಯವಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎನ್ನಿಸುತ್ತೆ. ಅದು ಸಾಧ್ಯವಿಲ್ಲ. ಸಾಧ್ಯವಾಗಬಾರದು. ನಿನ್ನ ಶೃಂಗಾರ, ಸೌಂದರ್ಯಕ್ಕೆ ಪ್ರೀತಿಸಿದರೆ ಚಂದ್ರುವಿನ ಹಾಗೆ ನಾನು ಸತ್ತುಹೋಗುತ್ತೇನೆ.’

ಅವಳಿಗೆ ಈ ಪುರಾಣವೆಲ್ಲ ಬೇಕಿರಲಿಲ್ಲ. ಯಾಕೆ ಪ್ರೀತಿಸುತ್ತಾನೆ ಅನ್ನುವುದು ಮುಖ್ಯವಲ್ಲ. ಪ್ರೀತಿಸುತ್ತಾನೆ ಅನ್ನುವದಷ್ಟೇ ಮುಖ್ಯ. ತನ್ನ ಸೌಂದರ್ಯಕ್ಕಾಗಿ ತನ್ನನ್ನು ಪ್ರೀತಿಸುವುದಿಲ್ಲವಂತೆ. ಅವಳಿಗೆ ಸ್ವಲ್ಪ ಅಳುಕಾಯಿತು. ಆದರೂ ಮಾನವರನ್ನು ಮೀರಿಸಿದ ಸೌಂದರ್ಯ ತನ್ನದು ಎಂದು ಒಪ್ಪಿಕೊಂಡನಲ್ಲ. ಇಷ್ಟು ಸಾಕು, ಮುಂದೆ ಹೇಳಬೇಡ ಎಂದು ಹೇಳಬೇಕೆಂದೆನಿಸಿತು. ಅವನು ಹೇಳಿದ: ‘ನೋಡು ಕೀರ್ತಿ, ನಿನ್ನಲ್ಲಿ ಸೌಂದರ್ಯರಾಶಿ ಇದೆ. ಅದಕ್ಕಿಂತ ಮುಖ್ಯವಾಗಿ ಅದು ಇದೆ, ಅದಕ್ಕಾಗಿ ಜನ ನನ್ನನ್ನು ಪ್ರೀತಿಸುತ್ತಾರೆ ಎಂದು ನೇರವಾಗಿ ಯೋಚಿಸುವ ಮಗುವಿನಂಥ ಶ್ರೀಮಂತ ಮನಸ್ಸಿದೆ. ನೀನು ಹಾಗೆ ತಿಳಿದುಕೊಂಡಾಗ

ಜನರನ್ನು ಗೆಲ್ಲುವ ಕೆಚ್ಚಿದೆ, ಸಾಹಸವಿದೆ. ನಾನ್ಯಾಕೆ ಬಗ್ಗಲಿ ಎನ್ನುವ ಅಹಂಕಾರವಿದೆ. ಒಮ್ಮೆ ಯಾರನ್ನಾದರೂ ಗೆದ್ದೆಯೆಂದರೆ ಅವರಲ್ಲಿ ಸಂಪೂರ್ಣವಾಗಿ ಲೀನವಾಗುವ ಬೌದ್ಧಿಕ ಸರಳತೆಯಿದೆ. ಯಾರನ್ನಾದರೂ ಪ್ರೀತಿಸಲಿಲ್ಲವೆಂದರೆ ಅದನ್ನು ಹಾಗೇ ಹೇಳುವ ನೈತಿಕ ಶಕ್ತಿ ಇದೆ. ಅರ್ಥವಾಯಿತ ಕೀರ್ತಿ ?

ಅವಳಿಗಂತೂ ಅರ್ಥವಾಗಲಿಲ್ಲ. ತಾನು ಒಳ್ಳೆಯವಳು ಎಂದು ಹೇಳುತ್ತಿದ್ದಾನೆ. ಸರಿ. ಅದು ಯಾರಿಗೆ ಬೇಕು ? ಒಳ್ಳೆತನದಿಂದ ಏನು ಮಾಡಲಿಕ್ಕೆ ಬರುತ್ತದೆ? ಕ್ಷೇಮ ಏನು ಮಾಡಿದ್ದಾಳೆ,ಅಷ್ಟೊಂದು ಒಳ್ಳೆಯವಳಾಗಿಯೂ. ಅವಳಿಗೆ ಬೋರಾಯಿತು.

"ಕೀರ್ತಿ ಈ ಮಾನಸಿಕ ಶ್ರೀಮಂತಿಕೆ, ಈ ಸಾಹಸ, ಈ ಕೆಚ್ಚು, ಈ ಅಹಂಕಾರ, ಇವೇ ಕೀರ್ತಿ ಮನುಷ್ಯನನ್ನ ಮನುಷ್ಯನನ್ನಾಗಿ ಉಳಿಸುವುದು. You are great."

"ನಾನು great ಆದರೆ ನನ್ನನ್ಯಾಕೆ ಮದುವೆಮಾಡಿಕೋಬಾರದು" ಕೀರ್ತಿ ಕೇಳಿದಳು.

"ಹೌದು ಕೀರ್ತಿ, ಈ ಮುಗ್ಧತೆ ನನಗಿಷ್ಟ, ಕೀರ್ತಿ. ನೀನು great ಅಂತ ನಾನು ಭಾವಿಸುವುದಾದರೆ ನಿನ್ನನ್ನು ಯಾಕೆ ಮದುವೆ ಮಾಡಿಕೋಬಾರದು ? ಸಾವಿರ ಉತ್ತರ ಕೊಡಬಲ್ಲೆ ಕೀರ್ತಿ. ನಾನು ಓದಿದ್ದೇನೆ. ಅದೂ ಇದೂ ಓದಿಕೊಂಡು, ತಲೆಕೆಡಿಸಿಕೊಂಡು, ಮನುಷ್ಯತ್ವ ಕಳೆದುಕೊಂಡಿದ್ದೇನೆ. ನಿನ್ನ ನಂಬಿಸುವಂಥ ಏನು ಉತ್ತರ ಬೇಕಾದರೂ ಕೊಡಬಲ್ಲೆ. ದುರಂತವೆಂದರೆ ಅವುಗಳಲ್ಲಿ ಯಾವುದೂ ನಿನ್ನ ಪ್ರಶ್ನೆಗೆ ಉತ್ತರವಾಗುವುದಿಲ್ಲ. ಅವುಗಳು ಉತ್ತರವಲ್ಲ ಎಂದು ನಿನಗೆ ಅರ್ಥವೂ ಆಗುವುದಿಲ್ಲ. ಯಾಕೆಂದರೆ ನಿನ್ನ ಸುಲಭ ಪ್ರಶ್ನೆ ಅಷ್ಟೊಂದು ಗಂಭೀರವಾದದ್ದು. ಆತ್ಮಸಾಕ್ಷಿ ಇರುವಂಥವರನ್ನು ಕೊಂದುಬಿಡುವಂಥ ನೇರ ಪ್ರಶ್ನೆ. ನಿನ್ನ ಮುಗ್ಧ ಮನಸ್ಸಿನಲ್ಲಿ ಚಂದ್ರುವಿನಂಥ ಸೌಂದರ್ಯಾರಾಧಕನಿಗೂ, ನನ್ನಂಥ ಬೌದ್ಧಿಕ ಪ್ರೇಮಿಗೂ ಯಾವ ಸ್ಥಾನವೂ ಇಲ್ಲ. ನಿನಗೆ ಗೊತ್ತಿಲ್ಲ ಅಷ್ಟೆ.

ಅವಳಿಗೆ ಅವನು ಹೇಳಿದ್ದರಲ್ಲಿ ಬಹಳಷ್ಟು ಅರ್ಥವಾಗಲಿಲ್ಲ. ನಾನು ಒಳ್ಳೆಯವಳು ಅವನು ಅಲ್ಲ ಎಂದು ಹೇಳುತ್ತಿದ್ದಾನೆ. ಸಂತೋಷ. ಬಾ ಕೀರ್ತಿ ಎಂದಾಗ ಪುಟವೇರಿದ ಚೆಂಡಿನಂತೆ ಅವನ ಬಳಿ ಹಾರಿದಳು. ಯಂತ್ರಮುಗ್ಧಳಂತೆ, ಅತ್ಯಾಸೆಯಿಂದ ಅವನಿಗೆ ತುಟಿ ನೀಡುವಂತೆ ಕಣ್ಣುಮುಚ್ಚಿ ಮುಖವೆತ್ತಿ ಅವನಿಗೆ ನೀಡಿದಳು. ನಾಗರಾಜನಿಗೆ ಅವಳನ್ನು ಕಂಡು ಕನಿಕರವಾಯಿತು. ತನ್ನ ಬಗ್ಗೆಯೇ ನಾಚಿಕೆಯಾಯಿತು. ಯಾಕೆ ಹೇಗೆ ಎಂದು [illegible]

[illegible]

ಬೂದುಗಣ್ಣುಗಳಲ್ಲಿ ಅವಳ ನಿಶ್ಚಲ ರೂಪ ಹೊಳೆಯುತ್ತಿತ್ತು. ಅವನು ಅವಳನ್ನು ಸ್ವೀಕರಿಸಲಿಲ್ಲ. ಕೀರ್ತಿಗೆ ನಿರಾಸೆ ಆದರೂ ತೃಪ್ತಿ. ಅವಳಿಗೆ ದುಃಖವಾಗಲಿಲ್ಲ. ಅವಳ ಕಣ್ಣುಗಳಲ್ಲಿ, ತಾನು ಬಯಸಿದವನು ಮೈಮೇಲೆ ಬೀಳುವ ನಾಯಿಯಲ್ಲ ಎಂಬ ಗೌರವಗಳು ಕಾಣುತ್ತಿದ್ದವು.

ರಾತ್ರಿ ಮಲಗಿದಾಗ ನಾಗರಾಜನಿಗೆಂದು ಬಟ್ಟೆ ತರಲು ನಿರ್ಧರಿಸಿದಳು. ತಾಯಿಯನ್ನು ಅಂದು ಮತ್ತೆ ಕಾಣಲೇ ಇಲ್ಲ. ಮಂಚದ ಮೇಲೆ ದಿಂಬಿಗೊರಗಿ ಕಾಲುಚಾಚಿದಾಗ, ಅವಳಿಗೆ ಹಳೆಯದೊಂದು ಸಂಗತಿ ನೆನಪಿಗೆ ಬಂತು: ಒಮ್ಮೆ ಹೀಗೆಯೆ ಬೇಸರದಿಂದ ಬರೀ ನೈಟ್ ಗೌನ್ ತೊಟ್ಟು ಮಲಗಿದ್ದಳು. ಚಂದ್ರಶೇಖರ ದೂರದಲ್ಲಿ ಕಿಟಕಿಯ ಬಳಿ ಕುಳಿತು ಏನೋ ಓದುತ್ತಿದ್ದ. ಅವಳಿಗೇನೆನ್ನಿಸಿತೋ ಏನೋ! ಬಹುಶಃ ಅವನನ್ನ ಕೀಟಲೆ ಮಾಡಬೇಕೆಂದಿರಬೇಕು. ಅವಳಿಗೂ ಯಾಕೆ ಹೀಗೆ ಮಾಡಿದೆ ಎಂದು ಇಂದಿಗೂ ಅರ್ಥವಾಗಿಲ್ಲ. ನೈಟಿಯ ಮುಂಭಾಗದಲ್ಲಿದ್ದ ಗುಂಡಿಗಳನ್ನೆಲ್ಲ ಕಳಚಿ ಚಂದ್ರು ಅಂದಳು. ಚಂದ್ರಶೇಖರ ತಟಕ್ಕನೆ ತಲೆ ಎತ್ತಿದ. ಕಣ್ಣು ಮುಚ್ಚಿಬಿಡುವಷ್ಟರಲ್ಲಿ ಅವಳ ಮುಂದೆ ನಿಂತಿದ್ದ. ಸ್ವಲ್ಪ ಫ್ಯಾನ್ ಹಾಕುತ್ತೀಯ ಅಂದಳು. ಅವಳ ಧ್ವನಿಯಲ್ಲಿದ್ದ ಕನಿಕರವನ್ನು ಗಮನಿಸಿ ಇರಬೇಕು, ಚಂದ್ರು ಅವಳು ಹೇಳಿದ ಕೆಲಸಗಳನ್ನು ಮಂಗನ ಚುರುಕಿನಿಂದ ಮಾಡಿ ಮುಗಿಸಿಬಿಟ್ಟ. ಪೆಟ್ಟಿಗೆ ತೆಗೆಸಿ ಅಲ್ಲಿದ್ದ ಹೊಸದೊಂದು ಬ್ರಾ ಅವನಿಂದ ತೆಗೆಸಿದಳು. ಅವನಿಗೆ ವಿಚಿತ್ರ ಸಂತೋಷ ಸಂಶಯಗಳು ಆಗಿ ಅವನು ಮಂಗನೇ ಆಗಿಬಿಟ್ಟಿದ್ದ. ಅವಳ ಮುಂದೆ ವಿನೀತಭಾವದಿಂದ ನಿಂತ. ನೈಟಿಯನ್ನು ಹೆಗಲಿನಿಂದ ಜಾರಿಸಿ ಎದ್ದು ಕುಳಿತಳು. ಸ್ವಲ್ಪ ಬ್ರಾ ಕಟ್ಟು ಎಂದಳು. ನೈಟಿ ಅವಳ ಸೊಂಟದ ಸುತ್ತ ಬಿದ್ದು ಅದರ ಕ್ಷೀಣತೆಯನ್ನು ಸರಿದೂಗಲಾರದಂತೆ ಹರಡಿಕೊಂಡಿತ್ತು. ಬ್ರಾ ಹಿಡಿದುಕೊಂಡು ಬಂದ ಚಂದ್ರು ಅವಳ ನಗ್ನ ಸೌಂದರ್ಯಕ್ಕೆ ದಂಗಾಗಿಬಿಟ್ಟ. ಅಂದರೆ ಇದೇ ಮೊದಲಬಾರಿಗೆ ಅವಳನ್ನು ಆ ಸ್ಥಿತಿಯಲ್ಲಿ ನೋಡಿದ್ದನಂದಲ್ಲ. ಅವರೆ ಆ ಸ್ಥಿತಿಯಲ್ಲಿ ಯಾರೂ ಇಲ್ಲದಿದ್ದಾಗ, ಏಕಾಂತದಲ್ಲಿ, ಬೆಳಕಿನಲ್ಲಿ ಕಂಡಿದ್ದು ನೆನಪಿರಲಿಲ್ಲ ಅನ್ನುವ ಮಾತು. ಅವಳ ಹಿಂದೆ, ಮಂಚದ ಬದಿಯಲ್ಲಿ ನಿಂತು, ಅವಳ ಇಪ್ಪತ್ತು ವಯಸ್ಸಿಗೆ ಭಾರಿಯೇ ಎನ್ನಬಹುದಾದ ಕುಚಗಳನ್ನು ಹಿಡಿದು ಮೆಲ್ಲಗೆ, ಅವಕ್ಕೆಲ್ಲಿ ತನ್ನ ಒರಟುತನದಿಂದ ನೋವಾಗುವುದೋ ಎಂದು ಮೃದುವಾಗಿ, ಬ್ರಾದ ಬಟ್ಟಲುಗಳಲ್ಲಿ ಕೂರಿಸಿದ. ಆ ದೇಹಶ್ರೀಮಂತಿಕೆಯಿಂದ ಮರುಳಾಗಿ ಒಂದು ಕ್ಷಣ ತಲೆತಿರುಗಿದಂತಾಯಿತು ಅವನಿಗೆ. ಏನೆನ್ನಿಸಿತೋ ಮತ್ತೆ ಅವುಗಳನ್ನು ನಿಧಾನ ಬ್ರಾನಿಂದ ಹೊರತೆಗೆದು ಕೈಗೆ ತೆಗೆದುಕೊಂಡ. ತನ್ನ ಕೈಗಳ ಅಗಲಕ್ಕೂ ಹರಡಿಕೊಂಡ ಆ ಬೆಚ್ಚನೆಯ ಮಾಂಸದ

ಸ್ಪರ್ಶದ ಮೃದುಲತೆಗೆ ಚಂದ್ರು ಬೆವತುಹೋದ. ಅವಕ್ಕೆ ಬಾಯಿನೀಡಿದ. ಇವನ್ನೆಲ್ಲ ಗಮನಿಸುತ್ತ, ವಿಚಿತ್ರವಾಗಿ ಆನಂದಿಸುತ್ತಿದ್ದ ಕೀರ್ತಿ ಅವನನ್ನೇ ದಿಟ್ಟಿಸುತ್ತಿದ್ದಳು. ಅವಳ ಅಪ್ಪಣೆಗಾಗಿ ಚಂದ್ರು ಅವಳ ಮುಖಕ್ಕೆ ಮುಖ ಇಟ್ಟು ನೋಡಿದ. ಆ ಕಣ್ಣುಗಳಲ್ಲಿದ್ದ ನಿರ್ಜೀವತೆ ಅವನಲ್ಲಿ ಬೆವರು ಹುಟ್ಟಿಸಿತು. ಕೂಡಲೆ ಅವುಗಳನ್ನು ಬ್ರಾದ ಬಟ್ಟಲಲ್ಲಿ ಕೂಡಿಸಿ ಹಿಂದಕ್ಕೆ ಬಂದ. ಹಿಂದಕ್ಕೆ ಬಂದ ಕೂಡಲೆ ಅವನಿಗೆ ಹಾಯೆನಿಸಿತು. ನಾನು ಅವಳ ಹಿಂದಿದ್ದಾಗಲೇ ನನ್ನ ಬದುಕಿಗೆ ನೆಮ್ಮದಿ ಎಂದುಕೊಂಡ. ಬೆನ್ನ ಭಾಗದಲ್ಲಿ ಅದರ ಕೊಂಡಿಗಳನ್ನು ಸಿಕ್ಕಿಸಿ ಅವಳ ನೈಟಿಯನ್ನು ತೊಡಿಸಿದ. ಮಂಚದ ಕಾಲ್ಬದಿಗೆ ನಡೆದು, ಅವಳ ಪಾದಸೇವೆ ಮಾಡುತ್ತ ಕುಳಿತುಬಿಟ್ಟ.

ಕೀರ್ತಿ ಅವನನ್ನು ಪರೀಕ್ಷಿಸಿದಳು. ಅವನ ಮುಖದಲ್ಲಿ ಮೂಡಿದು ವ್ಯಾಕುಲತೆ, ಆ ಕಣ್ಣುಗಳಲ್ಲಿದ್ದ ಅಸಂಖ್ಯಾತ ಪ್ರೇಮಿಗಳ ನೋವು, ಅವಳಿಗೆ ಕುತೂಹಲಕಾರಿಯೆನಿಸಿತು. ಜನ ಇಷ್ಟೊಂದು ದುಃಖಪಟ್ಟುಕೊಳ್ಳಬಹುದೆಂದು ಅವಳಿಗೆಂದೂ ಅನಿಸಿರಲಿಲ್ಲ. ಆದರೂ ಅವನ ಅವಮಾನದಿಂದ ಕುಗ್ಗಿಹೋಗಿದ್ದ ಮುಖ ಕಂಡು ತಮಾಷೆ ಅನಿಸಿತು ಅವಳಿಗೆ. ತನ್ನ ಪಾದಗಳನ್ನವನು ಒಸುಕುತ್ತಿದ್ದಾಗ, ಅವನ ಮನಸ್ಸಿನಲ್ಲಿ ಪಾದಗಳನ್ನಾದರೂ ಅಮುಕೋಣ ಎಂದಿದ್ದಿರಬಹುದು ಎನಿಸಿತು ಅವಳಿಗೆ. ನನ್ನ ಕಾಲುಗಳಿಗೆ ಮಾತ್ರ ಲಾಯಕ್ಕಾದವನು ನೀನು ಎಂದುಕೊಂಡಳು. ತನ್ನ ವಕ್ಷಃಸ್ಥಲ ನಾನು ಹೃದಯದಿಂದ ಪ್ರೀತಿಸಿದವನಿಗೆ ಮಾತ್ರ ಮೀಸಲು. ಆದರೂ ಅವನ ಕಣ್ಣುಗಳಲ್ಲಿ ಕೊರೆದಿಟ್ಟಿದ್ದ ಆ ನೋವು, ತಮ್ಮ ಎಸ್ಟೇಟಿನಲ್ಲಿ ಕೆಲಸಗಾರರ ಮಗುವೊಂದು ಅದರ ತಾಯಿಯನ್ನು ಕಳೆದುಕೊಂಡಾಗ ಅನುಭವಿಸಿದ್ದ ನೋವಿನಂತೆ ಕಾಣುತ್ತಿತ್ತು. ಕೀರ್ತಿಗೆ ಚಂದ್ರಶೇಖರನ ತಾಯಿ ಸತ್ತಿದ್ದು ಗೊತ್ತು. ಆಕೆ ಸತ್ತಾಗಲೇ ಮೂರು ನಾಲ್ಕು ವರ್ಷ ಕಳೆದಿರಬೇಕು. ಇಂದೇಕೆ ಈ ಮಂಗನಿಗೆ ತಾಯಿಯನ್ನು ಕಳೆದುಕೊಂಡ ದುಃಖ? ಅವಳಿಗರ್ಥವಾಗಲಿಲ್ಲ. ಆದರೆ ಆಗ ಬಹಳ ತಮಾಷೆ ಅನಿಸಿದ್ದ ಅವನ ಅನಾಥ ಭಾವ ನೆನೆದು ಅವಳಿಗೆ ಪಾಪ ಅನಿಸಿತು. ಇಂದಿಗೆ ಚಂದ್ರು ಸತ್ತು ನಲವತ್ತೆಂಟು ದಿನ ಕಳೆದರೂ ಆ ಆ ಮುಖದ ಭಾವ ಮತ್ತೆ ಮತ್ತೆ ಅವಳನ್ನು ಕಾಡುತ್ತಿತ್ತು.

ಚಂದ್ರಶೇಖರ ತನ್ನನ್ನೂ ಏಕೆ ಹಾಗೆ ಕಾಡುತ್ತಾನೆ ಎನ್ನುವುದು ಅವಳಿಗೆ ಅರ್ಥವಾಗಿರಲಿಲ್ಲ. ಹಾಗೆ ತನ್ನನ್ನು ಕಾಡುತ್ತಾನೆಂಬುದರ ಅರಿವೂ ಅವಳಿಗಿರಲಿಲ್ಲವೆಂದರೂ ಆದೀತು. ಅಷ್ಟು ಶ್ರೇಷ್ಠವಾದದ್ದು ಅವಳ ವಿದ್ಯೆ ಸಂಸ್ಕೃತಿ. ಅಂದರೆ ಆಗಾಗ್ಗೆ ಚಂದ್ರುವಿನ ನೆನಪು ಬಂದುಬಿಡುತ್ತಿತ್ತು. ಆ ಸತ್ತಮಾನವನ ನೆನಪು ದಟ್ಟವಾಗಿ, ಮೂರ್ತವಾಗಿ

ಅವಳಿಗೆ ಗೋಚರಿಸಿದ್ದರೆ, ಬಹುಶಃ ಅವಳಿಗೆ ಸಮಸ್ಯೆ ಏನೆಂದರೂ ಅರಿವಾಗುತ್ತಿತ್ತು. ಚಂದ್ರುವನ್ನೂ ಮರೆಯುವುದು ಅಷ್ಟು ಸುಲಭವಲ್ಲ ಎಂಬ ತಿಳಿವಳಿಕೆ ಬಂದ ಕೂಡಲೆ ಅವನನ್ನು ಮರೆತೇಬಿಡುತ್ತಿದ್ದಳು. ಪ್ರಾಯಶಃ ಅವನು ತನ್ನ ನೆನಪಿನಲ್ಲಿದ್ದಾನೆಂಬುದರ ಅರಿವಿಲ್ಲದಿರುವುದೇ ಬಹುಶಃ ಅವನು ಅವಳ ನೆನಪಿನಲ್ಲಿ ಇನ್ನೂ ಉಳಿಯುವುದಕ್ಕೆ ಕಾರಣವಾಗಿತ್ತು ಕಾಣುತ್ತದೆ. ತಾನು ಬದುಕಿದ್ದಾಗ ಅವಳ ಬಗ್ಗೆ ಕುತೂಹಲ, ಆಸೆ, ಭಯಗಳಿಂದ ಮುದುರಿಕೊಂಡು ಒಮ್ಮಿಂದೊಮ್ಮೆಗೆ ಅವಳ ಮುಂದೆ ಬಂದು ದೀನನಾಗಿ ನಿಲ್ಲುತ್ತಿದಂತೆಯೇ, ಈಗಲೂ ಅವಳ ಮನಸ್ಸಿನಲ್ಲಿ ಚಂದ್ರು ಬಂದುಬಿಡುತ್ತಿದ್ದ. ಅವನು ತನ್ನ ನೆನಪಿಗೇಕೆ ಬರಬೇಕು? ಅದು ಅವನ ತಪ್ಪು ಎಂದು ಕೀರ್ತಿಯ ತರ್ಕ. ಅವನಿನ್ನೂ ಬದುಕಿದ್ದರೆ, ಬದುಕಲಿಲ್ಲ ಎನ್ನಿಸುತ್ತಿದ್ದ ಎಂದು ಅಸಹಾಯಕಳಾಗುವಳು. ಜೊತೆಗೆ ನಾಗರಾಜ ಬಂದದ್ದು ಮುಖ್ಯವಲ್ಲ, ಬಂದು ಅವಳಿಗೆ ಸೋತಿದ್ದಾನೆ. ಅವನು ತಾನಾಗಿಯೆ ತನ್ನನ್ನು ಆಲಂಗಿಸಿದ್ದು ಅವಳಿಗೆ ತನ್ನ ರೂಪಿನ ಬಗ್ಗೆ ಹೆಮ್ಮೆ ತರಿಸಿತ್ತಾದರೂ, ಭ್ರಮನಿರಸನಕ್ಕೂ ಕಾರಣವಾಗಿತ್ತು. ತನ್ನನ್ನು ಅವನು ಪ್ರೀತಿಸಿದ, ತನ್ನ ಪ್ರೀತಿಗೆ ಅಷ್ಟೊಂದು ಸುಲಭವಾಗಿ ಅನುಕೂಲ ಪ್ರತಿಕ್ರಿಯೆ ವ್ಯಕ್ತಪಡಿಸಿದ ಎಂದು ಅವಳಿಗೆ ನಿರಾಸೆಯಾಗಿತ್ತು. ಕೀರ್ತಿಯ ಪ್ರಪಂಚದಲ್ಲಿ ಎಂದಿಗೂ ನಿರಾಶೆಗೊಳಿಸದ ಸ್ಥಾಯೀ ವ್ಯಕ್ತಿತ್ವ ಹೊಂದಿದ್ದವರು ಇಬ್ಬರೆ: ಪ್ರತಿಮಾದೇವಿಯರು ಮತ್ತು ಕೀರ್ತಿಯಾದ ತಾನು.

ನಾಗರಾಜ ಬಂದ ಮೂರನೆಯ ದಿನ ಕೀರ್ತಿ ಬೆಳಗು ಹೊತ್ತಿಗೇ ಎದ್ದು ತನ್ನ ಇಪ್ಪತ್ತು ವರ್ಷದ ದೈನದಿಂನ ಕ್ರಮವೊಂದನ್ನು ಮುರಿದಿದ್ದಳು. ಎದ್ದವಳಿಗೆ ಯಾಕೋ ಮರ್ತ್ಯನಾಕದ ಕಡೆಗೆ ಹೋಗಬೇಕು ಒಂಟಿಯಾಗಿರಬೇಕು ಅನಿಸಿತು. ಮರ್ತ್ಯನಾಕವೆನ್ನುವುದು ಚಂದ್ರಾನಿಲರಾಯರ ಎಸ್ಟೇಟಿನಲ್ಲಿ ಹರಿಯುತ್ತಿದ್ದ ಸಣ್ಣ ತೊರೆ. ಹಳ್ಳ ಎಂದರೂ ಆದೀತು. ಯಾಕೆ ಅದನ್ನು ಮರ್ತ್ಯನಾಕವೆಂದು ಕರೆದರು ಎಂದು ಕೀರ್ತಿ ಎಂದೂ ತಲೆಕೆಡಿಸಿಕೊಂಡಿಲ್ಲ. ಕೆಲಸಕ್ಕೆ ಬಾರದ ವಿಷಯಗಳಿಗೆ ಆರೋಗ್ಯ ಕೆಡಿಸಿಕೊಳ್ಳುವುದು ಅವಳ ಜಾಯಮಾನಕ್ಕೆ ಬಂದಿರಲಿಲ್ಲ.

ಆಗ ತಾನೆ ಪೂರ್ವಶಿಖರದ ಕಿಂಡಿಯಿಂದ ಹರಿದು ಬರುತ್ತಿದ್ದ ಅರುಣರಾಗ ಮೆಲ್ಲಮೆಲ್ಲನೆ ಪಸರಿಸುತ್ತಿತ್ತು. ಸೂರ್ಯದೇವರ ಆಗಮನಕ್ಕಾಗಿ ಕಾಯುತ್ತಿದ್ದ ಭೂಮಿತಾಯಿ ಅವನು ಇನ್ನೇನು ಬಂದ, ನನ್ನ ದೇವರು ಬಂದ, ನನ್ನ ಸಂಭೋಗಿಸಿ ಬಿಡುತ್ತಾನೆ ಈಗ ಎಂದು ಕಾಂತಿಯುತಳಾಗಿ ಕೂಗಿ ಹೇಳುತ್ತಿದ್ದಳು. ಕೀರ್ತಿ ಹುಲ್ಲಿನ ಮೇಲೆ ನಡೆಯುತ್ತ, ಇಕ್ಕೆಲಗಳಿಗೂ ಹುಲ್ಲ ಎಲೆಯ ಮೇಲಿದ್ದ ಇಬ್ಬನಿಯನ್ನು ಚೆಲ್ಲುತ್ತ ಪ್ರಪಂಚದ ಪರಿವೆ ಇಲ್ಲದೆ ನಡೆಯುತ್ತಿದ್ದಳು. ಉದಯರವಿಯ ಚಂದನದಿಂದ ಪೂಸಿತವಾಗಿ ಆನಂದಿಸುತ್ತಿದ್ದ ಹಸಿರು ಎಲೆಗಳಾಗಲೀ, ಮುಂಜಾವ ಬೆಳಗಲ್ಲಿದ್ದ ಉನ್ಮಾದ ತರುವ ಬಿಸಿಯಾಗಲೀ ಅವಳ ಗಮನಕ್ಕೆ ಬರಲಿಲ್ಲ. ಅವಳಿಗೆ ಕಂಡದ್ದು ಮರಗಳ ಕೆಳಗೆ ಕುಕ್ಕರುಗಾಲಿನಲ್ಲಿ ಕೂತಿದ್ದ ಕೆಲಸದ ಜನ ಅವಳನ್ನು ಕಂಡೊಡನೆಯೇ ದಿಗ್ಭ್ರಮೆಯಾಗಿ ಮರೆಯಾಗುತ್ತಿದ್ದುದು. ಅವಳಿಗೆ ಇದನ್ನು ನೋಡಿ ಅಸಹ್ಯವಾಯಿತು. ಆಕಡೆ ಈಕಡೆ ನೋಡಿ ಸಪುರಾದ ಒಂದು ಕಡ್ಡಿಯನ್ನು ತೆಗೆದುಕೊಂಡಳು. ಅದನ್ನು ತನ್ನ ಹಿಂಭಾಗದಲ್ಲಿಟ್ಟುಕೊಂಡು, ಮೆಲ್ಲಮೆಲ್ಲನೆ ನಡೆದಳು. ದೂರದಲ್ಲೊಬ್ಬ ಹುಡುಗ ತನಗೆ ಬೆನ್ನುಹಾಕಿ ಕುಳಿತಿದ್ದುದು ಅವಳಿಗೆ ಕಾಣಿಸಿತು. ಅವನೇನೂ ಹುಡುಗನಲ್ಲ: ಅವಳಿಗಿಂತಲೂ ಎತ್ತರವಾಗಿ ಬೆಳೆದಿದ್ದ. ಆದರೂ ಅವಳ ದೃಷ್ಟಿಯಲ್ಲಿ ಅವನು ಮತ್ತು ಎಲ್ಲ ಕೆಲಸದವರು ಹುಡುಗರೆ. ತಾನು ದೊಡ್ಡವನಾಗಿದ್ದಾನೆ ಎಂದು ಒಬ್ಬ ತೋರಿಸುವವರೆಗೂ ಅವನು ಹುಡುಗನೇ ಅಲ್ಲವೇ? ಅವನಿಗೆ ತಿಳಿಯದ ಹಾಗೆ ಸಪ್ಪಳಾಗದಂತೆ ಅವನ ಬಳಿ ಬಂದಳು. ಅವನೇನೋ ಹಾಡು ಗುಣುಗುಣಿಸುತ್ತಿದ್ದ. ಕೂತಿದ್ದ: ಯಾರದೋ ನೆನಪಿನಲ್ಲಿದ್ದನೆಂದು ಕಾಣುತ್ತದೆ. ಅವನು ಯೋಗಮುದ್ರೆಯಲ್ಲಿದ್ದುದರಿಂದ ಕೀರ್ತಿ ತನ್ನ ಬಳಿ ಬಂದುದು ಅವನಿಗೆ ತಿಳಿದುದು ಅವಳು ಮೆಲ್ಲನೆ ಕೈಹಾಕಿ ಅವನ ಜುಟ್ಟು ಹಿಡಿದಾಗಲೆ. ಹೆಂಗಸರ ಜಡೆಯ ಹಾಗೆ

ಕೂದಲಿದ್ದ ಅವನ ಸಮೀಪದಲ್ಲಿದ್ದ ಅಮೇಧ್ಯದ ದುರ್ಗಂಧ ಅವಳಿಗೆ ತಾಕಿ ಅವಳಿಗಿನ್ನೂ ಕೋಪವೇರಿತು. ಅವನು ಗಡಿಬಿಡಿಗೊಂಡು ತಿರುಗಿ ನೋಡಿದರೆ ಕೀರ್ತಿ ಕೈಯ್ಯಲ್ಲಿ ಬೆತ್ತ. ಅವನು ಪಾತಾಳಕ್ಕಿಳಿದು ಹೋದ.

ಕೀರ್ತಿಗೆ ಅವನ ಗಲಿಬಿಲಿ ಕಂಡು ಆನಂದವಾಯಿತು. ಇಂಥ ಶುದ್ಧ ಆನಂದ, ಇಷ್ಟೊಂದು ಅವಳಿಗೆ ಬಹಳ ದಿನಗಳಿಂದಲೂ ಸಿಕ್ಕಿರಲಿಲ್ಲ. ಹಿಂದೊಮ್ಮೆ ಇದೇ ಹುಡುಗನ ಮೇಲೆ ಯಾರೋ ದೂರು ಕೊಟ್ಟಿದ್ದಾಗ, ಮತ್ತೊಮ್ಮೆ ಎಸ್ಟೇಟಿನಲ್ಲಿ ಎಲ್ಲೆಂದರಲ್ಲಿ ಕೂತುಬಿಟ್ಟರೆ ಪ್ರಾಣ ತೆಗೆಯುವೆ ಎಂದು ಎಚ್ಚರಿಕೆ ನೀಡಿದ್ದಳು. ತಾನು ಅವನಿಗೆ ಕೊಟ್ಟ ಮಾತಿನ ನೆನಪೇನೂ ಅವಳಿಗೆ ಬರಲಿಲ್ಲ. ಆದರೂ ಬಹಳ ದಿನಗಳಿಂದ ಪಾಲಿಸಿದೆ ಉಳಿಸಿಕೊಂಡಿದ್ದ ವಚನವನ್ನು ಇಂದು ಪಾಲಿಸಿದಳು. ಅವನಿಗೆ ಒಂದೊಂದು ಬಿಟ್ಟಾಗಲೂ ಅವನು ಒಂದು ಕೈಯ್ಯಲ್ಲಿ ನಿಕ್ಕರು ಹಿಡಿದುಕೊಂಡು, ಇನ್ನೊಂದು ಕೈಲಿ ಹೊಡೆತ ತಪ್ಪಿಸಿಕೊಳ್ಳಲು ವ್ಯರ್ಥ ಪ್ರಯತ್ನ ಮಾಡುತ್ತ ಕುಣಿಯುತ್ತಿದ್ದ ರೀತಿ ಅವಳಿಗೆ ಬಯಲು ನಾಟಕಗಳನ್ನು ನೆನಪಿಗೆ ತರುತ್ತಿತ್ತು. ಆನಂದ ನೀಡುತ್ತಿತ್ತು. ವಿಚಿತ್ರವಾದ ಸಂತೋಷ. ಮನಃಪೂರ್ತಿಯಾಗಿ, ಆತ್ಮಪೂರ್ವಕವಾಗಿ ತನ್ನನ್ನು ಮತ್ತೆ ತಾನೇ ನಿಂದಿಸಿಕೊಳ್ಳವಂತಿರಬಾರದು ಅಷ್ಟು ಆತ್ಮಸಾಕ್ಷಿಯಿಂದ ಅವನನ್ನು ಕುಣಿಸಿಬಿಟ್ಟಳು. ಅವನ ಮೈಕೈಯಲ್ಲೆಲ್ಲ ಬಾಸುಂಡೆಗಳೆದ್ದರೂ ಅವಳು ಅವನನ್ನು ಥಳಿಸಿದಳು. ಇದ್ದಕ್ಕಿದ್ದ ಹಾಗೆ ಅವನ ತಲೆಯ ಕೂದಲಲ್ಲಿದ್ದ ಎಣ್ಣೆ ತನ್ನ ಕೈಗಳನ್ನೆಲ್ಲ ನೆನೆಸಿಬಿಟ್ಟಿದೆ ಎನಿಸಿ ಅಸಹ್ಯವಾಗಿ ಅವನನ್ನು ಬಿಟ್ಟು ಕೈ ಒರೆಸಿಕೊಳ್ಳುವುದಕ್ಕಾಗಿ ಅಲ್ಲೇ ಬಿದ್ದಿದ್ದ ತರಗೆಲೆಗೆ ಕೈ ಹಾಕಿ ತಲೆ ಎತ್ತುತ್ತಾಳೆ ಅವನು ಅದೃಶ್ಯನಾಗಿಬಿಟ್ಟಿದ್ದ. ಕ್ಷಣಾರ್ಧದಲ್ಲಿ ಮರೆಯಾಗುವಂಥ ಅವನ ಚುರುಕುತನಕ್ಕೆ ಕೀರ್ತಿ ಅಚ್ಚರಿಗೊಂಡಳು.

ಕೀರ್ತಿಗೆ ಅವನಿಗೆ ಹೊಡೆದದ್ದರಿಂದಲೋ ಏನೋ ಬೇಸರ ಕಡಿಮೆಯಾದಂತಿತ್ತು. ಮರ್ತ್ಯನಾಕದ ಬಳಿಗೆ ಹೋಗಬೇಕೆಂದೆನಿಸಲಿಲ್ಲ. ಹತ್ತಿರದ ಹಳ್ಳದಿಂದ ಎಲೆಗಳು ಕರಗಿದ ಕಂಮ್ಮನೆಯ ವಾಸನೆ ಅವಳ ಮೂಗಿಗೆ ತಟ್ಟಿತು. ಕೀರ್ತಿಯಲ್ಲಿದ್ದ ಮತ್ಸ್ಯಗಂಧಿನಿ ಮಲಗಿ ನಿದ್ರಿಸುತ್ತಿರಲಿಲ್ಲ.

ಅಂದು ರಾತ್ರಿಯಿಂದಲೇ ಕೀರ್ತಿ ನಾಗರಾಜನೊಡನೆ ಅಧಿಕೃತವಾಗಿ ಸಂಬಂಧ ಬೆಳಸಿದಳು.

* * *

ಜನ ಏನೆಂದುಕೊಂಡರು ಎನ್ನುವುದು ಮುಖ್ಯವಲ್ಲ. ಯಾಕೆಂದರೆ ಕೆಲಸಕ್ಕೆ ಬಾರದ, ಇಲ್ಲದ ಜನ ಏನೆಂದುಕೊಳ್ಳುತ್ತಾರೆ ಎನ್ನುವುದು

ಮುಖ್ಯವೆಂದೂ ಅವಳಿಗೆಂದೂ ಅನಿಸಿರಲಿಲ್ಲ. ಅಥವಾ ಅದು ಮುಖ್ಯವೆಂದು ಅಂದುಕೊಳ್ಳುವ ಪುಕ್ಕಲುತನವೂ ಅವಳಿಗಿರಲಿಲ್ಲ. ಅವಳಿಗೆ ಅದು ಬೇಡಾದಾಗ, ಜನರಾದ ನಮಗೇಕೆ ಬೇಕು ಎಂದುಕೊಳ್ಳುವ, ಅವಳನ್ನು ಮೆಚ್ಚಿ ಅಭಿಮಾನ ಸೂಸುವ ಹೃದಯಶ್ರೀಮಂತಿಕೆ ನಿನ್ನಲ್ಲಿದೆಯೆಂದು ಅಂದುಕೊಂಡಿದ್ದೇನೆ. ಪ್ರಿಯ ಓದುಗ, ಅದು ನಿನ್ನಲ್ಲಿ ಇಲ್ಲದಿದ್ದರೆ, ಅವಳ ಹೃದಯಶ್ರೀಗೆ ಕಾರಣವಾಗಿದ್ದ ಅವಳ ಶ್ರೀಸೌಂದರ್ಯವನ್ನು, ಅವಳ ಸಣ್ಣದಾದ, ಭಾವನೆಯಿಂದ ಸ್ಪಂದಿಸುವ ತುಟಿಗಳನ್ನೂ, ನಾಸಿಕಗಳನ್ನೂ ಕಲ್ಪಿಸಿಕೊಳ್ಳುವುದು ಸಾಧ್ಯವಾಗದಿದ್ದರೆ—ಆಗುವುದಿಲ್ಲ ಎನ್ನುವುದು ಗೊತ್ತು—ಕನಸಿನಲ್ಲಾದರೂ ಕಾಣು. ಮನುಷ್ಯರು ಹೇಗಿರಬೇಕು ಎಂದು ಅರ್ಥವಾಗದಿದ್ದರೂ, ಹೇಗಿದ್ದಾರು ಎಂದಾದರೂ ತಿಳಿಯುತ್ತದೆ.

ಕೀರ್ತಿಗೆ ತಾನು ಬಯಸಿದ್ದು ಲಭಿಸಿತು. ಅತ್ಯಂತ ದುರ್ಲಭವೆಂದುಕೊಂಡದ್ದು ಅಕಲಾಯವಾಗಿ, ಅನಾಮತ್ತಾಗಿ ತಾನಾಗಿಯೆ ಬಂದು ಒಲಿದಾಗ ಉಂಟಾದ ಅವಳ ಸಂತಸಕ್ಕೆ ಮೂಲಹೇತುವೇನು ಎಂದು ತಿಳಿಯುವ ಶಕ್ತಿ ಅವಳಿಗಿರಲಿಲ್ಲವಾದರೂ ಈ ವಸ್ತು ತನ್ನದೇ ಆಗಿ ಉಳಿಯುವುದೆ ಎಂದು ಚಿಂತೆ ಅವಳಿಗೆ. ಅಂದರೆ ಈ ಚಿಂತೆ ತನ್ನ ಸ್ಪಷ್ಟರೂಪವನ್ನು ಅವಳಿಗೆ ತೋರಿಸಿತ್ತು ಎಂದು ಇದರರ್ಥವಲ್ಲ. ಅವಳಿಗೆ ಏನೋ ಒಂದು ಥರ ಭಯ, ಎಂಥದೋ ವಿಚಿತ್ರ ಅನಿಸಿಕೆಗಳು ಅನ್ನುವ ಮಾತು. ತನಗೆ ಸರಿ ಅನಿಸಿದ ಬಟ್ಟೆಗಳನ್ನು ಅವನಿಗಾಗಿ ಅವಳೇ ಕೊಂಡಾಗಲೂ ಅವನು ಒಂದೂ ಮಾತನಾಡದಿದ್ದುದರಿಂದ ಅವಳಿಗೆ ಹೇಗೆ ಹೇಗೋ ಆಯಿತು. ಅವನ ಮೌನ ಸಮ್ಮತಿಯಂತೂ ಅಲ್ಲ. ಹಾಗಲ್ಲದಿದ್ದ ಮೇಲೆ ಹಾಗೆ ಹೇಳಲಿಲ್ಲ ಯಾಕೆ? ಹಾಗೆ ಹೇಳಬಾರದು ಎಂಬುದು ಅವಳ ಸ್ಪಷ್ಟ ಅಭಿಪ್ರಾಯ. ಅವನೇಕೆ ಹೇಳಲಿಲ್ಲ ಎನ್ನುವುದು ಅವಳ ಮನಸ್ಸಿನಲ್ಲಿದ್ದ ಹುಳ.

ನಾಗರಾಜ ಹೋಗುವವನ ಹಾಗೆ ಕಂಡುಬರಲಿಲ್ಲ. ಅವನ ಉದ್ಯೋಗ ವ್ಯವಸ್ಥೆಯ ಬಗ್ಗೆ ಅವಳಿಗೆ ತಿಳಿದುದು ಬಹಳ ಸ್ವಲ್ಪ. ತಿಳಿದುಕೊಳ್ಳಬೇಕೆಂಬ ಆಸಕ್ತಿಯೂ ಅವಳಿಗಿರಲಿಲ್ಲ. ಇಷ್ಟು ದಿನ ಏನು ಮಾಡುತ್ತಿದ್ದ; ಇನ್ನು ಮುಂದೆ ಏನು ಮಾಡಬೇಕೆಂದಿರುವ-ಏನೂ ಅವಳ ತಲೆಗೆ ಬರಲಿಲ್ಲ. ಬಂದಿದ್ದರೆ ಅವಳಿಗೆ ಕಾತರವೇ ಆಗುತ್ತಿತ್ತು. ಯಾಕೆಂದರೆ, ಯಾರೇನಾದರೂ ಹೇಳಲಿ, ಅನ್ನಲಿ, ಅವಳು ತಾನು "ಪ್ರತಿಮಾಕೀರ್ತಿ" ಬಿಟ್ಟು ಕದಲಬಾರದು ಎಂಬ ತನ್ನ ಇಚ್ಛೆಗೆ ವಿರುದ್ಧವಾಗಿ ಎಂದೂ ನಡೆದುಕೊಳ್ಳಲಾರಳು. ನಾಗರಾಜನಿಂದಲೇ ಪ್ರತಿಭಟನೆ ಬಂದರೂ ಅದನ್ನು ಎದುರಿಸಲು ಅವಳು ಸಿದ್ಧ. ನಾಗರಾಜನೂ ಹೊರಡುವ ಆತುರದಲ್ಲಿರ

ಲಿಲ್ಲ. ಅವಳನ್ನು ಕಳಿಸಲು ಪ್ರತಿಮಾದೇವಿಯರು, ಚಂದ್ರಾನಿಲರಾಯರು ಸಿದ್ಧವಿರಲಿಲ್ಲ. ಚಂದ್ರಾನಿಲರಾಯರ ದೃಷ್ಟಿಯಲ್ಲಿ, ಕೀರ್ತಿ—ಮದುವೆಯಾಗಿ ಗಂಡನೊಂದಿಗಿರಲಿ ಕೂಡಿಕೊಂಡಿರಲಿ-ಅವಳು ತಮ್ಮ ಮಗಳು. ತಮ್ಮಲ್ಲಿರುವ ಅತ್ಯಂತ ಸುಂದರ ಆಸ್ತಿ ಪ್ರತಿಮಾದೇವಿಯರನ್ನು ಬಿಟ್ಟರೆ ಶ್ರೇಷ್ಠವೆನಿಸುವಂಥ ಇನ್ನೊಂದೇ ಆಸ್ತಿಯೆಂದರೆ ಕೀರ್ತಿ. ಆದುದರಿಂದ ಅವರಿಗೆ ಅವಳು ಬೇಕೆಂದಾಗ, ಅವಳು ಅವರ ಬಳಿ ಇರಬೇಕು ೯ ತಮಾಷೆಯೆಂದರೆ ಅವರಿಗೆ ಅವಳ ಸನಿಯ ಯಾವಾಗಲೂ ಬೇಕೆ: ಇರುತ್ತಿತ್ತು.

ಪ್ರತಿಮಾರ ಮನಸ್ಸಿನ ತುಮುಲವೇ ಬೇರೆ. ಕೀರ್ತಿ ತನ್ನಲ್ಲಿ ಸ್ವಚ್ಛಂದತೆಯಲ್ಲಿ ಕಂಗೊಳಿಸುತ್ತಿದ್ದರೂ, ಆ ಸ್ವಚ್ಛಂದತೆಯ ಹಿಂಬದಿಯಲ್ಲಿರುವ ಭದ್ರ ಅಧಿಕಾರ ತಮ್ಮ ಬಗ್ಗೆ ಅವಳಿಗಿರುವ ಭಯ, ಗೌರವ. ಈ ಭಯ, ಗೌರವದಿಂದಲೆ ಕೀರ್ತಿ ಶ್ರೇಷ್ಠ ಮಾನವಳಾಗಿರುವುದು. ಅವು ತಪ್ಪಿದರೆ, ಯಾವಾಗ ಬೇಕಾದರೂ ಸಾಯಬಹುದಾದ ಪ್ರಾಣಿ ಅವಳಾಗಿ ಹೋಗುವುದಿಲ್ಲವೆ? ನಾನಿಲ್ಲದಿದ್ದರೆ ಕೀರ್ತಿ ಸಾಯುತ್ತಾಳೆ. ಅವಳಿಲ್ಲದಿದ್ದರೆ ಚಂದ್ರಾನಿಲರಾಯ ಹುಚ್ಚನಾಗುತ್ತಾನೆ. ಆದ್ದರಿಂದ ಅವಳು ಇಲ್ಲಿಯೇ ಇರಬೇಕು. ಇರುತ್ತಾಳೆ.

ನಾಗರಾಜನಿಗೆ ತನ್ನ ವಾಂಛೆ ತಿಳಿಯದೆ ಈ ನಿರ್ಧಾರಕ್ಕೆ ಅವರೆಲ್ಲ ಬಂದಿದ್ದುದು ಸರಿ ಅನಿಸಿತೋ ಇಲ್ಲವೊ ಯಾರೂ ಕೇಳಲಿಲ್ಲ. ಅವನಿಗಾದರೂ ಅವರು ಕೇಳಬೇಕಿತ್ತು ಎನ್ನಿಸದೆ ಇರಲಿಲ್ಲ. ಒಂದು ವೇಳೆ ಕೇಳಿಯೇಬಿಟ್ಟರೆ ಏನೆಂದು ಹೇಳುವುದು ಎಂಬ ಗೊಂದಲ. ಯಾರ ಹತ್ತಿರ ಹೇಳಿಕೊಂಡಾನು?

* * *

ಸಂಜೆ ಕೀರ್ತಿ ಎಸ್ಟೇಟಿನಲ್ಲಿ ಮೇಲ್ವಿಚಾರಣೆಗೆ ಹೋಗಿದ್ದಳು. (ಆಗಾಗ ಅವಳು ಹಾಗೆ ಹೋಗುತ್ತಾಳೆ. ಯಾರಾದರೂ ಬಲಿಪಶು ಸಿಕ್ಕಬಹುದೆಂಬ ಆಸೆಯಿಂದ ಇರಬಹುದು. ಅಥವಾ ತನ್ನ ಯಾಜಮಾನ್ಯ ತೋರಿಸಲಿಕ್ಕೆ ಇರಬಹುದು) ನಾಗರಾಜ ತನ್ನ ಪಕ್ಕದಲ್ಲಿ ಇಲ್ಲದಿರುವುದು ಅವಳಿಗೆ ಹಿತವಾಗಿತ್ತು. ಚಂದ್ರುವಿನಂತೆ ಮೇಲೆ ಬಿದ್ದು ಆ ಅನಿಷ್ಟದ ನೆನಪು ತರುವುದಿಲ್ಲವಲ್ಲ ಎಂದು ಅವಳಿಗೆ ಸ್ವಲ್ಪ ನೆಮ್ಮದಿಯೂ ಇತ್ತು. ಉದ್ದವಾದ ಲಂಗ ತೊಟ್ಟು, ಅಲೆಯಲೆಯಾಗಿ ಹರಿಯುತ್ತಿದ್ದ ಆ ಸೌಂದರ್ಯಮೂರ್ತಿಯನ್ನು, ಬೆಡಗಿನಲಂಕಾರವನ್ನು, ಬಿನ್ನಾಣ ಚಕ್ರವರ್ತಿನಿಯನ್ನು ನಿಸರ್ಗದ ಹಿನ್ನೆಲೆಯಲ್ಲಿ ಕಂಡಾಗ ಯಾರಿಗಾದರೂ 'ವಾಹ್' ಅನಿಸದಿರುತ್ತಿರಲಿಲ್ಲ. ಪೂಜ್ಯಭಾವ ಬಂದುಬಿಡುತ್ತಿತ್ತು. ಆ ನಿರ್ಮಲ ರೂಪವನ್ನು ಕಂಡು ದೂರದಲ್ಲಿ ಸಂಜೆಯಾದರೆ ಸಾಕೆಂದು

ಕಾಯುತ್ತ, ಆದ ಕೂಡಲೆ ಕೈಯಲ್ಲಿ ತಂಬಿಗೆ ಹಿಡಿದು ಹೋಗುತ್ತಿದ್ದ ಅಷ್ಟಾವಕ್ರನೊಬ್ಬನಿಗೆ ಭಕ್ತಿ ಬಂದದ್ದು ವಿಶೇಷವೇನಲ್ಲ. ಗಕ್ಕನೆ ನಿಂತ: ಅರಸುತ್ತ ಹೋದ ಮೋಕ್ಷಪಿಪಾಸುವಿಗೆ ಮೋಕ್ಷವೇ ಮೂರ್ತಿವೆತ್ತು ಬಂದು ನಿಂತಂತೆ ನಿಂತಾಗ ತನುಮನ ಕರಗಿ ಹೋಗುವಂತೆ ಕೀರ್ತಿ ಅವನನ್ನು ಕಂಡಳು. ಅವನ ಕೈಯಲ್ಲಿದ್ದ ಚೆಂಬು ಕಂಡು ಅವಳಲ್ಲಿದ್ದ ದುಷ್ಟ ನಿಗ್ರಹ ಶಕ್ತಿ ಜಾಗೃತವಾಯಿತು. ಮರದ ಕೆಳಗೆ ಬಿದ್ದಿದ್ದ ಕಡ್ಡಿ ಎತ್ತಿಕೊಂಡಕೂಡಲೆ ಭಕ್ತ ಅಂತರ್ಧಾನನಾಗಿ ಬಿಟ್ಟಿದ್ದ. ವರ ನೀಡಬೇಕೆಂದುಕೊಂಡಿದ್ದ ಅವಳಿಗೆ ನಿರಾಸೆಯಾಯಿತು. ಇನ್ನೊಮ್ಮೆ ಸಿಕ್ಕಲಿ, ಹುಟ್ಟಲಿಲ್ಲ ಎನಿಸಿಬಿಡುತ್ತೇನೆ ಎಂದುಕೊಂಡು ಮನೆಗೆ ಬಂದಳು.

ಬಂದವಳಿಗೆ ಆಶ್ಚರ್ಯ ಕಾದಿತ್ತು. ಹಾಲಿನಲ್ಲಿದ್ದ ಸೋಫಾದ ಮೇಲೆ ಚಂದ್ರಾನಿಲರಾಯರು. ಅವರ ಎದುರು ವಿಶ್ವನಾಥ ಪ್ರತಿಮಾದೇವಿಯರು. ಮುಂದೆ ಮೊಪ್ಪೆಂದು ಗುಪ್ಪೆಯಾಗಿ ಬಿದ್ದಿರುವ ಮೌನ ಗಟ್ಟಿ.

ಕೀರ್ತಿಗೆ ಏನಾದರೂ ಆಗಿರಬಹುದು ಎನಿಸುವುದಕ್ಕಿಂತ ಯಾಕೆ ತಾಯಿ ವಿಶ್ವನಾಥನೊಡನೆ ಮಾತನಾಡುತ್ತಿಲ್ಲ ಅನಿಸಿತು. ಹಾಗೆ ಅವರಿಬ್ಬರು ಎಷ್ಟೋ ದಿನಗಳ ಮೇಲೆ ಕೂಡಿದಾಗ ಮೌನಭೀರುಗಳಾಗಿಬಿಡುತ್ತಿದ್ದರು. ಹೆಚ್ಚು ಹೊತ್ತು ಮೌನ ತಾಳಿದರೆ ಎಲ್ಲಿ ಅಚಾತುರ್ಯದಿಂದ ಅಸ್ಫೋಟವಾಗಿ ಅಸಂಬದ್ಧ ಮಾತುಗಳು ಬಂದುಬಿಡುತ್ತವೋ ಎಂಬ ಭಯದಿಂದ ಅದಷ್ಟು ಮಾತನಾಡುತ್ತಾರವರು. ಇಂದೇಕೆ ಹೀಗೆ?

ವಿಶ್ವನಾಥ ನಿಜವಾಗಿಯೂ ಗಂಡಸು, ಪ್ರತಿಮಾ ಕೀರ್ತಿ ಹೆಂಗಸರು. ನಿಜವಾದ ಅರ್ಥದಲ್ಲಿ ಅನ್ನುವ ಹಾಗೆ. ಅದನ್ನು ಹೀಗೂ ಹೇಳಬಹುದು ಕಾಣುತ್ತದೆ: ವಿಶ್ವನಾಥ ಊರಿಗೆ ಹೋರಟುಹೋದ ಮೇಲೆ, ಚಂದ್ರಾನಿಲರಾಯರು ಗಪ್ಪಂತ ಅವಡುಕಚ್ಚಿ ಕೂತುಬಿಡುತ್ತಿದ್ದರು. ಅಂಥ ಸಮಯಗಳಲ್ಲಿ ಆ ಮನೆಯ ವಾತಾವರಣದಲ್ಲಿ ಇರುತ್ತಿದ್ದ ಇಬ್ಬರೇ ಗಂಡುಗಳೆಂದರೆ ಪ್ರತಿಮಾದೇವಿ ಮತ್ತು ಕೀರ್ತಿ.

ಅವನಿಗೆ ಪ್ರೀತಿ ಪ್ರೇಮವೆಂದರೆ ಏನು ಎಂಬುದು ಇನ್ನೂ ಅರ್ಥವಾಗದಿದ್ದರೂ ನಿಜವಾದ ಪ್ರೇಮಿ ಅವನೆ. ತನಗೆ ಪ್ರತಿಮಾದೇವಿ ಬೇಕೆಂದಾಗ ಅಲ್ಲಿಗೆ ಬರುತ್ತಾನೆ. ಬಂದು ಪ್ರೀತಿಯ ಒತ್ತಡ ಕಡಿಮೆಯಾದಕೂಡಲೆ ಹೊರಟುಹೋಗಿಬಿಡುತ್ತಾನೆ. ಪ್ರೀತಿ ಎನ್ನುವ ರಾಗ ಒಂದೇ ಸಮನೆ ಇರುವುದಿಲ್ಲ; ಹೊಸತರಲ್ಲಿರುವ ಕಾವು ಕ್ರಮೇಣ ತಂಡಿಯಾಗಬಹುದು, ಆಗುತ್ತದೆ, ಆಗಲೇಬೇಕು ಎನ್ನುವವನು. ಆದರೂ ತಮ್ಮ ಬಗ್ಗೆ ಅವನಿಗಿರುವ ಅಚಲ ಪ್ರೇಮ ಕಂಡಾಗ ಪ್ರತಿಮಾದೇವಿಯರಿಗೆ ಇದೇ ಅಲ್ಲವೆ ನಿಜವಾದ ಬದುಕು ಎಂದೆನಿಸುತ್ತಿತ್ತು.

ಕೀರ್ತಿ ಅಲ್ಲಿಗೆ ಬಂದಾಗ ಏನಾದರೂ ಆಗಬಹುದು ಎಂದು ಎಲ್ಲರಿಗೂ ಗೊತ್ತಿತ್ತು, ಏನು ಆಗಬಹುದು ಎಂದು ಯಾರಿಗೂ ತಿಳಿದಿರಲಿಲ್ಲ.

ಅವಳು ಬಂದೊಡನೆಯೆ ವಿಶ್ವನಾಥ ಎದ್ದ. ಒಂದೊಂದು ಹೆಜ್ಜೆಯಲ್ಲಿ ಒಂದೊಂದು ತೀರ್ಮಾನವನ್ನು ಸುತ್ತಿಗೆಯಲ್ಲಿ ಅಪ್ಪಳಿಸಿ ಗಟ್ಟಿಮಾಡುವವನಂತೆ ಅವಳ ಬಳಿ ಸಾರಿದ. ಅಲ್ಲಿ ಕುಳಿತಿದ್ದ ಮೌನ ಕಂಡೇವಾಗ್ಶೀರುವಾಗಿದ್ದ ಕೀರ್ತಿ, ಅವನ ಇಕ್ಕೆಲಗಳಲ್ಲೂ ಅಂಟಿಕೊಂಡು ಸೆಟೆದು ಹೋಗಿದ್ದ ಬಾಹುಗಳನ್ನೂ, ಎರಡು ಬಾಗಲಾರದ ಕುರ್ಚಿಯ ಕಾಲುಗಳಂತಿದ್ದ, ಆದರೂ ಚಲಿಸುತ್ತಿದ್ದ ಅವನ ಕಾಲುಗಳನ್ನು ಕಂಡು ಬೆವತುಹೋದಳು. ಅವನ ಕಣ್ಣುಗಳಲ್ಲಿದ್ದ ನಿರ್ಜೀವತೆಯನ್ನೂ ಕಂಡು ಅವಳಲ್ಲಿದ್ದ ಮಾತುಗಳು ಕರಗಿಹೋಗಿ, ಮೂತ್ರವಿಸರ್ಜನೆಯಾದಂತಾಗಿಬಿಟ್ಟಿತು. ಅವನ ವ್ಯಕ್ತಿತ್ವದ ಅಂಗವೇ ಆಗಿದ್ದ ನಿಸ್ಸಂದೇಹ ರೂಕ್ಷತೆ, ಅವನ ನಡತೆಯನ್ನು ಪ್ರತಿಭಟಿಸಬೇಕೆಂದಿದ್ದ ಕೀರ್ತಿಯನ್ನು ಕೊಂದು, ಅವಳನ್ನು ಮೌನಭೀರುವನ್ನಾಗಿಸಿಬಿಟ್ಟಿತು. ಏನು ಮಾಡುವನೋ ಎಂಬ ಭಯ, ಕಾತರತೆ, ಮಾಡಲಿ ಎಂಬ ಆಕಾಂಕ್ಷೆ ಅವಳ ಕಣ್ಣಲ್ಲಿ ಅಚ್ಚಾಗಿದ್ದವು. ತನ್ನನ್ನೆಲ್ಲಿ ಕೊಂದುಬಿಡುವನೋ ಎಂಬ ಭಯ, ಕೊಂದುಬಿಡಲಿ ಎಂಬ ಆಸೆ. ಅವನು ಮಾತ್ರ ಕೀರ್ತಿ ಡಾರ್ಲಿಂಗ್ ಎಂದು ಅವಳನ್ನು ಬಳಸಿದ. ಅವನ ರಾಕ್ಷಸಬಾಹುಗಳಲ್ಲಿ ಅಡಗಿದ ಹೂವು ಕೀರ್ತಿ— ಕೀರ್ತಿ ಕಿಟಾರನೆ ಕಿರುಚಿಬಿಟ್ಟಳು.

ಪ್ರತಿಮಾದೇವಿಯರಿಗೇನು ಮಾಡಬೇಕೆಂದು ತೋರಲಿಲ್ಲ. ಏನಾದರೂ ಮಾಡಬೇಕೆಂದೂ ಅನಿಸಲಿಲ್ಲ. ಮಾಡುವಷ್ಟು ಚೈತನ್ಯವೂ ಅವರಲ್ಲಿರಲಿಲ್ಲ. ತಮ್ಮ ಕಣ್ಣಮುಂದೆಯೆ ತಮ್ಮ ವಿಶ್ವನಾಥ ತಮ್ಮ ಮಗಳು ಕೀರ್ತಿಯನ್ನು ಬಳಸಿ ಹಿಡಿದಿದ್ದದನ್ನು ಕಂಡು ಅವರ ಅಸೂಯೆ ಉರಿಯಿತು. ಅಂದರೆ ಅವನು ಇಲ್ಲಿಯವರೆಗೂ ಅವಳನ್ನೂ ಬಳಸಿಯೇ ಇರಲಿಲ್ಲವೆಂದು ಹೇಳುವುದಕ್ಕೆ ಈ ಮಾತು ಹೇಳುತ್ತಿಲ್ಲ. ಅವನು ಅನೇಕಸಾರಿ ಅವಳನ್ನು ಬಳಸಿದ್ದರೂ, ಇಂದಿನ ಅವನ ಅಪ್ಪುಗೆಯ ಉನ್ಮಾದವೇ ಬೇರೆ ರೀತಿಯದು. ಅವನ ಕೈಗಳು, ಕಣ್ಣುಗಳು, ನಡೆ—ಎಲ್ಲವೂ ಪ್ರತಿಮಾದೇವಿಯರಿಗೆ ಅವನು ತಮ್ಮನ್ನು ಬಳಸಿದ ಮೊದಲದಿನದ ನೆನಪು ಮಾಡಿಕೊಟ್ಟವು. ಅಂದರೆ ವಿಶ್ವನಾಥ ಇಂದು ನನ್ನನ್ನು ಬಿಟ್ಟುಬಿಟ್ಟನೆ ? ಅವರಿಗೆ ಭಯ ನಿರಾಸೆ ಹುಯ್ಯಲು.

ಆ ವೇಳೆಗೆ ನಾಗರಾಜ ಎಲ್ಲಿದ್ದನೋ, ಅಲ್ಲಿಗೆ ಬಂದ. ಪ್ರತಿಮಾರಿಗೆ ಸ್ವಲ್ಪ ಸಮಾಧಾನ. ಇವನಾದರೂ ಅವಳನ್ನು ಬಿಡಿಸಿಕೊಳ್ಳಬಲ್ಲ ಎಂದು. ನಾಗರಾಜನಿಗಾದರೂ, ತಾನು ಕಂಡ ದೃಶ್ಯದಲ್ಲಿ ವಿಶೇಷವೇನೂ ಕಾಣಲಿಲ್ಲ. ಇದನ್ನು ಅವನೇನೂ ಹಲವು ಸಾರಿ ಕಂಡಿರದಿದ್ದರೂ, ಇಂಥದು

ಅನೇಕ ಸಾರಿ ನಡೆದಿರಬಹುದು ಎಂದು ಕಲ್ಪಿಸಿಕೊಂಡು ನಕ್ಕುಬಿಟ್ಟಿದ್ದ. ಅವನಿಗೆ ಇಂದಿನ ವಿಶ್ವನಾಥನಿಗೂ, ತಾನು ಕಂಡ ಅನೇಕ ಜನರಿಗೂ ಇದ್ದ ವ್ಯತ್ಯಾಸದ ಅರಿವು ಹೇಗಾದರೂ ಇರಬೇಕು? ನಾಗರಾಜ, ವಿಶ್ವನಾಥನ ರಾಕ್ಷಸ ವ್ಯಕ್ತಿತ್ವದ ಪರಿಚಯವಿದ್ದವನೂ ಅಲ್ಲ.

ವಿಶ್ವನಾಥನಿಗೆ ಮೈಮೇಲೆ ಬಂದಿತ್ತು. ಅವನಲ್ಲಿದ್ದ ಪ್ರಾಣಶಕ್ತಿ ಜಾಗೃತವಾಗಿದ್ದುದು ಬಹಳ ದಿನಗಳಾದ ಮೇಲೆ. ಪ್ರತಿಮಾದೇವಿಯ ರಿಂದಲೂ ಅವನಿಗೆ ಇತ್ತೀಚೆಗೆ ಇಂಥ ಪ್ರೋತ್ಸಾಹ ದೊರೆಕಿರಲಿಲ್ಲ. ಅವನು ಮೊದಲದಿನ ಕಂಡ ಪ್ರತಿಮಾದೇವಿ ಇಂದಿನ ಕೀರ್ತಿಗೆ ಸರಿಸಮ. ಪ್ರತಿಮಾ—ಕೀರ್ತಿ: ಅವನಿಗೆ ಯಾರು ದೊಡ್ಡವರು, ಯಾರು ಅಲ್ಲ ಅನ್ನುವ ಮಾತು ಮುಖ್ಯವಲ್ಲ. ಕೀರ್ತಿಯೇ ತನ್ನ ಪ್ರತಿಮಾ ಆಗಿದ್ದಾಳೆ ಅನಿಸಿತು. ಇಂದು ಅರ್ಥವಾಯಿತು ಅವನಿಗೆ ತನ್ನ ಪ್ರತಿಮಾ ಎಂದೋ ಸತ್ತುಹೋಗಿದ್ದಳು, ಮತ್ತೆ ಬದುಕಿ ಬಂದಿದ್ದಾಳೆ ಅನ್ನುವುದು. ಅವನ ಚಿದ್ಸಂಭ್ರಮ ಪರಾಕಾಷ್ಠೆ ಮುಟ್ಟಿ ಅವನು ನಕ್ಷತ್ರಲೋಕದಲ್ಲಿ ವಿಹರಿಸಿದ. ಚಂದ್ರಮನನ್ನು ಹೀಯಾಳಿಸಿ, 'ಪ್ರತಿಮಾ', ನನ್ನ ಪ್ರೀತಿಯ ಪ್ರತಿಮಾ, ನೀ ಬದುಕಿ ಬಂದೆಯಲ್ಲವೆ!' ಎಂದು ಆನಂದದಿಂದ ಚೀರುತ್ತಿದ್ದ. ತನ್ನ ಆನಂದದ ಅಮಲಿನಲ್ಲಿ ವಿಹರಿಸುತ್ತಿದ್ದ ಅವನಿಗೆ, ಕೀರ್ತಿ ನೋವಿನಿಂದ ಚೀರುತ್ತಿದ್ದುದು ಕೇಳಿಸುತ್ತಲೇ ಇರಲಿಲ್ಲ. ಅವಳಿಗೂ ಸಂತೋಷವಾಗಿತ್ತು ಅನ್ನಲು ಅಡ್ಡಿಯಿಲ್ಲ. ಅವನ ಅಪ್ಪುಗೆಯಲ್ಲಿ, ಅವಳಿಗೆ ಇಂದಿನವರೆಗು ಯಾರೂ ನೀಡಿರದ, ನಾಗರಾಜ ಕೂಡ ಕೊಟ್ಟಿರದ ಆನಂದವಿದೆ. ಆದರೆ ಆ ಆನಂದ ಅಮೂರ್ತವಾದದ್ದು. ತತ್‌ಕ್ಷಣದಲ್ಲಿ ಅವಳಿಗೆ ಅರಿವಾಗುತ್ತಿದ್ದುದು ಅತನ ಕಬ್ಬಿಣದ ಕೈಗಳು ತನ್ನ ಮೈ ಹೊಸಕಿ, ಮೂಳೆಗಳನ್ನು ಮುರಿಯುತ್ತಿವೆ ಅನ್ನುವುದು. ಆ ನೋವನ್ನು ಸಹಿಸಿಕೊಂಡು, ಅವನ್ನು ಮೀರಿ ಬೆಳೆದರೆ, ಆನಂದ ದತ್ತವಾಗುತ್ತದೆ. ಕೀರ್ತಿಗೆ ಈ ಆನಂದವನ್ನು ದಕ್ಕಿಸಿಕೊಳ್ಳುವಷ್ಟು ಶಕ್ತಿ ಇರಲಿಲ್ಲ. ಅವಳಿಗೆ ಆಗುತ್ತಿದ್ದುದು ಬರಿಯ ಸಂತೋಷ,ಬರಿಯ ನೋವು. ಪ್ರತಿಮಾದೇವಿಯರೊಬ್ಬರು ಮಾತ್ರ ಆನಂದವನ್ನು ದಕ್ಕಿಸಿಕೊಳ್ಳುವ ಚೈತನ್ಯವುಳ್ಳವರು.

ಅವನಿಗೆ ಮಾತ್ರ ಇದ್ಯಾವುದರ ಪರಿವೆಯೂ ಇದ್ದಂತಿರಲಿಲ್ಲ. ಅವಳ ನೋವಿನ ಕೂಗಿನಿಂದ ಕೋಪದಿಂದ, ಅಸಹಾಯಕತೆಯಿಂದ ಹಿಂಡಿ ಹೋಗುತ್ತಿದ್ದ ಚಂದ್ರಾನಿಲರಾಯರ ಭಾವನೆಗಳನ್ನು ಅವನು ಗಮನಿಸುವುದು ಸಾಧ್ಯವಿರಲಿಲ್ಲ. ಅವಳು ಒಮ್ಮೊಮ್ಮೆ ಅರಚಿಕೊಂಡಾಗಲೂ, ಪ್ರತಿಮಾದೇವಿ ಅಸೂಯೆಯಿಂದ, ಕೋಪದಿಂದ, ಅನುಕಂಪದಿಂದ ಹಿಂಡಿಹೋಗುತ್ತಿದ್ದರು. ವಿಶ್ವನಾಥನಲ್ಲದೆ ಬೇರೆ ಯಾರಾದರೂ ಅಲ್ಲಿದ್ದರೆ

ಅವರು ಅವನಿಗೂ, ಕೀರ್ತಿಗೂ ಬುದ್ಧಿ ಕಲಿಸುತ್ತಿದ್ದರು.

ನಾಗರಾಜನಿಗೆ ಮಾತ್ರ ನಾನ್ಯಾಕೆ ಈ ಮನೆಗೆ ಬಂದೆ ಅನಿಸಿಬಿಟ್ಟಿತ್ತು.

ಪ್ರತಿಮಾದೇವಿಯರಿಗೆ ಇನ್ನು ಮೂಕಪ್ರೇಕ್ಷಕರಾಗಿ ಕೂರುವುದಾಗಲಿಲ್ಲ. ಇದು ನನ್ನ ಅಳಿವು-ಉಳಿವಿನ ಪ್ರಶ್ನೆ. ಇದು ಅವನಿಗೆ ತನ್ನ ಬಗ್ಗೆ ಇದ್ದ ಪ್ರೀತಿಯ ಪರೀಕ್ಷೆಯಾಗಿದ್ದರೆ ಅವರಿಗೆ ಬರಿಯ ದುಃಖ ಮಾತ್ರ ಆಗುತ್ತಿತ್ತು. ಆ ದುಃಖದಲ್ಲಿ ನವೆದು ಸಾಯುತ್ತಿದ್ದರು ಅವರು. ಅವರಿಗೆ ಚೆನ್ನಾಗಿ ಗೊತ್ತಿತ್ತು : ವಿಶ್ವನಾಥ ತನ್ನಿಂದ ದೂರವಾಗುತ್ತಿರುವುದು, ಅವನಿಗೆ ತಮ್ಮ ಬಗ್ಗೆ ಎಷ್ಟು ಪ್ರೀತಿ ಇದೆ ಎನ್ನುವುದರ ಪರೀಕ್ಷೆ ಅಲ್ಲ ; ತನಗೆ ಅವನ ಬಗ್ಗೆ ಎಷ್ಟು ಪ್ರೀತಿ ಇದೆ ಎನ್ನುವುದರ ಪರೀಕ್ಷೆ.

ಧಡಕ್ಕನೆ ಎದ್ದರು. ಭಯ, ಆತಂಕ. ತನ್ನ ಪ್ರೀತಿ ತನಗೆ ಅರಿವಿಲ್ಲದಂತೆಯೇ ಎಲ್ಲಿ ಕರಗಿ ಹೋಗಿದೆಯೋ ಎಂದು ಭಯ. ಮುಗಳಿಗಾಗಿ ಆತಂಕ. ಅಮ್ಮಾ ಎಂದು ಮಗಳು ಕೂಗುತ್ತಿದ್ದುದು, ವಿಶ್ವನಾಥ ಅವಳನ್ನು ತನ್ನ ಎರಡು ಕೈಗಳ ಮೇಲೆ ಹಾಕಿಕೊಂಡು ರೂಮಿನ ಬಳಿ ಹೋಗುತ್ತಿದ್ದುದನ್ನು ಕಂಡು ಅವರ ಅಸೂಯೆ ತಕತಕನೆ ಕುದಿಯಿತು. ಓಡಿ ಅವನ ದಾರಿಗೆ ಅಡ್ಡ ನಿಂತರು. ಅವನಿಗೆ ಅವರು ಪ್ರತಿಮಾದೇವಿ ಅನಿಸಲಿಲ್ಲ. ಯಾರೂ ಅನಿಸಲಿಲ್ಲ. ಒಂದು ಕಾಲಿನಿಂದಲೇ ಅವರನ್ನು ಜಾಡಿಸಿ ತಳ್ಳಿದ. ಆಯ ತಪ್ಪಿದ ಪ್ರತಿಮಾದೇವಿಯರು ಮೂರು ಮಾರು ಆಚೆಗೆ ದೂಡಲ್ಪಟ್ಟು, ದಢಾರನೆ ನೆಲದ ಮೇಲುರುಳಿದರು. ತಲೆಯ ಮುಂಭಾಗ ನೆಲಕ್ಕೆ ಅಪ್ಪಳಿಸಿತು. ವಿಶೂ ಎಂದು ಕೂಗಿಬಿಟ್ಟರು.

ವಿಶ್ವನಾಥನಿಗೆ ಎಚ್ಚರವಾಯಿತು. ಕೀರ್ತಿಯನ್ನು ಅಲ್ಲೇ ಹಾಕಿ, ತಾನು ಹಿಂದೆ ಎಂದೋ ಕೇಳಿದ್ದ, ಸುಪರಿಚಿತವಾಗಿದ್ದ, ತನಗೆ ಅತ್ಯಂತ ಪ್ರಿಯವಾದ ಧ್ವನಿ ಬಂದ ಕಡೆ ಓಡಿದ. ಅವರತ್ತ ನುಗ್ಗಿ ಪ್ರತಿಮಾ, ಪ್ರತಿಮಾ ಎಂದು ಅವರನ್ನೆತ್ತಲು ಬಗ್ಗಿದ. ಅವರನ್ನು ಕಂಡು ಸತ್ತು ಹೋಗಿದ್ದ ಅವನ ಪ್ರೀತಿ ಮತ್ತೆ ಮೇಲಕ್ಕೆ ಬಂತು : ದುಷ್ಯಂತ ಶಕುಂತಲೆಯ ನೆನಪು ಮಾಡಿಕೊಂಡ ಹಾಗೆ. ಸುತ್ತಮುತ್ತಲ ಪ್ರಪಂಚ ಮರೆತ. ಅವರನ್ನು ಮೊದಲಬಾರಿಗೆ ಕಂಡವನೋ ಎನ್ನುವ ಹಾಗೆ ಬಾಗಿ ಬಾಗಿ ಮುತ್ತಿಟ್ಟ. ಪ್ರತಿಮಾದೇವಿಯರ ಹಣೆಯಲ್ಲಿದ್ದ ಬೆವರ ಹನಿಗೊಂದು ಹಿತವಾದ ಸುಗಂಧ. ಪ್ರತಿಮಾದೇವಿಯರಾದರೂ ತಾನು ವಿಶ್ವನಾಥನನ್ನು ಮತ್ತೆ ಗೆದ್ದೆ ಎಂಬ ಆನಂದದಿಂದ ಕಣ್ಣುಮುಚ್ಚಿದರು. ಅವನು ಅವರನ್ನು ಮತ್ತೆ ಮತ್ತೆ ಮುತ್ತಿಟ್ಟು. ಅವರನ್ನೆತ್ತಿಕೊಳ್ಳಬೇಕೆಂದುಕೊಂಡವನಿಗೆ ತನ್ನ ಹಿಂದೆ ನಿಂತಿದ್ದ ಚಂದ್ರಾನಿಲರಾಯರು ಕಾಣಲಿಲ್ಲವೆಂದು ತೋರುತ್ತದೆ. ಅಥವಾ ಕಂಡೂ ಇರಬಹುದು. ಚಂದ್ರಾನಿಲರಾಯರಿಗೆ ದಿಗಿಲಾಗಿರಬೇಕೆಂದುಕೊಂಡ. ನೀನು ಬಂದು ನನ್ನ

ಪ್ರತಿಮಾಗೆ ಇನ್ನಷ್ಟು ಭಯ ಹುಟ್ಟಿಸುತ್ತೀಯ, ಇಲ್ಲೇಕೆ ನಿಂತೆ, ಹೋಗು ಎಂದು ಹೇಳಬೇಕೆಂದುಕೊಂಡ. ಕೆಳಗೆ ಭೀತಿಯಿಂದ ಕಡಿದ ಬಾಳೆಯ ಹಾಗೆ ನೆಲದ ಮೇಲುರುಳಿದ್ದ ಪ್ರತಿಮಾದೇವಿಯರ ಮಂಡಿಯಡಿಯಿಂದ ಒಂದು ಕೈ ತೂರಿಸಿ, ಇನ್ನೊಂದನ್ನು ಅವರ ಕತ್ತಿನ ಹಿಂಭಾಗದಿಂದ ತೂರಿಸಿ ಎತ್ತಬೇಕೆಂದಿದ್ದವನು ಮತ್ತೆ ಬಗ್ಗಿ ಅವರನ್ನು ಮುತ್ತಿಟ್ಟ. ಕತ್ತೆತ್ತಿದ. ತನ್ನ ಕತ್ತಿನ ಮೇಲೆ ಬಿದ್ದ ಹೊಡೆತದ ಶಬ್ದ ಮುಸುಕು ಮುಸುಕಾಗಿ ಅವನಿಗೆ ಕೇಳಿಸಿತು. ನೋವು ಅನುಭವಕ್ಕೆ ಬರಲಿಲ್ಲ. ಅವನ ತಲೆ ಒಂದು ಮಾರು ದೂರದಲ್ಲಿ ಬಿದ್ದಿತ್ತು. ಅವನ ದೇಹದಿಂದ ಸುರಿಯುತ್ತಿದ್ದ ರಕ್ತ ಪ್ರತಿಮಾರ ಮುಖದ ಮೇಲೆ ಹರಿದು ಆಕೆ ಗಡಿಬಿಡಿಯಿಂದ ಕಣ್ಣುಬಿಟ್ಟರು. ಎದುರಿಗೆ ಕತ್ತಿ ಝಳಪಿಸುತ್ತ ನಿಂತಿದ್ದ ಜರಾಸಂಧ ಗಂಡ ಚಂದ್ರಾನಿಲರಾಯರು.

ಎಸ್ಟೇಟಿನ ಮಾಲಕನಾಗಿ ಒಂದುದಿನವಾದರೂ ನೀನು ಕತ್ತಿ ಹಿಡಿದ್ದುದು ಕಾಣೆ ಎಂಬ ಹೆಂಡತಿಯ ಮೂದಲಿಕೆಯನ್ನು ಚಂದ್ರಾನಿಲರಾಯರು ಸುಳ್ಳುಮಾಡಿದ್ದರು. ಅವರ ಮುಖದಲ್ಲಿ ತಮ್ಮ ಹೆಂಡತಿಯ ಬಗ್ಗೆ ತಮಗಿದ್ದ, ಅಚಲ ಭಕ್ತಿ ಮೂಕ ಪ್ರೀತಿಯನ್ನು ವ್ಯಕ್ತಪಡಿಸಿದ ಹೆಮ್ಮೆ.

ಪ್ರತಿಮಾದೇವಿಯರಿಗೆ ದಿಗ್ಭ್ರಮೆಯಾಗಿತ್ತು ತಮ್ಮ ಪತಿಯ ವರ್ತನೆ ಯಿಂದ. ಚಂದ್ರಾನಿಲರಾಯರ ಕಾಡುಮನುಷ್ಯನ ವ್ಯಕ್ತಿತ್ವದಲ್ಲಿ ಚಿನ್ನ ದಂಥ ಅಪ್ಪಟತನವಿದೆ, ನಿಷ್ಕಾಪಟ್ಯವಿದೆ ಎಂಬ ವಿಷಯ ಈಗ ಅವರಿಗೆ ತಿಳಿಯಿತು ಎಂದು ಹೇಳುವುದಕ್ಕಾಗಿ ಈ ಮಾತು ಹೇಳುತ್ತಿಲ್ಲ. ತನ್ನ ಗಂಡ ನಿಜವಾಗಿಯೂ ತನ್ನ ಗಂಡನಾಗಿಬಿಟ್ಟನೆ ಎಂಬ ಶಂಕೆ, ಆನಂದ ಗಳು ಪ್ರತಿಮಾದೇವಿಯರನ್ನು ನಿಷ್ಕ್ರಿಯರನ್ನಾಗಿಸಿಬಿಟ್ಟಿದ್ದವು.ಇಷ್ಟು ದಿನ ತನ್ನ ಪತಿಯನ್ನು ಗಣನೆಗೆ ತೆಗೆದುಕೊಳ್ಳುವ ಅವಶ್ಯಕತೆಯಿರಲಿಲ್ಲ. ಈಗ ಹಾಗಲ್ಲ. ಅವನಿಗೂ ತನ್ನ ಯೋಚನೆಯಲ್ಲಿ ಪಾಲು ಬೇಕೆಂಬ ತನ್ನ ಒತ್ತಾಸೆಯನ್ನು ಅವನು ತನ್ನದೇ ಆದ ರೀತಿಯಲ್ಲಿ ಅಭಿವ್ಯಕ್ತಗೊಳಿಸಿ ದ್ದಾನೆ. ಪ್ರತಿಮಾದೇವಿಯರ ಮನಸ್ಸು ಭಾರದಿಂದ ಜಜ್ಜಿಹೋಗಿತ್ತು.

ಈಗೇನು ಮಾಡಬೇಕು ಎಂಬ ಬಗ್ಗೆ ಯೋಚನೆ ಮಾಡುವ ಗೋಜಿಗೆ ಅವರು ಹೋಗಲಿಲ್ಲ. ಚಂದ್ರಾನಿಲರಾಯ ವಿಶ್ವನಾಥನನ್ನು ಅಸೂಯೆ ಯಿಂದ ಕೊಂದು ಹಾಕಿದ್ದರೆ ಅವನು ತನ್ನ ಗಂಡನೆಂದು ಸುಲಭವಾಗಿ ಒಪ್ಪಿಕೊಂಡುಬಿಡಬಹುದಾಗಿತ್ತು ಹಾಗೂ ಆಗ ಅವನ ಬಗ್ಗೆ ತಮಗೆ ಗೌರವ ಹುಟ್ಟುವುದು ಸಾಧ್ಯವಿರಲಿಲ್ಲ ಎಂಬ ವಿಷಯ ಪ್ರತಿಮಾದೇವಿಯ ರಂಥ ವಿಚಾರಶೀಲ ವ್ಯಕ್ತಿಗೆ ಹೊಳೆಯದಿರಲಿಲ್ಲ. ಆದರೆ ವಿಶ್ವನಾಥ ಸತ್ತದ್ದು ಚಂದ್ರಾನಿಲರಾಯನ ಅಸೂಯೆಯಿಂದಲ್ಲ. ಚಂದ್ರಾನಿಲ ರಾಯನ ವರ್ತನೆಯಲ್ಲಿ ಇಷ್ಟುದಿನ ಅವನನ್ನು ಹಿಂಡಿಹಾಕಿದ್ದ ತಾನು ಏನನ್ನೂ ಕಳೆದುಕೊಳ್ಳಲಾರದವನು ಎಂಬ ಭಾವನೆ ಸ್ಪಷ್ಟವಾಗಿತ್ತು. ತನ್ನ ಪ್ರೀತಿಯ ಮಹಾರಾಜ್ಞಿ ಪ್ರತಿಮಾದೇವಿಯರನ್ನು ಕೆಳಗೆ ಬೀಳಿಸಿ, ಅವಮಾನ ಮಾಡಿದ ಎಂಬ ಸಿಟ್ಟಿನಿಂದ, ನೋವಿನಿಂದ ಚಂದ್ರಾನಿಲ ರಾಯ ವಿಶ್ವನಾಥನ ಬುರುಡೆ ತರಿದುಹಾಕಿದ. ಪ್ರತಿಮಾದೇವಿಯರಿಗೆ ತನ್ನ ಗಂಡನ ಬಗ್ಗೆ ಕನಿಕರ ಗೌರವ ಮೂಡಿಬಂತು. ನನ್ನ ಬಗ್ಗೆ ಎಂಥ ನಿಷ್ಠೆ ಈ ಮುಂಡೇದಕ್ಕೆ ಎಂದು ಆಶ್ಚರ್ಯವಾಯಿತು; ವ್ಯಥೆ ಯಾಯಿತು. ಕೀರ್ತಿಯನ್ನು ವಿಶ್ವನಾಥ ಹಿಂಸಿಸಿದಾಗಲೂ ತನಗಾಗಿ ನೋವನ್ನು ನುಂಗಿಕೊಂಡು ಕೂತಿದ್ದ. ಆ ಸೈನಿಕನಲ್ಲಿ ತಾನು ಏನನ್ನೂ ಕಳೆದುಕೊಳ್ಳಲಾರದ ಪಾಪಿ ಎಂಬ ಆತ್ಮಾನುಕಂಪ. ಹೌದು: ಮಾನವ ಏನನ್ನಾದರೂ ಕಳೆದುಕೊಳ್ಳಲು ಬಲ್ಲವನಾಗಿದ್ದರೆ ಮಾತ್ರ ಮಾನವನಾಗಿ ಬಾಳಲು, ಉಳಿಯಲು ಸಾಧ್ಯ. ಇಲ್ಲದಿದ್ದಲ್ಲಿ ಚಂದ್ರಾ ನಿಲರಾಯನಂಥ ಸ್ವಾಮಿಭಕ್ತ ಪ್ರಾಣಿಯಾಗಬಹುದು! ಯಾಕೆ ಹೀಗಾಯ್ತು? ವಿಶ್ವನಾಥ ಒಬ್ಬ ಶ್ರೇಷ್ಠ ವ್ಯಕ್ತಿ ನಿಜ. ಹಾಗಿದ್ದರೆ ನನಗೂ, ಚಂದ್ರಾನಿಲರಾಯನಿಗೂ ಇರುವ ಸಂಬಂಧದ ರಹಸ್ಯ?

ಅವರಿಗೆ ಅರ್ಥವಾಗಲಿಲ್ಲ. ತಾನು ಸತ್ತು ತನ್ನಲ್ಲಿ ನೂರು ಪ್ರಶ್ನೆಗಳನ್ನು ಹುಟ್ಟು ಹಾಕಿದ ವಿಶ್ವನಾಥನ ಬಗ್ಗೆ ಅವರಿಗೆ ಸಿಟ್ಟು ಬಂತು.

ಈಗ ವಿಶ್ವನಾಥ ಸತ್ತುಹೋಗಿದ್ದಾನೆ. ಒಂದು ರೀತಿಯಲ್ಲಿ ಒಳ್ಳೆಯದೆ. ತಮ್ಮ ಬದುಕಿನುದ್ದಕ್ಕು ನೆರಳಾಗಿ ಸುಖಸಂತೋಷಗಳು ಹೀಗೆ ನಿರಾಯಾಸ ಮಾಯವಾದಾಗ ಪ್ರತಿಮಾದೇವಿಯರಿಗೆ ದುಃಖವಾಗ ಲಿಲ್ಲ ಎಂದು ಹೇಳಲು ಬರುವಂತಿಲ್ಲ. ಆದರೆ ಅವಕ್ಕಿಂತ ಮಿಗಿಲಾಗಿ ತನಗೆ—ತನಗೆ ಹೀಗೂ ಆಗಬಹುದೆ ಎಂಬ ಆಶ್ಚರ್ಯ ಅವರನ್ನು ಕಾಡಿತು. ಚಂದ್ರಾನಿಲರಾಯನ ವ್ಯಕ್ತಿತ್ವದಲ್ಲಿ ಮೂಕಪಶುವಿನ ಹಾಗೆ ಮಿಡಿಯುತ್ತಿದ್ದ ಪ್ರೀತಿಯ ಸಸಿ ಈಗ ಕೊನರಿಚಿಗುರಿ ನಿಂತಿದೆ. ಅದನ್ನು ಆಲಂಗಿಸಿ, ಅಪ್ಪಿ ಮುದ್ದಾಡದಿದ್ದರೆ ಅದು ಖಂಡಿತ ಬಾಡಿ ಹೋಗುತ್ತದೆ. ಆದರೂ ಪ್ರತಿಮಾದೇವಿಯರಲ್ಲಿ ನನಗಿದು ಇಷ್ಟುದಿನ ಬೇಡವಾಗಿತ್ತು ಅಥವಾ ಅಷ್ಟಾಗಿ ಬೇಕಾಗಿರಲಿಲ್ಲ ಎಂಬ ನೋವು, ಇಂದಿನ ಅವರ ಬಯಕೆ ಯೊಂದಿಗೆ ದ್ವಂದ್ವ ಹೋರಾಟ ಮಾಡಿತು. ತಮ್ಮ ಸ್ವಾಸ್ಥ್ಯಕ್ಕೆಂದೇ ತಮ್ಮನ್ನು ಇನ್ನೊಂದು ಅಸ್ವಾಸ್ಥ್ಯಕ್ಕೆ ನೂಕಿದ ಗಂಡನ ಬಗ್ಗೆ ಪ್ರತಿಮಾ ದೇವಿಯರಿಗೆ ಅನುತಾಪ. ಅವರನ್ನು ಏನೆಂದು ಬೈದಾರು? ಬೈಯುವು ದಕ್ಕೆ ಪ್ರತಿಮಾರಿಗೆಂದೂ ಅವಕಾಶ ಸಿಕ್ಕಿರಲೇ ಇಲ್ಲ. ಇಂದೂ ಚಂದ್ರಾ ನಿಲರಾಯರು ವಿಶ್ವನಾಥನ ಬಗ್ಗೆ ಬೈಗುಳವೋ, ಹೊಗಳಿಕೆಯೋ ಕೂಡಿ ದಂಥ ಒಂದಾದರೂ ಮಾತನಾಡಿದ್ದರೆ ಪ್ರತಿಮಾರಿಗೆ ರೇಗಿ ಮೊದಲ ಬಾರಿಗೆ ಆಸ್ಫೋಟಗೊಳ್ಳಲು ಅವಕಾಶವಿರುತ್ತಿತ್ತು. ಚಂದ್ರಾನಿಲರಾಯ ರಾದರೊ ಸತ್ತವನ ಹೆಸರನ್ನೇ ಎತ್ತದೆ, ಗಪ್ಪಂತ ದುಃಖ ನುಂಗುತ್ತ ಕುಳಿತುಬಿಟ್ಟಿದ್ದರು. ಅವನನ್ನು ಕೊಂದು ಅವಳಿಗೆ ದುಃಖ ಉಂಟು ಮಾಡಿದೆ ಎಂಬ ಕೊರಗು. ನಾನೇನು ಮಾಡಹೊರಟರೂ ಅವಳಿಗೆ ದುಃಖವೇ ಉಂಟಾಗುತ್ತದಲ್ಲ ಎಂಬ ಅಸಹಾಯಕತೆ. ಮಾತನಾಡುವು ದಕ್ಕೇನಿದೆ? ಅವರಿಗೆ ಈಗ ಕೀರ್ತಿಯೂ ಬೇಡ. ತಮ್ಮ ಪತ್ನಿ ಎಂದಿನ ಹಾಗೆ ಓಡಾಡುತ್ತ, ಎಲ್ಲರ ಮೇಲೂ ತನ್ನ ಮೌನಧಾಳಿ ಮಾಡುತ್ತ, ತನ್ನನ್ನೂ ಅತ್ತಿಂದಿತ್ತ ಓಡಿಯಾಡಿಸುತ್ತಿದ್ದರೆ ಸಾಕಾಗಿತ್ತು. ವಿಶ್ವನಾಥ ಹೋದ. ಹೋದವರು ಮರಳಿ ಬರಲು ಸಾಧ್ಯವೆ? ಬರಲು ಬರುವಂತಿ ದ್ದರೆ ಚಂದ್ರಾನಿಲರಾಯರು ಅವನನ್ನು ಹೆಗಲ ಮೇಲೆ ಹೊತ್ತು ತಂದು ಬಿಡುತ್ತಿದ್ದರು, ಅವನು ಬರುವುದಿಲ್ಲವೆಂದು ಜಗ್ಗಿ ಹಠಮಾಡಿದರೂ.

ತಂದೆಯ ಅಸಹಾಯ ವೇದನೆಯನ್ನು, ತಾಯಿಯ ಅಸ್ಪಷ್ಟವಾದರೂ, ಕ್ರೂರವಾದ ವೇದನೆಯನ್ನೂ ಕಂಡ ಕೀರ್ತಿ ನಲುಗಿಹೋದಳು. ಇಂಥ ಸನ್ನಿವೇಶವೊಂದಕ್ಕೆ ತಾನು ಸಾಕ್ಷಿಯಾಗಬಹುದೆಂದು ಅವಳು ನಿರೀಕ್ಷಿ ಸಿಯೇ ಇರಲಿಲ್ಲ. ಕ್ಷಣಮಾತ್ರದಲ್ಲಿ ಬಂದು ಮರೆಯಾದ ಈ ಪವಾಡದ

ಮಹಾಪೂರವನ್ನು ಅರ್ಥಮಾಡಿಕೊಳ್ಳಲು ಬೇಕಾದ ತಾತ್ವಿಕ ಶಕ್ತಿಯಾಗಲಿ, ನಿರ್ಲಕ್ಷಿಸುವ ಯೋಗಿಯ ಚಿದ್ಸಂಭ್ರಮವಾಗಲೀ ಅವಳಲ್ಲಿರಲಿಲ್ಲ. ಅವಳ ಮನತುಂಬಿ ಅನುರಣನ ಮಾಡುತ್ತಿದ್ದುದು, ತಾನು ವಿಶ್ವನಾಥನ ಬಿಸಿಯಾದ ತೆಕ್ಕೆಯಲ್ಲಡಗಿ ಕಿಂಮನೆ ಕೀರುತ್ತಿದ್ದಾಗ ಅವಳನ್ನು ತಗಲಿ ರೋಮಾಂಚನಗೊಳಿಸುತ್ತಿದ್ದ ಅವನ ಬಿಸಿಯುಸಿರ ನಿರಾಳಸ್ಪರ್ಶ. ತನ್ನಲ್ಲಿ ನೂರು ಆಸೆಗಳನ್ನು ತರಂಗಿಸಿ, ತಾನು ನಿರಾಳ ಈಸಾಡಬಲ್ಲಂಥ ಅವನ ಬಾಹುಬಂಧನಕ್ಕೆ ಸಾಟಿಯಲ್ಲ ಎಂಬುದು ಅವಳ ಅನುಭವಜನ್ಯ ಸತ್ಯವಾಗಿತ್ತು. ಅವನು ನೀಡುತ್ತಿದ್ದ ಆನಂದಕ್ಕೆ ಅಡ್ಡಿತರುತ್ತಿದ್ದ, ಅದರ ಅಂಗವೇ ಆಗಿದ್ದ ಅವನ ಪೈಶಾಚಿಕ ಹಿಂಸೆ ಅವಳಲ್ಲಿ ಉನ್ಮಾದ ತಂದಿತ್ತು. ತನಗಿನ್ನು ಜೀವನದಲ್ಲಿ ದುಃಖ ಮಾತ್ರ ಎಂಬ ತೀರ್ಮಾನಕ್ಕೆ ಅವಳನ್ನು ತಳ್ಳಿಬಿಡುವಷ್ಟು ಹಿತವಾಗಿತ್ತು ಅವನ ಐದು ನಿಮಿಷದ ಪ್ರೇಮ ಪ್ರಕರಣ. ಇಂಥವನು ಇದ್ದನೆಂದಲ್ಲವೆ ತಾಯಿ ಅಪ್ಪನಂಥ ಸೊಬಗನನ್ನು ಮರೆತು ಹಾಯಾಗಿ ಹಾರಾಡುತ್ತಿದ್ದಳು! ನೂರು ನಾಗರಾಜರು ಒಬ್ಬ ವಿಶ್ವನಾಥನಿಗೆ ಸಮವಾಗಲಾರರು. ಅಂದರೆ ಕೀರ್ತಿ ನಾಗರಾಜನಿಗೆ ಇನ್ನು ನೀನು ಜಾಗ ಖಾಲಿ ಮಾಡು, ಗಾಡಿಬಿಡು ಎಂದು ಹೇಳಬೇಕೆಂದುಕೊಂಡಳು ಎಂದರ್ಥವಲ್ಲ. ಯಾಕೆಂದರೆ ಅವಳು ವಿಶ್ವನಾಥನ ಬಗ್ಗೆ ಯೋಚಿಸುತ್ತಿರುವಾಗ, ನಾಗರಾಜನ ಗುಣಗಳನ್ನು ವಿವೇಚಿಸಿ, ಅವುಗಳನ್ನು ವಿಶ್ವನಾಥನ ಗುಣಗಳೊಂದಿಗೆ ಹೋಲಿಸಿ, ಅಳೆದೂ ಸುರಿದೂ ಮಾಡುತ್ತಿರಲಿಲ್ಲ. ಅಂಥ ನೀಚಗುಣ ಅವಳಿಗಿನ್ನೂ ಬಂದಿರದಷ್ಟು ಶುದ್ಧವಾಗಿದ್ದಳವಳು. ನಾಗರಾಜ ಈ ಕ್ಷಣಕ್ಕೆ ಅವಳಿಗೆ ಗೌಣ. ಹಾಗೆ ನೋಡಿದರೆ ವಿಶ್ವನಿಗಿಂತಲೂ ನಾಗರಾಜನೆ ಅವಳಿಗೆ ಚಂದ ಕಾಣುತ್ತಾನೆ. ವಿಶ್ವನಾಥನಿಗೊಂದಿದ್ದಾಗ ಅವಳಿಗನಿಸುತ್ತಿದ್ದುದು ತಾನು ತನ್ನಂತೆಯೇ ಇರುವ ಇನ್ನೊಬ್ಬ ಮಾನವನೊಂದಿಗೆ ಇದ್ದೇನೆ ಅನ್ನುವುದು. ಆ ಮನುಷ್ಯ ಅವಳಿಗಿಂತ ಸಾವಿರಾರು ವರ್ಷಗಳ ಹಳೆಯ ನಾಗರಿಕತೆಗೆ ಸೇರಿದ್ದವನಿರಬಹುದು. ಆ ಕಾರಣದಿಂದಾಗಿ ಹೆಚ್ಚು ಸತ್ಯವಂತನೂ, ತೀಕ್ಷ್ಣನೂ ಆಗಿದ್ದಿರಬಹುದು. ಆದರೂ ಅವನು ಮನುಷ್ಯ. ಅವನು ನೀಡಿದ್ದು ಕ್ಷಣಿಕ ಸುಖ ಎಂಬ ಸತ್ಯ ಅವಳಿಗೇ ಅರಿವಾಗಿತ್ತು. ಅವನು ಅವಳಿಗೆ ನೀಡಿದ್ದ ಬಯಕೆಯ ಪೂರೈಕೆಯಲ್ಲಿ ತನ್ನ ತಾಯಿ ಏನನ್ನು ಕಂಡು ಇವನಿಗಾಗಿ ಬಿದ್ದು ಸಾಯುತ್ತಾಳೆ ಎಂದು ಅವಳನ್ನು ಅನೇಕಸಾರಿ ಕಾಡಿದ್ದ ನಿಗೂಢ ರಹಸ್ಯವನ್ನು ಭೇದಿಸಿದ್ದ ಖುಶಿಯಿತ್ತು. ಯಾವುದೋ ಒಂದು ಸೈದ್ಧಾಂತಿಕ ಸತ್ಯಕ್ಕಾಗಿ ಹಲವು ವರ್ಷ ನಿಷ್ಠೆಯಿಂದ ದುಡಿದು ನಿರಾಶನಾಗಿದ್ದ ತಾತ್ವಿಕನಿಗೆ ಅವನು ಬಯಸಿದ ಸಿದ್ಧಿ ಇದ್ದಕ್ಕಿದ್ದಂತೆ ಒಲಿದುಬಂದಾಗ ಉಂಟಾಗುವ ಸಂತೋಷಕ್ಕೆ ಹೋಲಿಸುವಂಥದ್ದು. ವಿಶ್ವನಾಥ ತನಗೆ ನಿಲುಕದವನು ಎಂದು

ಅವಳಿಗೆಂದೂ ಅನಿಸಿರಲಿಲ್ಲ. ಅವನ ಬಗ್ಗೆ ಅವಳಿಗಿದ್ದುದು ಕುತೂಹಲ. ನಾಗರಾಜನ ಬಗ್ಗೆ ಯಾದರೋ ಭಯ ; ತನಗೆ ಅರ್ಥವಾಗದ್ದು ತನ್ನದಾಗಿ ಬಿಟ್ಟಿದೆಯಲ್ಲ ಎಂಬ ಕಾತರ; ಸಿಕ್ಕಿಬಿಟ್ಟಿದೆಯಲ್ಲ ಎಂಬ ಭಯವೂ ಇರಬಹುದು. ಅವನ ಸಾಮೀಪ್ಯ ಅವಳಿಗೆ ಲಭ್ಯವಾದ ಮೇಲೆ ಅವನ ಬಗ್ಗೆ ಅವಳಿಗಿದ್ದ ಭಯದ ಗಾತ್ರವೇನೋ ಕಡಿಮೆಯಾಗಿತ್ತು. ಆದರೆ ಅದರ ತೀಕ್ಷ್ಣತೆ ಪ್ರಖರವಾಗುತ್ತಲೂ ಇತ್ತು. ಇಂದು ವಿಶ್ವನಾಥ ನೀಡಿದ ಸುಖ ಇಂಥ ಸುಖಕ್ಕೆ ನಾನು ಭಯಬೀಳಬೇಕಾಗಿಲ್ಲವಲ್ಲ ಎಂಬ ಮಾನಸಿಕ ನಿಶ್ಚಿಂತೆಯ ಅಭಿವ್ಯಕ್ತಿಯೂ ಇರಬಹುದು. ಓ ನಾಗರಾಜನ ಬೂದುಗಣ್ಣುಗಳು ! ಅವನ ಪುಸ್ತಕ ಪಿಶಾಚಿತ್ವ ! ಅವನ ಅರ್ಧ ಅರ್ಥವಾಗುವ ಮಾತು—ಎಲ್ಲವೂ ಅವಳಿಗೆ ಅವನು ಬೇಕು, ಸಿಕ್ಕಿದ್ದಾನೆ, ಹಾಗಿದ್ದರೆ ನನ್ನಲ್ಲಿಯೆ ಉಳಿಯುವನೆ ಇತ್ಯಾದಿ ಹಲವು ಭಾವ ತರಂಗಗಳನ್ನೆಬ್ಬಿಸಿಬಿಡುತ್ತಿದ್ದವು. ಈಗ, ಮಾನಸಿಕ ಸಂತಸದ, ಬೌದ್ಧಿಕ ಹಿಂಸೆಯ ಸ್ಥಿತಿಯಲ್ಲಿದ್ದ ಅವಳು ರಾಜಾ ಎಂದು ಕೂಗಿ ಅವಳನ್ನಪ್ಪಿಬಿಟ್ಟಿದ್ದು ಆಶ್ಚರ್ಯದ ಸಂಗತಿಯೇನಲ್ಲ. ಅವಳ ಮೂಕವೇದನೆಯ ಅಳಲಿಗೆ ಪ್ರತಿಮಾದೇವಿಯರ ಕರುಳೂ ಚುರ್ ಎಂದಿತು. ಚಂದ್ರಾನಿಲರಾಯರ ಮಾತು ಬೇಡ. ಅವರೀಗ ಪ್ರತಿಮಾದೇವಿಯರ ದುಃಖ ಬಿಟ್ಟು ಬೇರೆಲ್ಲರ ಅಳಲಿಗೂ ಅಪರಿಚಿತರು. ಕಿವುಡರು. ನಾಗರಾಜನೊಬ್ಬನೆ ಅವಳ ಆಸರೆ.

ನಾಗರಾಜನಿಗೆ ಏನು ಮಾಡಬೇಕು, ಬೇಡ ಎನ್ನುವುದು ತೋರಲಿಲ್ಲ. ಕೀರ್ತಿಗೆ ವಿಶ್ವನಾಥನ ಹಿಂಸೆಯಿಂದ, ಅವನ ಅನಿರೀಕ್ಷಿತ ನಿರ್ಗಮನದಿಂದ ಉಂಟಾದ ಆಘಾತಕ್ಕಿಂತ ಹೆಚ್ಚಾಗಿ ನಾನು ಆಗ ಸುಮ್ಮನಿದ್ದೆ, ಅವಳನ್ನು ಬಿಡಿಸಿಕೊಳ್ಳಲಿಲ್ಲ, ಅಸೂಯೆಯಿಂದ ಅವನೊಡನೆ ಜಗಳಾಡಲಿಲ್ಲ ಎಂದು ನೋವಾಗಿದೆ ಎಂದು ಅವನಿಗೆ ಅರಿವಾಗಿತ್ತು. ಅವಳ ಮನಸ್ಸಿನಲ್ಲಿ ನುಗ್ಗಿಬಿಡುವ ನೂರು ವಿಚಿತ್ರ ಭಾವನೆಗಳಿಗೆ ಹೊಯ್‌ಕೈಯಾಗುವ ನೈತಿಕಶಕ್ತಿ ತನಗಿಲ್ಲವೆಂದು ಅವನಿಗೇ ತಿಳಿದಿತ್ತು. ಅದು ಇಲ್ಲವೆಂದು ದುಃಖ. ಅವಳ ಗಂಡನಿಗಾಗಿ, ಇನ್ನೊಬ್ಬರನ್ನು ಕಂಡು ಅಸೂಯೆ ಪಡುತ್ತಿದ್ದ, ಆದರೂ ಅಸಹಾಯಪಶುವಾಗಿದ್ದ ಚಂದ್ರುವಾದರೂ ತನಗಿಂತ ಲೇಸಲ್ಲವೆ ಎಂದು ಕೀರ್ತಿಯಾದರೂ ಅಂದುಕೊಳ್ಳುವುದಿಲ್ಲವಲ್ಲ ಎಂಬ ಅಸಹಾಯಕತೆ ಅವನನ್ನು ಕಿತ್ತು ತಿನ್ನುತ್ತಿತ್ತು. ಹಾಗಾಗಿದ್ದರೆ ಇಂದಿನ ವಿಷಮತೆ ಸ್ವಲ್ಪವಾದರೂ ತಗ್ಗುತ್ತಿತ್ತೇನೋ. ಈಗ ಚಂದ್ರು ಇದ್ದಿದ್ದರೆ ಹೇಗೆ ನಡೆದುಕೋತಿದ್ದ? ಪ್ರಾಯಶಃ ಆ ಪ್ರಶ್ನೆಯೇ ಅಸಂಬದ್ಧ : ಅವನು ಇಲ್ಲಿನ ಈ ಕೃತ್ಯಕ್ಕೆ ಸಾಕ್ಷಿಯಾಗಿರಲು ಅವಳು ಬಿಡುತ್ತಲೇ ಇರಲಿಲ್ಲ ಕಾಣುತ್ತದೆ.

ಕೀರ್ತಿಗೂ ನಾಗರಾಜ ನಿರ್ಲಿಪ್ತ ಋಷಿಯ ಹಾಗೆ ಕುಳಿತಿದ್ದುದರಿಂದ

ದುಃಖವಾಗಿತ್ತು. ಅವನೊಡನೆ ಆ ವಿಷಯವಾಗಿ ಜಗಳವಾಡುವ ಹಾಗೆಯೂ ಇಲ್ಲ. ಆಡಿದರಾದರೂ ಅವಳ ದುಃಖ ಕಡಿಮೆಯಾಗಬಹುದಿತ್ತು. ಅವಳ ಅಸಹಾಯಕತೆ ಕಣ್ಣುಗಳಲ್ಲಿ ನೀರಾಗಿ ದ್ರವಿಸಿ ಹರಿಯುತ್ತಿರುವುದನ್ನು ಗಮನಿಸಿದ. ಅವನು ಅವಳನ್ನು ತಬ್ಬಿ ತನ್ನ ಕೋಣೆಯತ್ತ ನಡೆಸಿಕೊಂಡು ಹೊರಟ. ಅವಳೂ ಬೇಡವೆನ್ನಲಿಲ್ಲ. ಪ್ರತಿಸಾರಿಯೂ ಅವನು ಹಾಗೆ ಮಾಡಿದಾಗ ಒಲ್ಲೆ ಎಂದು ಮಗುವಿನ ಹಾಗೆ ಹಠಮಾಡುತ್ತಿದ್ದವಳು ಸಲೀಸಾದುದನ್ನು ಕಂಡು ಅವನಿಗೂ ಹಾಯಾಯಿತು. ಈ ಮಗು ಇನ್ನೂ ದೊಡ್ಡದಾಯಿತು ಎಂದು ಅವನಿಗನಿಸದಿದ್ದರೂ, ಈ ಹೊತ್ತಾದರೂ ತನ್ನ ಬಯಕೆಗಳನ್ನು ಮುಚ್ಚಿಡದೆ ನೇರವಾದಳಲ್ಲ ಎಂದು ಸಂತೋಷವಾಯಿತು. ಇದರ ಜೊತೆಗೇ ಭಯ ಆತಂಕ: ಹೀಗೆ ನೇರವಾಗಿ ಬಯಸುವುದು ಕೀರ್ತಿಯ ವ್ಯಕ್ತಿತ್ವಕ್ಕೇ ವಿರುದ್ಧ; ಅಂದರೆ ನಿಜವಾದ ಕೀರ್ತಿ ಹತಾಶಳಾಗಿಬಿಟ್ಟಳೆ?

ಅವರಿಬ್ಬರೂ ಹಾಗೆ ನಡೆಯುತ್ತಿದ್ದುದನ್ನು ಕಂಡು ಪ್ರತಿಮಾದೇವಿಯರ ದುಃಖ ಉಮ್ಮಳಿಸಿ ಬಂತು. ತನ್ನ ಪ್ರಿಯಕರ ಸತ್ತುಹೋದ. ಚಂದ್ರಾನಿಲರಾಯ ಮರ್ಮಾಘಾತವಾದವನ ಹಾಗೆ ಸತ್ತೇಹೋಗಿದ್ದಾನೆ. ಈ ಕೀರ್ತಿ ಮಾತ್ರ ನಾಗರಾಜನ ಹಿಂದೆ ಅವರ ಕಣ್ಣಲ್ಲಿ ನಿಗಿನಿಗಿ ಕೆಂಡಗಳು. ಕ್ಷಣಕ್ಷಣಕ್ಕೂ ಅವರ ನಿರ್ಧಾರ ಸ್ಫುಟಗೊಳ್ಳುತ್ತಿತ್ತು, ಉಕ್ಕಿನ ಹಾಗೆ. ಅದನ್ನು ಗಮನಿಸಿದ ಚಂದ್ರಾನಿಲರಾಯರು ಸ್ವಲ್ಪ ಹಾಯಾಗಿ ಜೀವಕಳೆ ಪಡೆಯಹತ್ತಿದರು, ಉಸಿರಾಡಹತ್ತಿದರು.

ರೂಮಿನಲ್ಲಿ ನಾಗರಾಜ ಕೀರ್ತಿ ಒಬ್ಬರನ್ನೊಬ್ಬರು ಅಪ್ಪಿ ಮಲಗಿದ್ದರು. ಕೀರ್ತಿಯಂತೂ ನಾಗರಾಜನ ಕೈಕಾಲು ದೇಹಕ್ಕೆ ಬಳ್ಳಿಯಂತೆ ಹೆಣೆದುಕೊಂಡುಬಿಟ್ಟಿದ್ದಳು. ಇದು ಈ ದಿನದ ವಿಶೇಷವೇನಲ್ಲ. ದಿನ ನಿತ್ಯ ನಡೆಯುವುದೇ, ಕೀರ್ತಿಯ ಇಂದಿನ ಮನಃಸ್ಥಿತಿಯಲ್ಲಿ ತನ್ನ ಪಕ್ಕದಲ್ಲಿರುವವನು ನಾಗರಾಜನೇ ಆಗಬೇಕೆಂಬ ನಿಯಮವೇನಿರಲಿಲ್ಲ. ಯಾವ ಗಂಡಾದರೂ ಸರಿ. ಆದರೆ ಇಂದು ರೂಮಿನ ಬಾಗಿಲು ಮುಂದೆ ಮಾಡಿರಲಿಲ್ಲ. ಮಾಡಬೇಕೆಂದು ಇಬ್ಬರಿಗೂ ಅನಿಸಲಿಲ್ಲ. ಅನಿಸುವುದಕ್ಕೆ ಕೀರ್ತಿ ಸತ್ತುಹೋಗಿದ್ದಳು. ನಾಗರಾಜನಿಗೆ ಏನಾಗುತ್ತದೋ ಆಗಲಿ ಎಂಬ ವಿಧಿಪ್ರಜ್ಞೆ. ಆಗೇಹೋಗಲಿ ಎಂಬ ದೃಢನಿರ್ಧಾರ. ಅವನು ಪ್ರತಿಮಾದೇವಿಯರ ಕಣ್ಣಲ್ಲಿದ್ದ ಬೆಂಕಿಯ ಕಿಡಿಗಳನ್ನು ಗಮನಿಸಿದ್ದ. ಅದರ ಶಾಖಕ್ಕೆ ಮೈಯನ್ನೂ ಚೆಲ್ಲಿದ್ದ. ಅವರ ನಿರ್ಧಾರದ ಕಾಠಿಣ್ಯವನ್ನು ಅರಿಯದವನು ಅವನಲ್ಲ.

ಮಗುವಿನ ಹಾಗೆ ತನ್ನ ಆಸರೆಯಲ್ಲಿ ಸಮಾಧಾನ ಬಯಸಿದ ಕೀರ್ತಿಯನ್ನು ಕಂಡು ನಾಗರಾಜನಿಗೆ ಹೇಗೆ ಹೇಗೋ ಆಯಿತು. ಬದುಕಿನ

ಬಗ್ಗೆ ಅಷ್ಟೊಂದು ಉತ್ಸಾಹದಿಂದ ಚಿಲುಮೆಯಾಗುತ್ತಿದ್ದ ಈ ಮುದ್ದು ಕೀರ್ತಿಗೆ ಬದುಕು ಕೊಟ್ಟಿದ್ದು ಬರಿಯ ನಿರಾಸೆ. ಅವಳ ನಿರಾಸೆಯಲ್ಲಿ ಅವಳಾಗಿ ಬಯಸಿ ಪಡೆದುಕೊಂಡದ್ದೆಷ್ಟು? ಅವಳದೇನೂ ತಪ್ಪಿಲ್ಲದೆ ಅವಳ ಮೇಲೆ ಆತುಕೊಂಡಿದ್ದೆಷ್ಟು?

ಅವಳ ಈ ಸ್ಥಿತಿಯಲ್ಲಿ ತನ್ನ ಜೀವನದ ಗೊಂದಲದ ಬಗ್ಗೆ ಚಿಂತನೆ ಮಾಡುವಷ್ಟಾದರೂ ಬೌದ್ಧಿಕತೆ ಅವಳಿಗಿದ್ದಿದ್ದರೆ ಅವಳೂ ನಾಗರಾಜನ ಹಾಗೆ ತನ್ನ ನೋವನ್ನು ಉದಾತ್ತೀಕರಿಸಿಕೊಂಡು ತಾತ್ವೀಕರಿಸುತ್ತ ಸುಳ್ಳು ಸುಳ್ಳೇ ಸಮಾಧಾನ ಪಡೆಯಬಹುದಿತ್ತು. ಜೀವನದ ಕಷ್ಟನಷ್ಟಗಳನ್ನು ಅರ್ಥಮಾಡಿಕೊಳ್ಳುವ ಸೋಗಿನಲ್ಲಿ, ಬುದ್ಧಿಜೀವಿಯಾಗಿ ಅವುಗಳಿಂದ ಓಡಬಹುದಾಗಿತ್ತು. ಆದರೆ ಅವಳು ಕೀರ್ತಿ: ಬದುಕನ್ನು ಉಂಡೆ ಉಂಡೆಯಾಗಿಯೇ, ಪೂರ್ತಿಯಾಗಿಯೆ ನುಂಗಬಯಸಿದವಳು. ಬದುಕನ್ನೂ ಮೀರಿ ಬೆಳೆಯಬೇಕೆಂದುಕೊಂಡವಳು, ಹನುಮಂತನನ್ನು ನುಂಗಿದ ಸುರಸೆಯ ಹಾಗೆ. ಈಗ, ಹೀಗೆ ಹಠಾತ್ತನೆ ನಿರಾಶೆ ಸುರಿದಾಗ, ಅವಳ ಬಯಕೆಯ ಕುಡಿ ಕತ್ತರಿಸಿಹೋದಾಗ ಅವಳು ಮಾಡಬಹುದಾದರೂ ಏನು?

ಹೊರಗೆ ಧಾರಾಕಾರ ಮಳೆ. ಅದರ ಮೊರೆತದ ಭೋರಿನಲ್ಲಿ ಆಳುಗಳು ವಿಶ್ವನಾಥನ ದೇಹವನ್ನೆಳೆಯುತ್ತಿದ್ದ ದರಸದ್ದು ಕೀರ್ತಿಗೂ, ನಾಗರಾಜನಿಗೂ ಮುಸುಕು ಮುಸುಕಾಗಿ ಕೇಳಿಸುತ್ತಿತ್ತು. ಪ್ರತಿಮಾದೇವಿಯರು ಆಳುಗಳಿಗೆ ಹಾಗೆ ಮಾಡು, ಹೀಗೆ ಮಾಡು ಎಂದು ನಿರ್ದೇಶನ ನೀಡುತ್ತಿದ್ದರು. ಚಂದ್ರಾನಿಲರಾಯರು ಆಳುಗಳಲ್ಲಿ ಒಬ್ಬರಾಗಿ ತಮ್ಮ ಪಾಲಿನ ಕರ್ತವ್ಯವನ್ನು ಮುಗಿಸುತ್ತಿದ್ದರು. ಅವರಿಗೆ ಪ್ರತಿಮಾದೇವಿಯರು ಆಜ್ಞೆ ನೀಡುತ್ತಿದ್ದುದರಿಂದ ಮಬ್ಬು ಕಳೆದಿತ್ತು.

ಈಗ ತಾನು ಕೀರ್ತಿಯ ಬಳಿಯಲ್ಲಿಯೆ ಇರಬೇಕು ಅನಿಸಿತು ನಾಗರಾಜನಿಗೆ. ತನ್ನ ಸಖ್ಯ ಅವಳಿಗೆ ಉಪಮಾತೀತ ಸಮಾಧಾನ ನೀಡುತ್ತದೆ, ಆಘಾತವಾಗಿದ್ದ ಅವಳ ಮನಸ್ಸಿಗೊಂದು ಥರ ಶಾಂತಿ ದೊರಕುತ್ತದೆ ಎಂದು ಅವನಿಗೇನೂ ಅನಿಸಲಿಲ್ಲ. ಆದರೂ ಅವಳ ವೇದನೆಯಾದರೂ ಕಡಿಮೆಯಾಗಬಹುದೆಂಬ ಆಸೆ ಅವನದು. ನಾಗರಾಜ ಇನ್ನು ಮುಂದೆ ಅವಳಿಗೆಂದೂ ನೋವಾಗುವ ಹಾಗೆ ನಡೆದುಕೊಳ್ಳಬಾರದೆಂದು ತೀರ್ಮಾನಿಸಿದ.

ಅವನ ಈ ತೀರ್ಮಾನದಲ್ಲಿ ಆತ್ಮಪ್ರಶಂಸೆಯ ಲೇಶಕೂಡ ಇರಲಿಲ್ಲ. ಅವಳ ಬದುಕಿನ ವೈವಿಧ್ಯಕ್ಕು, ಭವ್ಯವಸ್ತಾರಕ್ಕೂ ಹರಡಿಕೊಳ್ಳುವ ಚೈತನ್ಯವಾಗಲಿ, ಅದರ ಆಳದ ತೀವ್ರತೆಗೆ ಹೊಯ್‌ಗೈಯಾಗುವ ಕೆಚ್ಚಾಗಲೀ ತನಗಿಲ್ಲವೆಂಬುದು ಅವನಿಗೆ ಸ್ಪಷ್ಟವಾಗಿಯೂ ಅರಿವಾಗಿತ್ತು.

ತಾನು ಅವಳಿಗೆ, ಅವಳ ಬದುಕಿಗೆ ಸತ್ಯವಾಗಲಿಲ್ಲ ಎಂಬ ಕೊರಗಿನೊಂದಿಗೇ ಮೂಡಿ ಬರುತ್ತಿದ್ದ ಸತ್ಯವಾಗಿರಲಾರೆ, ಬಾರದು ಎಂಬ ನೋವು ; ಈ ನೋವು ಕೊರಗಿನ ನಡುವೆ ನಾಗರಾಜ ತನ್ನ ಮರಂತಪ ತೀವ್ರತೆಯಲ್ಲಿ ಕರಗಿಹೋಗಿದ್ದ. ಅವನಿಗೆ ಚಂದ್ರಾನಿಲರಾಯರ ವ್ಯಕ್ತಿತ್ವದ ಬಗ್ಗೆ ಹೆಮ್ಮೆ, ಅಸೂಯೆಯಾಗತೊಡಗಿತು. ಆ ದುಷ್ಟ ಪ್ರಾಣಿಯಲ್ಲಿ ತನ್ನ ಹೆಂಡತಿಯ ಬಗ್ಗೆ ಇದ್ದ ಕಳಕಳಿ, ಸ್ವಾಮಿಭಕ್ತಿ, ನಿಷ್ಠೆ, ಸ್ವಭಾವಜನ್ಯ ಮುಗ್ಧತೆ ಮತ್ತು ಸನ್ನಿವೇಶಕ್ಕೆ, ಪರಿಸರಕ್ಕೆ ಸ್ಪಂದಿಸುತ್ತಿದ್ದ ತಾಕ್ಷಣಿಕತೆ ನಾಗರಾಜನಲ್ಲಿ ವಿಸ್ಮಯವನ್ನುಂಟುಮಾಡಿದ್ದವು. ಎಂಥ ಮನುಷ್ಯ ಎಂದು ಉದ್ಗಾರವನ್ನೇನೂ ಅವನೆಳೆಯದಿದ್ದರೂ ಹಾಗೆನ್ನಬೇಕೆಂದು ಎಷ್ಟೋಬಾರಿ ಅವನಿಗನಿಸುತ್ತಿತ್ತು. ಆತ್ಮಾನುಕಂಪೆ, ಆತ್ಮರತಿಯಲ್ಲಿ ಕ್ರೀಡಿಸುತ್ತಿದ್ದ ನಾಗರಾಜನಿಗೆ, ಕೀರ್ತಿಯ ದುಃಖದ ಮಜಲು ತನ್ನ ವಿದ್ಯೆಗೆ, ಬುದ್ಧಿವಂತಿಕೆಗೆ ನಿಲುಕದ ನಿಜ ಎಂಬ ನೈಜಸತ್ಯ ಅರ್ಥವಾಗದೆ ಇರಲಿಲ್ಲ. ಅವಳೆದೆಯ ರುಂದ್ರಸಾಗರದಲ್ಲಿ ಎದ್ದ ಉಲ್ಲೋಲಕಲ್ಲೋಲ ಶತಸಹಸ್ರಗಳ ಆರ್ಭಟೆಯ ನಡುವಿನಲ್ಲಿ ಸ್ತಂಭೀಭೂತನಾಗಿದ್ದ ಅವನಿಗೆ ಎಲ್ಲೆಲ್ಲೋ ಒಂದುಸಾರಿ ಅನ್ನುವ ಹಾಗೆ ಕಾಣಿಸಿಕೊಂಡು, ಮರುಕ್ಷಣದಲ್ಲಿ ಮಾಯವಾದ ಕೀರ್ತಿ ಅಗಮ್ಯವಾಗಿಬಿಡುತ್ತಿದ್ದಳು. ಆದರೆ ಅವನಿಗೆ ಕಾಣುತ್ತಿದ್ದುದು. ಅವಳ ಭಾವನೆಗಳು ಮಾತ್ರ. ಕೀರ್ತಿಯ ಪ್ರತಿರೂಪ ಅವನಿಗೆ ದಕ್ಕುತ್ತಲೇ ಇರಲಿಲ್ಲ.

ತಾನು ಹೀಗೆ ಕೀರ್ತಿಯನ್ನು ತಬ್ಬಿ ಮಲಗುತ್ತಲೇ ಇರುವುದು ಎಷ್ಟು ದಿನಗಳಿಗೆ? ನಾನು ತಪ್ಪು ಮಾಡುತ್ತಿದ್ದೇನೆ, ಅವಳ ನೋವಾದ ಮನಸ್ಸಿಗೆ ಆಹ್ಲಾದ ನೀಡುವ ನೆಪದಲ್ಲಿ ತನ್ನ ಸುಪ್ತಕಾಮನೆಗಳನ್ನು, ಬಯಕೆಗಳನ್ನು ತೀರಿಸಿಕೊಳ್ಳುತ್ತಿದ್ದೇನೆ ಎಂಬ ಭಯ ಅನುಮಾನ ಅವನಿಗೆ. ಹಾಗೆ ತಾನು ತನ್ನ ಸುಪ್ತಕಾಮನೆಗಳಿಗೆ ನೈಜವಾಗಿರಬೇಕೆಂದು ಅವನಿಗೆಂದೂ ಅನಿಸಿರಲಿಲ್ಲ ಎನ್ನುವುದಕ್ಕೆ ಈ ಮಾತು ಹೇಳುತ್ತಿಲ್ಲ. ಅವಳ ವ್ಯಕ್ತಿತ್ವಕ್ಕೆ, ಮತ್ತು ತನ್ನ ವ್ಯಕ್ತಿತ್ವಕ್ಕೆ ನೈಜವಾಗಿರಬೇಕಾದರೆ, ವಿದ್ಯೆ ನಾಗರಿಕತೆಗಳಿಂದ ಪರಿಷ್ಕಾರಗೊಂಡ ತನ್ನ ಈ ಹೊಲಸು ಬದುಕನ್ನು ಬಿಟ್ಟು, ಬಿಸುಡಿ, ಬೆತ್ತಲೆಯ ಭವ್ಯಗೋಮಟನಾಗಬೇಕು. ತನ್ನ ಬತ್ತಲೆಯಲ್ಲೂ ಗೊಮ್ಮಟನಿಗಿರುವ ನಿರ್ಲಿಪ್ತತೆಯನ್ನು ಸಾಧಿಸಬೇಕು. ಪ್ರವಾಸಕ್ಕೆಂದು ಬಂದ ಹುಡುಗಿಯರು ತನ್ನ ಮರ್ಮಾಂಗವನ್ನು ಚುಂಬಿಸಿದಾಗಲೂ ನಿರ್ಲಿಪ್ತ ನಿರ್ಗುಣನಾಗಿರುವ ಗೊಮ್ಮಟನ ಹಾಗೆ ತಾನು ಜಗಕೆ ಜಗನಕ್ಕರೂ ಕೀರ್ತಿಯನ್ನು ತಬ್ಬಿ ಮಲಗಬೇಕು. ಅದಕ್ಕಿಂತ ಮಿಗಿಲಾಗಿ ಜಗತ್ತು ನಗುತ್ತಿದೆ ಎಂದೂ ಯೋಚಿಸಬಾರದು. ಹಾಗೆ ಮಲಗುವ ಮೊದಲು ತಾನು ಮಾಡುತ್ತಿರುವುದು ಸರಿಯೆ ತಪ್ಪೆ ಎಂಬ ಗೊಂದಲ

ತನಗಾಗಬಾರದು. ಆ ಗೊಂದಲಗಳೆಲ್ಲವನ್ನೂ ದಾಟಿ ತಾನು ಕೀರ್ತಿಯ ಪ್ರೇಮಲೋಕದಲ್ಲಿ ವಿಹರಿಸಬೇಕು, ಶಿವ ಜಗತ್ತನ್ನೇ ಮರೆತು ಪಾರ್ವತಿಯ ಕುಚಗಳ ಮೇಲೆ ಚಿತ್ರಬಿಡಿಸುತ್ತಿದ್ದನಂತೆ, ಹಾಗೆ. ಆಗ ಮಾತ್ರ ನಾನು ಕೀರ್ತಿಯ ಪ್ರೀತಿಗೆ ಅರ್ಹನಾಗುತ್ತೇನೆ. ಅವಳನ್ನು ಪ್ರೀತಿಸುವ ನೈತಿಕ ಹಕ್ಕನ್ನು ಪಡೆಯುತ್ತೇನೆ.

ಕೀರ್ತಿಯ ಕೂದಲಿನಲ್ಲಿ ಕೈಯಾಡಿಸುತ್ತಿದ್ದಂತೆ ನಾಗರಾಜನಿಗೆ ಮೈಜುಂ ಎಂದಿತು : ತನ್ನ ವಿದ್ಯೆಯಿಂದ ಕಲುಷಿತಗೊಂಡ ಈ ಬದುಕನ್ನು ಹರಿದು ಬೀಸಾಡಬೇಕೆನ್ನುವುದನ್ನೇ ಎಷ್ಟೊಂದು ನಯವಾಗಿ ಬುದ್ಧಿವಂತಿಕೆಯಿಂದ ಕಿಲಾಡಿತನದಿಂದ ಯೋಚಿಸುತ್ತಿದ್ದೇನೆ ಎಂದು ಅವನಿಗೆ ನಾಚಿಕೆಯಾಯಿತು. ತನ್ನ ಅಪ್ಪುಗೆಯ ಬಿಸಿಯಲ್ಲಿ ಕರಗಿಹೋಗಿ ಅಸ್ತವ್ಯಸ್ತಳಾಗಿ ಮೂರ್ತರೂಪವೇ ಇಲ್ಲದಂತಿದ್ದ ಕೀರ್ತಿಯನ್ನು ಕಂಡಾಗ ಅವನಿಗೆ ಇವಳು ತನ್ನ ಆದರ್ಶವಾಗಿದ್ದ, ತನ್ನ ಭವ್ಯಕಲ್ಪನೆಯ ಮೂರ್ತರೂಪವಾಗಿದ್ದ ಕೀರ್ತಿಯೆ ಎಂದು ಭಯವಾಯಿತು. ಅವಳು ಕೀರ್ತಿಯಾಗಿರದಿದ್ದರೆ ತಾನು ಅವಳನ್ನು ಸುಲಭವಾಗಿ ಮಡದಿಯನ್ನಾಗಿಸಿಕೊಳ್ಳಬಹುದು ಎಂದು ಆಸೆಯೂ ಕಾಡಿತು. ಅವನದು ನ್ಯಾಯಾನ್ಯಾಯ ವಿವೇಚನೆಯಲ್ಲಿ ಬೆಂದ ಮನಸ್ಸು; ಅವಳು ಅವಳೇ ಆಗಿರದಿದ್ದಲ್ಲಿ ನಾನು ಹಾಗೆ ಮಾಡಿಬಿಡಬಹುದೆ ಎಂಬ ಭಯ ಕೂಡ ಅವನಿಗೆ.

'ಕೀರ್ತಿ' ಮೃದುವಾಗಿ ನಯವಾಗಿ ಕರೆದ.

ಕೀರ್ತಿ ಉಸಿರಾಡಲಿಲ್ಲ. ಚಂದ್ರಶೇಖರನ ಧ್ವನಿ ಅವಳ ಕಿವಿಯಲ್ಲಿ ರಿಂಗಣಗುಣಿಯಿಸಿತು. ಚಂದ್ರು ಬಂದುಬಿಟ್ಟನೆ? ನಾಗರಾಜನ ಧ್ವನಿಯಲ್ಲಿ ಚಂದ್ರಶೇಖರನೆಂಬ ಸತ್ತ ಮಾನವನ ಧ್ವನಿಯಲ್ಲಿದ್ದ ಆಸೆಯ, ನೋವಿನ ಒತ್ತು. ಅವಳಿಗೆ ವಿಪರೀತ ಭಯವಾಗತೊಡಗಿತು. ಅವನು ಸತ್ತುಹೋಗಿದ್ದರೂ ಅವನ ಸಾವಿನ ದಟ್ಟಛಾಯೆ ಅವಳನ್ನು ಬೆನ್ನಟ್ಟಿ ಬಂದ ಹಾಗೆ. ತನ್ನ ಇಡೀ ಜೀವನದಲ್ಲಿ ಯಾರಿಗೂ ಬೆದರದಿದ್ದ ಕೀರ್ತಿ–ಪ್ರತಿಮಾದೇವಿಯರ ಮಗಳು ಕೀರ್ತಿ—ಚಂದ್ರುವಿನ ನೆನಪು ಮೂಡಿ ಹೆದರಿ ಹಕ್ಕಿಯಾಗಿಬಿಟ್ಟಳು. ಅವಳು ಅವನೊಂದಿಗೆ ಕಳೆದ ದಿನಗಳು ಭಯಂಕರ ಕನಸಿನ ಹಾಗೆ. ಇನ್ನೇನು ಮರೆತುಹೋಯಿತು ಎನ್ನುವ ವೇಳೆಗೆ, ಅವಳು ತನ್ನ ಸೌಭಾಗ್ಯದ ಪರಾಕಾಷ್ಠೆಗೇರಿ ವಿಹರಿಸುವ ವೇಳೆಗೆ ಸರಿಯಾಗಿ ಮರುಕಳಿಸಿಬಿಟ್ಟಿತು.

ಅವಳು ಪ್ರೀತಿಸಿದ ನಾಗರಾಜನ ವೇಷದಲ್ಲಿ ಬದುಕಿ ಬಂದಿದ್ದವನು ಚಂದ್ರಶೇಖರ. ಅವಳ ಪ್ರೀತಿಪ್ರೇಮಗಳ ಬಯಕೆಯ ಆಗರವಾಗಿದ್ದ ನಾಗರಾಜ ವಿಶ್ವನಾಥನಾಗಿ ಮಾರ್ಪಟ್ಟು ಅವನು ಸತ್ತುಹೋದಕೂಡಲೆ ಸತ್ತುಕೊಂಡಿದ್ದ. ಈಗ ತನ್ನನ್ನು ಅಪ್ಪುಗೆಯಲ್ಲಿ ಬಳಸಿದ್ದುದು ಚಂದ

ಶೇಖರನ ಭೂತ.

ಅಮ್ಮ ಎಂದು ಚೀರಿ ಅಲ್ಲಿಂದೆದ್ದು ಓಡಿಬಿಟ್ಟಳು. ಅವಳನ್ನು ಬಳಸಿದ್ದ ವಸ್ತ್ರ ಅನಾಥವಾಗಿ ನೆಲದ ಮೇಲೆ.

ಬತ್ತಲೆಯಾಗಿ ತಮ್ಮ ಮುಂದೆ ನಿಂತಿದ್ದ ಅವಳನ್ನು ಕಂಡು ಪ್ರತಿಮಾ ದೇವಿಯರಿಗೆ ಕೀರ್ತಿ ಇನ್ನೂ ತಮ್ಮ ಅಧಿಕಾರದ ಎಲ್ಲೆ ಮೀರಿಲ್ಲ ಎಂದೆನಿಸಿತು. ಅವರದು ಬಹಳ ಸರಳವಾದ ತರ್ಕ : ಅವಳು ಮೀರಿಲ್ಲವಾದುದರಿಂದ ನಾಗರಾಜನೂ ಮೀರಿಲ್ಲ. ಅವನು ಮೀರಿಲ್ಲವಾದುದರಿಂದ ವಿಶ್ವನಾಥ ಇನ್ನೂ ಬದುಕಿದ್ದಾನೆ. ಪ್ರತಿಮಾದೇವಿಯರು ತನ್ನ ಇಡೀ ಜೀವಮಾನದಲ್ಲಿ ಅನುಭವಿಸದಿದ್ದ ಅಸಹಾಯಕತೆಯ ಯಾತನೆಯನ್ನು ಆ ಕೆಲವು ಗಂಟೆಗಳಲ್ಲಿ ಅನುಭವಿಸಿದ್ದರು.

* * *

ಪ್ರತಿಮಾದೇವಿಯರಿಗೆ ಮಗಳು ಹೀಗೆ ಬತ್ತಲಾದದ್ದು ಕಂಡು ದುಃಖ ಒತ್ತರಿಸಿ ಬಂತು. ತಮ್ಮ ಬದುಕಿನ ಸಂಕೀರ್ಣತೆಗೆ ಕೀರ್ತಿಯ ಕಷ್ಟಗಳು ಸರಿದೊರೆಯಾಗದಿದ್ದರೂ, ಅವಳಿಗೆ ತಟ್ಟಿದ ಹಾಗೆ ಅದರ ತೀವ್ರತೆ ತಮಗೆ ತಟ್ಟಲಿಲ್ಲವೇನೋ ಎಂದೆನಿಸಿತು. ತಮಗಾದರೂ ಬೇಕೆಂದಾಗ ಬೇಕಾದದ್ದು ಬಂದವು. ಬೇಡವೆಂದಾಗ ಅವರು ಅವುಗಳಿಂದ ಮುಕ್ತರಾಗಿದ್ದರು : ಕಾರ್ತೀಕ, ವಿಶ್ವನಾಥ, ನಾಗರಾಜ, ತಮ್ಮ ಬೇಕು ಬೇಡಗಳಿಗೆ ತಾವಾಗಿಯೆ ಹೊಂದಿಕೊಳ್ಳುವ ಚಂದ್ರಾನಿಲರಾಯರು. ಕೀರ್ತಿಯ ಕಥಾನಕವೆ ಬೇರೆ ರೀತಿಯದು. ಅವಳಿಗೆ ಬೇಕಾದ ನಾಗರಾಜನಿಗೆ ಬದಲು ಚಂದ್ರಶೇಖರ ಸಿಕ್ಕಿದ್ದ. ನಾಗರಾಜ ತಾನಾಗಿಯೆ ಒಲಿಯುವ ವೇಳೆಗೆ ಅವನು ನಾಗರಾಜನಾಗಿಯೆ ಉಳಿದಿರಲಿಲ್ಲ, ಹಾಗೆ ಅವನ ರೂಪಾವಸ್ಥೆ ಬದಲಾಗುವುದಕ್ಕೆ ಕೀರ್ತಿಯದೆಷ್ಟು ಕಾರಣ, ತಮ್ಮದೆಷ್ಟು ? ಅವರಿಗೆ ಭಯಂಕರ ಬೇಗೆಯಾಗುತ್ತಿತ್ತು.

ಇತ್ತೀಚೆಗೆ ಕೀರ್ತಿ ನಾಗರಾಜನ ಸಖ್ಯಕ್ಕೆ ಅಷ್ಟೊಂದು ಬಯಸುತ್ತಿರಲಿಲ್ಲ. ಅಂದರೆ ಅವಳು ನಾಗರಾಜನ ಕೂಡ ಮಲಗಲೇ ಇಲ್ಲವೆಂದಲ್ಲ ಅರ್ಥ. ಅವಳಿಗೆ ಸುಲಭವಾಗಿ ಸಿಗುತ್ತಿದ್ದವನು ನಾಗರಾಜನೊಬ್ಬನೆ. ಅವನು ಹಾಗೆ ಸುಲಭವಾಗಿ ದಕ್ಕುತ್ತಿದ್ದುದರಿಂದಲೆ ಅವನು ಚಂದ್ರುವಿಗಿಂತ ಬೇರೆಯಾದವನು ಎಂದು ಅವಳಿಗನಿಸುತ್ತಿರಲಿಲ್ಲ. ಅವಳ ಬದುಕಿನಲ್ಲಿದ್ದ ಇನ್ನೊಂದೇ ಗಂಡಸೆಂದರೆ ಚಂದ್ರಾನಿಲರಾಯರು. ತಂದೆಯ ಬಗ್ಗೆ ಅವಳಿಗೆಂದೂ ತಾತ್ಸಾರವಿರಲಿಲ್ಲ. ಹೆಮ್ಮೆಯೂ ಇದ್ದಿತು ಎಂದರೂ ಆದೀತು. ಆದರೆ ಇಷ್ಟು ದಿನ ಅವಳಿಗೆ ತಾಯಿಯ ಬಗ್ಗೆ ಇದ್ದ ಭಯ, ಗೌರವವಾಗಿದ್ದುದರ ಹಾಗೆ ತಂದೆಯ ಬಗ್ಗೆ ಎಂದೂ ಆಗಿರಲಿಲ್ಲ. ಈಗ ಅವಳು ತಂದೆಯ ಹೊರವಾದ ಎದೆಯಲ್ಲಿ ಅತ್ತು

ಬಿಟ್ಟಿದ್ದಳು. ಅಲ್ಲಿ ಅವಳಿಗೆ ಪ್ರೀತಿಯ ರಕ್ಷಣೆ ದೊರಕಿತ್ತು ಎಂದರೂ ಆದೀತು. ಆದರೆ ಚಂದ್ರಾನಿಲರಾಯರು ಮಾಡಬಹುದಾದದ್ದರೂ ಏನು? ಅವರಿಗೆ ಮಗಳ ಬಗ್ಗೆ ಅನುಕಂಪವಿರಲಿಲ್ಲವೆಂದಲ್ಲ. ಅವರ ದೃಷ್ಟಿಯಲ್ಲಿ ಪ್ರತಿಮಾದೇವಿಯರನ್ನು ಬಿಟ್ಟರೆ, ಜಗತ್ತಿನಲ್ಲಿ ಇನ್ನೊಂದೇ ಹೆಣ್ಣು ಕೀರ್ತಿ. ಆದರೂ ಪ್ರತಿಮಾದೇವಿಯರ ಬಗ್ಗೆ ಅವರಿಗಿದ್ದ ಗೌರವ, ಅಚಲವಿಶ್ವಾಸ ಕೀರ್ತಿಗೆ ತನ್ನ ತಂದೆಯಿಂದ ಬಯಸಿದ, ದೊರೆಯಬಹುದಾಗಿದ್ದ ಅಕ್ಕರೆ ದೊರೆಯುವುದಕ್ಕೆ ಅಡ್ಡಿಯಾಗಿದ್ದವು ಎಂದರ ಅಸತ್ಯವಾಗಲಾರದು. ಆ ವ್ಯಕ್ತಿಯ ಬೌದ್ಧಿಕಶಕ್ತಿ ಕೀರ್ತಿಯದಕ್ಕಿಂತ ಹೆಚ್ಚಿನದೇನೂ ಆಗಿರಲಿಲ್ಲ ವೆಂದರೆ ಅವಳಿಗೆ ಅವರಿಂದ ದೊರಕಿದ ಪ್ರೀತಿಪ್ರೇಮಾದರಗಳು ಎಷ್ಟೆಂದು ಹೇಳುವ ಅಗತ್ಯ ಬರಲಾರದು ಕ್ಷೇಮ, ಶೀಲ ಅವಳ ಪಾಲಿಗೆ ಹುಟ್ಟಿಯೇ ಇರಲಿಲ್ಲ.

ನಾಗರಾಜನಿಗೆ ತಾನು ಪ್ರತಿಮಾದೇವಿಯರ ಅಂಗಸೌಂದರ್ಯದಲ್ಲಿ ಅನುರಕ್ತನಾಗುವುದಕ್ಕಿಂತ ಬೇರೆ ಏನನ್ನಾದರೂ ಮಾಡಬಹುದು ಎನಿಸುತ್ತಿತ್ತು. ವಯಸ್ಸಿನಿಂದ, ತಾಯ್ತನದ ಹಿರಿಮೆಯಿಂದ ತೂಕಗೊಂಡ ಅವರ ರೂಪ ಕಣ್ಣುಕೋರೈಸುವಂತಿದ್ದರೂ, ಆ ಸೌಂದರ್ಯದಲ್ಲಿ ಬೆಡಗಿಗಿಂತ ಒಂದು ರೀತಿಯ ಪೂಜ್ಯತೆ, ಶ್ರೀಮಂತಿಕೆ ಕಾಣುತ್ತಿದ್ದವು. ಆಕೆಯ ಮನಸ್ಸಿನ ಕಾಠಿಣ್ಯಕ್ಕೆ ತೂಗುವಂಥ, ಕೊರೆದಿಟ್ಟ ಆಕೆಯ ಮೈ. ಅವರ ಕಣ್ಣುಗಳಲ್ಲಿದ್ದ ಸ್ವಾಸ್ಥ್ಯ, ನಿಷ್ಕೃಷ್ಟತೆ, ಆ ನಿಷ್ಕೃಷ್ಟತೆಯ ಕ್ರೌರ್ಯ ಅವನನ್ನು ಕ್ಷುಲ್ಲಕನನ್ನಾಗಿಸಿಬಿಟ್ಟಿದ್ದವು. ಸಂಪೂರ್ಣ ನಿರಾಯುಧನಾಗಿ, ಲಜ್ಜೆಯಿಂದ ಮೈಯೆಲ್ಲ ಶೀತಲಗೊಂಡ ಅವನನ್ನು ಪ್ರತಿಮಾದೇವಿಯರು ಬಳಸಿದ್ದರು, ವೀನಸ್, ಆ್ಯಡನಿಸ್‌ನನ್ನು ಬಯಸಿ ಭುವಿಗೆ ಬಂದಂತೆ. ಯಾರ ಮೇಲೆ ಯಾರ ಅತ್ಯಾಚಾರ? ವ್ಯಭಿಚಾರ?

ಬೆಳಗು. ಮಲ್ಲಿಗೆಯ ಮುಂಜಾವ ರವಿಯ ಅಪ್ಪುಗೆಯ ಬಿಸಿಯಲ್ಲಿ ಪವಡಿಸಿದ ಭೂತಾಯಿಯ ಮಂಪರು ಇನ್ನೂ ಹರಿದಿರಲಿಲ್ಲ. ಬೆಳಗ್ಗೆ ಬರುವುದೇ ಬೇಡ ಎನ್ನುವ ಹಾಗೆ ಬಿಕೋ ಎಂದು ಸುರಿಯುತ್ತಿತ್ತು. ನಿಶ್ಶಬ್ದ, ಸ್ಮಶಾನಮೌನ. ತನ್ನ ಹಾಸಿಗೆಯಲ್ಲಿ ಕಣ್ಣು ಬಿಟ್ಟುಕೊಂಡೇ ಆರಾಮವನ್ನು ಆಲಂಗಿಸಿಕೊಂಡಿದ್ದ ಕೀರ್ತಿಗೂ ಅಂಥದೇ ಭಾವ. ಅವಳ ಇಂದಿನ ಮೌನದಲ್ಲಿ ಇಷ್ಟು ದಿನದ ಹಿಂಸೆ, ಕಿವುಡಿಸುವ ಶಬ್ದವಿರಲಿಲ್ಲ. ಒಂದು ರೀತಿಯ ಶಾಂತಿ. ಅವಳ ಮನಸ್ಸು ಪ್ರಫುಲ್ಲವಾಗಿತ್ತು ಎನ್ನಲೂ ಅಡ್ಡಿಯಿಲ್ಲ.

ಯಾವನೋ ಆಳು ಬಂದು ಕಾಫಿಯಾಗಿದೆ ಎಂದ. ಕೀರ್ತಿ ಮಹಡಿಯ ಮಾಳಿಗೆಯಿಂದ ಕಣ್ಣು ಕಿತ್ತು ಅವನತ್ತ ದೃಷ್ಟಿ ಹರಿಸಿದಳು. ಅವಳ ಮುಖದಲ್ಲಿ ಯಾವಾಗಲೂ ಇರುತ್ತಿದ್ದ 'ನೀನ್ಯಾಕೆ ಬಂದು ಎಬ್ಬಿಸಿದೆಯೊ ಪಿಶಾಚಿ' ಭಾವ ಇಂದು ಇರದೆ ಒಂದು ಥರ thank you ಸೋಗು, ನಾಗರಿಕತೆ ಅವನಿಗೆ ವಿಸ್ಮಯವುಂಟುಮಾಡಿತು. ಭಯವೂ ಆಯಿತು.

ಕೀರ್ತಿ ಏನೂ ಮಾತನಾಡದೆ ಎದ್ದು ನಡೆದಳು. ಕಾಫಿ ನಿಜವಾಗಿಯೂ ಚೆನ್ನಾಗಿದ್ದಾಗಲೂ, ಹಾಗೆಂದು ಅವಳಿಗೇ ಅನಿಸಿದಾಗಲೂ ಅವಳು ಯಾರನ್ನಾದರೂ ಬೈಯದೆ ಇರುತ್ತಿರಲಿಲ್ಲ ಅಡಿಗೆಯವನನ್ನು ಕರೆದು ಕೋತಿ, ನಾಯಿ, ಹಂದಿ ಇತ್ಯಾದಿ ಪ್ರಾಣಿಗಳ ಮಾನವನ್ನು ತೆಗೆದುಬಿಡುತ್ತಿದ್ದಳು. ಕಾಫಿ ಚೆನ್ನಾಗಿ ಮಾಡಿದೀಯೋ ದರಿದ್ರದವನೆ ಎಂದೆನ್ನಬೇಕೆಂದುಕೊಂಡ ಚಂದ್ರಾನಿಲರಾಯರಿಗೆ ಗಡಿಬಿಡಿ ಮಾಡಿಬಿಡುತ್ತಿದ್ದಳು. ಆದರೆ ಇಂದಿನ ಅವಳ ಪರಿಯೇ ಬೇರೆ. ಒಂದೂ ಮಾತನಾಡದೆ ತನ್ನ ಮುಂದಿಟ್ಟಿದ್ದ ಕಾಫಿ ಕುಡಿದು ತನ್ನ ಕೋಣೆಯತ್ತ ನಡೆದಾಗ ಚಂದ್ರಾನಿಲರಾಯರಿಗೆ ಅತೀವ ದುಃಖವಾಯಿತು. ಅವರಿಗೆ ಆ ದುಃಖವನ್ನು ವ್ಯಕ್ತಪಡಿಸಲಾರದಷ್ಟು ಹೆಂಡತಿಯ ಕಡೆಯಿಂದ ಇತರ ಬೇಗೆಗಳುಂಟು. ಪ್ರತಿಮಾದೇವಿಯರಿಗಂತೂ ಇತ್ತೀಚಿನ ಕೀರ್ತಿಯ 'ಒಳ್ಳೆ ಹುಡಗಿ' ವರ್ತನೆ ಬೇಸರ ಹುಟ್ಟಿಸಿಬಿಟ್ಟಿತ್ತು. ಅವರಿಗೆ ನನ್ನ ಮಗಳು ಸಂಪೂರ್ಣ ಹತಾಶಳಾಗಿಬಿಟ್ಟಳೆ ಎಂದು ದಿಗ್ಭ್ರಮೆಯಾಗತೊಡಗಿತ್ತು. ಆ ಇಪ್ಪತ್ತರ ಹರೆಯದ ಕೀರ್ತಿಯ ಮನಸ್ಸಿನ ಆಕಾಂಕ್ಷೆಗಳನ್ನು, ಆಕಾಂಕ್ಷೆ ತರುವ ಸೋಲು ನಿರಾಸೆಗಳನ್ನು ಅರ್ಥಮಾಡಿಕೊಳ್ಳುವ ನಾಗರಿಕತೆ ಇದ್ದವರು ಪ್ರತಿಮಾದೇವಿಯರು ಮತ್ತು ನಾಗರಾಜ ಇಬ್ಬರೆ. ಆದರೆ ಅವಳ ನೋವಿಗೆ ಪ್ರತಿಯಾಗಿ ಸ್ಪಂದಿಸುವ ಸಹೃದಯತೆ, ಸಂಸ್ಕೃತಿ ಇದ್ದುದು ಆತಾಯಿಗೆ ಮಾತ್ರ. ನಾಗರಾಜ ಮಾನವೀಯತೆಯನ್ನು ಒತ್ತೆಯಿಟ್ಟು ವಿದ್ಯೆ ಕಲಿತ

ವನು. ಅವನ ಜೀವನ್ಮೃತನ ಸ್ಥಿತಿ, ಅವಳ ರುಗ್ಣಾವಸ್ಥೆಯಡಿಯಲ್ಲಿ ಶೃಟಿಯುತ್ತಿದ್ದ ಜೀವತಂತುವಿನ ಆಶಾಲತೆಯನ್ನು ಪೋಷಿಸುವ ಸಾಮರ್ಥ್ಯ ಹೊಂದಿರಲಿಲ್ಲ.

ಅವನ ಮನಸ್ಸಿನ ಹೊಯ್ದಾಟ ಅವನನ್ನು ನಿಷ್ಕ್ರಿಯನನ್ನಾಗಿಸಿ ಬಿಟ್ಟಿತ್ತು. ಅವನಿಗೆ ಸಮಾಧಾನ ಬೇಕಿತ್ತು. ಕೀರ್ತಿಯ ಕೂಡ ತನ್ನ ಸಂಬಂಧ ಇದ್ದಂತೆಯೇ ಪ್ರತಿಮಾದೇವಿಯರ ಕೂಡವೂ ಇದ್ದುದು ಅವನಿಗೆ ಅನೈತಿಕವೆಂದೆನಿಸಿಬಿಟ್ಟಿತ್ತು. ತಾನು ಪ್ರತಿಮಾದೇವಿಯರ ವ್ಯಕ್ತಿಯೂ ಅಲ್ಲ. ಕೀರ್ತಿಯ ಪ್ರೇಮಿಯೂ ಅಲ್ಲ. ಇಬ್ಬರಿಗೂ ಮೋಸ ಮಾಡುತ್ತಿದ್ದೇನೆ ಎಂದೆನಿಸಿತು ಅವನಿಗೆ, ಎನ್ನುವ ಮಾತಲ್ಲ. ತನ್ನ ವ್ಯಕ್ತಿತ್ವದಾಳದಲ್ಲಿ ಗಟ್ಟಿತನವೆನ್ನುವುದೇ ಇಲ್ಲ. ಯಾವ ಸ್ಪಷ್ಟವಾದ ತೀರ್ಮಾನ ತೆಗದುಕೊಳ್ಳಲೂ ಆಗದಷ್ಟು ಅಸಹಾಯಕ ನಾನು. ಈ ಅಸಹಾಯಕತೆಯನ್ನು ತುಳಿದೆದ್ದು ಬಂದಾಗ ನಾನು ಬದುಕುಳಿದೇನು. ಯಾವುದಾದರೂ ಒಂದು ನಿರ್ಧಾರವನ್ನು ಗಟ್ಟಿ ಮಾಡಿ ನನ್ನನ್ನು ಕಾಪಾಡಿಕೊಳ್ಳಬೇಕು ಅಂತ ಮೈ ಪರಚಿಕೊಂಡ.

ವಾಸ್ತವವಾಗಿ ಅವನಿಗೆ ಕೀರ್ತಿಯ ಕೂಡ ಸಂಬಂಧ ಕುದುರಿಸಿಕೊಳ್ಳಲು ಅವಳ ಇಂದಿನ ಸ್ಥಿತಿಯಲ್ಲಿ ಅಸಂಭವವೇನೂ ಆಗಿರಲಿಲ್ಲ. ಸೋತ ಮನಃಸ್ಥಿತಿಯ ಆ ಹೆಣ್ಣನ್ನು ಹೇಗೆ ಬೇಕೋ ಹಾಗೆ ಕಡೆದುಕೊಳ್ಳಬಲ್ಲ ಶಕ್ತಿ ಯಾವ ಗಂಡಿಗಾದರೂ ಇದ್ದೀತು. ನಾಗರಾಜನಿಗಂತೂ ತನ್ನಲ್ಲಿ ಆ ಶಕ್ತಿ ಇಲ್ಲ ಎಂದು ಖಂಡಿತ ಅನ್ನಿಸಲಿಲ್ಲ. ಆದರೆ ಅವನ ನ್ಯಾಯಾನ್ಯಾಯ ವಿಮರ್ಶೆಯ ಮೂಸೆಯಡಿಯಲ್ಲಿ ತಲೆದೋರುತ್ತಿದ ನೀತಿ ಅನೀತಿಗಳ ಪ್ರಶ್ನೆಯು ಅವನನ್ನು ಕಾಡಿಸಿ ಅವನು ನಿರ್ವೀರ್ಯನಾಗಿಬಿಟ್ಟಿದ್ದ.

ಒಂದು ದಿನ ಸಂಜೆ ಪ್ರತಿಮಾ ಅಂದರು: ನಾಗರಾಜ, ನೋಡು ಕೀರ್ತಿ ಏನಾಗಿದ್ದಾಳೆ. ಅದಕ್ಕೆ ನೀನೇ ಕಾರಣ ಅಂತ ನಾನು ಹೇಳಿದರೆ ಅಲ್ಲ ಎನ್ನುವ ನೈತಿಕ ಶಕ್ತಿ ನಿನಗಂತೂ ಇಲ್ಲ ಎಂದು ನನಗೆ ಗೊತ್ತು. ಅದಕ್ಕಾಗಿಯೇ ಹೀಗೆ ಹೇಳುತ್ತಿದ್ದೇನೆ ನೀನು ಕೀರ್ತಿಗೆ ಪ್ರಾಮಾಣಿಕನಾಗಿರಬೇಕು. ಅವಳ ಬದುಕು ಹೀಗೆ ಹಾಳಾಗಿದ್ದು ಕಂಡು ನನಗೆ ಬೇಗೆಯಾಗುತ್ತದೆ.

ನಾಗರಾಜನಿಗೆ ಆ ಮಾತಿನ ಅರ್ಥ ಏನೆಂಬುದು ತಿಳಿಯಲಿಲ್ಲ. ಪ್ರತಿಮಾದೇವಿಯರ ಉದ್ದೇಶವಾದರೂ ಏನು? ಅವಳಿಗೆ ನಾನು ಪ್ರಾಮಾಣಿಕನಾಗಿರುವದರ ಒಂದೇ ಮಾರ್ಗ ಅಂದರೆ ಅವಳನ್ನು ಸಂಪೂರ್ಣ ಮರೆತು, ಅವಳ ದುಃಖದ ಕಡೆಗೆ ಗಮನ ಕೊಡದೆ, ಚಿಂತೆಯ ಚಿತೆಯಲ್ಲಿ ಅವಳನ್ನು ತಳ್ಳಿಬಿಡುವುದು. ಆಗ ಮಾತ್ರ ಕೀರ್ತಿ

ನೋವಿನ ಒತ್ತಡದಿಂದ ಇನ್ನಷ್ಟು ಗಟ್ಟಿಯಾಗಿ, ಸ್ಫುಟವಾಗಿ ಮೂಡಿ ಬರುತ್ತಾಳೆ. ಆದರೆ ಅವಳ ದುಃಖವನ್ನೂ ಸಹಿಸಿಕೊಂಡು ಸುಖವಾಗಿರುವಷ್ಟು ನಿರ್ಧಾರಕ ಮನಸ್ಸು ತನ್ನಲ್ಲಿದೆಯೆ ಎಂಬ ಅನುಮಾನದ ಮಾತಿರಲಿ, ಇಲ್ಲವೆಂಬುದು, ಅವನಿಗೇ ತಿಳಿದ ಮಾತು. ಪ್ರತಿಮಾದೇವಿಯರ ನಿಷ್ಕೃಷ್ಟತೆಯ ಕ್ರೌರ್ಯವಾಗಲಿ, ಚಂದ್ರಾನಿಲರಾಯರ ಪ್ರಾಣಿಸಂಬಂಧ ಪೂಜ್ಯತೆಯಾಗಲಿ ಇದ್ದಿದ್ದರೆ, ಅವನು ಯುದ್ಧ ಗೆದ್ದು ಬರುತ್ತಿದ್ದ.

ಆದರೆ ಅವನ ನಡವಳಿಕೆಯ ನೀತಿ ಅನೀತಿಯ ಪ್ರಶ್ನೆಗೆ ಸ್ಪಷ್ಟ ಉತ್ತರ ಬೇಕಾಗಿತ್ತು. ಪ್ರತಿಮಾದೇವಿಯರ ಕೂಡಸಂದರ್ಶಿಸಿದ. ಒಂದು ಭಾನುವಾರ ಮನೆಯ ಒಡತಿಯೆದುರಿಗೂ, ಚಂದ್ರಾನಿಲರಾಯರೆದುರಿಗೂ ತಾನು ಕೀರ್ತಿಯ ಪತಿಯೆಂದು ಘೋಷಿಸಿಕೊಂಡ: ಚಂದ್ರಾನಿಲರಾಯರಿಗೆ, ಯಾಕೆ ಹೀಗೆ? ಇಷ್ಟು ದಿನ ಅವಳ ಪತಿಯಾಗಿಯೇ ಇದ್ದನಲ್ಲ ಎಂಬ ಸಂದೇಹ. ಅಷ್ಟು ನಿರ್ಮಲ ಹೃದಯಿ ಅವರು. ಅವರಿಗೆ ಈ ಸಂದೇಹ ಬರುವುದು ಸಹಜವೆಂದೇ ಆದರೂ, ಅವರು ಯಾವ ಇಕ್ಕಟ್ಟಿನ ಪ್ರಶ್ನೆಗಳನ್ನೂ ಹಾಕಲಾರರೆಂದು ನಾಗರಾಜನಿಗೆ ಸ್ಪಷ್ಟವಾಗಿಯೇ ತಿಳಿದಿತ್ತು. ಅವರ ಬಗ್ಗೆ ಅವನಿಗೆ ಕಾಳಜಿ ಇರಲಿಲ್ಲ. ಅವನ ಭಯ ಕೇಂದ್ರೀಕೃತವಾಗಿದ್ದುದು ಕೀರ್ತಿಯ ಮುಂದಿನ ನಡವಳಿಕೆ ಮತ್ತು ಪ್ರತಿಮಾದೇವಿಯರ ತಾತ್ಕ್ಷಣಿಕ ಪ್ರತಿಕ್ರಿಯೆಗಳಲ್ಲಿ. ಆದರೆ ಅವನು ದಿಗಿಲುಗೊಳ್ಳಲು ಕಾರಣವೇನೂ ಇರಲಿಲ್ಲ. ಅವನೆಂದುಕೊಂಡಂತೆ ಯಾವ ಆಸ್ಫೋಟಕ ಕ್ರಿಯೆಯೂ ನಡೆಯಲಿಲ್ಲ. ಹಾಗೆ ಆಗಲಿಲ್ಲವೆಂದು ಕಾತುರವಂತೂ ಆಯಿತು ನಾಗರಾಜನಿಗೆ. ಆಗಿದ್ದರೆ, ಆದರ ಪ್ರಭಾವಕ್ಕೆ ತಾನು ಸಿಗದಂತೆ ಎಚ್ಚರ ವಹಿಸಬಹುದಿತ್ತು ಎಂದು ಗೊಂದಲಗೊಂಡ.

ತಾನು ಕೀರ್ತಿಯ ಪತಿಯೊಂದು ಘೋಷಿಸಿಕೊಂಡ ಮೇಲೆ ಒಂದು ರೀತಿಯ ಸಮಾಧಾನ ಸಿಗಬಹುದೆಂದು ನಾಗರಾಜನೇನೂ ನಿರೀಕ್ಷಿಸಿರಲಿಲ್ಲ. ಅವನ ಆತ್ಮಸಾಕ್ಷಿಗೆ ಪೂರಕವಾಗಿ ನಡೆದುಕೊಳ್ಳಬೇಕೆಂಬ ಒತ್ತಾಸೆಯಿಂದ ದೊರೆತದ್ದು ಅವನ ಈ ಅಧಿಕಾರ. ಆ ಅಧಿಕಾರವನ್ನು ತಾನು ಚಲಾಯಿಸಿದಾಗ, ತನಗಿಂತ ಹೆಚ್ಚಾಗಿ ಕೀರ್ತಿಗೆ ಆನಂದವಾಗುತ್ತದೆ ಎಂದು ಅಂದುಕೊಂಡ.

ಒಂದು ದಿನ ಕೀರ್ತಿ ನಾಗರಾಜನ ಮುಂದೆ ಬಾಯಿಕಟ್ಟಿದ ಉಡದ ಹಾಗೆ ಕೂತಿದ್ದಳು. ಅರ್ಧತಾಸಿನಿಂದ ಅವಳನ್ನು ಮಾತನಾಡಿಸಬೇಕೆಂದು ಪ್ರಯತ್ನಿಸಿ ನಾಗರಾಜ ವಿಫಲಗೊಂಡಿದ್ದ. ಅವಳ ನಿರ್ಧಾರವನ್ನು ಕಂಡು ಅವನಿಗೆ ಒಂದು ಥರ ಸಮಾಧಾನವಾದರೂ ತನ್ನನ್ನು ಇಷ್ಟೊಂದು ತುಚ್ಛವಾಗಿ ಕಡೆಗಣಿಸುತ್ತಿದ್ದಾಳೆಂದು ಅಸಮಾಧಾನವೂ ಕೂಡ.

'ಯಾಕೆ ಕೀರ್ತಿ ಹೀಗೆ, ಏನಾಗಿದೆಯೆಂದು ಕೊರಗಬೇಕು ?

'ನಾನು ಕೊರಗುತ್ತಿದ್ದೀನಿ ಅಂತ ನಿನಗೆ ಯಾರು ಹೇಳಿದರು ?' ಅವಳು ಬಾಯಿ ಬಡಿದಳು.

ಯಾರೂ ಹೇಳಬೇಕಾಗಿಲ್ಲ. ನೋಡು ಕೀರ್ತಿ, ನೀನು ಬುದ್ಧಿವಂತೆ, ರೂಪವತಿ. ಆದರೂ ನೀನು ಯಾಕೆ ಕೊರಗಬೇಕು, ನನಗೆ ಅರ್ಥವಾಗುವುದಿಲ್ಲ.'

ಅವಳ ಪ್ರಶ್ನೆಯೂ ಅದೆ, ಅವಳು ರೂಪವತಿ ಎಂದು ಯಾರೂ ಪ್ರಶಸ್ತಿ ಕೊಡುವ ಆವಶ್ಯಕತೆ ಇಲ್ಲ. ಅದು ಲೋಕಕ್ಕೇ ತಿಳಿದ ವಿಷಯ. ಅವಳು ಬುದ್ಧಿವಂತೆ, ಹೌದು, ಅಲ್ಲ ಎನ್ನುವುದು ಯಾರ ಊಹೆಗೂ ಬಿಟ್ಟ ವಿಷಯವಾದರೂ, ಅವಳ ದೃಷ್ಟಿಯಲ್ಲಿ ನಾಗರಾಜ, ಮತ್ತು ಪ್ರತಿಮಾದೇವಿಯರ ವೈಚಾರಿಕತೆಗೆ ಸರಿದೊರೆಯಾಗಬಹುದಾದ ಇನ್ನೊಂದೇ ವ್ಯಕ್ತಿಯೆಂದರೆ, ತಾನು.

ನಿನಗೇನಾಗಿದೆ ಅಂತಲಾದರೂ ಹೇಳಬಾರದೆ ?, ಅವನು ಗೋಗರೆದ. ಅವಳಿಗೆ ಅಸಹ್ಯವಾಗತೊಡಗಿತು. ತನಗೇನಾದರೇನಂತೆ. ಅವನ ವಿಷಯಗಳಲ್ಲಿ ತಾನು ತಲೆ ಹಾಕುವುದಿಲ್ಲ. ಅವನಿಗೇಕೆ ತನ್ನ ಬಗ್ಗೆ ಕಾಳಜಿ ?

ಯಾಕೆ ಹೇಳಬೇಕು : ನೀನು ಮಹಾ ವಿದ್ಯಾವಂತ. ನಿನ್ನ ಹತ್ತಿರ ನನ್ನ ದುಃಖ ಹೇಳಿಕೊಂಡರೆ ಏನು ಮಾಡಿಬಿಡುತ್ತೀಯ ? ನಿನಗೆ ಸಂಬಂಧ ಪಡದ ವಿಷಯಕ್ಕೆ ತಲೆಹಾಕಬೇಡ.

ನಾಗರಾಜನಿಗೆ ಕೋಪಬರತೊಡಗಿತ್ತು. ತನ್ನ ವಿಷಯದಲ್ಲಿ ಇಷ್ಟೊಂದು ಸಾಮಾನ್ಯ ಧ್ವನಿಯಲ್ಲಿ ಯಾರೂ ಮಾತನಾಡಿರಲಿಲ್ಲ. ಹೀಗೆ ಅವಳು ಹೇಳುತ್ತಿದ್ದಾಗ ಅವಳ ಮಾತಿನಲ್ಲಿದ್ದ 'ನೀನು ನನ್ನ ಗಂಡನಾಗುವುದನ್ನು ನಾನೇನು ಬಯಸಿರಲಿಲ್ಲ' ಧ್ವನಿ ಅವನಿಗೆ ಗೋಚರಿಸಿ, ಜುಗುಪ್ಸೆಯಾಯಿತು.

ಅಹಂಕಾರ ಮನುಷ್ಯನಿಗಿರಬೇಕು. ಅದು ಅತಿಯಾದರೆ ಅದರಿಂದ ನಿನಗೇ ಹಾನಿ ಎಂದೆಂದು, ಎದ್ದು ಹೊರಟುಹೋದ.

ಅವನು ಹಾಗೆ ಬಿರಬಿರ ಒದರಿ, ದಾಪುಗಾಲಿಕ್ಕಿ ಹೊರಟುಹೋಗುತ್ತಿರುವುದನ್ನು ಕಂಡು ಕೀರ್ತಿಗೆ ಹೆಮ್ಮೆಯಾಯಿತು. ನಾಗರಾಜ ಪೂರ್ಣ ಬದಲಾಗಲಿಲ್ಲ. ಹಾಗಿದ್ದರೆ, ನಾನು ಅವನ ಬಗ್ಗೆ ಭಾವಿಸಿಕೊಂಡಿದ್ದೆಲ್ಲ ಪೂರ್ಣ ತಪ್ಪಾಯಿತೆ ಅಂತ ದುಃಖವಾಯಿತು.

ಸಂಜೆಯವರೆಗೂ ನಾಗರಾಜ ಮನೆಗೆ ಬರಲಿಲ್ಲ. ಅವನಿಗೆ ಕೀರ್ತಿಯ ಬಗ್ಗೆ ಜುಗುಪ್ಸೆಯಾದುದಕ್ಕಿಂತ ಹೆಚ್ಚಾಗಿ, ತನ್ನ ಬಗ್ಗೆಯೇ ಹೇಸಿಗೆಯಾಗತೊಡಗಿತು. ಅವಳು ಹೇಳಿದ್ದರಲ್ಲಿ ಅರ್ಥವೂ ಇಲ್ಲದಿಲ್ಲ ಎಂದು ಅವನು ಅಸಹಾಯನಾಗಿಬಿಟ್ಟ ಹೌದು. ನಾನ್ಯಾಕೆ ಅವಳ ದುಃಖದಲ್ಲಿ

ಪಾಲುದಾರನಾಗಬೇಕು? ಅವರವರ ಬದುಕಿಗೆ ಅವರವರೇ ಜವಾಬ್ದಾರರು ಎಂದು ಯಾರೋ ಹೇಳಿದುದನ್ನು ಅವನು ಎಲ್ಲಿಯೋ ಓದಿದ್ದ. ಅದನ್ನು ಮರೆಯುವ ಜಾಯಮಾನವೂ ಅವನಿಗಿಲ್ಲ. ಆದರೂ, ತನ್ನ ಹೆಂಡತಿಯ ಜೀವನದ ವಿದ್ಯಮಾನ ಅರಿಯಲಾರದವನು ತಾನಾದರೆ ತನ್ನಿಂದ ಬೇರೇನು ಸಾಧ್ಯವಾದೀತು? ಅವನಿಗೆ ಕೀರ್ತಿಯನ್ನು ಪ್ರೀತಿಸಿ ಎಂಥ ತಪ್ಪುಮಾಡಿದೆ ಎಂದು ಭಯವಾಗತೊಡಗಿತು.

ಯಾಕೆ ಹೇಳಬೇಕು? ನೀನು ಮಹಾ ವಿದ್ಯಾವಂತ. ನಿನ್ನ ಹತ್ತಿರ ನನ್ನ ದುಃಖ ಹೇಳಿಕೊಂಡರೆ ಏನು ಮಾಡಿಬಿಡುತ್ತೀಯ? ನಿನಗೆ ಸಂಬಂಧ ಪಡದ ವಿಷಯಕ್ಕೆ ತಲೆಹಾಕಬೇಡ.

ಕೀರ್ತಿಗೆ ಆತಂಕವಾಗಿತ್ತು. ತನ್ನೊಡನೆ ಜಗಳಾಡಿ ಹೋದಾಗಿನಿಂದ ನಾಗರಾಜ ಮನೆಗೆ ಹಿಂದಿರುಗಿರಲಿಲ್ಲ. ಮನೆಯಿಂದಾಚೆಗೇ ಹೋಗದೆ ಪ್ರಪಂಚದ ಎಲ್ಲ ಒಗಟುಗಳನ್ನೂ ಬಿಡಿಸುವವನ ಹಾಗೆ ಕಾಲುಚಾಚಿ, ಮನೆಯ ಮೇಲಂಗಳ ನೋಡುತ್ತ ಮಲಗಿಬಿಡುತ್ತಿದ್ದ ನಾಗರಾಜ ಸಂಜೆಯಾದರೂ ಬಂದಿರಲಿಲ್ಲ. ತಾನು ತಪ್ಪುಮಾಡಿದೆನೆ ಎಂದು ಅವಳಿಗೆ ಅನಿಸತೊಡಗಿದ್ದುದು, ಅವಳ ಇಪ್ಪತ್ತು ವರ್ಷದ ತಾರುಣ್ಯದಲ್ಲಿ ಮೊಟ್ಟಮೊದಲು ತಾನು ಮಾಡಬಹುದಾದರೂ ಏನು? ಅವಳಿಗೆ ನೂರೆಂಟು ವಿಚಾರಗಳು ತಲೆಯಲ್ಲಿ ಹೊಕ್ಕು ಭಯಂಕರ ಹಿಂಸೆಯಾಯಿತು. ಸತ್ತುಹೋದನೆ ಎಂಬ ವಿಚಾರವೂ ಸುಳಿಯಿತು.

ನಾಗರಾಜ ಮನೆಗೆ ಬರುವ ವೇಳೆಗೆ ರಾತ್ರಿ ಎಂಟು ಗಂಟೆಯಾಗಿತ್ತು. ಚಂದ್ರಶೇಖರ ಬದುಕಿದ್ದಾಗ, ಸಾಮಾನ್ಯವಾಗಿ ಇದೇ ವೇಳೆಗೆ ಬರುತ್ತಿದ್ದ. ತನಗಾಗಿ ಕಾಯುವವರು ಯಾರೂ ಇಲ್ಲವೆಂದು ಅವನಿಗೆ ಅರಿವಿದ್ದುದರಿಂದ ಅವನಿಗೆ ಮನೆಗೆ ಬರುವುದಕ್ಕೇ ಬೇಸರವಾಗುತ್ತಿತ್ತು. ಬಂದರೂ ಬೇಡದ ಅತಿಥಿಯಂತೆ ಕೀರ್ತಿಯ ಕೈಲಿ ನೂರು ಬೈಗಳು ತಿನ್ನಬೇಕು. ಅದು ಅವನಿಗೆ ಅಭ್ಯಾಸವಾಗಿತ್ತು ನಿಜ. ಅವನು ಅದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಲೇ ಇರಲಿಲ್ಲ ಹೌದು. ಆದರೂ ತಾನು ಹಾಗೆ ನಿರ್ಲಿಪ್ತನಾಗಿದ್ದುದರ ಉಪಯೋಗವಾದರೂ ಏನು ಎಂದು ಅವನಿಗೆ ಅನೇಕ ಸಾರಿ ಅನಿಸುತ್ತಿತ್ತು. ಕೀರ್ತಿ ಹೇಗೆ ನಡೆದುಕೊಂಡಾಳೆಂದು ಅವಳಿಗೇ ಅರಿವಿಲ್ಲದಿರುವಾಗ, ಅವನಿಗಾದರೂ ತಿಳಿದೀತು ಹೇಗೆ?

ಇಂದು ನಾಗರಾಜನಿಗಾಗಿ ಕೀರ್ತಿಯೇ ಕಾಯುತ್ತಿದ್ದಾಳೆ. ಪ್ರತಿಮಾದೇವಿಯರಿಗೂ ಆತಂಕವಾಗಿದೆ. ಆದುದರಿಂದಲೇ ಅವನ ಆಗಮನ ಸಮಾಧಾನದ ಜೊತೆಗೆ ಭಯವನ್ನೂ ಹೊತ್ತು ತಂದಿತ್ತು.

ಅವನು ನಿಧಾನ ಬಂದ. ಅವನ ಕಾಲುಗಳು ಯಾವುದೋ ಭಾರದಿಂದ ಜಗ್ಗಿದುವು ಅನ್ನುವ ಹಾಗೆ ತೂಕವಾಗಿ ನೆಲದಮೇಲೆ ತಪ್‌ತಪ್ ಸದ್ದು

ಗ್ಯೆದುವು. ಮನೆಯವರ ದುರಂತದ ಒಂದೊಂದು ಸುತ್ತಿಗೆ ಹೊಡೆತಕ್ಕು ಆ ಕಾಲುಗಳು ಸರಿದೂಗಿ, ಅದನ್ನು ನಡೆದ. "ಪ್ರತಿಮಾಕೀರ್ತಿ"ಯ ಒಂದೊಂದು ಅಂಗಳದಲ್ಲೂ ಅವನ ಕಾಲಿನ ಶಬ್ದದ ರಿಂಗಣ.

ಅವನು ಬಂದವನು ಅಲ್ಲಿ ಕುಳಿತಿದ್ದ ಚಂದ್ರಾನಿಲರಾಯರು, ಕೀರ್ತಿ, ಪ್ರತಿಮಾದೇವಿಯರು—ಯಾರೂ ಬದುಕಿಯೇ ಇಲ್ಲವೇನೋ ಅನ್ನುವ ಹಾಗೆ ಅವರನ್ನು ಸಂಪೂರ್ಣ ನಿರ್ಲಕ್ಷಿಸಿ, ತನ್ನ ಪಾಡಿಗೆ ತನ್ನ ಕೋಣೆಯ ಕಡೆ ಹೆಜ್ಜೆ ಹಾಕಿದ. ಅವನು ಬಂದುದರಿಂದ, ಅವನು ತನ್ನೆಲ್ಲ ಪುಸ್ತಕ ಪಿಶಾಚಿತ್ವದ ಗಂಭೀರತೆಯನ್ನು ಹೊತ್ತು ತಂದುದರಿಂದ—ಕೀರ್ತಿಗೆ ಅವನಲ್ಲಿ ಅನುರಾಗ ಉಂಟಾಯಿತು. ಒಂದು ಸಾರಿ ಕೆಮ್ಮಿದಳು. ಅದು ಅವನಿಗೆ ಕೇಳಲಿಲ್ಲ. ಅಥವಾ ಕೇಳಲಿಲ್ಲ ಎನ್ನುವ ಹಾಗೆ ಅವನು ತನ್ನ ಕೋಣೆಯ ಕಡೆ ಧಾವಿಸಿದ. ಅವನು ಹಾಲಿನಿಂದ ಓಡುತ್ತಿದ್ದ ಬಗೆಯನ್ನು ಕಂಡು ಯಾರಿಗಾದರೂ ಅವನು ಆಗಬಾರದ್ದು ಏನನ್ನೋ ತಡೆಯಲು ಪ್ರಯತ್ನಿಸುತ್ತಿದ್ದಾನೆಂಬುದು ಗೋಚರಿಸುತ್ತಿತ್ತು. ಆದರೆ ಕೀರ್ತಿಗೆ, ಅವನನ್ನ ತನ್ನ ಕಡೆ ಆಕರ್ಷಿಸಬೇಕೆಂದುಕೊಂಡು ಕೆಮ್ಮಿದ ಆ ಹರೆಯದ ಹೆಣ್ಣಿಗೆ, ತನ್ನತ್ತ ಸಂಪೂರ್ಣ ನಿರ್ಲಕ್ಷ್ಯ ತೋರಿ ನಡೆದ ಅವನನ್ನು ಕಂಡು ಅವಮಾನವಾದಂತಾಯಿತು. ಕೋಪ ಕುದಿಯಿತು.

ಧಡಕ್ಕನೆ ಎದ್ದಳು. ಅವನತ್ತ ಬಿರಬಿರನೆ ನಡೆದಳು. ಚಂದ್ರಾನಿಲರಾಯರು ಮೂಕರಂತೆ, ತದೇಕಚಿತ್ತರಾಗಿ, ನಾಟಕದಲ್ಲಿ ಅಭಿನಯವನ್ನು ಆನಂದಿಸುವ ಮುಗ್ಧ ಪ್ರೇಕ್ಷಕ ಬಾಲಕನಂತೆ ಅವಳನ್ನೇ ಗಮನಿಸುತ್ತಿದ್ದರು. ಪ್ರತಿಮಾದೇವಿಯರಿಗಾದರೂ ಮುಂದೇನಾಗಬಹುದೆಂಬ ಕುತೂಹಲ, ವಿಮರ್ಶನ ಬುದ್ಧಿ.

ಬಿರುಗಾಳಿಯಂತೆ ನುಗ್ಗಿದ ಕೀರ್ತಿ ಅವನ ಮುಂದೆ ನಿಂತಳು. ಅವನ ಅಂಗಿಯ ಕಾಲರನ್ನು ಜಗ್ಗಿ 'ಎಲ್ಲಿಗೆ ಹೋಗಿದ್ದೆ ಇಷ್ಟು ಹೊತ್ತು' ಎಂದು ಜೋರು ಮಾಡುವವಳಂತೆ ನಟಿಸಿದಳು. ಅವನಿಗೆ ಅವಳ ನಟನೆಯನ್ನು ವಿಮರ್ಶಿಸುವದಕ್ಕೆ ಇಂದು ವ್ಯವಧಾನವಿರಲಿಲ್ಲ. ಅವಳನ್ನು ನಿರ್ವಿಕಾರ ನೋಡಿದ. ಆ ಕಣ್ಣುಗಳಲ್ಲಿದ್ದ ನಿರ್ವಿಕಾರ ಕ್ರೌರ್ಯ, ನಿಸ್ಸಂದೇಹ ರೂಕ್ಷತೆ ಅವಳಿಗೆ ಭಯ ತರಿಸಿದರೂ, ನನ್ನ ನಾಗರಾಜ ಹಾಗೆಯೇ ಉಳಿದಿದ್ದಾನೆ ಎಂದು ಸಂತಸವನ್ನೂ ತಂದಿತು. ಅವಳ ಸಂತಸ ಪರಾಕಾಷ್ಠೆಗೇರಿ, ಆನಂದದಿಂದ, ತುಂಬಿ ಅವನ ವಕ್ಷಸ್ಥಲವನ್ನು ತನ್ನ ವಿಪುಲವಾದ ವಕ್ಷಸ್ಥಲ ಮಾಂಸದ ಬಿಸಿಯಲ್ಲಿ ಬೆಚ್ಚಗಿಸಲು ಮುಂಬಾಗುವ ವೇಳೆಯಲ್ಲಿ ಅವನಲ್ಲಾಗಿದ್ದ ಬದಲಾವಣೆಯನ್ನೂ ಕಾಣಲಿಲ್ಲ. ನಾಗರಾಜ ಮೊಣಕೈ ಬಗ್ಗಿಸಿ, ತನ್ನ ದಾರಿಗಡ್ಡವಾಗಿದ್ದ ಕೀರ್ತಿಯನ್ನೂ ಅನಾಮತ್ತಾಗಿ ನೂಕಿ, ತನ್ನ ಕೋಣೆಗೆ ಜಾರಿಕೊಂಡ.

ಕೀರ್ತಿ ಚಂದ್ರಾನಿಲರಾಯರ ಕಾಲ ಬಳಿ ಬಿದ್ದುಬಿಟ್ಟಳು. ಅವನ ಮೈನಲ್ಲಿದ್ದ ದೇಹಸಾಮರ್ಥ್ಯದಿಂದ ಅವಳಿಗೆ ರೋಮಾಂಚನವಾಯಿತು. ಗಂಡೆಂದರೆ ಇದು ಎಂದು ಎನ್ನಲೂ ಅಡ್ಡಿಯಿಲ್ಲ. ಆದರೂ ಅವಳಿಗೆ ಆ ರೀತಿಯ ತಿರಸ್ಕಾರ ಸಿಕ್ಕಿದ್ದುದು ಮೊದಲ ಬಾರಿಗೆ. ಅದಕ್ಕಿಂತ ಮಿಗಿಲಾಗಿ ತನ್ನ ತಾಯಿ ತಂದೆಯರ ಮುಂದೆ ಅವಳಿಗೆ ಅವಮಾನವಾದಂತಾಯಿತು. ಅವಳು ಏನು ತಾನೆ ಮಾಡಿಯಾಳು? ನಾಗರಾಜ ಕೋಣೆ ಸೇರಿ, ಚಿಲುಕ ಸರಿಸಿಕೊಂಡಿದ್ದ. ಕೀರ್ತಿ ಅಸಹಾಯಕಳಾಗಿಬಿಟ್ಟಳು.

ನಾಗರಾಜನಿಗೆ ಇನ್ನೂ ತಾನು ಅವಳ ಇಚ್ಛೆಗೆ ತಾಳ ಹಾಕಕೂಡದು ಅನಿಸಿತು. ಅಂದರೆ ಇಲ್ಲಿಯವರೆಗೂ ಅವಳೆಂದುಕೊಂಡದ್ದಕ್ಕೆ ಪೂರಕವಾಗಿಯೆ ನಡೆಯಬೇಕೆಂಬುದು ಅವನ ಉತ್ಕಟೇಚ್ಛೆಯಾಗಿತ್ತು ಎಂದರ್ಥವಲ್ಲ. ಅವಳ ಇಂದಿನ ವರ್ತನೆ ಅವನಲ್ಲಿದ್ದ ಅಹಂಕಾರವನ್ನೂ ಕೆರಳಿಸಿತ್ತೆನ್ನುವ ಮಾತು. ಬೆಳಿಗ್ಗೆ ಕೀರ್ತಿಯಾಡಿದ್ದ ಮಾತು ಅವನಿಗೆ ಅವಮಾನ ಮಾಡುವುದಕ್ಕಿಂತ ಹೆಚ್ಚಾಗಿ ನೋವುಗೈದಿದ್ದವು. ನೀನ್ಯಾವ ಮಹಾವಿದ್ವಾಂತ ಅಂತ ನಿನಗೆ ಹೇಳಬೇಕು? ಹೇಳಿವರೆ ನೀನೇನು ಮಾಡಿಬಿಡುತ್ತೀಯ? ಎನ್ನುವ ಮಾತಿನಲ್ಲಿ ವ್ಯಕ್ತವಾಗಿದ್ದ ತನ್ನ ವಿದ್ಯೆಯ ಬಗ್ಗೆಯ ತಿರಸ್ಕಾರಕ್ಕಿಂತಲೂ ಮಿಗಿಲಾಗಿ, ತನ್ನಲ್ಲಿದ್ದ ಮಾನವೀಯತೆಯನ್ನೂ, ಅದನ್ನು ವ್ಯಕ್ತಪಡಿಸುವ ಅವನ ನೈತಿಕ ಹಕ್ಕನ್ನೂ ಪ್ರಶ್ನಿಸುವ ಧ್ವನಿ, ಹಠಮಾರಿತನ, ಕುತ್ಸಿತಬುದ್ಧಿ ಅವನಿಗೆ ಹುಚ್ಚು ಹಿಡಿಸಿತ್ತು. ತಾನು ಅವಳಿಗೆ ತೋರಬೇಕಾದ್ದು ಗೌರವವಲ್ಲ, ತಿರಸ್ಕಾರ ಅಂತ ಅವನಿಗನಿಸಿದರೂ ತಾನು ಹಾಗೆ ಮಾಡುವುದು ತಪ್ಪಾಗಲಾರದೆ ಎಂದು ಅವನಿಗನಿಸಿದ್ದು ಅವನ ತಪ್ಪು. ಅವರವರ ತಪ್ಪಿಗೆ ಅವರವರೇ ಜವಾಬ್ದಾರರು ಎಂದಲ್ಲವೆ ಬುದ್ಧಿವಂತ ಮಹಾಶಯರು ಹೇಳುವುದು! ಹಾಗಾದರೆ ಕೀರ್ತಿಯ ಬದುಕಿಗೆ ನಾನ್ಯಾಕೆ ಹೊಣೆಗಾರನಾಗಬೇಕು? ಅವಳ ದುಃಖವನ್ನು ಕಡಿಮೆ ಮಾಡಬಹುದೆ? ನನ್ನ ಮಾನಸಿಕ ಸಂಭ್ರಮಕ್ಕೆ ತಾತ್ವಿಕ ನೆಲೆಗಟ್ಟು ಇರಲೇ ಇಲ್ಲವೆ? ಅಥವಾ ಪ್ರತಿಯೊಂದು ನಿರ್ಧಾರಕ್ಕು ತಾತ್ವಿಕ ನೆಲಗಟ್ಟು ಯಾಕಿರಬೇಕು? ಇಂಥ ನೂರು ಪ್ರಶ್ನೆಗಳು ಅವನ ಮನಸ್ಸಿನಲ್ಲಿ ಗೊಂದಲವೆಬ್ಬಿಸಿದುವು. ನಾಗರಾಜ ಮೊದಲ ಬಾರಿಗೆ ನಿಶ್ಚೇಷ್ಟಿತನಾಗಿದ್ದ.

ಮಾರನೆಯ ದಿನ ಬಾಗಿಲಲ್ಲಿ ಬಂದು ನಿಂತ ಕೀರ್ತಿಯನ್ನು ಕಂಡು ಅವನಿಗೆ ಜುಗುಪ್ಸೆಯಾಯಿತು. ಈ ಹೆಣ್ಣಿಗೆ ನಾಚಿಕೆಯೆನ್ನುವುದೇ ಇಲ್ಲವೆ ಎಂದುಕೊಂಡ. ಮರುನಿಮಿಷದಲ್ಲಿಯೇ ಎಂಥ ಅನಾಗರಿಕನಾಗಿ ಯೋಚಿಸುತ್ತಿದ್ದೇನೆ ಎಂದು ಅವನಿಗೇ ಅವಮಾನವಾಯಿತು. ತನ್ನ ನಡವಳಿಕೆಯಲ್ಲಿ ಅಸಂಸ್ಕೃತಿ ತೋರಲಾರಂಭಿಸಿದೆಯೆ ಎಂದು ಅವನಿಗೆ ಕಳವಳ. ಆದರೇನು ಮಾಡಬಲ್ಲ? ಅವನಿಗೆ ಹಾಗನಿಸಿದ್ದು ಸಹಜ. ಅವನ ಮಾನಸಿಕ ತುಮುಲದಲ್ಲಿ ತನ್ನ ಪ್ರತಿಯೊಂದು ಪ್ರಶ್ನೆಗೂ ಉತ್ತರ ಹುಡುಕಿಕೊಳ್ಳುವಷ್ಟು ತಾಳ್ಮೆಯಾಗಲಿ, ಬೌದ್ಧಿಕ ಕಸುವಾಗಲೀ ನಾಗರಾಜನಲ್ಲಿ ಉಳಿದಿರಲಿಲ್ಲ.

ಕೀರ್ತಿಗೆ ಅವನು ಒಳಗೆ ಬಾ ಎಂದಾನೆಂದು ಕಾತರ. ಇಲ್ಲಿಗೆ ಬರುವ ವೇಳೆಗಾಗಲೆ ಅವಳು ಗೊಂದಲದಲ್ಲಿ ಒಂದು ತಾಸು ಕಳೆದಿದ್ದಳು. ಅವನಾಗಿಯೆ ಬಂದು ತಾನು ಹಿಂದಿನ ದಿನ ರಾತ್ರಿ ಮಾಡಿದ ತಪ್ಪಿಗಾಗಿ ಕ್ಷಮೆ

ಯಾಚಿಸುತ್ತಾನೆ, ಆಗ ತಾನು ಎಷ್ಟು ಬಿಗಿಯಾಗಿ ವರ್ತಿಸಬೇಕೆಂದು ಯೋಚಿಸುತ್ತಲೆ ಒಂದು ತಾಸು ಕಳೆದುಬಿಟ್ಟಿದ್ದಳು. ಸಮಯ ಕಳೆದ ಹಾಗೆಲ್ಲ, ತಾನಾಗಿಯೆ ಅವನ ಬಳಿ ಹೋಗುವುದಾದರೂ ಹೇಗೆ ಎಂದು ಯೋಚಿಸತೊಡಗಿದ್ದಳು. ಹಾಗೆ ಹೋಗದಿದ್ದರೆ ಅವನು ನಿಜವಾಗಿಯೂ ಕಲ್ಲೇ ಆಗಿಬಿಡಬಹುದಲ್ಲವೆ? ಕೀರ್ತಿಗೆ ಮೊದಲ ಬಾರಿಗೆ ತಾನು ಅವನ ಆಕೃತ್ಯದಲ್ಲಿ ಭಾಗಿಯೇನೋ ಎಂದೆನಿಸತೊಡಗಿತು. ಅವಳಿಗೆ ತಾನು ತಪ್ಪು ಮಾಡಬಹುದೆಂಬ ಕಲ್ಪನೆಯೂ ಇರಲಿಲ್ಲ. ಈಗ ಇದ್ದಕ್ಕಿದ್ದಂತೆ ಆವಿರ್ಭವಿಸಿದ ಈ ಭಯದಲ್ಲಿ ಒಂದು ರೀತಿಯ ಚಿತ್ಸಂಭ್ರಮ ಅವಳಿಗೆ. ನಾನಾಗಿ ಅವನನ್ನು ಕಂಡು ಮಾತನಾಡಿಸಿದರೆ ತಪ್ಪೇನು ಎಂದು ಅವಳ ತರ್ಕ ತುಡಿಯಿತು.

ಅವನು ಮಾತನ್ನೂ ಆಡಲಾರದಷ್ಟು ತಾಳ್ಮೆ ಸಂಯಮದ ಕಟ್ಟು ಒಡೆದುಕೊಂಡಿದ್ದ. ನನ್ನ ಪ್ರೀತಿಗೆ, ನನ್ನ ಜ್ವಲಂತ ಪ್ರೇಮಕ್ಕೆ ಸಿಕ್ಕ ಮರ್ಯಾದೆ ಈ ತಿರಸ್ಕಾರ ಎಂದು ಇಬ್ಬರಿಗೂ ಅನಿಸತೊಡಗಿತ್ತು. ಬದುಕಿನುದ್ದಕ್ಕೂ ಪರಸ್ಪರ ವಿರುದ್ಧವಾದ ಈ ಭಾವನೆಗಳ ಜೋಗುಳದಲ್ಲಿರುವ ನಾವು ಸತ್ತೇಹೋಗಿಬಿಡುತ್ತೇವೆ ಅಂದುಕೊಂಡ.

ಬಾ ಕೀರ್ತಿ ಎಂದು ಅನ್ನಲಿಲ್ಲ ಅವನು. ತನ್ನ ಪಾಡಿಗೆ ತಾನು ಸಿಗರೇಟು ಸೇದುತ್ತ ಕಾಲು ಚಾಚಿಕೊಂಡುಬಿಟ್ಟಿದ್ದ. ತಂದೆಯನ್ನೋ, ತಾಯಿಯನ್ನೋ ಕಳೆದುಕೊಂಡ ಅನಾಥ ಬಾಲಕನ ಶೂನ್ಯಭಾವ, ಅಸಹಾಯಕತೆ,ಪ್ರಪಂಚದಲ್ಲಿರುವೆಲ್ಲ ಜನರ, ಜೀವನದ ಬಗ್ಗೆ ಜುಗುಪ್ಸೆಯ ಭಾವ ಅವನ ಮುಖದ ಮೇಲೆ ಹರಡಿತ್ತು. ಕೀರ್ತಿಗೆ ಅವನನ್ನು ಕಂಡು ಮರುಕವಾಯಿತು. ತಾನಾಗಿಯೆ ಅವನ ಬಳಿ ಹೋದಳು. ಮಂಚದ ಮೇಲೆ ಕಾಲುನೀಡಿದ್ದ ಮಗುವಿನಂಥ ಆ ವ್ಯಕ್ತಿಗೆ ಆಸರೆ ನೀಡಬೇಕಾದ್ದು ತನ್ನ ಕರ್ತವ್ಯ ಎಂದು ಅವಳಿಗನ್ನಿಸಿರಬಹುದು. ಅಂದರೆ ಇಷ್ಟೊಂದು ವಿಷಯಗಳನ್ನು ಸ್ಪಷ್ಟವಾಗಿ ಯೋಚಿಸಲು ಬೇಕಾದಷ್ಟು ಬೌದ್ಧಿಕ ಸಂಸ್ಕಾರ ಅವಳಿಗೆ ಇತ್ತೆಂದು ಅಲ್ಲ; ಆದರೂ ಅವಳಿಗರಿವಿರದೆ ಈ ಭಾವನೆ ಅವಳಲ್ಲಿ ಮೂಡಿರಬಹುದೆಂಬ ಮಾತು.

ಅವನ ಪಕ್ಕದಲ್ಲಿ ಮಂಚದ ಮೇಲೆ ಕೂತು ಒರಗಿದಾಗ ಅವಳಿಗೆ ತನ್ನ ಮನಸ್ಸಿನ ಭಾವನೆಗಳನ್ನೂ ಅಳೆಯುವ ಚೈತನ್ಯವಿರಲಿಲ್ಲ. ಅವನು ಮಾತ್ರ ಅವಳು ಬಂದೇ ಇಲ್ಲ ಎಂದು ಹೇಳುವವನ ಹಾಗೆ ಸಿಗರೇಟು ಸೇದುವುದರಲ್ಲಿ ಜ್ಞಾನಮಗ್ನನಾಗಿದ್ದ.

ರಾಜಾ ಎಂದು ಅವಳು ಮೆಲ್ಲಗುಸಿರಿದಾಗ ಅವನ ಮೈಮೇಲೆ ಚೇಳು ಹರಿದಂತಾಯಿತು. ಅತೀವ ದುಃಖ ಒತ್ತರಿಸಿ ಬಂತು. ಅವನ ಆತ್ಮರತಿಯ ಭಂಕೋಚದಲ್ಲಿ ಅವಳಿಗೆ ಸ್ಥಾನವಿರಲಿಲ್ಲ. ಅವನು ಎದ್ದು ಶತಪಥ ಶುರು

ಮಾಡಿದ.

ಕೀರ್ತಿಗೆ ಅವಮಾನವಾದರೂ, ತಾನು ತಪ್ಪು ಮಾಡಿದವಳು ಎಂದು ಅನಿಸಿದ್ದರಿಂದ ಅವನ ಹಿಂದೆಯೇ ಓಡಾಡಿಕೊಂಡಿದ್ದಳು. ಅವನ ಹೆಗಲ ಮೇಲೆ ಕೈಹಾಕಿ, ಅವನನ್ನು ಜಗ್ಗುವುದಕ್ಕೆಂದು ಕಣ್ಣು ಕೊಂಕಿಸುವ ಮೊದಲೇ ಚಟೀರ್ ಎಂದು ಅವಳ ಕೆನ್ನೆಯ ಮೇಲೆ ಶಬ್ದ. ನಾಗರಾಜನ ಗಂಡು, ಧೀರ ಕೈಬೆರಳುಗಳು ಅವಳ ಹಾಲುಕೆನ್ನೆಗೆ ಅಂಟಿಕೊಂಡವೇನೋ ಅನ್ನುವ ಹಾಗೆ ಅಲ್ಲಿ ಊರಿಕೊಂಡಿದ್ದುವು.

ತಾನು ತಪ್ಪು ಮಾಡಿದೆ ಎಂದು ನಾಗರಾಜನಿಗೆ ಅನಿಸಿತೆಂದು ಹೇಳಲು ಅಡ್ಡಿಯಿಲ್ಲ. ಆದರೆ ಕೀರ್ತಿಯ ಕಣ್ಣುಗಳಲ್ಲಿ ಮೂಡಿದ್ದ ಚಿಕ್ಕ ಮಗುವೊಂದು ಹೆಣವೊಂದನ್ನು ಕಂಡಾಗ ಉಂಟಾಗುವ ಮುಗ್ಧಯ ಅವನ ಕರುಳು ಕರಗಿಸಿತು. ಅವಳನ್ನು ಹೊಡೆದ ತನ್ನ ಪಾಶವೀ ಹೃದಯಕ್ಕೆ ನೂರು ರೋಗವಿರಲಿ ಎಂದು ಆತ್ಮಶಾಪ ಹಾಕಿ ತಪ್ಪಾಯಿತ ಕೀರ್ತಿ ಎಂದು ಅವಳ ಕಾಲಿಗೆ ಬೀಳಬೇಕು ಎಂತಲೂ ಅನಿಸಿತು. ಆದರೆ ಅವನು ಗಂಡಸಲ್ಲವೆ ? ಓದಿದವನು ಕೂಡ. ಕೀರ್ತಿ ಅವನ ವರ್ತನೆಯನ್ನು ತಪ್ಪು ತಿಳಿಯಲೂಬಹುದು.

ತನ್ನ ಇಡೀ ಜೀವಮಾನದಲ್ಲಿ ಶಾರೀರಕವಾದ ನೋವು ಏನೆಂಬುದೇ ಅರಿಯದ ಕೀರ್ತಿಗೆ ಅದು ಆದಾಗ, ತಾನೆಂಥ ಅಬಲೆ ಎನಿಸಿಬಿಟ್ಟಿತು. ನಾಗರಾಜನ ಮೇಲೇರಿ ನಾಲ್ಕು ಬಡಿಯಬೇಕೆನ್ನಿಸಿತು. ತನ್ನ ಕೆನ್ನೆಯ ಮೇಲೆ ಊರಿದ್ದ ಅವನ ನಾಲ್ಕು ಬೆರಳುಗಳ ನೋವು. ತನ್ನ ನಿಷ್ಕಲಂಕ ಪ್ರೇಮಕ್ಕೆ ಸಿಕ್ಕಿದ ತಿರಸ್ಕಾರದ ಅಪರಿಮಿತ ಘಾಸಿ. ತಾನು ಪ್ರೇಮಕ್ಕೆ ಅನರ್ಹಳಾಗುವಷ್ಟು ಕುರೂಪಿಯಾಗಿಬಿಟ್ಟಿನೆ ಎಂಬ ಭಯಮಿಶ್ರಿತ ಸಂದೇಹ— ಎಲ್ಲವೂ ಕೂಡಿ ಅವಳನ್ನು ನಿರ್ವೀರ್ಯಳನ್ನಾಗಿಸಿಬಿಟ್ಟವು. ನೋವು, ಅಪಮಾನ, ಅಸಹಾಯಕತೆ ನುಂಗಿಕೊಂಡು ಅವಳು ತನ್ನ ಕೋಣೆಯತ್ತ ನಡೆದಳು. ಯಾರದೂ ಪಾಪವಿಲ್ಲದೆ ಆ ಎರಡು ಜೀವಗಳಿಗೆ ಉಂಟಾದ ಗಾಯಗಳಿಗೆ ಪ್ರೀತಿಯ ಮಾತುಗಳ ಉತ್ತೇಜಕ ಮದ್ದನ್ನು ನೀಡುವಂಥ ಹೃದಯ ಶ್ರೀಮಂತಿಕೆ ಆ ಮನೆಯಲ್ಲಿದ್ದ ಒಂದೇ ಒಂದು ವ್ಯಕ್ತಿ— ಚಂದ್ರಾನಿಲರಾಯರು, ಬಹುಶಾಲು ಮೂಗರೇ ಅಲ್ಲವೆ?

ನಾಗರಾಜ ತಪ್ತಗೊಂಡಿದ್ದ. ಅವನಿಗೆ ಕೀರ್ತಿಯನ್ನು ಕಂಡು ಪಶ್ಚಾತ್ತಾಪ ನಾಡಿ ಕ್ಷಮೆ ಯಾಚಿಸಬೇಕು ಅನಿಸಿದರೂ ಅದರಿಂದ ಏನೂ ಪ್ರಯೋಜನವಾಗಲಾರದು ಎನಿಸಿತು. ಬರಿಯ ಮಾತುಗಳ ತಪ್ಪೊಪ್ಪಿಗೆಯಿಂದ ಮಾಗುವಂಥ ಗಾಯವಲ್ಲ ತಾನು ಅವಳ ಅಹಂಕಾರಕ್ಕೆ ಮಾಡಿದ್ದುದು ಅಂತಲೂ ಅನಿಸಿತು. ತನ್ನ ವ್ಯಕ್ತಿತ್ವಕ್ಕೆ, ಅದನ್ನು ಅರ್ಥಮಾಡಿಕೊಳ್ಳುವಷ್ಟು ಮಾನಸಿಕ ಸ್ವಾಸ್ಥ್ಯಕ್ಕೆ ಕೀರ್ತಿಯಲ್ಲಿ ಅವಕಾಶವೇ ಇಲ್ಲ. ಅದು ಇಲ್ಲದಿದ್ದು

ದರಿಂದಲೇ ಅವನಿಗೆ ತನ್ನ ಬಗ್ಗೆ ಬೇಸರವಾಗುತ್ತಿತ್ತು. ಅದು ಅವಳಲ್ಲಿ ಇಲ್ಲವೆಂದು ಗೊತ್ತಿದ್ದು ಯಾಕೆ ನಾನು ಅವಳೊಡನೆ ಕೇವಲ ಸಂಬಂಧ ಬೆಳಸಿಕೊಂಡೆ? ಅವಳ ಪವಿತ್ರವಾದ ಪಾಪಕ್ಕೆ ನನ್ನ ಜೀವನದರ್ಶನ ದಲ್ಲಿ ಅರ್ಥವೇ ಇಲ್ಲದಿರುವಾಗ ಅವಳ ಪಾಪವನ್ನು ಪವಿತ್ರ ಎಂದು ಹೇಗಾದರೂ ಭಾವಿಸಿದೆ? ನಾಗರಾಜನಿಗೆ ತನ್ನ ಯೋಚನೆ ಸರಿಯಾದುದೆ ಎನಿಸಿದರೂ ಅದಕ್ಕೆ ವಿರುದ್ಧವಾಗಿ ಮೂಡಿ ಬರುತ್ತಿದ್ದ ಆಲೋಚನೆಯೂ ಸರಿಯಾದುದೇ ಅನಿಸಿಬಿಡುತ್ತಿತ್ತು. ತನ್ನ ಈ ದ್ವಂದ್ವಕ್ಕೆ, ಚಿತ್ತವ್ಯಾಕುಲತೆಗೆ ಸಮಾಧಾನ ಕಂಡುಕೊಳ್ಳಲು ಬೇಕಾದುದಕ್ಕಿಂತಲೂ ಹೆಚ್ಚಿನ ವಿದ್ಯಾವಂತನಾಗಿದ್ದುದರಿಂದಲೇ ತನಗೆ ಈ ಭಯಂಕರ ಹಿಂಸೆ, ಅಹಂಕಾರದ ಪರ್ಯಾಯ ವೈಯಲೆನ್ಸ್.

ಕೀರ್ತಿಗೆ ಮಂಕು ಕವಿದಿತ್ತು. ತಾನು ಯಾರು ಅತ್ಯಂತ ಸೂಕ್ಷ್ಮವೆಂದೂ, ಅಮೂಲ್ಯವೆಂದೂ ಭಾವಿಸಿದ ನಾಗರಾಜನೇ ಹೀಗೆ ಅನಾಗರಿಕನಾಗಿ ನಡೆದುಕೊಂಡಿದ್ದರಿಂದ ಆಘಾತವಾಗಿತ್ತು. ಯಾರೊಡನೆ ಹಂಚಿಕೊಂಡಾಳು, ತನ್ನ ಮನದ ವೇದನೆಯನ್ನು? ಅವಳಿಗೆ ಊಟ ನಿದ್ದೆಗಳು ಅತ್ಯವಶ್ಯಕವೆಂದು ಇನ್ನೂ ಅನಿಸುವುದು ಸಾಧ್ಯವಿರಲಿಲ್ಲ. ಅದರ ಮಿತಿಯನ್ನೂ ಮೀರಿಬಿಟ್ಟಿದ್ದಳು. ಯಾರಿಗಾಗಿ ಸಿಂಗಾರ ಮಾಡಿಕೊಳ್ಳಬೇಕೆಂಬ ಸುಳ್ಳು ಯೋಚನೆಯೂ ಅವಳಲ್ಲಿ ಸುಳಿದುಬಿಟ್ಟಿತು. ಪ್ರತಿಮಾದೇವಿಯರು ಗದ್ದರಿಸಿದರೆ ಸುಮ್ಮನಾಗುತ್ತಿದ್ದಳು. ಯಾರ ಮಾತಿಗೂ ಕಿವುಡಾಗುವಂತಿದ್ದ ಅವಳನ್ನು ನುಡಿಸುವ ಧೈರ್ಯವಾಗಲೀ, ಅವಳ ಅಳಲನ್ನು ಅರ್ಥಮಾಡಿಕೊಂಡು, ಬೇಕಾದ ಸಮಾಧಾನ ನೀಡುವುದಕ್ಕೆ ಅತ್ಯವಶ್ಯಕವಾಗಿದ್ದ ಸಹೃದಯತೆ ಅಲ್ಲಿ ಯಾರಿಗೂ ಇರಲಿಲ್ಲ. ಇದ್ದರೂ ಅದು ಅವಳಿಗೆ ಬೇಕಿರಲಿಲ್ಲ.

ಪ್ರತಿಮಾದೇವಿಯರಿಗೆ ಕೀರ್ತಿಯಲ್ಲಿ ತುಂಬಿ ತುಳುಕಾಡುತ್ತಿದ್ದ ಅದಮ್ಯ ಉತ್ಸಾಹ ಕಡಿಮೆಯಾಗಿರುವುದು ಕಾಣದೆ ಇರಲಿಲ್ಲ. ಆದರೆ ಅವರೇನು ಮಾಡುವ ಹಾಗಿದ್ದರು? ಒಂದು ಕಾಲದಲ್ಲಿ ಜೀವನದ ಸಮಸ್ಯೆಗಳ ಬಗ್ಗೆ ತಲೆ ಕೆಡಿಸಿಕೊಳ್ಳದಿರುವುದು ಅವಳಲ್ಲಿನ ಒಂದು ಒಳ್ಳೆಯ ಗುಣವಾಗಿ ಅವರಿಗೆ ಕಂಡಿತ್ತು. ಅವಳ ಆ ಗುಣ ತಮಗಿಲ್ಲವಲ್ಲ ಎಂದು ಅವರೆಂದುಕೊಂಡುದೂ ಉಂಟು. ತಮ್ಮ ಬುದ್ಧಿಶಕ್ತಿಯಲ್ಲಿ ಕೆಲಭಾಗವನ್ನು ಕೀರ್ತಿಗೆಂದು ಹಂಚಿಕೊಡುವುದು ಸಾಧ್ಯವಾಗಿದ್ದರೆ ಎಂದು ಹಲುಬುತ್ತಿದ್ದರು. ಆದರೆ ಈಗ ಬದುಕು ಅವಳಿಗೆ ಪಾಠ ಕಲಿಸಹತ್ತಿದೆ. ಅವಳ ಮುಗ್ಧತೆ ಮಾಯವಾಗಿದೆ. ತಮ್ಮ ರೀತೀಯೇ ಅವಳೂ ಆದಾಳು ಇನ್ನು ಕೆಲದಿನದಲ್ಲಿ. ಅವರಿಗೆ ಇದ್ದ ಒಂದು ಭಯವೆಂದರೆ ಅವಳ ಹಠಮಾರಿತನ. ಹೊಸ ಹೊಸ ಅನುಭವಗಳನ್ನು ತುಳಿಯುವ ಭರದಲ್ಲಿ ತನ್ನ ಜೀವತ್ವವನ್ನೇ ಎಲ್ಲಿ ಹೊಸಗಿಹಾಕಿಬಿಡುತ್ತದೋ ಎಂಬುದು. ತಾವಾದರೋ ಮೊದಲಿಂದಲೂ ಮುಗ್ಧತೆಯೇನು ಎಂದೇ ಅರಿಯದೆ ಬೆಳೆದ ಹೆಣ್ಣು. ಒಂದು ರೀತಿಯಲ್ಲಿ ಜೀವನದ ಎಲ್ಲ ಪಾಠಗಳನ್ನೂ ಕಲಿತೇ ಹುಟ್ಟಿದವರು ಎಂದರೂ ಆದೀತು. ಆದುದರಿಂದಲೇ ವಿಶ್ವನಾಥ ತನ್ನನ್ನು ಮದುವೆಯಾಗಬಾರದೆಂಬ ಅನಪೇಕ್ಷಿತವಾದರೂ, ಆರಾಮವಾದ ನಿರ್ಧಾರ ತೆಗೆದುಕೊಳ್ಳುವುದು ತಮಗೆ ಸಾಧ್ಯವಾಯಿತು. ಚಂದ್ರಾನಿಲರಾಯನಂಥ ಒಂದು ಪ್ರಾಣಿಯನ್ನು ಹೊತ್ತು, ಅದರೊಡನೆ ಸಂಭೋಗಿಸಿ, ಕೋಡಗದಿಂದಲೇ ಮಾಣಿಕ್ಯದಂಥ ಕೀರ್ತಿಯನ್ನು ಹುಟ್ಟಿಸಿದೆ. ವಿಶ್ವನಾಥ ಸತ್ತಾಗ ಗಂಡನಲ್ಲಿನ ವೈಭವ್ಯವನ್ನು ಕಂಡೆ. ಕೀರ್ತಿಯಾದರೋ ಮುಗ್ಧೆ. ಅವಳನ್ನು ಹೇಗೆ ತಾನೆ ಬದುಕಿನ ಕ್ರೌರ್ಯಕ್ಕೆ ಬಗ್ಗಿಸಿ, ಅದರ ಕ್ರೌರ್ಯದಿಂದಲೇ ಸುಂದರವಾದುದನ್ನು ಹುಟ್ಟಿಸುವಂತೆ ಮಾಡುವುದು?

ಬಹುಶಃ ಈ ಕಾರಣದಿಂದಲೇ ಇರಬೇಕು, ಚಂದ್ರಾನಿಲರಾಯರನ್ನು ಕಂಡಾಗ ಅವರಲ್ಲಿ ಅನಿರೀಕ್ಷಿತವಾದ ಅಭಿಮಾನದ ಸೆಳೆ ಉಕ್ಕಿ ಬರುತ್ತಿತ್ತು, ಇತ್ತೀಚೆಗೆ. ಆ ವ್ಯಕ್ತಿಯಲ್ಲಿ ಕಾಡುಪ್ರಾಣಿಯ ಗುಣಗಳಿದ್ದುದರಿಂದಲೇ ಅದು ಈಗಲೂ ಮಗುವಿನಂತೆ ಮುಗ್ಧ ಹೃದಯ ಹೊಂದಿದೆ. ಅದಕ್ಕೆ ತನ್ನ ಹೆಂಡತಿ ದೈವ ಸ್ವರೂಪ. ಅವಳು ತಪ್ಪು ಮಾಡಲಾರಳು. ಅವಳು ತಪ್ಪು ಮಾಡಿದರೆ ಅದು ಖಂಡಿತ ತಪ್ಪು ಆಗುವುದಿಲ್ಲ. ಅವಳ ದೈವ ಹಸ್ತ ತಪ್ಪಿನ ಪಾಪವನ್ನು ಕಳೆದು ಅದಕ್ಕೆ ಶುದ್ಧಾತ್ಮವನ್ನು ನೀಡಿಬಿಡುತ್ತದೆ ಎಂಬ ಖಚಿತ ನಂಬಿಕೆ. ಇಂದು ಮನೆಗೆ ಅದು ಬಂದಾಗ ಹೆಚ್ಚಿನ ಪ್ರೀತಿ ತೋರಿಸಿ, ಅದಕ್ಕೆ ಖುಶಿಯಾಗುವಂತೆ ಮಾಡಬೇಕು ಅಂದು

ಕೊಂಡರು ಪ್ರತಿಮಾದೇವಿ.

ಸಾಯಂಕಾಲದ ಸೂರ್ಯರಶ್ಮಿ ಪಶ್ಚಿಮದ ಮಲೆಗಳ ಕಿಂಡಿಯಿಂದ ಪ್ರತಿಮಾದೇವಿಯರ ಮೇಲೆ ಬಿದ್ದು ಲಾಸ್ಯವಾಡುತ್ತಿತ್ತು. ಅವರಿಗೊಂದು ಕ್ಷಣ ಅನಿಸಿತು: ತಮ್ಮ ಸೌಂದರ್ಯದಿಂದ ಪೂಜ್ಯಗೊಂಡ ಆ ರವಿಕಿರಣಗಳ ಭಾಗ್ಯ ತಮಗೇ ಇಲ್ಲವಲ್ಲ ಎಂದು. ದೂರದಲ್ಲಿ ಬರುತ್ತಿದ್ದ ಮಗಳು, ಅಳಿಯನನ್ನು ಕಂಡಾಗ ತಮ್ಮ ಪತಿಯಾಗಿದ್ದ ವಿಶ್ವನಾಥ ಈಗ ನನ್ನ ಬಳಿಯಿದ್ದಿದ್ದರೆ ಎಂದು ಹೃದಯ ಕರುಬಿತು. ಅವರಿಗೊಂದು ಸಮಾಧಾನ: ವಿಶ್ವನಾಥ ಎಂದೂ ಸಂಪೂರ್ಣ ಸಾಯುವುದಿಲ್ಲ. ಅವನು ಸಾಯುವುದಕ್ಕಾಗಿ ಹುಟ್ಟಲಿಲ್ಲ. ಅವನಿಗೆ ಸಾವು ಬರುವುದು ನನ್ನ ಅವಸಾನದಿಂದ ಮಾತ್ರ. ಅಷ್ಟು ಹಚ್ಚ ಹಸಿರು, ನಚ್ಚನೆಯ ಬಿಸಿಲು, ಅವನ ನೆನಪು.

ಅಂದು ರಾತ್ರಿ ಪ್ರತಿಮಾ ಅರೆಬೆತ್ತಲೆಯಾಗಿ ಹಾಸಿಗೆಯ ಮೇಲೆ ಕುಳಿತಿದ್ದರು. ನಲವತ್ತರ ಹೊಸ್ತಿಲಲ್ಲೂ ಸ್ನಿಗ್ಧವಾಗೇ ಉಳಿದಿದ್ದ ಆಕೆಯ ಸೌಂದರ್ಯಕ್ಕೆ ದೃಷ್ಟಿ ತಾಕೀತು ಎಂದು ಚಂದ್ರಾನಿಲರಾಯರು ಪತ್ನಿಗೆ ಬೆನ್ನುಹಾಕಿ ಕಿಟಕಿಯಾಚೆ ಕುಳಿತಿದ್ದರು. ಅವರು ಅಲ್ಲಿದ್ದ ಉದ್ದೇಶ ಹೆಂಡತಿಗೇನಾದರೂ ಬೇಕಾದೀತು, ಆಗ ಅವಳ ಶುಶ್ರೂಷೆಗೆ ಊನವಾಗದಿರಲೆಂದು. ಹೆಂಡತಿಯ ಸೌಂದರ್ಯ ನೋಡುವುದಕ್ಕೂ ಅವರಿಗೆ ಭಯ. ಆ ಸೌಂದರ್ಯ ಅನುಭವಿಸಬೇಕಾದ ಯಾಜಮಾನ್ಯ ತನ್ನದೇ ಎಂಬ ಅಹಂಕಾರಕ್ಕಿಂತಲೂ ಅದರ ಅನುಭವಕ್ಕೆ ಬೇಕಾದ ಅರ್ಹತೆ ತನಗಿಲ್ಲವಲ್ಲ ಎಂದು ಚಿಂತೆ. ನೀನು ಮಾಡಿದ ಯಾವ ಕೆಲಸವೂ ನಮಗೆ ಒಪ್ಪಿಗೆಯಾಗಲಿಲ್ಲ ಎಂದು ಸೂಚಿಸುವಂತೆ ತುಸುವೇ ಅಲುಗುತ್ತಿದ್ದ ಆಕೆಯ ಕುಚರಾಶಿಯನ್ನು ನೋಡಿದರಂತೂ ಚಂದ್ರಾನಿಲ ರಾಯರಿಗೆ ಪಾಪಪ್ರಜ್ಞೆ ಮೂಡಿಬಿಡುತ್ತಿತ್ತು. ಅಂಥದು ಆಕೆಯ ಸೌಂದರ್ಯ. ತಮ್ಮ ಮೊಲೆಗಳನ್ನು ಕಂಡರೆ ಪ್ರತಿಮಾದೇವಿಯರಿಗೇ ಒಂದು ರೀತಿಯ ಮೋಹ. ಇವುಗಳಿಗೇ ಅಲ್ಲವೆ ನನ್ನ ಧೀರ ವಿಶ್ವನಾಥ ಸೋತುಹೋದದ್ದು. ನನ್ನ ಶ್ರೇಷ್ಠ ಸೃಷ್ಟಿ ಕೀರ್ತಿಯೂ ಈ ವಿಷಯದಲ್ಲಿ ನನಗೆ ಸರಿದೊರೆಯಾಲಾರಳು. ನಡುವಿನಿಂದ ಸ್ವಲ್ಪ ಮೇಲೆ ನಿಧಾನವಾಗಿ ಉಬ್ಬಿ ಹರಿದು ಪರ್ವತೋತ್ತಮಾಂಗ ಸೂಚಿಸುವಂತೆ ಹೆಮ್ಮೆಯಿಂದ ನಿಮಿರಿ ನಿಂತಿದ್ದ ಮಾಂಸಲ ವಕ್ಷಃಸ್ಥಲಗಳ ಕಂಡಿಯಲ್ಲಿ ವಿಶ್ವನಾಥ ಹುದುಗಿದ ಅವನ ಮುಖ ಅಲ್ಲಿಯೇ ಸಿಕ್ಕಿ ಹಾಕಿಕೊಂಡ ಗುರುತು ಇನ್ನೂ ಹಸಿರಾಗಿದೆ. ಪ್ರತಿಮಾದೇವಿಯರಿಗೆ ಅವನು ತೀರಿಕೊಂಡಿದ್ದು ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು ಅನಿಸಿಬಿಟ್ಟಿತು. ಯಾಕೆ ಹಾಗೆನಿಸಿತೋ ಅವರಿಗೆ ತಿಳಿಯಲಿಲ್ಲ. ಆದರೆ ಅವನನ್ನು ಕೊನೆ

ಗಾಣಿಸಿದ ತಮ್ಮವನ್ನ ಸಂಗಾತಿಯತ್ತ ಅವರ ಮನ ತಿರುಗಿತು. ಹಾಸಿಗೆಯಲ್ಲಿ ಒರಗಿದ್ದವರು ಎದ್ದು ಕುಳಿತರು. ಗಂಡನತ್ತ ನೋಡಿದಾಗ ಅವರಿಗೆ ಕರುಳು ಚುರ್ ಎಂದಿತು. ಕಿಟಿಕಿಯಿಂದಾಚೆ ನೋಡುತ್ತ ಕುಳಿತಿದ್ದ, ತನ್ನ ಅಣತಿಗೆಂದೇ ತನ್ನ ಜೀವ, ಧನ–ಸರ್ವಸ್ವವನ್ನೂ ಮುಡಿಪಾಗಿಟ್ಟ ಆ ಮಹಾಸೈನಿಕನ ಕೆನ್ನೆಯ ಪಕ್ಕದಲ್ಲಿ ಉದ್ದವಾಗಿ, ಒರಟೊರಟಾಗಿ ಬೆಳೆದಿದ್ದ ಮೀಸೆ ಕಾಣಿಸುತ್ತಿತ್ತು. ಅವನ ಮೀಸೆಯ ಒಂದೊಂದು ಕೂದಲಿಗೂ ನನ್ನ ಮೊಲೆಗಳಂಥ ನೂರು ಮೊಲೆಗಳ ಬೆಲೆ ಎಂದು ಪ್ರತಿಮಾದೇವಿಯರಿಗೇ ಅನಿಸಿಬಿಟ್ಟಿತು. ಅಂದರೆ ಪ್ರತಿಮಾದೇವಿಯರಿಗೆ ತಮ್ಮ ನೆಚ್ಚಿನ ಸೇವಕನ ಬಗ್ಗೆ ಅಭಿಮಾನ ಹುಟ್ಟಿದ್ದು ಇದೇ ಮೊದಲೆಂದು ಅರ್ಥವಲ್ಲ. ಹಾಗೆ ಅವರಿಗೆ ಹಲವು ಬಾರಿ ಅನಿಸಿತ್ತು. ವಿಶ್ವನಾಥ ಬದುಕಿದ್ದಾಗಲೂ, ಆ ಯೋಚನೆ ಇದ್ದಕ್ಕಿದ್ದಂತೆ ಆವಿರ್ಭವಿಸುತ್ತಿತ್ತು. ಆದರೂ ತನ್ನ ಹೃದಯವೀಣೆಯನ್ನು ಆನಂದಿಸುವ ವಿಶ್ವನಾಥನ ಕಿವಿ ತನ್ನೆದೆಯ ಮೇಲೆ ಒರಗಿದಾಗ ಪ್ರತಿಮಾದೇವಿಯರಿಗೆ ಚಂದ್ರಾನಿಲರಾಯರ ಯೋಗ್ಯತೆ ಪುಟವಿಟ್ಟ ಚಿನ್ನದಂತೆ ಕಂಗೊಳಿಸುವುದು ಸಾಧ್ಯವಿರಲಿಲ್ಲ. ಈಗ ಅಲ್ಲಿರುವುದು ತಾವು ಮತ್ತು ಅವನು ಇಬ್ಬರೆ. ವಿಶ್ವನಾಥ ನೆನಪು ಮಾತ್ರ. ಅವನ ನೆನಪಿಗೆ ನನ್ನ ಪ್ರೀತಿಯ ನೆನಪು ಕಾಣಿಕೆಯಾಗಲಿ. ಈ ನನ್ನ ಸೇವಾಧುರೀಣನಿಗೆ ನನ್ನ ಪ್ರಿಯಕರ ಅನುಭವಿಸಿದ ಈ ಮಾಣಿಕ್ಯದ ಮೊಲೆಗಳನ್ನು ನೀಡುವುದಕ್ಕಿಂತ ಬೇರೆ ಹೇಗೆ ತಾನೆ ಕೃತಜ್ಞತೆ ತೋರಿಸಬಲ್ಲೆ ? ಸಂಪೂರ್ಣ ನಗ್ನರಾಗಿ ಕುಳಿತರು.

ಚಂದ್ರೂ...ಮೃದುವಾಗಿ ಕರೆದರು.

ಚಂದ್ರಾನಿಲರಾಯರು ಗಕ್ಕನೆ ನಿಂತರು. ಅವರತ್ತ ನೋಡುತ್ತ. ಏನು ಅಪ್ಪಣೆಯಾಗಲಿ ಎನ್ನುವಂತಿತ್ತು ಆ ವ್ಯಕ್ತಿಯ ಕಣ್ಣುಗಳಲ್ಲಿನ ಪ್ರಾಮಾಣಿಕತೆ.

ಬಾ ಇಲ್ಲಿ ಅನ್ನು ಹಾಗೆ ಸಂಜ್ಞೆಗೈದರು ಪ್ರತಿಮಾದೇವಿ.

ಚಂದ್ರಾನಿಲರಾಯರು ಬಳಿಸಾರಿ ಬಂದರು ಓಡೋಡಿ. ಬಂದು ಪತ್ನಿಯ ಹಾಸಿಗೆಯ ಬಳಿ ನಿಂತರು.

ಚಂದ್ರು, ನಿನಗೆ ನಾನು ಬೇಡವೆ ?

'ಬೇಕು.' ಅವರು ಅಂಥ ಸುಂದರವಾದ ಉತ್ತರ ನೀಡುವರೆಂದು ಪ್ರತಿಮಾದೇವಿಯರು ಕಲ್ಪಿಸಿಕೊಂಡಿರಲೇ ಇಲ್ಲ. ಅವನು ಮಾತನಾಡುವುದೇ ಇಲ್ಲ. ಅಥವಾ ಯಾವುದೋ ಉತ್ತರ ನೀಡುತ್ತದೆ ಮಂಗ ಅಂದುಕೊಂಡಿದ್ದರು. ಅದರ ಸರಳತೆ, ನೇರ ತೀಕ್ಷ್ಣತೆ ಅವರಿಗೆ ಆನಂದವುಂಟು ಮಾಡಿತು, ಅನಿರೀಕ್ಷಿತವಾಗಿದ್ದರೂ.

ನನ್ನ ಚಂದದ ಈ ಮೊಲೆಗಳು ಬೇಡವ ?

ಬೇಡ ಅನ್ನುವ ಹಾಗೆ ಚಂದ್ರಾನಿಲರಾಯರು ತಲೆ ಅಲ್ಲಾಡಿಸಿದರು. ಇದೂ ಪ್ರತಿಮಾರಿಗೆ ಅನಿರೀಕ್ಷಿತವಾಗಿಯೆ ಇತ್ತು.

ಯಾಕೆ ?

ಅವರಿಗೆ ಸೋಜಿಗ. ಅವು ಬೇಡ ಅನ್ನುವ ಗಂಡೇ ಹುಟ್ಟಿರಲಿಲ್ಲ.

ಚಂದ್ರಾನಿಲರಾಯರು ಮಾತನಾಡಲಿಲ್ಲ. ಅದು ಬೇರೆಯವರು ಮುಟ್ಟಿದ ತಂಗಳು ಎಂಬ ಭಾವನೆ ಅವನಲ್ಲಿರಬಹುದೇ ಎಂದು ಪ್ರತಿಮಾ ದೇವಿಯರಿಗೆ ಸಂದೇಹವಾಯಿತು. ತಟ್ಟನೆ ಅದು ಸಾಧ್ಯವೇ ಇಲ್ಲ ಎಂಬ ಭಾವನೆಯೂ ಮೂಡಿತು. ತನ್ನ ಯಾವ ಅಂಗಾಗವೂ ಎಂದೆಂದೂ ಹೊಸದೆ. ಅದಕ್ಕಿಂತ ಮಿಗಿಲಾಗಿ, ಅಷ್ಟೊಂದು ಸಂಕೀರ್ಣಭಾವ ಚಂದ್ರಾನಿಲರಾಯರಿಗೆ ಹುಟ್ಟುವ ಸಾಧ್ಯತೆಯೇ ಇರಲಿಲ್ಲ. ಹಾಗೆ ಅಂದುಕೊಂಡವನು ಮಾನವನೇ ಅಲ್ಲ. ವಿಷಜಂತು. ಚಂದ್ರಾನಿಲರಾಯರಿಗಾದರೋ ಅದು ತಮ್ಮ ಯೋಗ್ಯತೆ ಮೀರಿದ ಸಂಭಾವನೆ ಎಂಬ ವಿನಯ. ಹೆಂಡತಿಯ ಜೊತೆ ಸರಸವಾಡಬೇಕೆಂದುಕೊಳ್ಳುವಷ್ಟು ನೀಚನಾಗಿಬಿಟ್ಟೆನೆ ನಾನು ಎಂದು ಅವರು ಗಲಿಬಿಲಿಗೊಂಡರು.

ಪ್ರತಿಮಾರಿಗೆ ಚಂದ್ರಾನಿಲರಾಯ ತನ್ನ ಸೌಂದರ್ಯವನ್ನು ಅನುಭವಿಸುವುದಿರಲಿ, ಅದರ ಬಗ್ಗೆ ಆಶ್ಚರ್ಯಪಟ್ಟುಕೊಳ್ಳಲೂ ಅರಿಯದಷ್ಟು ಮುಗ್ಧ ಎಂದೆನಿಸಿತು. ಆದುದರಿಂದ ಅವನಾಗಿಯೇ ಮುಂದುವರೆಯುವ ಅವಕಾಶವೇ ಇಲ್ಲ ಏನಾದರೂ ಮಾಡಬೇಕು.

ಹೇಳಿದರು: ಒಂದು ಪಕ್ಷ ಈಗ ನೀನು ನನ್ನ ಮೇಲೆ ಮಲಗಿಕೊಳ್ಳಲೇಬೇಕು ಅಂತ ಆರ್ಡರ್ ಮಾಡಿದರೆ !

ಪ್ರತಿಮಾದೇವಿಯರು ಮುಗುಳ್ನಗುತ್ತಿದ್ದರೂ, ಅವರಿಗಿದ್ದ ಭಯ ಅವರಿಗೆ ಮಾತ್ರ ಗೊತ್ತು: ಗಂಡನಲ್ಲಿ ಬಂಡಾಯಸೂಚನೆಯೇ ?

ಅವರೆಂದುಕೊಂಡಂತೇನೂ ಆಗಲಿಲ್ಲದಿದ್ದರೂ ಆಶ್ಚರ್ಯ ಕಾದಿತ್ತು. ಗಂಡ ವಸ್ತ್ರವಿಹೀನನಾಗಿ ತನ್ನ ಮುಂದೆ ನಿಂತುಬಿಟ್ಟ, ಮಗುವಿನ ಹಾಗೆ. ಪ್ರತಿಮಾದೇವಿಯರಿಗೆ ನಗು. ಗಳಗಳ ಅಂತ ಅತ್ತುಬಿಟ್ಟರು.

ಚಂದ್ರಾನಿಲರಾಯರು ತಬ್ಬಿಬ್ಬಾಗಿಬಿಟ್ಟರು. ಹೆಂಡತಿಯ ಕಣ್ಣೀರನ್ನು ಕಂಡು ನಾನೇನು ಅಪಚಾರ ಮಾಡಿಬಿಟ್ಟೆ; ಅಯ್ಯೋ ದರಿದ್ರಜೀವವೆ ! ಎಂದು ಒದ್ದುಕೊಂಡರು. ನಾನೇನು ಮಾಡಿದರೂ ಹೆಂಡತಿಗೆ ಅಪಚಾರವಾಗುತ್ತದಲ್ಲ. ಹೆಂಡತಿಯ ಕಾಲಬಳಿ ಬಿದ್ದು ಕ್ಷಮೆಕೇಳಿ, ಅವಳನ್ನು ಸಂತೈಸಬೇಕೆಂದುಕೊಂಡರೂ, ಆ ಕೆಲಸ ತಮಗೆ ಹೊಸದು ಎಂದು ಅದರ ವಿಚಾರ ಬಿಟ್ಟರು. ಅಂದು ರಾತ್ರಿ ಅವರಿಗೆ ಮುಜುಗರ. ಮಾಡಬಾರದ್ದು ಮಾಡಿ ಹೆಂಡತಿಗೆ ಅವಮಾನ ಮಾಡುತ್ತಿದ್ದೇನೆ ಎಂಬ ಅನ್ಯಾಯಪ್ರಜ್ಞೆ.

ಮೂರನೆಯ ಬೆಳಿಗ್ಗೆ ಚಂದ್ರಾನಿಲರಾಯರು ಹೆಂಡತಿಯನ್ನು ಸಾಧ್ಯವಾದಷ್ಟು ತಪ್ಪಿಸಿಕೊಳ್ಳಲು ಪ್ರಯತ್ನಪಡುತ್ತಿದ್ದುದು ಕಂಡು ಪ್ರತಿಮಾದೇವಿಯರಿಗೆ ಆ ವ್ಯಕ್ತಿಯ ಬಗ್ಗೆ ಕರುಣೆ ಉಕ್ಕಿ ಬಂತು. ನಾನು ಅವನಿಗೆ ಪರಕೀಯಳಾಗಿಬಿಟ್ಟಿದ್ದೇನೆ. ಇಪ್ಪತ್ತು ಸಂವತ್ಸರ ದಾಟಿ ಅವನೊಡನೆ ವೈವಾಹಿಕ ಜೀವನ ನಡೆಸಿದ ಮೇಲೂ ನಾನು ನಿನ್ನ ಹೆಂಡತಿ ಎಂದು ಅವನಿಗೆ ತಿಳಿಹೇಳಬೇಕಾಗಿದೆ. ಇಷ್ಟು ದಿನ ನಾನಾದರೂ ಅವನೊಡನೆ ಗೌರವದಿಂದ ವರ್ತಿಸಬೇಕಾಗಿತ್ತು. ಈಗಿನಿಂದ ಆ ಕೆಲಸ ಸಾಧ್ಯವಾಗುವುದೇ ಇಲ್ಲ. ನಾನೇನಾದರೂ ಅವನಿಗೆ ಗೌರವ ತೋರಿದರೆ ಅವನು ಖಂಡಿತ ಸತ್ತೇಹೋಗುತ್ತಾನೆ ಅವಮಾನದಿಂದ, ಭಯದಿಂದ. ಪ್ರತಿಮಾದೇವಿಯರಿಗೆ ತಮ್ಮ ಬಗ್ಗೆಯೇ ಜುಗುಪ್ಸೆ ಬಂದಿತು. ಜೊತೆಗೇ ತಮ್ಮ ಪತಿಯ ಬಗ್ಗೆ ಅನಂತ ಪ್ರೇಮ ತುಂಬಿ ಬಂದಿತು. ಅವನು ವಿಶ್ವನಾಥನಂತೆ ಹೃದಯಸೀಳಿ ನುಗ್ಗಿಬರುವ ಬಿರುಗಾಳಿಯೂ ಅಲ್ಲ; ಕಾರ್ತೀಕನ ಹಾಗೆ ಪ್ರೀತಿಗಾಗಿ ಕಾಲುಕಟ್ಟಿ, ಅದು ದಕ್ಕಿದಾಗ ಹೆದರಿ ಓಡಿಹೋಗುವ ಪ್ರೇಮಭೀರುವೂ ಅಲ್ಲ. ನಿರಾತಂಕ, ನಿಷ್ಕಲಂಕ ಪ್ರೀತಿ ತೋರುವುದಷ್ಟೇ ತನ್ನ ಕರ್ತವ್ಯ ಎಂದು ಭಾವಿಸಿರುವ ನಿಷ್ಕಾಮ ಪೂಜಾರಿ. ನಾಗರಾಜನ ಹಾಗೆ ಚಂದ್ರಾನಿಲರಾಯರು ಪುಸ್ತಕ ಓದಿ ಅದರಿಂದ ಕಲಿತದ್ದರಲ್ಲಿ ಪ್ರೇಮ ಮಾಡುವ ಹಾಗಿದ್ದರೆ, ಪ್ರತಿಮಾದೇವಿಯರು ಅವರನ್ನು ಕತ್ತು ಹಿಸುಕಿ ಕೊಂದುಹಾಕಿಬಿಡುತ್ತಿದ್ದರು. ಆದರೆ ಅದೇ ಗುಣವನ್ನು ನಾಗರಾಜನಲ್ಲಿ ಕಂಡಾಗ, ಅವನು ಕೀರ್ತಿಯಲ್ಲಿ ತನ್ನ ಪ್ರೇಮಕವಿತೆ ಹಾಡಿದಾಗ ಅವರಿಗೆ ಹೊಟ್ಟೆಯುರಿಯುತ್ತಿತ್ತು.

* * *

ನಾಗರಾಜ ಎದ್ದವನೆ ಒಂದು ರೀತಿಯ ಬೇಸರದಿಂದ ಚಡಪಡಿಸಿದ. ಪಕ್ಕದಲ್ಲಿ ಮಲಗಿದ್ದ ಕೀರ್ತಿ ಒಂದು ಸುಂದರವಾದ ಮಾಂಸದ ಮುದ್ದೆ. ಅವನಿಗೆ ಅವಳ ಬಗ್ಗೆ ಕರುಣೆ ಬಂತು. ಕೀರ್ತಿಯ ಮೈಯಲ್ಲಿದ್ದ ಬಯಕೆಯೆಲ್ಲ ಬತ್ತಿಹೋಗಿದೆಯೆನಿಸಿ ಅವನಿಗೆ ಅಸಹ್ಯವೂ ಆಯಿತು. ಅವಳೊಡನೆ ಕೂಡಿ ಬಾಳುತ್ತಿರುವ ತನ್ನ ಬಗ್ಗೆಯೇ ಅವನಿಗೆ ಮೆಚ್ಚಿಕೆಯಾಗಲಿಲ್ಲ. ತನ್ನ ಮತ್ತು ಅವಳ ನಡುವೆ ಕಂದಕಗಳೇರ್ಪಡುತ್ತಿವೆ ಎಂದೆನಿಸಿ ಅವನಿಗೆ ತಾನೇ ಅದಕ್ಕೆ ಕಾರಣವೆಂದು ತನ್ನ ಬಗ್ಗೆಯೇ ಹೇಸಿಗೆಯಾಯ್ತು. ಅವಳ ಸುಂದರವಾದ ದೇಹದಲ್ಲಿ ಅಡಕವಾಗಿರುವ ಒಂದು ರೀತಿಯ ಕ್ರೌರ್ಯ ತನ್ನ ಕೌರ್ಯಕ್ಕಿಂತಲೂ ಹೆಚ್ಚಿನದೇನಲ್ಲ. ತಾನು ಬುದ್ಧಿವಂತ. ತನ್ನ ವಂಚನೆಗೆ, ವಾಚಾಳಿತನದ ಬೆರಗುಕೊಟ್ಟು, ಸೌಂದರ್ಯೀಕರಿಸುತ್ತೇನೆ. ಅದು ಅವಳಿಗೆ ಆಗುವುದಿಲ್ಲ. ಅಷ್ಟರಮಟ್ಟಿಗೆ ಅವಳು ನನಗಿಂತ ಮೇಲು.

ಅವನಿಗೆ ತಟ್ಟನೆ ವಿಶ್ವನಾಥನ ನೆನಪು ಬಂತು. ವಿಶ್ವನಾಥನೂ ಕೀರ್ತಿಯಂಥವನೆ. ಹಾಗೆ ನೋಡಿದರೆ ತನಗೂ ಪ್ರತಿಮಾದೇವಿಯರಿಗೆ ಒಂದು ರೀತಿಯ ಸಾಮ್ಯ. ಆಕೆಗೂ ತನ್ನದೇ ರೀತಿಯ ಸಂಸ್ಕೃತಿ ಇದೆ. ಆದುದರಿಂದಲೆ ತನ್ನ ಅತ್ಯಂತ ವಿಷಮ ಸ್ಥಿತಿಯಲ್ಲಿ ಆಕೆ ಕೋಪಗೊಳ್ಳುವುದಿಲ್ಲ.

ಚಂದ್ರಾನಿಲರಾಯರು ಬಂದು ಪ್ರತಿಮಾದೇವಿಯರು ಕರೆಯುತ್ತಿದ್ದಾರೆ ಎಂದು ಕರೆದಾಗ ಅವನಿಗೆ ದಿಗಿಲಾಯಿತು. ತಾನು ಆಕೆಯ ಬಗ್ಗೆ ಯೋಚಿಸುತ್ತಿರುವಾಗಲೇ ತನಗೆ ಹೇಳಿಕಳುಹಿಸುವ ಅವರ ಉದ್ದೇಶವಾದರೂ ಏನು? ಅವರಿಗೆ ನಾನು ಅವರ ಬಗ್ಗೆಯೇ ಯೋಚಿಸುತ್ತಿದ್ದುದಾದರೂ ಹೇಗೆ ಗೊತ್ತಾಗಬೇಕು ಎಂದು ತತ್‌ಕ್ಷಣ ಅವನಿಗನಿಸಿ ತನ್ನ ಯೋಚನಾಕ್ರಮದ ಬಗ್ಗೆಯೇ ಅವನಿಗೆ ಹೇಸಿಕೆಯೆನಿಸಿತು. ಚಂದ್ರಾನಿಲರಾಯರು ತನ್ನ ಹೀನತೆಯ ಬಗ್ಗೆ ಏನೆಂದುಕೊಂಡರೋ ಎಂದು ಭಯವಾಗಿ ಅವರತ್ತ ಕತ್ತೆತ್ತಿದ. ಅವರು ಅಲ್ಲಿರಲಿಲ್ಲ.

ಪ್ರತಿಮಾದೇವಿಯರನ್ನು ಕಾಣುವುದಕ್ಕೆ ಅವನಿಗೆ ಒಂದು ಥರ ನಾಚಿಕೆಯಾಯಿತು. ಕೀರ್ತಿಯಾದರೂ ತನ್ನೊಡನೆ ಇದ್ದರೆ ಸುಗಮವಾದೀತು ಎಂದು ಅವಳನ್ನೆಬ್ಬಿಸಿದ. ಏಳು ಕಾಫಿ ಕುಡಿಯೋಣ ಎಂದ. ಜೀವಚ್ಛವದಂತಿದ್ದ ಅವಳ ಕಣ್ಣುಗಳು ಎರಡು ಪ್ರೇತಕೂಪಗಳಂತೆ ಅವನಿಗೆ ಕಾಣಿಸಿದುವು. ದಿಗಿಲಾಯಿತು.

ಕೀರ್ತಿಯಲ್ಲಾಗುತ್ತಿರುವ ಬದಲಾವಣೆ ಅವನಿಗೆ ಭಯಂಕರವಾಗಿತ್ತು. ಕೀರ್ತಿ, ತನ್ನ ಆದರ್ಶ ಮೂರ್ತಿ ಕೀರ್ತಿ ಇವಳೇ ಎಂದು ಅವನು ನೊಂದುಕೊಳ್ಳುವಷ್ಟರಮಟ್ಟಿಗೆ ಅವಳು ಬದಲಾಗಿ ಬಿಟ್ಟಿದ್ದಳು.

ಅವನು ಕರೆದಿದ್ದುದಕ್ಕೆ ಅವಳು ಪ್ರತ್ಯುತ್ತರ ಹೇಳಲಿಲ್ಲ. ಎದ್ದು ಅವನನ್ನು ಹಿಂಬಾಲಿಸಿದಳು. ತನ್ನಿಂದ ಎಲ್ಲಿಯೋ, ಏನೋ ತಪ್ಪಾಗಿದೆ ಎಂದು ಅವನಿಗನ್ನಿಸಿದರೂ, ಎಲ್ಲಿ ಏನು ಎಂದು ಅರ್ಥವಾಗಲಿಲ್ಲ.

ಮನೆಯ ಹೊರಾಂಗಣದಲ್ಲಿ ಕುಳಿತಿದ್ದ ಪ್ರತಿಮಾದೇವಿಯರು ಗಂಭೀರ ವದನೆಯಾಗಿ ಪತಿಯತ್ತ ನೋಡುತ್ತಿದ್ದರು. ಬಾರೋ ನಾಗರಾಜ, ಒಬ್ಬ ಹಾವಾಡಿಗ ಈಗ ಬರ್ತೀನಿ ಅಂತ ಹೇಳಿದಾನೆ. ಇನ್ನೇನು ಬರಬಹುದು. ಸ್ನಾನಮಾಡಿ ಬಾ. ಕೀರ್ತಿ ನೀನೂ ಅಷ್ಟೆ.

ನಾಗರಾಜನಿಗೆ ಇದು ತೀರ ಕೃತಕವೆನ್ನಿಸಿ ನಗು ಬಂತು. ಹಾಗೆ ಹೇಳಬೇಕೆಂದುಕೊಂಡ. ಆದರೆ ಕೀರ್ತಿ ತಾಯಿಯ ಆಜ್ಞೆಯನ್ನು ಶಿರಸಾವಹಿಸಿ ಅಡುಗೆ ಮನೆಯತ್ತ ಹೋಗುತ್ತಿದ್ದುದನ್ನು ಕಂಡು ಅವನಿಗೆ ಬಾಯಿ ಕಟ್ಟಿಹೋಯಿತು.

ಪ್ರಾತಃಕಾಲದ ಒಂಬತ್ತು ಗಂಟೆಗೆ ಸರಿಯಾಗಿ ಹಾವಾಡಿಗ ಬಂದ.

ಅವನ ತಲೆಯನ್ನು ಸುತ್ತಿದ್ದ ರುಮಾಲಿನಲ್ಲಿ ನೂರುನಕ್ಷತ್ರಗಳು ಫಳಫಳನೆ ಹೊಳೆದವು. ನಾಗರಾಜನಿಗೆ ಅದನ್ನು ಕಂಡು ಮೋಜು. ತನ್ನ ಪಕ್ಕದಲ್ಲಿ ಕುಳಿತಿದ್ದ ಕೀರ್ತಿಗೆ ಈ ಆಟ ಖಂಡಿತ ಬೇಸರ ತರಿಸುತ್ತದೆ ಎಂದು ಅವನಿಗೆ ಗೊತ್ತಿತ್ತು. ಅಲ್ಲಿಂದ ಅವಳನ್ನು ಕರೆದುಕೊಂಡು ತೋಟದ ಬಳಿಯಾದರೂ ಸುತ್ತಾಡಿ ಬರುವ ಎನಿಸಿ ಪ್ರತಿಮಾದೇವಿಯರತ್ತ ನೋಡಿದ. ಅಕೆ ಹಾವಾಡಿಗನತ್ತ ನೆಟ್ಟದೃಷ್ಟಿಯಿಂದ ಶಿಲೆಯಂತೆ ಕುಳಿತು ಬಿಟ್ಟದ್ದರು.

ಇವನನ್ನು ಎಲ್ಲೋ ನೋಡಿದ್ದೇನೆ ಎಂದು ನಾಗರಾಜನಿಗೆ ತಟ್ಟನೆ ಅನಿಸಿತು. ಕೇಳಿದ: 'ನಿನ್ನ ಹೆಸರೇನಯ್ಯ ?'

ಈರಪ್ಪ ಬುದ್ಧಿ. ಈರ.

ಈ ಹಾವು ಎಲ್ಲಿಂದ ತಂದೆ ? ಬುಟ್ಟಿಯತ್ತ ಕೈ ತೋರಿಸುತ್ತ ಕೇಳಿದ ನಾಗರಾಜ.

ಈ ಜಾಗದ್ದೆ ಬುದ್ಧಿ. ಅಯ್ಯಾವರ ತೋಟದಲ್ಲಿ ಒಂದು ಕಾಲಕ್ಕೆ ಹಾವೇ ಇರಲಿಲ್ಲ. ಈಗ ಅದೇನು, ಅದೆಲ್ಲಿಂದ ಬಂದವೋ ಏನೋ, ಎಲ್ಲಂದರಲ್ಲೇ ಹೆಣಗಾಡ್ತಾ ಇರ್ತವೆ. ಯಜಮಾನರೂ ತೋಟ ಸುತ್ತೋದು ಬುಟ್ಟುಬುಟ್ಟವ್ರೆ.

ಚಂದ್ರಾನಿಲರಾಯರಿಗೆ ಮಾತು ರುಚಿಸಲಿಲ್ಲ. ಬೇರೆ ಹೊತ್ತಿನಲ್ಲಾಗಿದ್ದಿದ್ದರೆ ಈರ ಹುಟ್ಟಲಿಲ್ಲ' ಅನ್ನಿಸಿಬಿಡುತ್ತಿದ್ದೆ ಎಂದುಕೊಂಡರು. ಆದರೆ ಪಕ್ಕದಲ್ಲಿ ಪ್ರತಿಮಾದೇವಿಯರು. ಚಂದ್ರಾನಿಲರಾಯರಿಗೆ, ತಾವು ಕೋಪಗೊಂಡು ಕೂಗಾಡಿದರೆ, ತಮ್ಮ ಪತ್ನಿಗೆ ಅಸಹ್ಯವಾಗುತ್ತದೆ ಎಂದು ತಿಳಿದಿದ್ದುದರಿಂದ ಸುಮ್ಮನಾದರು.

ಈರ ಬುಟ್ಟಿ ತೆಗೆದು ಹಾವನ್ನು ಕೆದಕಿದ. ಅದು ಬುಸ್ ಎಂದು ಹೆಡೆಯೆತ್ತಿ ಅವನನ್ನು ಹೊಡೆಯಲು ನೋಡಿತು. ಅವನು ಪುಂಗಿಯೂದುತ್ತ, ಅದನ್ನು ಮೇಲಕ್ಕೆ ಕೆಳಕ್ಕೆ ಆಡಿಸುತ್ತ, ಹಾವಿಗೆ ತಲೆ ಕೆಡಿಸುತ್ತಿದ್ದ. ಹಾವು ಪುಂಗಿಯಾಡಿದ ಹಾಗೆ ತಲೆ ಸುತ್ತುತ್ತ, ಲಾಸ್ಯವಾಡುತ್ತಿತ್ತು.

ಕೀರ್ತಿ ಅದನ್ನು ತದೇಕಚಿತ್ತಳಾಗಿ ನೋಡಿದಳು. ಹಾವಿನ ಕಣ್ಣುಗಳೆರಡೂ ಕೋಪದಿಂದ ಉರಿಯುತ್ತಿದ್ದರೂ, ಅದರ ಗಂಭೀರ ಮುದ್ರೆ ಅದಕ್ಕೊಂದು ರೀತಿಯ ಸೌಂದರ್ಯವನ್ನು ನೀಡಿತ್ತು. ಕೀರ್ತಿಗೆ ಖುಷಿಯಾಯಿತು.

ಹಾವು ತಲೆಯಾಡಿಸುತ್ತ, ಇದ್ದಕ್ಕಿದ್ದಂತೆ ರಭಸವಾಗಿ ಅವನತ್ತ ಬುಸ್ಸೆಂದು ನುಗ್ಗಿ ಕಚ್ಚಲು ನೋಡುವುದು. ಅವನು ಕೂಡಲೆ ಜಾಣಾಕ್ಷತೆಯಿಂದ, ಬಟ್ಟೆ ಸುತ್ತಿದ ಕೈಯನ್ನು ಹಿಂದಕ್ಕೆಳೆದುಕೊಂಡು ಪುಂಗಿ

ಯಾಡಿಸುವನು. ಹಾವು ತಲೆಯಾಡಿಸುತ್ತ, ಮತ್ತೆ ತನ್ನ ಸಮಯಕ್ಕೆ ಕಾಯುವುದು.

ನಾಗರಾಜನಿಗೆ ಅದರ ಕೋಪಕ್ಕೆ ಈತ ಎಂದಾದರು ಅಹುತಿಯಾಗುವವನೆ ಎಂದೆನಿಸಿತು. ಕೇಳಿದ: ಇಂಥ ದೊಡ್ಡ ಹಾವು ಇಟ್ಟುಕೊಳ್ಳುವುದು ಯಾವತ್ತಾದರೂ ತೊಂದರೆಯ ಮಾತೆ ಅಲ್ಲವೆ ?

ಈರಪ್ಪ ಮಾತನಾಡಲಿಲ್ಲ. ನಿಧಾನ ಪುಂಗಿಯೂದುತ್ತ ಬುಟ್ಟಿ ಮುಚ್ಚಿ ಕಟ್ಟಿದ.

ನಗುತ್ತ ಹೇಳಿದ: ಇಂಥದೆಷ್ಟೋ ಆದೋ ಬುದ್ಧಿ, ಹಲ್ಕಿತ್ತಿರೋ ಹಾವಲ್ವ.

ನಾಗರಾಜನಿಗೆ ಈ ಭಯಂಕರ ಪ್ರಾಣಿಯೊಡನೆ ಸರಸವಾಡುವ ಈರನ ಬಗ್ಗೆ ಅಸೂಯೆಯಾಯ್ತು. ಕೀರ್ತಿಯಂತೂ ಮುಗ್ಧಳಾಗಿಬಿಟ್ಟಿದ್ದಳು. ಪ್ರತಿಮಾದೇವಿಯರಿಗೆ ಏನೆನ್ನಿಸಿತೋ ಯಾರೂ ಹೇಳಲು ಬರುವಂತಿಲ್ಲ. ಆಕೆ ಪ್ರತಿಮೆಯ ಹಾಗೆಯೇ ಕುಳಿತಿದ್ದರು. ಚಂದ್ರಾನಿಲರಾಯರೊಬ್ಬರೆ, ಅಲ್ಲಿನ ಮನುಷ್ಯಪ್ರಾಣಿಗಳ ಬಗ್ಗೆ ಚಿಂತಿಸುತ್ತಿದ್ದವರು. ಅಷ್ಟೊಂದು ಮನಸೋಲುವಂತಿತ್ತು, ಹಾವಿನ ಕ್ರೂರ ಸೌಂದರ್ಯ. ಚಂದ್ರಾನಿಲ ರಾಯರು ಹೆಂಡತಿಯ ಮನಸ್ಸಿನಲ್ಲಿರುವುದಾದರೂ ಏನು ಎಂದು ಅರಿಯುವ ವ್ಯರ್ಥ ಪ್ರಯತ್ನದೊಡನೆ ಹೆಣಗಾಡುವಂತಿತ್ತು.

ಈರ ಎದ್ದು ಪ್ರತಿಮಾದೇವಿಯರ ಮುಂದೆ ಅಡ್ಡ ಬಿದ್ದ. ಅವನು ಹೊರಹೋಗುತ್ತಿದ್ದಂತೆಯೆ ನಾಗರಾಜನ ಮನಸ್ಸು ಎಲ್ಲಿ ಇವನನ್ನು ಕಂಡಿದ್ದೆ ಎಂದು ಚಿಂತಿಸತೊಡಗಿತು.

* * *

ಅವಳನ್ನು ಪ್ರೀತಿಸಿ, ಅವಳ ಮನಸ್ಸಿನ ಮೇಲೆ ವ್ಯಭಿಚಾರ ಮಾಡಿ, ಅವಳಿಗೆ ಮೋಸಮಾಡಿದೆ ಎಂದು ನಾಗರಾಜ ಒದ್ದುಕೊಂಡ. ಅವನಿಗೆ ಕೀರ್ತಿಯ ದೇಹದ ರುಚಿಯನ್ನು ಸಂಪೂರ್ಣ ಸ್ವಾದಿ ಮಾಡುವ ಹಾಗೆ ನಾನು ನಡೆದುಕೊಳ್ಳಬೇಕು. ಅವಳ ಒಂದೊಂದು ಅಂಗಾಂಗ ನೆಕ್ಕಿ, ಅದರ ಮೇಲೆ ತನ್ನ ವ್ಯಕ್ತಿಗತ ಧ್ವಜ ಹಾರಿಬಿಡಬೇಕು. ವಿಶ್ವನಾಥ ಪ್ರತಿಮಾದೇವಿಯರ ವಿಷಯದಲ್ಲಿ ಮಾಡಿದುದು ಹಾಗೇ. ಅವನನ್ನು ಕಂಡ ದಿನದಿಂದಲೇ ನಾಗರಾಜನಿಗೆ ಅನಿಸಿತ್ತು: ಈತ ಪ್ರತಿಮಾದೇವಿಯಂಥ ಬಂಗಾರದೇವಿಯನ್ನೂ ಬಿಟ್ಟು ಹೋಗಲಾರದಷ್ಟು ಗಂಡಸು. ಪ್ರತಿಮಾ ಎಂದೂ ಅವನವಳೆ. ಅವಳ ಒಂದೊಂದು ಅಂಗಾಂಗದಲ್ಲೂ ಅವನು ತನ್ನ ವಿಗ್ರಹವನ್ನು ಕೆತ್ತಿಬಿಟ್ಟಿದ್ದಾನೆ.

ವಿಚಿತ್ರವೆಂದರೆ ನಾಗರಾಜ, ಪ್ರತಿಮಾದೇವಿಯರ ದೇಹಸಂಪತ್ತಿನ ಬಗ್ಗೆ ಕಾಮುಕನಾಗಹತ್ತಿದ್ದ. ಅವನಿಗೆ ಸ್ಪಷ್ಟವಾಗಿಯೂ ತಿಳಿದಿತ್ತು,

ಕೀರ್ತಿ ಪ್ರತಿಮಾದೇವಿಯರಿಗಿಂತಲೂ ಶ್ರೇಷ್ಠವೆನಬಹುದಾದ ಸೌಂದರ್ಯ ಎಂದು. ಆದರೆ ಅವಳ ಸೌಂದರ್ಯ ಒಂದು ರೀತಿಯ ಎಳೆಯ ಕೋಮಲತೆ. ಪ್ರತಿಮಾದೇವಿಯರು ವಯಸ್ಸಿನಿಂದ, ಅನುಭವಗಳಿಂದ ಬಾಡಿಹೋಗದೆ, ಅದರೂ ಅವುಗಳಿಂದ ಪಕ್ವಗೊಂಡ ಸುಂದರಮೂರ್ತಿ. ಕೀರ್ತಿಯ ದೇಹದ ಎರಡರಷ್ಟು ತೋರವುಳ್ಳ ಆಕೆಯ ಅಂಗಸೌಂದರ್ಯ ಭಯ ಮತ್ತು ಮತ್ತು ಎರಡನ್ನೂ ನಾಗರಾಜನಲ್ಲಿ ಹಿಡಿಸಿದ್ದವು.

ನಾಗರಾಜ ಪ್ರತಿಮಾರೊಂದಿಗೆ ಬಾಳಬೇಕೆಂದು ತೀರ್ಮಾನಿಸಿದ್ದರೆ ಅವನಿಗೆ ಅದೇನೂ ಸಮಸ್ಯೆಯಾಗುತ್ತಿರಲಿಲ್ಲ. ಹಾಗೆ ನೋಡಿದರೆ ಅದೊಂದು ರೀತಿಯಿಂದ ಸಮಸ್ಯೆ ಪರಿಹಾರವಾದಂತೆಯೇ ಆಗುತ್ತಿತ್ತು. ತನ್ನನ್ನು ಪ್ರತಿಮಾದೇವಿಯರು, ತಾನು ಅವರನ್ನ ಬಯಸುವುದಕ್ಕಿಂತ ಹೆಚ್ಚಾಗಿ, ಬಯಸುತ್ತಾರೆಂದು ಬುದ್ಧಿವಂತ ನಾಗರಾಜ ಎಂದೋ ಅರಿತು ಕೊಂಡಿದ್ದ. ಅವರ ವಿಷಯಲೋಲುಪತೆಯ ಬಗ್ಗೆ ಅವನೇನೂ ತತ್ವ ಸಿದ್ಧಾಂತಗಳನ್ನು ಕೆದಕಿ ಹುಡುಕಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿಯೂ ಇರಲಿಲ್ಲ. ಅವರಿಗಿಂತ ಕಿರಿಯಾದ ನಾನು, ತಾನು ಗೌರವಿಸುವ ವ್ಯಕ್ತಿಯೊಬ್ಬನ ಹೆಂಡತಿಯಾದ ಅವರಲ್ಲಿ ಹಾಗೆ ವ್ಯವಹರಿಸಿದರೆ ಅಪಚಾರ ಮಾಡಿದಂತಾಗುವುದಿಲ್ಲವೆ ಎಂದು ಸುಳ್ಳುಸುಳ್ಳೇ ಅವನು ಯೋಚಿಸಿಯೂ ಇರಲಿಲ್ಲ. ಅವನಿಗೆ ಒಂದೇ ಒಂದು ಅಳುಕೆಂದರೆ, ತಾನು ಹಾಗೆ ಮಾಡಿದಾಗ ಕೀರ್ತಿ ಅದರಿಂದ ಹೇಗೆ ಪ್ರಭಾವಗೊಂಡಳು ಅನ್ನುವುದು. ಅವನಿಗೆ ಇತ್ತೀಚೆಗೆ ಕೀರ್ತಿ ಮುಚ್ಚಿದ ಪುಸ್ತಕವಾಗಿಬಿಟ್ಟಿದ್ದಳು. ಭಯ ತರಿಸುವಷ್ಟು ಕೋಮಲವಾದ ಪುಷ್ಪವಾಗಿಬಿಟ್ಟಿದ್ದಳು. ಆದುದರಿಂದಲೆ ಅವನಿಗನಿಸುತ್ತಿದ್ದುದು ಈ ಕೀರ್ತಿಯನ್ನು ಸಂಪೂರ್ಣ ಮರೆತು ಪ್ರತಿಮಾ ದೇವಿಯರ ದೇಹರಾಶಿಯಲ್ಲಿ ನಗ್ನನಾಗುವಷ್ಟು ಧೈರ್ಯ, ಆತ್ಮಶಕ್ತಿ ತನಗಿದಿದ್ದರೆ!

* * *

ಕೀರ್ತಿ ಅಂದುಕೊಂಡಳು: ನಾಗರಾಜ ನನ್ನವನಾಗಬೇಕೆಂದು ಇಷ್ಟೆಲ್ಲ ಬಯಸಿದೆ. ಈಗ ಅವನಾಗಿ, ನನ್ನನ್ನು ಬಯಸಿ ಬಂದಿದ್ದಾನೆ. ಅವನೆಂದರೆ ಯಾಕೋ ಬೇಸರ. ಅವನೆಂದೂ ನನ್ನನ್ನು ಸಂಪೂರ್ಣವಾಗಿ ಅನುಭವಿಸಲೇ ಇಲ್ಲ. ತಾಯಿಯ ಹಾಗೆ ನಾನಿದ್ದಿದ್ದರೆ ಹೀಗೆಂದೂ ಆಗುವುದು ಸಾಧ್ಯವಿರಲಿಲ್ಲ.

* * *

ಪ್ರತಿಮಾದೇವಿಯರು ಚಂದ್ರಾನಿಲರಾಯರೊಡನೆ ಬಾಳ ತೊಡಗಿದರು. ಮೊದಮೊದಲು ಗಂಡನ ಬಗ್ಗೆ ಕರುಣೆ ತೋರಲೆಂದು ತೆರೆದುಕೊಂಡ ಆಕೆಯ ಮನಸ್ಸು, ಅವರ ಉದಾತ್ತತೆಯನ್ನು ಅನುಭವಿಸಿ, ದ್ರವಿಸಿ

ಹರಿಯತೊಡಗಿತು. ತನ್ನಜ್ಜಿ ನಿಾರಲಾರದೆ ಆತ ತನ್ನ ಭದ್ರಬಾಹುಗಳಲ್ಲಿ ತನ್ನನ್ನು ಬಿಗಿದಾಗ ಇವನು ನನ್ನ ವಿಶ್ವನಾಥನಿಗೇನು ಕಡಿಮೆ ಎಂದು ಪ್ರತಿಮಾದೇವಿಯರಿಗೆ ಸಂದಿಗ್ಧವಾಯಿತು. ಗಂಡನ ಒರಟುತನದಲ್ಲಿ ಅಡಗಿದ್ದ ಸಂಸ್ಕೃತಿ ಅವರಿಗೆ ಅಚ್ಚರಿ ಮೂಡಿಸಿತು. ನಾಗರಾಜನ ಓದು, ವಿಶ್ವನಾಥನ ಸ್ವಾಮ್ಯಭಾವ ಇವನಿಗಿದ್ದಿದ್ದರೆ ಇವನೆಂಥ ಧೀರ ಚಿಂತಾಮಣಿ ಯಾಗುತ್ತಿದ್ದ ಎಂದಾಕೆ ನಿಟ್ಟುಸಿರುಬಿಟ್ಟರು.

ಪ್ರತಿಮಾದೇವಿಯರೆಂದೂ ಎಸ್ಟೇಟಿನ ಮೇಲ್ವಿಚಾರಿಕೆ ಹೊತ್ತವರಲ್ಲ. ಅದರ ಬಗ್ಗೆ ತಲೆಕೆಡಿಸಿಕೊಂಡಿರಲೂ ಇಲ್ಲ. ಮದುವೆಯಾದ ತರುಣದಲ್ಲಿ, ವಿಶ್ವನಾಥನೊಡಗೂಡಿ ಬಾಳಬೇಕೆಂಬ ಅವರ ಹೆಬ್ಬಯಕೆ ಹಂಬಲಿಸಿ ಹಬ್ಬಿ, ಅದು ಕಾಯಿಬಿಡುವ ಹೊತ್ತಿಗೆ ಆಕೆಗೆ ಮನೆತನದ ಯಜಮಾನಿಕೆ ಅಚಾನಕವಾಗಿ ದತ್ತವಾಗಿತ್ತು. ಹಾಗೆಂದು, ಅವರೆಂದೂ ತಲೆಕೊಬ್ಬಿ ಯಾರನ್ನೂ ನಡುಗಿಸಲಿಲ್ಲವಾದರೂ, ಅವರ ಮೌನ ಸಮ್ಮತಿಯೋ, ಅಸಮ್ಮತಿಯೋ ಎಂಥದೋ ಒಂದು ಎಲ್ಲರನ್ನೂ ಅವರ ಅಂಕೆಯ ಹದ್ದಿನೊಳಕ್ಕೆ ನೂಕಿತ್ತು ಅವರು ಹಾಕಿದ ಗೆರೆಯನ್ನು ದಾಟಲು ವಿಫಲ ಪ್ರಯತ್ನ ಮಾಡಿ ಕೈ ಸುಟ್ಟುಕೊಂಡವಳೆಂದರೆ ಕೀರ್ತಿಯೊಬ್ಬಳೆ. ಅಂಥದು ಆಕೆಯ ನಾಯಕತ್ವ, ಯಾಜಮಾನ್ಯ. ಅದಕ್ಕೆ ಎಣೆ, ಸಾಟಿಯಾಗ ಬಹುದಾದವಳು ಕೀರ್ತಿಯೊಬ್ಬಳೆ. ಆದರೆ ಅವಳಿನ್ನೂ ಕಿರಿಯಳು.

ಒಂದು ದಿನ ಮುಂಜಾನೆ ಪ್ರತಿಮಾದೇವಿಯರು ಎಸ್ಟೇಟನ್ನು ಬಳಸಿ ಬರೋಣವೆಂದು ಹೊರಟರು. ಚಂದ್ರಾನಿಲರಾಯರಿಗೆ ಅದೊಂದು ಆಶ್ಚರ್ಯ, ಎಸ್ಟೇಟಿನ ಮೇಲ್ವಿಚಾರಣೆಗೆ ತಮ್ಮ ಪತ್ನಿಯೇ ಹೊರಟಾಗ ಅವರ ಕಾರ್ಯಕಲಾಪಗಳು ಸರಿಯಾಗಿಯೇ ನಡೆದಾವು ಎಂಬ ವಿಶ್ವಾಸ ಅವರಲ್ಲಿ ಮೂಡಿತ್ತು. ಅದನ್ನು ಆತ್ಮವಿಶ್ವಾಸ ಎಂದು ಕರೆದರೂ ಆದೀತು. ಆದರೆ ಇಷ್ಟುದಿನ ಅದರ ಬಗ್ಗೆ ಆಸಕ್ತಿ ವಹಿಸಲಿಲ್ಲ. ಹೆಂಡತಿ ಏನು ಬೈದಾರೋ ಎಂಬ ದಿಗಿಲೂ ಅವರಿಗಾಯಿತು.

ಪ್ರತಿಮಾದೇವಿಯರು ಹೊರಟಾಗ ಅವರಿಗೊಂದು ರೀತಿಯ ಗೊಂದಲ. ಯಾಕೆ ತನ್ನ ಬದುಕು ಹೀಗಾಯಿತು? ತಾನು ಮಾಡ ಬೇಕೆಂದುಕೊಂಡಂತೇ ಮಾಡಿದಾಗಲೂ ಪ್ರತಿಕೂಲ ಪರಿಸ್ಥಿತಿ ಉಂಟಾ ಯಿತು ಯಾಕೆ ಕೀರ್ತಿ ನಾಗರಾಜರ ಬದುಕಿಗೊಂಡು ಹಿನ್ನೆಲೆಯಾಗಿ ತಾನು ಬದುಕುವುದಂತೂ ಸಾಧ್ಯವಿಲ್ಲ. ತನ್ನಲ್ಲಿ ಯೌವನವಿದೆ, ಅಧಿಕಾರ ಚಲಾಯಿಸಲು ಬೇಕಾದಷ್ಟು ಬುದ್ಧಿ, ರೂಪವಿದೆ ನಾನಂದುಕೊಂಡಂತೆ ಎಲ್ಲರೂ ನಡೆದುಕೊಂಡಾಗಲೂ ಮನೆಯಲ್ಲಿ ವಿಷಮ ವಾತಾವರಣ ಮೂಡಿತು. ಬಹುಶಃ ನಾನಿರುವಷ್ಟು ಕಾಲ ನನ್ನ ಅಧಿಕಾರಕ್ಕೆ ತಗ್ಗಿ ಬಗ್ಗಿ ನಡೆಯಬೇಕಾದುದರಿಂದಲೇ ಇರಬೇಕು, ನಾಗರಾಜ, ಕೀರ್ತಿಯರ

ಬದುಕಿಗೊಂದು ಸ್ವೋಪಜ್ಞತೆ ಇಲ್ಲ.

ಅವರು ಯೋಚಿಸುತ್ತ ನಡೆಯುತ್ತಿದ್ದರು. ಅಡ್ಡಬಿದ್ದೆ ಅಮ್ಮಾವ್ರಿಗೆ, ಎಂದಾಗ ಅವರಿಗೆ ಎಚ್ಚರ. ಮುಂದೆ ಈರ ವಿನೀತನಾಗಿ ನೆಲಕಚ್ಚಿ ಮಲಗಿದ್ದ. ತಂಗಾಳಿಯ ಹಿತವಾದ ಅಮಲಿನಲ್ಲಿ ಆತ ಹಾಗೆ ಅಡ್ಡಲಾಗಿ, ದೀನನಾಗುವುದನ್ನೂ ಕಂಡು ಅವರಿಗೆ ಅಸಹ್ಯವೆನಿಸಿತು. ತಮ್ಮ ಬದುಕಿಗೊಂದು ಭವ್ಯತೆ ಬೇಕು. ಭವ್ಯತೆಯನ್ನು ಅಧಿಕಾರ ಚಲಾಯಿಸುವುದರಿಂದ ಗಳಿಸಲಿಕ್ಕೆ ಸಾಧ್ಯವಿಲ್ಲ ಕಾಣುತ್ತದೆ. ನಾನು ಯಾರ ಮೇಲೆ, ಎಲ್ಲಿ, ಹೇಗೆ ಅಧಿಕಾರ ಚಲಾಯಿಸಿದೆ? ಅಪ್ರಯತ್ನವಾಗಿ, ಇತರ ದೈನ್ಯದಿಂದ ನನ್ನ ಪ್ರತಿಯೊಂದು ವರ್ತನೆಗೂ ಅಧಿಕಾರದ ಲೋಪ ದತ್ತವಾದರೆ ನಾನು ಮಾಡಬಹುದಾದರೂ ಏನು?

ನಾಗರಾಜ, ಕೀರ್ತಿ ಬೆಳಿಗ್ಗೆ ಮನೆಯಲ್ಲಿರಲಿಲ್ಲ. ಅವರನು ಎಸ್ಟೇಟಿನಲ್ಲಿ ಕಂಡೆಯ ಎಂದು ಈರನನ್ನು ಕೇಳಬೇಕೆನಿಸಿತು. ಆದ್ದರೆ ಯಾಕೋ ನಾಲಗೆ ತಡೆಯಿತು. ಎಲ್ಲಿಗೆ ಹೊರಟೆ ಎಂದು ಕೇಳಬೇಕೆಂದುಕೊಂಡರು. ಅದು ತಮ್ಮ ಅಂತಸ್ತಿಗೆ ಕಿರಿದು ಎಂದು ಸುಮ್ಮನಾದರು. ಮುಖ್ಯವಾಗಿ ತಾವು ಹಾಗೆ ಕೇಳಿದಾಗ ಆತ ಆನಂದತುಂದಿಲನಾಗುತ್ತಾನೆ. ಅದರಿಂದ ಅವನ ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದು ಭಾವಿಸಿ ಅಕೆ ಮುಂದುವರೆದರು.

ಎಸ್ಟೇಟಿನಲ್ಲಿ ಕಾಲುಗಂಟೆ ಸುತ್ತಾಡಿದ ಬಳಿಕ ಅವರಿಗೇಕೋ ಬೇಸರವೆನಿಸಿತು. ಯಾಕೆ ಎಂದೂ ಇಲ್ಲದ ಈ ಕಾರ್ಯಕ್ರಮ ಹಾಕಿಕೊಂಡೆ ಎಂದು ಪ್ರತಿಮಾ ತಮ್ಮನ್ನೆ ಶಪಿಸಿಕೊಳ್ಳುತ್ತ ಮನೆಯತ್ತ ತಿರುಗಿದರು. ಅವರಿಗೊಂದು ವಿಶೇಷ ಕಾದಿತ್ತು.

ದೂರದಲ್ಲಿ ಕೀರ್ತಿ ನಾಗರಾಜರು ನಿಂತಿದ್ದರು. ಅವರ ಸನಿಹ ಯಾರೋ ಒಬ್ಬಾತ ನಿಂತಂತೆ. ಕೀರ್ತಿ ಅವನನ್ನು ಹೆದರಿಸುತ್ತಿದ್ದಂತೆ. ಅವನು ಭಯದಿಂದ, ಅದಕ್ಕೂ ಮಿಗಿಲಾಗಿ ಆತ್ಮವಿಮರ್ಶೆಯ ಅವಮಾನದಿಂದ ಥರಥರನೆ ನಡುಗುತ್ತಿದ್ದಂತೆ. ಪ್ರತಿಮಾದೇವಿಯರು ಸರಸರನೆ ಅತ್ತ ನಡೆದರು. ಕುತೂಹಲವೆಂದರೆ ಮೊತ್ತಮೊದಲ ಬಾರಿಗೆ ಅಕೆಗೆನಿಸಿತು : ನಾನು ಅತ್ತ ಹೋಗುತ್ತಿರುವುದು ಅವರ್ಯಾರಿಗೂ ಕಾಣಬಾರದು.

ಪ್ರತಿಮಾದೇವಿಯರು ಅವರ ಸನಿಹ ಬರುವಷ್ಟರಲ್ಲಿ ಆ ದೃಶ್ಯನಾಟಕದ ಒಂದು ಹಂತ ಅಗಲೇ ಮುಗಿದುಹೋಗಿತ್ತು. ಅವರಿಗೆ ಕಾಣಿಸುತ್ತಿದ್ದುದು ಕೀರ್ತಿ ಬಾರುಕೋಲಿನಿಂದ ಈರನನ್ನು ಥಳಿಸುತ್ತಿದ್ದುದು. ಅವನ ಕೈಕಾಲುಗಳ ಮೇಲೆ ಒಂದೊಂದು ಏಟು ಬೀಳುತ್ತಿದ್ದ ಹಾಗೆ ನಾಗರಾಜ ನೋವಿನಿಂದ ನರಳುತ್ತಿದ್ದುದು. ಈರ, ತಾನು ಮಾಡಿದ ತಪ್ಪಿಗೆ ಇದು ಸರಿಯಾದ ಶಿಕ್ಷೆ ಎಂಬ ಭಾವನೆಯಿಂದ ನಿಂತಿದ್ದುದು. ಅವನಿಗೆ ತಾನ

ಮಾಡಿರಬಹುದಾದ ತಪ್ಪಿನ ಗಾತ್ರದ ಬಗ್ಗೆ ಚಿಂತೆ.

ಪ್ರತಿಮಾರಿಗೆ ಆನಂದವಾಯಿತು. ಮಗಳು ಈರನನ್ನು ಬಡಿಯುತ್ತಿದ್ದ ಹಾಗೆ, ನನ್ನ ಕೀರ್ತಿ ಇನ್ನೂ ಬದುಕಿದ್ದಾಳೆ. ಮಾನವಸಹಜ ಅಸೂಯೆ, ಕ್ರೋಧ ಕಾಮಗಳು ಅವಳಲ್ಲಿನ್ನೂ ಸತ್ತಿಲ್ಲ. ಅವು ನಶಿಸಿಹೋಗಲಿಲ್ಲ ಎಂದು ತೋರಿಸಿಕೊಟ್ಟ ಈರನೇ ನಿನಗೆ ವಂದನೆ.

ಕೀರ್ತಿ ಹೇಳಿದಳು: ಇನ್ನೊಂದು ಸಾರಿ ಅಮ್ಮ ಹೇಳಿದರು, ಅಪ್ಪ ಹೇಳಿದರು, ಅವರು ಇವರು ಬೊಗಳಿದರು ಅಂತ ಹಾವುಗೀವು ಮನೆ ಹತ್ತಿರ ತಂದರೆ ಕಾಲು ಮುರಿದುಹಾಕ್ತೀನಿ. ಚರ್ಮ ಹರೀತೀನಿ. ಹಲ್ಕಾ ಸೂಳೆಮಗನೆ. ಇವತ್ತಿಗೆ ಬದುಕಿದೆ ಹೋಗು.

ಈರ ಆಜ್ಞೆಯನ್ನು ಶಿರಸಾವಹಿಸಿ, ಸಲಾಮುಹಾಕಿ ತನ್ನ ತಪ್ಪು ತೋರಿಸಿಕೊಟ್ಟದ್ದಕ್ಕಾಗಿ ಅವಳನ್ನು ವಂದಿಸಿ ಹೊರಟುಹೋದ.

ಪ್ರತಿಮಾದೇವಿಯರಿಗೆ ಅರ್ಥವಾಗಲಿಲ್ಲ. ಯಾಕೆ ಕೀರ್ತಿ ತನ್ನ ಆಜ್ಞೆಯ ವಿರುದ್ಧ ಸಿಡಿಮಿಡಿಗೊಂಡಿದ್ದಾಳೆ. ಅವಳಿಗೆ ನನ್ನ ಅಂಕುಶದ ಪಾವಿತ್ರ್ಯದ ಬೆಳಗಿನಲ್ಲಿ ಇರುವುದು ಇಷ್ಟವಿಲ್ಲವೆ! ಹಾಗೆಂದು ಅವಳು ಇರಲೇಬೇಕೆಂದು ನಾನೆಂದೂ ಹೇಳಲಿಲ್ಲವಲ್ಲ. ಆದರೂ ಅವರಿಗೆ ಕೀರ್ತಿ ಯಲ್ಲಿನ ಅಧಿಕಾರಶಾಹಿ ವರ್ತನೆ ಮೆಚ್ಚಿಗೆಯಾಯಿತು. ಎಷ್ಟೆಂದರೂ ಅವಳು ಪ್ರತಿಮಾದೇವಿಯರ ಮಗಳಲ್ಲವೆ ಎಂದು ಅವರಿಗೆ ಹೆಮ್ಮೆಯೂ ಆಯಿತು.

ಅವರಿಗೆ ಕುತೂಹಲ. ಇದು ನಿಜವಾಗಿಯೂ ತಮ್ಮ ಮೇಲಿನ ಕೋಪವೆ, ಅಥವಾ ಮತ್ತೇನಾದರೂ ಇದಕ್ಕೆ ಕಾರಣವೆ? ಇನ್ನೂ ಸನಿಹ ಜಾರಿ ಆಲಿಸಿದರು:

ನಾಗರಾಜ ಹೇಳಿದ: 'ಅವನನ್ನು ಯಾಕೆ ಹೊಡೀಬೇಕಾಗಿತ್ತು ಕೀರ್ತಿ' 'ಅಂದರೆ ಹೊಡೀಬಾರ್ದಾಗಿತ್ತು. ಕಾಲಿಗೆ ಬಿದ್ದು ಪೂಜೆ ಮಾಡಬೇಕಾಗಿತ್ತು ಅಂತಲಾ' ಅವಳು ದಬಾಯಿಸಿದಳು.

'ಹಾಗಲ್ಲ. ಅದಕ್ಕೊಂದು ಕಾರಣ ಬೇಕಲ್ಲವ, ಕೀರ್ತಿ?'

"ಹೌದು. ನಾನು ಕಾರಣ ಇಲ್ಲದೆ ಇನ್ನೊಬ್ಬರ ಕೈಮಾಡ್ತೀನಲ್ವ? ಆಗಲೇ ನನಗೆ ಖುಶಿಯಲ್ವ? ನಾನು ಮಾಡೋದೆ ಹಾಗೆ?"

"ತಪ್ಪು ತಿಳುಕೋಬೇಡ, ಕೀರ್ತಿ. ನಾನೆಂದುದು, ಅವನನ್ನು ಹಾಗೆ ಹೊಡೆಯುವುದಕ್ಕೆ ನಿನ್ನ ಕಾರಣವೇನು ಅಂತ ಅಷ್ಟೆ."

ಕೀರ್ತಿ ಮಾತನಾಡಲಾರದಷ್ಟು ದುಃಖಿಯಾಗಿದ್ದಳು.

ನಾಗರಾಜನಿಗೆ ಇಕ್ಕಟ್ಟು. ಇವಳನ್ನು ಮಾತನಾಡಿಸುವುದೇ ಕಷ್ಟ. ಇವಳೊಂದಿಗೆ ಇಷ್ಟೆಲ್ಲ ವರ್ಷ ಸರಸವಾಡಿದರೂ, ಇವಳನ್ನು ಯಾವಾಗ ಹೇಗೆ ಮಾತನಾಡಿಸಬೇಕೆಂದು ಇನ್ನೂ ಅರ್ಥವಾಗಿಲ್ಲ. ಸುಮ್ಮಗಿದ್ದ.

ಪ್ರತಿಮಾದೇವಿಯರಿಗೆ ಮಗಳು ಮಾತನಾಡಿದ ರೀತಿಯ ಬಗ್ಗೆ ಮೆಚ್ಚಿಗೆಯಾಯ್ತು. ನಾಗರಾಜ ಮಗಳಿಗೆ ಉತ್ತರ ಕೊಡಲಾರದಷ್ಟು ಪುಕ್ಕನಾಗಿಬಿಟ್ಟಿದ್ದಾನೆ, ಅಂತ ಖುಶಿಯೂ ಆಯ್ತು. ಅವರ ಕಿವಿ ಪುಲಕಗೊಂಡು ಮತ್ತೆ ಚುರುಕಾಯಿತು.

'ನೋಡು ಕೀರ್ತಿ', ನಾಗರಾಜ ಹೇಳಿದ : 'ನಾನು ಹೀಗೆ ಮಾತಾಡ್ತೀನಿಂತ ನೀನು ಬೇಜಾರು ಮಾಡಿಕೋಬೇಡ. ನೀನು ಹಾಗೆ ಬೇಜಾರು ಮಾಡ್ಕೊಂಡರೂ, ನನಗೇನೂ ಬೇಜಾರಾಗುವುದಿಲ್ಲ. ಯಾಕೇಂದರೆ ಹೀಗೆ ಮಾತನಾಡುವುದಕ್ಕೆ ನನಗೇ ಅಸಹ್ಯ, ಬೇಜಾರು. ನಾನೆಷ್ಟು ಅಧಮ ಅಂತ ನನಗೇ ಅಸಹ್ಯವಾಗುತ್ತೆ."

ಅವನು ಕೀರ್ತಿಯ ಪ್ರತಿಕ್ರಿಯೆಗೆ ಕಾದ. ಅವಳ ಮುಖದಲ್ಲಿ ನಿರಾಸೆಗಿಂತ ಹೆಚ್ಚಾಗಿ ನಿರುತ್ಸಾಹ.

ಅವನು ಮುಂದುವರಿಸಿದ: "ಒಂದು ರೀತೀಲಿ ನಿನ್ನದೇ ಸರಿ ಅನ್ಸುತ್ತೆ. ಯಾಕೆ ಇಂಥ ಮಾತೆಲ್ಲ ಕೇಳಬೇಕೂಂತ. ನಾನು ತಾನೆ ಯಾಕಿಷ್ಟು ಅದರ ಬಗ್ಗೆ ನೊಂದುಕೋಬೇಕು? ನಿನಗೆ ನಿನ್ನನ್ನಷ್ಟೇ ಪ್ರೀತಿಸಿಕೊಂಡು, ಸಮಾಧಾನಪಟ್ಟುಕೊಳ್ಳುವಷ್ಟು–frankness ಇದೆ. ಸ್ವಾಭಿಮಾನ ಇದೆ. ಆದರೆ ಅದು ಇನ್ನೊಬ್ಬರ ವಿರುದ್ಧ ತಿರುಗೋದು ಅಷ್ಟೊಂದು ಚೆನ್ನಾಗಿ ಕಾಣುವುದಿಲ್ಲ."

ಅದು ತನ್ನನ್ನೇ ಕುರಿತು ಹೇಳುತ್ತಿರುವುದು ಎನ್ನುವುದನ್ನೇ ಅವಳು ಮ್ಯರೆತಂತಿತ್ತು.

ನಾಗರಾಜನಿಗೆ ಒಬ್ಬನೇ ಮಾತನಾಡುವುದು ಬೇಕಿರಲಿಲ್ಲ. ತನ್ನ ಮಾತು ತೀರ ಅಸಹ್ಯವಾಗುವಷ್ಟು ಉಪದೇಶಿತವಾಗುತ್ತಿದೆ ಎಂದು ಅವನಿಗೆ ಅಸಹ್ಯವಾಯಿತು.

ಅವನು ಅವಳಿಗಾಗಿ ಕಾದ. ಅವಳು ಉತ್ತರಿಸಲಿಲ್ಲ. ಅವಳು ಮೌನ ಶಿಲೆಯಂತಾದುದನ್ನು ಕಂಡು ಪ್ರತಿಮಾದೇವಿಯರಿಗೆ ಭಯವಾಯಿತು.

"ಯಾಕೆ ಕೀರ್ತಿ, ನನ್ನ ಹತ್ತಿರ ಮಾತನಾಡಬಾರದೂಂತಾನ?"

ಅವಳು ಕತ್ತೆತ್ತಿ ಅವನನ್ನೇ ದಿಟ್ಟಿಸಿದಳು. ಅವನು ತಲೆ ತಗ್ಗಿಸಿದ.

"ನೀನು ಹೀಗಿರೋದು ನನಗಂತೂ ಇಷ್ಟವಿಲ್ಲ. ಯಾಕೆ ನೀನು ಮೊದಲಿನ ಹಾಗಿರಬಾರದು? ಈಗ ಆಗಿರುವುದಾದರೂ ಏನು? ಯಾರದೋ ಕೋಪ ಯಾರ ಮೇಲೋ ತೀರಿಸ್ಕೊಂಡರೆ ಹೇಗೆ?"

ಪ್ರತಿಮಾದೇವಿಯರಿಗೆ ಅವನನ್ನು ಇರಿದು ತೀರಿಸಿಬಿಡುವಷ್ಟು ಕೋಪ ಬಂತು. ಇವರ ಮಾತುಗಳು ಅರ್ಥರಹಿತ ಅಂತಲೂ ಅನಿಸಿತು. ಅವನು ಪುಸ್ತಕದ ಬದನೆಕಾಯಿ. ಶುದ್ಧವಾದ ಭಾಷೆಯಲ್ಲಿ, ಪಾಠ ಮಾಡಿದ ಹಾಗೆ, ಕನ್ನಡ ಎಂ.ಎ. ಹುಡುಗ-ಹುಡುಗಿಯರು ಮಾತನಾಡುವ ಥರ

ಮಾತನಾಡುತ್ತಾನೆ. ಇವಳಿಗೋ ಪುಸ್ತಕ ಏನೂಂತ ತಿಳಿ ಹೇಳಬೇಕು. ತಾನು, ಇವರ ಅನಿಷ್ಟ ಮಾತು ಕೇಳಲೆಂದೆ ಇಲ್ಲಿಗೆ ಬಂದೆ? ಹೊರಟು ಬಿಡಬೇಕೆಂದುಕೊಂಡರು. ನಾಗರಾಜ ಮುಂದುವರೆದ.

"ಇಲ್ಲಿ ನೋಡು ಕೀರ್ತಿ. ನಿಮ್ಮ ತಾಯಿ ಅವನನ್ನೂ ಬಾ ಅಂತ ಹೇಳಿದರು. ಅವನು ಬಂದ. ಅವನಿಗ್ಯಾಕೆ ಈ ಶಿಕ್ಷೆ? ಹೋಗಲಿ ನಿಮ್ಮ ತಾಯಿ ಥರ ನೀನ್ಯಾಕೆ ಇರಬಾರದು? ಅವರಿಗೆ ಎಲ್ಲರನ್ನೂ ತಮ್ಮ ಹದ್ದಿನಲ್ಲಿಟ್ಟುಕೋಬೇಕೂಂತ ಆಸೆ. ಅದಕ್ಕಾಗಿ ಮೌನಗೊಂಬೆಯ ಥರ ಕೂತುಕ್ಕೊಂಡು ಗಂಡನ್ನ, ನಿನ್ನನ್ನು, ನನ್ನನ್ನ, ಈರನ್ನ ಆಟ ಆಡಿಸ್ತಾರೆ–ಅದಕ್ಕೇ ಅವರನ್ನ ಕಂಡರೆ ನನಗೆ ಮೆಚ್ಚಿಕೆಯಾಗೋದು. ನೀನು...

ಫಟಾರನೆ ಕೀರ್ತಿ ಅವನ ಕೆನ್ನೆಯ ಮೇಲೆ ಅಪ್ಪಳಿಸಿದಳು. ಮಿಂಚಿನಂತೆ ಎರಗಿ ಬಂದ ಆ ಹೊಡೆತಕ್ಕೆ ನಾಗರಾಜ ತತ್ತರಿಸಿಹೋದ. ಅವನು ಏನಾಯಿತು ಎಂದುಕೊಂಡು, ಬಿದ್ದ ಏಟಿನಿಂದ ಚೇತರಿಸಿಕೊಳ್ಳುವಷ್ಟರಲ್ಲಿ ಕೀರ್ತಿ ಎರಗಿ ಬಂದು, ಅವನ ಎದುರೇ ನಿಂತು ಸಿಂಹಿಣಿಯಂತೆ ಗರ್ಜಿಸಿದಳು:

'ಇನ್ನೊಂದು ಸಾರಿ ಅಮ್ಮನ ಸುದ್ದಿ ನಿನ್ನ ಬಾಯಲ್ಲಿ ಬಂದರೆ ಹೂತು ಬಿಡ್ತೀನಿ ಸೂಳೆಮಗನೆ.

ಹಾಗೆ ಹೇಳಿದವಳೆ ಕೀರ್ತಿ ಬಿರಬಿರನೆ ಹತ್ತಿರದ ಬಂಡೆಯತ್ತ ನಡೆದುಬಿಟ್ಟಳು.

ನಾಗರಾಜನಿಗೆ ಕೀರ್ತಿಯ ಇಂಗಿತ ಅರ್ಥವಾಗಲಿಲ್ಲ. ಅವಳು ಹೇಳಿದ್ದು ತಾಯಿಯ ಮೇಲಿನ ಗೌರವದಿಂದಲೋ, ಅಥವಾ ಲೈಂಗಿಕ ಅಸೂಯೆಯಿಂದಲೋ? ಅವನು ಅವಳು ಹೋಗುವುದನ್ನೇ ನೋಡುತ್ತ ನಿಂತುಬಿಟ್ಟ ಗರಬಡಿದವನಂತೆ.

ಪೊದೆಯ ಹಿಂದೆ ಪ್ರತಿಮಾದೇವಿ ವಿಲವಿಲನೆ ಒದ್ದಾಡಿದರು.

ಅವರಿಗೇಕೋ ಭಯವಾಗತೊಡಗಿತು. ಮಗಳು ತಮ್ಮಲ್ಲಿರದ ಒಂದು ಹೊಸ ಆಯಾಮ ಬೆಳಸಿಕೊಂಡಿದ್ದಾಳೆ ಎಂದು ಅವರಿಗನಿಸಿತು. ತಮಗೆ ಅಸೂಯೆ ಎಂದರೆ ಏನು ಎಂದೇ ಅರಿಯದು. ಮಗಳ ವಿಚಾರವನ್ನು ತಾವೇ ಕಣ್ಣಾರೆ ಕಂಡಿದ್ದಾರೆ.

ಅವರಿಗೆ ಮನೆಗೆ ತಿರುಗಬೇಕೆಂದೆನಿಸಲಿಲ್ಲ. ನಿಧಾನವಾಗಿ ಮತ್ತರ್ಕನಾಕದ ಬಳಿ ಕಾಲು ತಿರುಗಿಸಿದರು. ಹೋಗುವಾಗ ಕೀರ್ತಿ ಕೂತಿದ್ದ ಕಡೆ ಕಣ್ಣು ಹಾಯಿಸಿದರು. ಅವಳು ವಿಮನಸ್ಕಳಾಗಿ ಕುಳಿತಿದ್ದುದನ್ನು ಕಂಡು ಆಕೆಯ ತಾಯಿಯ ಹೃದಯ ತಹತಹಗೊಂಡಿತು.

* * *

ಪ್ರತಿಮಾ ಮರಳ ಮೇಲೆ ಕಾಲುಚಾಚಿ ಕುಳಿತರು. ತಾನು ಕುಳಿತ

ಜಾಗ ಮಗಳು ಕುಳಿತ ಬಂಡೆಯಿಂದ ದೂರವೇನೂ ಇರಲಿಲ್ಲ. ಆದರೂ ಅವಳು ಕುಳಿತ ಜಾಗಕ್ಕೂ, ತಾವು ಕುಳಿತ ಜಾಗಕ್ಕೂ ನಡುವೆ ಬಂಡೆಗಳು, ಪೊದೆಗಳು. ತನಗೆ ಅವಳು ಕಾಣುವುದಿಲ್ಲ. ಅವಳಿಗೆ ತಾನಿಲ್ಲದಿರುವುದು ತಿಳಿಯದು. ಒಳ್ಳೆಯದು.

ಪ್ರತಿಮಾದೇವಿಯರಿಗೆ ಜೀವನದ ಯಾವ ಘಟ್ಟದಲ್ಲಿ ಆಗದಷ್ಟು ನೋವುಂಟಾಗಿತ್ತು. ಮಗಳು ತಮ್ಮ ಬಗ್ಗೆ ಅಸೂಯೆಗೊಂಡಳು ಅನ್ನುವುದಕ್ಕಿಂತ ಹೆಚ್ಚಾಗಿ ಅವಳು ಅಸೂಯೆಪಡುವಂತೆ ನಾನು ನಡೆದುಕೊಂಡೆ ಎಂದು ತಳಮಳ ಅವರಿಗೆ. ಆ ಸೌಂದರ್ಯರಾಣಿಗೆ ತಳಮಳವೆಂದರೇನೆಂದೇ ಅರಿವಿರಲಿಲ್ಲ. ವಿಶ್ವನಾಥ ನಾನು ನಿನ್ನನ್ನು ಮದುವೆಯಾಗಲ ಎಂದಾಗ ಮಾತ್ರ ಅಂಥ ಅನುಭವವಾಗಿತ್ತು. ಆದರೆ ಆಗ ಆಕೆ ಭಯದಿಂದಾವೃತರಾಗಿ ಸರಿಯಾದ ನಿರ್ಣಯವನ್ನೇ ತೆಗೆದುಕೊಂಡಿದ್ದರು. ಆದರೆ ಅದು ದಾದರೂ ಏನು? ಅವನು ಸತ್ತುಹೋದ. ಕೀರ್ತಿಯ ಪ್ರಿಯಕರ ಬದುಕಿದ್ದು ಅವಳಿಗೆ ಸತ್ತಂತೆಯೇ ಆಗಿದ್ದಾನೆ. ತಮಗೆ ನಾಗರಾಜ ವಿಶ್ವನಾಥನೂ ಅಲ್ಲ, ಚಂದ್ರಾನಿಲರಾಯನೂ ಅಲ್ಲ. ಅಲ್ಪ ತೃಪ್ತಿಗೆಂದು ಸ್ವತಃ ಸೃಷ್ಟಿಸಿಕೊಂಡ ಅಮೂರ್ತ ಪ್ರತಿಮೆ.

ಪ್ರತಿಮಾ ಎದ್ದು ಓಡಾಡಹತ್ತಿದರು. ಬದುಕು ಭಯ ತರಿಸುವಷ್ಟು ಕ್ರೂರವೆನಿಸಿತ್ತು ಅವರಿಗೆ. ನದಿಯ ಪಾತ್ರಕ್ಕಿಳಿದು ನೀರಿನೊಡನೆ ಸರಸವಾಡಿದರು. ನದಿಯ ಮಧ್ಯದಲ್ಲಿದ್ದ ಬಂಡೆಗಳ ಮೇಲೆ ಹಾರುತ್ತ, ಕಾಲು ಹಾಕುತ್ತ ಕುಣಿದರು. ಮತ್ತೆ ಮೇಲೆ ಬಂದು ಮರಳಲ್ಲಿ ಮರಳುಗುಪ್ಪೆ ಮಾಡಿ, ಮನೆ ಕಟ್ಟಿದರು. ಕಪ್ಪೆಗಳಿಗೊಂದು ಗೂಡು ಕೊರೆದರು. ನೆಗೆದು ಓಡುತ್ತ ಅವನ್ನು ಹಾಳುಗೆಡವಿದರು. ಒಂದು ಬಂಡೆಯ ಸುತ್ತಲೂ ಓಡುತ್ತ ಕೇಕೆ ಹಾಕಿದರು. ಒಂದು ಇಟ್ಟಿಗೆಯ ಚೂರಿನಿಂದ ಬಂಡೆಯ ಮೇಲೆ ಒಂದೊಂದು ಗೀಟು ಎಳೆದು ಇವಳು ನಾನು, ಇದು ಕೀರ್ತಿ, ಇದು ನಾಗರಾಜ, ಇದು ಚಂದ್ರು, ಇದು ವಿಶೂ ಎಂದು ಚಪ್ಪಾಳೆ ತಟ್ಟುತ್ತ ಕೇಕೆ ಹಾಕಿದರು. ಮತ್ತೆ ಮರಳ ಮೇಲೆ ಓಡಹತ್ತಿದರು. ಅದೆಷ್ಟು ಬಂಡೆಗಳ ಸುತ್ತ ಓಡಿದರೋ, ಅದೆಷ್ಟು ಸಲ ಕಾಲು ಹಾಕಿ ಕುಣಿದರೋ ಅವರಿಗೆ ಸುಸ್ತಾಗತೊಡಗಿತು. ದಣಿದ ಹಸುವಿನಂತೆ ಉಸಿರು ಬಿಡುತ್ತ ನಿಂತರು. ಕುಳಿತುಕೊಳ್ಳಬೇಕೆನಿಸಿತು. ಮುಂದೆ ಯಾರೋ ನಿಂತಿದ್ದಾರೆನಿಸಿ ಭಯವಾಯಿತು. ತಮ್ಮ ಆಟಗಳನ್ನು ಅವರು ಕಂಡುಬಿಟ್ಟರೆ ಎಂದು ನಾಚಿಕೆಯಾಗಿ ತಲೆ ಎತ್ತಿದರು. ಎದುರಿಗೆ ಎದೆಯ ಮೇಲೆ ಕೈಕಟ್ಟಿ ನಿಂತಿದ್ದ ಚಂದ್ರಾನಿಲರಾಯರು. ಅವರ ಕಣ್ಣುಗಳಲ್ಲಿ ಭಯ ಕಾತರತೆ. ಪ್ರತಿಮಾರಿಗೆ ಕೈಕಾಲು ನಡುಗತೊಡಗಿತು. ಮತ್ತೆ ನಾಕ ವನ್ನೊಮ್ಮೆ ದಿಟ್ಟಿಸಿದರು. ನೀರು ವಿಪರೀತ ರಭಸದಿಂದ ಹರಿಯುತ್ತಿದೆ

ಎನಿಸಿತು. ಗಂಡ ನಿಂತ ಭಂಗಿಯನ್ನು ಕಂಡು ದಿಗಿಲೂ ಆಯಿತು. ಆಕೆಯ ಮರವಟ್ಟು ಹೋಗಿದ್ದ ಕಾಲುಗಳಿಗೆ ಅದೆಲ್ಲಿಂದ ಚೈತನ್ಯ ಬಂದಿತೋ, ಚಂದ್ರಾನಿಲರಾಯರತ್ತ ಓಡಿಬಂದು ಆತನ ಕುತ್ತಿಗೆಗೆ ತೆಕ್ಕೆ ಬಿದ್ದರು. ಗಂಡನ ಅನುಕಂಪಕ್ಕೆ ಸಮ ಎನ್ನಬಹುದಾದಷ್ಟು ಪ್ರೀತಿ ಪ್ರತಿಮಾದೇವಿಯರಲ್ಲಿ ತುಂಬಿಬಂತು. ಪತಿಯನ್ನೊಮ್ಮೆ ಮುತ್ತಿಕ್ಕಿ, ಅವರ ಎರಡೂ ಮೀಸೆಗಳ ಒರಟು ಕೂದಲನ್ನು ನೇವರಿಸಿ, ಬಾಯಲ್ಲಿ ಕಚ್ಚಿ, ಉಗಳಲ್ಲಿ ನೆನಸಿ, ಅವನ್ನು ಮೇಲಕ್ಕೆ ತಿರುವಿದರು. ಅವರ ಎದೆಯ ಮೇಲಿದ್ದ ಕೈಗಳನ್ನು ಬಿಚ್ಚಿ ಸೊಂಟದ ಮೇಲಿಟ್ಟು ನಿಲ್ಲಿಸಿದರು. ಚಂದ್ರಾನಿಲರಾಯರು ವೀರ ದಳಪತಿಯಂತೆ ನಿಂತದ್ದು ಕಣ್ಣಾರೆ ಕಂಡು ಅವರಿಗೆ ಹೆಮ್ಮೆಯಾಯಿತು. ಇಂಥವನು ನನ್ನ ಪತಿರತ್ನ ಎಂದು ಅವರ ತುಟಿಗೆ ತುಟಿ ಬೆಸೆಯುತ್ತ, ಚಂದ್ರಾನಿಲರಾಯರ ದೇಹವನ್ನು ನೆಲಕ್ಕೆ ಕೆಡವಿ, ಅವರ ಮೇಲೆ ತಾವೂ ಉರುಳಿದರು. ಅವರ ಮೈಸುತ್ತ ಕೈಬಳಸಿ, ಮರಳ ಮೇಲೆ ಉರುಳಾಟ ಆಡಿದರು.

ಕಾಲ ಮುಂದೆ ಸರಿಯದೆ ಚಿಮ್ಮನೆ ನಿಂತಿತು.

ದೂರದಲ್ಲೆಲ್ಲೋ ನಾಗರಾಜ ಕೀರ್ತಿಗೆ ಬುದ್ಧಿವಾದ ಹೇಳುತ್ತಿದ್ದುದು ಅವರಿಗೆ ಕೇಳಿಸಿಯೂ ಕೇಳಿಸಿದಂತೆ ಗಾಳಿಯಲ್ಲಿ ಹಗುರವಾಗಿ ತೇಲಿ ಬರುತ್ತಿತ್ತು.

* * *

ಚಂದ್ರಾನಿಲರಾಯರ ಮೈನ ಹಿಡಿತದಲ್ಲಿ ಪ್ರತಿಮಾದೇವಿಯರಿಗೆ ದಕ್ಕಿದ್ದ ಆನಂದ, ಇಂದು ಪ್ರತಿಮಾದೇವಿಯರೇ ಅವರ ಮೈಯನ್ನೂ ಬಳಸಿದಾಗಲೂ ಸಿಕ್ಕಿತ್ತು. ಸ್ವಕಲ್ಪಿತ ಪ್ರಪಂಚವೊಂದರಲ್ಲಿ ಆನಂದಶೀಲ ಅನುಭವವನ್ನೂ ದಕ್ಕಿಸಿಕೊಳ್ಳಲು ಪ್ರಯತ್ನಪಡುವ ಯೋಗಿಯ ಹಾಗೆ ಪ್ರತಿಮಾದೇವಿಯರು ತಮ್ಮ ಭಾವನೆಗಷ್ಟೇ ಬೆಲೆ ತೆತ್ತು, ಚಂದ್ರಾನಿಲರಾಯರ ವೈಯಕ್ತಿಕ ಭಾವನೆಗಳಿಗೆ ಕಿವುಡರಾಗಿ ಸುಖಪೀಂಟುವ ಪ್ರಯತ್ನ ನಡೆಸಿದರು.

ನಾಗರಾಜ ಯೋಚಿಸುತ್ತಾ ಮಲಗಿದ್ದ. ಅಂದು ನಡೆದ ಘಟನೆಗೆ ಪ್ರತಿಮಾದೇವಿಯರು ಸಾಕ್ಷಿಯಾಗಿದ್ದರು ಎಂಬುದು ಅವನಿಗೆ ತಿಳಿದಿದ್ದರೆ ಅವನಿಗೇನಾಗುತ್ತಿತ್ತು ಎಂದು ಹೇಳುವುದು ಕಷ್ಟ. ಯಾಕೆಂದರೆ ಅವನಿಗೂ ಪ್ರತಿಮಾದೇವಿಯರು, ಕೀರ್ತಿಗೂ, ತನಗೂ ನಡೆದ ಶೀತಲ ಯುದ್ಧದಲ್ಲಿ ಪಾಲುದಾರರಾಗಿದ್ದಾರೆ ಅನ್ನಿಸತೊಡಗಿತು. ಆಕೆ ಈ ವ್ಯಾಜ್ಯದ ಸುಖ ದುಃಖಗಳಲ್ಲಿ ಸಮಪಾಲು ಪಡೆಯಲೇಬೇಕು. ಆಕೆಯ ಇರವಿನಿಂದಲೇ ಆದದ್ದು ಇಷ್ಟೆಲ್ಲ ಅನಿಷ್ಟಗಳು.

ಅವನಿಗೆ ಗಕ್ಕನೆ ಅನಿಸಿತು : ಆಕೆ ಆ ಗಳಿಗೆಯಲ್ಲಿ ಅಲ್ಲಿದಿದ್ದರೆ ಏನು ಮಾಡುತ್ತಿದ್ದರು ?

ಭಯವಾಗುತ್ತದೆ. ಬಹುಶಃ ಆಕೆ ನಾನಾಡಿದ ಮಾತು ಕೇಳಿಸಿಕೊಂಡರೆ ಅವರಿಗೆ ಕೋಪ ಬರುತ್ತಿತ್ತು. ಅವರ ಬಗ್ಗೆ ನಾನ್ಯಾಕಿಷ್ಟು ಭಯಪಡ ಬೇಕು ? ಅವರಲ್ಲಿ ನಾನು ಅನುರಕ್ತನಾಗಿರುವುದರಿಂದಿರಬಹುದೆ? ಅಥವಾ ನಾನಾಡಿದ ಮಾತು ಅವರ ಮೇಲೆ ಗೂಬೆ ಕೂರಿಸುವಂಥ ಹೀನತೆಯೆ ?

ಇಲ್ಲ ; ಆಕೆ ಖಂಡಿತ ಖುಷಿಪಡುತ್ತಿದ್ದರು. ನನ್ನ ಮೈನ ಬಗ್ಗೆ ಆಕೆಗೂ ಆಸಕ್ತಿಯಿದೆ. ಅಂದು ನಾನು ಸ್ನಾನಮಾಡುವಾಗ ಯಾಕೆ ಅವರು ಕುರ್ಚಿ ಹಾಕಿಕೊಂಡು ಎದುರಿನಲ್ಲೇ ಕುಳಿತರು. ಪ್ರಭು ನಾನು ಗರಡಿ ಮಾಡುವ ಹಾಗೆ ಮಾಡಿ ಎಷ್ಟೊಂದು ಉಪಕಾರ ಮಾಡಿದ ! Thank you very very much Prabhu.

ಅವನಿಗೆ ನಾಚಿಕೆಯಾಯಿತು. ತನ್ನ ಹಾಡನ್ನು ತಾನೇ ಹಾಡಿಕೊಳ್ಳು ವಂಥ ಕ್ಷುದ್ರ ಯಾಕಾದೆ ನಾನು. ಕಾರಣರು ಯಾರಾದರೂ ಇರಲಿ, ನಾನ್ಯಾಕೆ ಆದೆ ?

ಕೀರ್ತಿ ಅಂದು ಅವನ ಬಳಿ ಇರಲಿಲ್ಲ. ಒಂದು ರೀತಿಯಲ್ಲಿ ಅವನಿಗೆ ಕಸಿವಿಸಿಯಾದರೂ, ಆರಾಮವೆನಿಸಿತು. ಅವಳು ಪಕ್ಕದಲ್ಲಿದ್ದರೆ ಪ್ರಪಂಚದ ಎಲ್ಲ ದುಃಖಗಳನ್ನೂ ಮರೆಸಿಬಿಡುತ್ತಾಳೆ. ಆತ್ಮರತಿಗೆ ತಳ್ಳಿಬಿಡುತ್ತಾಳೆ— ಅಷ್ಟು ಚೆನ್ನಾಗಿದ್ದಾಳೆ bitch. ನನ್ನ ಓದು, ಬುದ್ಧಿವಂತಿಕೆಯನ್ನು ತುಚ್ಛ ಎನ್ನಿಸಿಬಿಡುವಷ್ಟರ ಮಟ್ಟಿಗೆ open heart ಅವಳಿಗಿದೆ, innocence ಇದೆ. ತಾನು ಕಲಿತು ಅವಳು ಕಲಿಯದ್ದು, ನಾನು ಕಲಿಯಬೇಬೇಕಾದ್ದು ಕಲಿತಿದ್ದೇನು ?

ಚಂದ್ರಾನಿಲರಾಯರು ಯಾರೊಡನೆಯೋ ಗುರುಗುಡುತ್ತಿದ್ದುದು ಅವನಿಗ್ಗೆ ಕೇಳಿಸಿತು. ಎಲ ! ಎಷ್ಟು ಜೋರು ಮಾಡುತ್ತಿದ್ದಾರೆ ಈತ. ಎಂದೂ ಇಷ್ಟು ಗಟ್ಟಿಯಾಗಿ ಮಾತನಾಡಿದವರಲ್ಲ, ಪ್ರತಿಮಾದೇವಿಯರು ಮನೆಯಲ್ಲಿರುವಾಗ. ಅವರಲ್ಲಿನ ಬದಲಾವಣೆ ಬರಿಯ ಬದಲಾವಣೆಯೋ,

ಬೆಳವಣಿಗೆಯೋ ಅವನಿಗೆ ಅರ್ಥವಾಗಲಿಲ್ಲ. ಆದರೂ ಅಸೂಯೆಪಡಬಹು
ದಾದಷ್ಟು ಸುಂದರ ವೃದ್ಧ ಎಂದು ಅವನಿಗನಿಸಿತು. ತಾನು ಹಾಗಿರಲು
ಸಾಧ್ಯವಿದ್ದರೆ—ಓ—ಪ್ರತಿಮಾ, ಕೀರ್ತಿ ಎಲ್ಲರೂ ಸಾಯಲಿ, ಬದುಕಿ
ಗೊಂದು ಭವ್ಯತೆ ದೊರಕುತ್ತಿತ್ತು. ಬದುಕಿಗಾಗಿಯೇ ಬದುಕಬಹುದಿತ್ತು.
ತನ್ನದಕ್ಕಾಗಿ ತಾನು ಬದುಕಿದ್ದೇನೆ ಎಂಬ ಅರ್ಥವೂ ತನ್ನ ಬದುಕಿಗಿರು
ತ್ತಿತ್ತು. ನನಗಾಗಿ ಯಾರಿದ್ದಾರೆ? ನಾನು ಯಾರಿಗಾಗಿದ್ದೇನೆ ಕೀರ್ತಿ
ಗಾಗಿಯೆ?

ಇರಲಾರದು. ಪ್ರತಿಮಾರಿಗಾಗಿರಬೇಕು. ಇಲ್ಲಿ ಅದೂ ಸುಳ್ಳು ಕೀರ್ತಿಯೆ
ನನ್ನ ಆದರ್ಶ. ಪ್ರತಿಮಾದೇವಿಯರ ವ್ಯಕ್ತಿತ್ವ ಬಹುಶಃ ನನಗೆ ಅರ್ಥವೇ
ಆಗುವುದಿಲ್ಲ. ಅರ್ಥ ಆಗದಿರುವಷ್ಟು ದೊಡ್ಡವಳಿರಬೇಕು ಆಕೆ, ಅಥವಾ
ಹಾಗೆ ನಟಿಸುವ ಹಿಪಾಕ್ರಿಟ್ ಅವಳಿರಬೇಕು. ಕೀರ್ತಿ ನನ್ನ ಕೀರ್ತಿ.
ಪ್ರತಿಮಾದೇವಿಯರ ಸುಂದರವಾದ ಸ್ತನರಾಶಿ ಜ್ಞಾಪಕಕ್ಕೆ ಬಂತು. ಓ
ಅವುಗಳಿಗೆ ಸಮನಾದ ಸೌಂದರ್ಯ ಗ್ರೀಸ್‌ನ ಹೆಲನ್‌ಳ ಮುಖದಲ್ಲೂ
ಇರಲಿಲ್ಲ. Divine they are, Divine. She is Venus ಚಂದ್ರಾನಿಲ
ರಾಯರ ವ್ಯಕ್ತಿತ್ವಕ್ಕೆ ಸರಿದೊರೆಯಾದ ಸೌಂದರ್ಯ. ಅವರ ಪ್ರೇಮ
ಪೂಜೆಗೆ ಲಾಯಕ್ಕಾದವಳು.

ತನ್ನ ಬದುಕಿನಲ್ಲಿ ಕೀರ್ತಿ ಮತ್ತು ಪ್ರತಿಮಾದೇವಿಯರಿಗಿಂತ ಸುಂದರ
ವಾದ, ಆಕರ್ಷಕ ವ್ಯಕ್ತಿತ್ವವುಳ್ಳ ಹೆಂಗಸರೇ ಇಲ್ಲ ಎಂದು ಅವನಿಗನ್ನಿ
ಸಿತು. ಯಾಕೆ ಹೀಗೆ ಮಾಡಿದೆ ನಾನು? ಕೀರ್ತಿಯ ಭಯಂಕರ
ಸೌಂದರ್ಯವನ್ನು, ಅವಳ ಮುಗ್ಧತೆಯನ್ನು ಕೊಂದುಹಾಕಿದೆ. ನಾನು?
ಪ್ರತಿಮಾದೇವಿಯರಷ್ಟು ನಿರ್ಲಿಪ್ತತೆಯನ್ನು ಸಾಧಿಸಲು ಕೀರ್ತಿಗಿನ್ನೆಷ್ಟು
ಕಾಲಬೇಕು? ಓ ದೇವರೆ ಇಲ್ಲಿಂದ ನನಗೆ ಬಿಡುಗಡೆ ದೊರಕಿದರೆ ಸಾಕು!

ನಾಗರಾಜನಿಗೆ ಕೀರ್ತಿ ತನ್ನೆದುರು ನಿಂತಿರುವುದು ಗಮನಕ್ಕೆ ಬಂತು.
ಅವಳು ಅವನತ್ತಲೇ ನೋಡುತ್ತಿದ್ದಳು. ಅವನು ಅವಳ ಕಣ್ಣಲ್ಲಿ ದೃಷ್ಟಿ
ನೆಟ್ಟ. ಅಲ್ಲಿ ಯಾವುದೋ ಕಾತರತೆ ಇತ್ತು. ನಿರೀಕ್ಷೆ ಇತ್ತು. ಬೆಳಿಗ್ಗೆ ನಡೆದ
ಘಟನೆಯ ಛಾಯೆಯ ಲೇಶಮಾತ್ರವೂ ಅಲ್ಲಿರಲಿಲ್ಲ.

ಅವನು ಅವಳನ್ನೇ ದಿಟ್ಟಿಸುತ್ತ ಮಲಗಿದ. ಅವನಿಗೆ ಸ್ವಲ್ಪ ಆರಾಮ
ಎನಿಸತೊಡಗಿತು. ಪ್ರತಿಮಾದೇವಿಯರು ಮನಸ್ಸಿನಲ್ಲಿ ಕೋಲಾಹಲ
ನಡೆಸುತ್ತಿರಲಿಲ್ಲ. ಕೀರ್ತಿ ಅವನ ಮನಸ್ಸೆಲ್ಲವೂ ತನ್ನ ಸ್ವಯಾರ್ಜಿತ ಆಸ್ತಿ
ಅನ್ನುವಷ್ಟರ ಮಟ್ಟಿಗೆ ಅವನ ಮನಸ್ಸನ್ನು ತುಂಬಿಕೊಂಡುಬಿಟ್ಟಿದ್ದಳು.
ಅವಳ ವಿಶಾಲಹರಹಿನಲ್ಲಿ ಭರ್ತಿಯಾಗಿ ಹೋಗಿದ್ದ ನಾಗರಾಜನ ಮಾನಸ
ಲೋಕದಲ್ಲಿ ಪ್ರತಿಮಾದೇವಿಯರ ಇನ್ನಷ್ಟು ದೊಡ್ಡತನಕ್ಕೆ ಅವಕಾಶವಿರ
ಲಿಲ್ಲ. ಅಥವಾ ಅವರ ವೈಶಾಲ್ಯಕ್ಕೆ ಅದು ಕಿಷ್ಕಿಂಧವಾಗಿತ್ತು ಎಂದರೂ

ಆದೀತು.

ಕೀರ್ತಿಯ ಬಯಕೆ ತುಂಬಿದ ಕಣ್ಣುಗಳ ಬೆಂಕಿ ಬಹುಬೇಗ ಇದ್ದಿಲೂ ಆಗಬಹುದಿತ್ತು ಎಂದು ಅವನಿಗೆ ಗೊತ್ತು. ತಾನು ಅವಳಿಗೆ ಎಷ್ಟುಬೇಗ, ಎಷ್ಟು ತೀವ್ರವಾಗಿ ಬೇಕಾಗುತ್ತದೋ, ಅಷ್ಟೇ ಬೇಗ, ಅಷ್ಟೇ ತೀವ್ರವಾಗಿ ಅನಿಷ್ಟವಾಗಿಯೂ ಬಿಡುತ್ತೇನೆ ಎಂಬ ಅರಿವೂ ಅವನಿಗಿತ್ತು. ಆದುದರಿಂದಲೇ ಪ್ರಯತ್ನಪೂರ್ವಕವಾಗಿ ಅವನು ಅವಳಿಂದ ಕಣ್ಣು ತಿರುಗಿಸಿದ.

ಕೀರ್ತಿಗೆ ಒಂದು ಕ್ಷಣ ಪಿಚ್ ಎನಿಸಿತು. ತನ್ನ ಸೌಂದರ್ಯದ ಪಿಯೂಷಪಾನಕ್ಕಿಂತಲೂ ತನ್ನ ತಾಯಿಯ ಸುಧಾವಾರಿಧಿ ಜಲವೇ ಇವನಿಗೆ ಹಿತವಾಯಿತೆ ಎಂದು ಗಲಿಬಿಲಿಯೂ ಆಯಿತು. ಬಹುಶಃ ಬೆಳಿಗ್ಗೆಯ ತನ್ನ ವರ್ತನೆ ಅವನಿಗೆ ಬೇಸರ ಹಿಡಿಸಿರಬಹುದು ಎಂದು ಅನ್ನಿಸಿ ತನ್ನ ಬಗ್ಗೆಯೇ ಅಸಹ್ಯವಾಯಿತು. ತಾನು ಮಾಡಿದ್ದು ತಪ್ಪು ಎಂದು ಹೇಳಿಕೊಳ್ಳಲೆ ಎಂದುಕೊಂಡಳು. ಉಕ್ಕಿ ತಡೆಹಿಡಿಯುತ್ತಿದ್ದ ಅಭಿಮಾನವನ್ನು ಬದಿಗೊತ್ತಿ ಅವನ ಬಳಿ ಕಳ್ಳ ಹೆಜ್ಜೆಯಿಂದ ಸಾರಿದಳು. ಅವನ ಪಕ್ಕ ಕೂತು ಅವನ ತಲೆಯಲ್ಲಿ ಕೈಯಾಡಿಸಿದಳು. ತನ್ನ ತೋರವಾದ ಮೊಲೆಗಳನ್ನು ಅವನ ಮುಖದ ಮೇಲೆ ಹಾಕಿ ಕಿಚಾಯಿಸಿದಳು. ಅವನಿಗೆ ಬೇಸರವಾದರೂ ಬೇಡವೆನ್ನಲಿಲ್ಲ.

'ಯಾಕೆ ಮೈಯಲ್ಲಿ ಚೆನ್ನಾಗಿಲ್ಲವ ?' ಕೀರ್ತಿ ಅವನ ಶರಟಿನೊಳಗಿಂದ ಹೊಟ್ಟೆಯ ಮೇಲೆ ಕೈಯಾಡಿಸಿದಳು.

ಅವನು ಬರಿದೆ ಮುಗುಳ್ನಕ್ಕ. ಅವಳ ಕೈ ನೇವರಿಸುತ್ತ ಅವುಗಳನ್ನು ಹೊರಕ್ಕೆಳತೆಗೆದ.

'ಯೋಚನೆ ಮಾಡ್ತಿದೀಯ ?' ಮುಗುಳ್ನಕ್ಕಳು. ಉಸಿರುಕಟ್ಟಿ ಎದೆ ಉಬ್ಬಿಸಿದಳು. ಕುತ್ತಿಗೆಯ ಕೆಳಭಾಗದಿಂದ ಅವಳೆದೆ ಗೊಮ್ಮಟನ ತೇಜಸ್ಸಿನಿಂದ ಉಬ್ಬಿ ನಿಂತವು. ಅವುಗಳ ಕಣ್ಣುಕುಕ್ಕುವ ಸೌಂದರ್ಯ ಅವನ ಕಣ್ಣುಗಳನ್ನು ಕೋರೈಸಿತು. ಅವನು ಎದ್ದು ಕೂತ.

'ಬೆಳಿಗ್ಗೆ ತಪ್ಪು ಮಾಡಿದೆ ಅಂತ ಕೋಪಾನ ?' ಈಗ ತೊಟ್ಟಿದ್ದ ಗೌನಿನೊಳಗಿನ ಬ್ರಾನ ಹಿಡಿತದಿಂದ ಬಿಡುಗಡೆ ಹೊಂದಲು ಅವು ಹೆಣಗಿದವು. ಅವುಗಳನ್ನು ಬೈಚಿಡಲು ಅದು ವ್ಯರ್ಥಪ್ರಯತ್ನ ನಡೆಸಿತು. ಅವಳ ಮೂಗು ತುಸುವೇ ಬಾಗಿ, ಅವಳ ತುಟಿಗಳು ಆಹ್ವಾನಿಸುವಷ್ಟು ಕಮಾನಾಗಿ, ನೀಳ ಕತ್ತಿನ ಮೇಲೆ ನಿಶ್ಚಲ ನಿಂತ ಗಲ್ಲ ದುಂಡಕೆ...ಓ.

'ಯಾಕೆ ಹಾಗಂತೀಯ ಕೀರ್ತಿ. ನೀನು ಮಾಡಿದ್ದು ಒಂದು ರೀತೀಲಿ ಸರೀನೆ.'

ಕೀರ್ತಿಗೆ ನಿರಾಸೆಯಾಯಿತು.

'ನೀನೊಂದು ಪಕ್ಷ ಹಾಗೆ ಮಾಡದೇ ಇದ್ದಿದ್ದರೆ, ನನ್ನ ತಪ್ಪು ನನಗೆ

ಗೊತ್ತೇ ಆಗ್ತಾ ಇರಲಿಲ್ಲ. ನಾನು ಮಾಡಿದ್ದೆಲ್ಲ ಸರಿ ಅಲ್ಲ ಎಂದು ತಿಳಿದು ಕೊಳ್ಳೋ ಅಷ್ಟು ಸಂಸ್ಕೃತಿ ನನಗಿದೆ. ಹೀಗೆ ಒಂದೊಂದು ಸಾರಿ ಆಗೋ ದ್ರಿಂದಒಬ್ಬರನ್ನೊಬ್ಬರು ಅರ್ಥ ಮಾಡಿಕೋಬಹುದು ಅಂತ ಅನ್ನಿಸುತ್ತೆ."

—ನಾಗರಾಜನ ಧ್ವನಿಯಲ್ಲಿ ದುಗುಡವಿತ್ತು, ನೋವಿತ್ತು, ಪ್ರಾಮಾಣಿ ಕತೆಯಿತ್ತು.

ತನ್ನ ಮಾತುಗಳ ಪ್ರಭಾವ ಹೇಗೆ ಆಗಿದೆ ಎಂದು ಅವಳ ಮೇಲೆ ಕಣ್ಣು ಹಾಯಿಸಿದ. ಅವಳ ಉಬ್ಬಿದೆದೆ ಬಿದ್ದು ಹೋಗಿತ್ತು. ಅವಳ ಕಣ್ಣುಗಳಲ್ಲಿ ಒಂದು ಥರ ಆಯಾಸ. ಅವನ ಪಕ್ಕ ಉರುಳಿಕೊಂಡಳು. ನಾಗರಾಜನೂ ಹಾಗೆ ಮಾಡಿದ. ಅವನಿಗೆ ಚೆನ್ನಾಗಿಯೂ ತಿಳಿದಿತ್ತು : ಮೊದಲ ಬಾರಿಗೆ ನಾವಿಬ್ಬರೂ ವ್ಯಭಿಚಾರಕ್ಕಿಳಿದ್ದೇವೆ ಎಂದು.

ಚಂದ್ರಾನಿಲರಾಯರ ಮಾತಂತೂ ಅವ್ಯಾಹತವಾಗಿತ್ತು. ಪ್ರತಿಮಾ ದೇವಿಯರು ನಿಶ್ಶಬ್ದ ಮಾತುಗಳಲ್ಲಿ ನಾಗರಾಜ, ನೀನು ಮಾಡುತ್ತಿರುವ ಅಪರಾಧ ಅಕ್ಷಮ್ಯ. ನನ್ನ ಮಗಳನ್ನು ಕೊಂದು, ನೀನೂ ನೊಂದು ಕೊಳ್ಳುತ್ತಿದ್ದೀಯ, ಎಂದು ಅವನನ್ನು ಇರಿಯುತ್ತಿದ್ದರು. ಅವರ ಮೌನಕ್ಕೆ ಮಾತಿಗೂ ಇಲ್ಲದ ನಿರರ್ಗಳತೆ.

ಅವನಿಗೆ ಅವಳೊಂದಿಗೆ ಬದುಕು ಇನ್ನು ಅಸಾಧ್ಯ ಅನಿಸಿತು. ಹಾಗೆನ್ನಿಸಿದ ಮರುಕ್ಷಣದಲ್ಲೆ ಬೇರೇನು ಮಾಡಬಹುದು ಎನ್ನುವ ಪ್ರಶ್ನೆ ಬೃಹದಾಕಾರ ತಾಳಿ ಅವನೆದುರು ತಾಂಡವ ನೃತ್ಯ ಮಾಡಲು ತೊಡಗಿತು. ಅವಳೆದೆಯ ಮೇಲಿನ, ನಿರಾಸಕ್ತಿಯನ್ನು ಸೂಸುವಂತಿದ್ದ ದುರ್ಗಂಧದ ಬೆವರು ಅವನೆದೆಯಲ್ಲಿ ಅಂಟಿ ಸೆಕೆ ಸೆಕೆ. ಅವಳೊಡನೆ ಕಳೆಯುವ ಪ್ರತಿ ಯೊಂದು ಕ್ಷಣವೂ ತನ್ನನ್ನು ಪಾಪಕೂಪದಲ್ಲಿ ಆಳಕ್ಕೆ ಆಳಕ್ಕೆ ಇಳಿಸುವ ಗುದ್ದಲಿಯೇಟು. ನಾಗರಾಜನಿಗೆ ಅಸಹ್ಯವಾಯಿತು. ತನ್ನ ದುರ್ಬಲತೆ ಯನ್ನು ಹೀಗಳೆಯಬೇಕೆನ್ನಿಸಿತು. ಹಾಗೆಂದು ಅವಳೊಡನೆ ಹೇಳು ವಂತೆಯೂ ಇಲ್ಲ. ತಾನು ಮಾತನಾಡತೊಡಗಿದರೆ ಅದು ಅಸಹ್ಯಕಾಮ ವಾಗಿ ಬಿಡುತ್ತದೆ. ನನ್ನ ಪ್ರಾಮಾಣಿಕತೆಯೂ ಬುದ್ಧಿವಂತಿಕೆಯಾಗಿ ಬಿಡುತ್ತದೆ. ಅವಳಲ್ಲಿ ಉಳಿದಿರುವ ಆಸಕ್ತಿಯೂ ಇಲ್ಲವಾಗಿಬಿಡುತ್ತದೆ. ನಾನೇನೂ ಮಾಡಲಿ ? ಈ ವಿಪರೀತ ತಾಪದಲ್ಲಿ ಜೀವನವನ್ನು ಹೇಗೆ ಕಾಪಾಡಿಕೊಳ್ಳಲಿ ಆತ್ಮವನ್ನೂ, ಶರೀರವನ್ನು ಬೇರ್ಪಡದಂತೆ ಕಾಪಾಡಲಿ ಹೇಗೆ ?

ಎದ್ದು ಕುಳಿತ. ಕೀರ್ತಿಗೆ ಸ್ವಲ್ಪ ಆರಾಮ ಎನ್ನಿಸಿತು. ಅವಳಿಗೆ ಅವನು ಬೇಡವಾಗಿದ್ದ ಎನ್ನುವ ಮಾತಲ್ಲ. ನಾಗರಾಜ ಕೀರ್ತಿಗೆ ಖಂಡಿತ ವಾಗಿಯೂ ಬೇಕಾಗಿತ್ತು. ಅಂದರೆ ಅವಳಿಗೆ ಬೇಕಾಗಿದ್ದವನು ಅವಳು ಪ್ರೀತಿಸಿದ ನಾಗರಾಜ. ಅವನೊಂದು ಕಳೆದು ಹೋದ ವಸ್ತು. ಅದನ್ನು

ಮರಳಿ ಪಡೆಯಬೇಕು. ಈ ಹಠದಲ್ಲಿ ಕೀರ್ತಿ ಸಾಕಷ್ಟು ಹುಂಬಳಾಗಿದ್ದಳು. ಸೋಲು ಕಂಡಿದ್ದಳು, ತನ್ನ ಪ್ರಯತ್ನದಲ್ಲಿ. ಈಗ ಅವನಾಗಿಯೇ ಎದ್ದು ಕುಳಿತಾಗ ತನ್ನದೇನು ತಪ್ಪಿಲ್ಲವಲ್ಲ ಎಂದು ಅವಳಿಗನ್ನಿಸಿತು. ಅವನು ತಾನಾಗಿಯೇ ಹೋಗುವುದಾದರೆ ಹೋಗಿ ಬಿಡಲಿ ನಾನಂತೂ ಅವನನ್ನು ಹೋಗು ಎಂದು ಹೇಳಲಾರೆ.

ನಾಗರಾಜ ಹೊರಗೆ ತಿರುಗಾಡಬೇಕೆಂದುಕೊಂಡ; ಕುಳಿರ್ಗಾಳಿ ಕಿಟಕಿಯಿಂದ ರೂಮಿನೊಳಕ್ಕೆ ಬಂದು ಕೀರ್ತಿಯ ದೇಹದ ಮೇಲೆ ಚಕ್ಕಂದವಾಡುತ್ತಿತ್ತು. ಆದರೆ ರೂಮಿನೊಳಗಿರುವ ನಾಗರಾಜನಿಗೆ ಉಸಿರು ಸಿಕ್ಕಿಸುವ ಅನುಭವ.

ಹೊರಗೆದ್ದು ನಡೆದ. Parlourನಲ್ಲಿ ಕುರ್ಚಿಯೊಂದರ ಮೇಲೆ ಚಂದ್ರಾನಿಲರಾಯರು ಕುಳಿತಿದ್ದರು. ಅವರೆದುರು ಬಂದು ಕುರ್ಚಿಯ ಮೇಲೊರಗಿ, ಇನ್ನೊಂದರ ಮೇಲೆ ಕಾಲು ಚಾಚಿ ಪ್ರತಿಮಾದೇವಿಯರು. ಅವರ ಅರ್ಧನಗ್ನ ಶರೀರವನ್ನು ಕಂಡು ನಾಗರಾಜನಿಗೆ ರೋಮಾಂಚನವಾಯಿತು. ಅವರ ತುಂಬಿದ ಕತ್ತು, ಎದೆ, ಸುಂದರವಾಗಿ, ದಷ್ಟಪುಷ್ಟವಾಗಿ ನಿಡಿದಾಗಿದ್ದ ಬಾಹುಗಳು, ಅರ್ಧನಿಮೀಲಿತ ನೇತ್ರಗಳು, ಒಂದೊಂದೂ ಕಟೆದ ಪುತ್ಥಳಿಯ ಸೌಂದರ್ಯ ಪರಾಕಾಷ್ಠೆಯನ್ನೂ ಮೀರಿಸುವಂತೆ ಮಂದವಾದ ದೀಪದ ಬೆಳಕಿನಲ್ಲಿ ಜ್ವಾಜ್ವಲ್ಯಮಾನವಾಗಿ ಕಣ್ಣು ಕೋರೈಸಿದುವು. ಓಡಾಡಬೇಕೆಂದುಕೊಂಡಿದ್ದವನು ಅವರಿಬ್ಬರ ಬಳಿ ಬಂದು ಕೂತ. ನನ್ನಿಂದ ನಿಮ್ಮಿಬ್ಬರ ಏಕಾಂತಕ್ಕೆ ಭಂಗವಾಗುವುದಿಲ್ಲವಷ್ಟೆ ? ಎಂದು ಸೌಜನ್ಯ ತೋರಿದ.

ಚಂದ್ರಾನಿಲರಾಯರಿಗೆ ಈ ಮಾತು ತಮಾಷೆ ಎನಿಸಿತು. ಬಂದು ಕೂತಿರುವುದೇ ಸತ್ಯವಾಗಿರುವಾಗ ಈ ನಾಟಕವಾದರೂ ಏಕೆ ? ಹಾಗೆಂದುಕೊಂಡವರು ಅದನ್ನು ಹೇಳುವುದರಲ್ಲೇ ಇದ್ದರು. ಹೆಂಡತಿಯ ಮೌನ ಅವರ ಬಾಯಿ ಕಟ್ಟಿಸಿತು.

ಕೂತುಕೋ, ನಾಗರಾಜ. ಪ್ರತಿಮಾದೇವಿಯರು ಅಪ್ಪಣೆ ಕೊಡಿಸಿದರು. ಅವರ ಮಾತಿನಲ್ಲಿದ್ದ ಆದರ ನಾಗರಾಜನನ್ನು ಆಕರ್ಷಿಸಿತು. ಅವನು ಮತ್ತಷ್ಟು ಆರಾಮವಾಗಿ ಕೂತ.

ಅವನಿಗೆ ಏನಾದರೂ ಮಾತನಾಡಬೇಕೆಂದೆನಿಸಿತು. ಏನೆಂದು ಮಾತನಾಡುವುದು ? ಕೀರ್ತಿಯ ಬಗ್ಗೆ ಯಾರ ಬಳಿಯೂ ಈಗ ಹೇಳುವಂತಿಲ್ಲ. ಅವಳು ಇತ್ತೀಚಿಗೆ ಅತ್ಯಂತ ಜರೂರಿನಿಂದ ವರ್ತಿಸಹತ್ತಿದ್ದಾಳೆ. ಈಗ ಅವಳ ಬಗ್ಗೆ ಹೇಳಲಿಕ್ಕೇನೂ ಇಲ್ಲ.

ಚಂದ್ರಾನಿಲರಾಯರು ಪ್ರತಿಮಾರಿಗಾಗಿ ಕಾದು ಕೂತರು. ಅವರಿಗೆ ತಾವು ಅಲ್ಲಿರಬೇಕೋ, ಬೇಡವೋ ತಿಳಿಯದೆ ಸಂದಿಗ್ಧವಾಯಿತು.

ಹಾಗೆಂದು ಹೇಳುವುದು ಹೇಗೆ? ತಾನು ಹೋಗಬೇಕಾಗಿಬಂದಾಗ ಪ್ರತಿಮಾದೇವಿಯರೇ ಹೇಳಿಯಾರು.

ಪ್ರತಿಮಾದೇವಿಯರಿಗೆ ಯಾರಾದರೂ ಮಾತನಾಡಲಿ ಎಂದು. ಯಾರೂ ಮಾತನಾಡುವುದಿಲ್ಲ ಎಂಬ ನಂಬಿಕೆ. ಕೊನೆಗೆ ಹೇಳಿದರು :

ಚಂದ್ರೂ, ನಿನಗೆ ಮಾತನಾಡಬೇಕೆಂದು ಆಸೆಯಾಗುವುದಿಲ್ಲವೆ ?

ಇಲ್ಲ ಅನ್ನುವ ರೀತಿಯಲ್ಲಿ ಅತ ತಲೆ ಹಾಕಿದರು. ಅವರ ನಿರಾಡಂಬರ ಉತ್ತರಕ್ಕೆ ನಾಗರಾಜ ದಂಗಾಗಿ ಹೋದ. ಇಂಥ ಪ್ರಶ್ನೆ ತಮಗೆ ಹಾಕಿದ್ದರೆ, ತನ್ನ ಉತ್ತರವೂ ಅದೇ ಆಗಿರುತ್ತಿದ್ದರೂ, ಹಾಗೆಂದು ಅದನ್ನು ನಿರಾಯಾಸ, ಹೇಳುವ ಶಕ್ತಿ, ಧೈರ್ಯ ಇರುತ್ತಿರಲಿಲ್ಲ. ಅವನಿಗೆ ಆ ಮುದುಕನ ಬಗ್ಗೆ ಅಸೂಯೆಯಾಯಿತು.

ಪ್ರತಿಮಾದೇವಿಯರು ಹೇಳಿದರು : ನೋಡಿದೆಯ ನಾಗರಾಜ ; ಸಂತೋಷ ಆಗುವುದಿಲ್ಲವೆ ನಿನಗೆ ?

ನಾಗರಾಜ ಉತ್ತರಿಸಲಿಲ್ಲ. ಬಹಳ ಗಂಭೀರನಾಗಿ ಚಂದ್ರಾನಿಲ ರಾಯರ ಮುಖದತ್ತ ನೋಡಿದ. ಅಲ್ಲೊಂದು ಪ್ರಶ್ನೆ.

ತಟಕ್ಕನೆ ನಾಗರಾಜ ಕೇಳಿದ : ಮಾವ, ಈ ಥರ ಪ್ರಶ್ನೆ ಕೇಳ್ತೀನಂತ ಬೇಜಾರು ಮಾಡಿಕೋಬೇಡಿ. ಕೇಳು ಅಂದರೆ ಕೇಳ್ತೀನಿ ನೀವು ಒಪ್ಪಿಗೆ ನೀಡುವುದು ನನಗೆ ಅಷ್ಟು ಮುಖ್ಯವಲ್ಲ. ಮುಖ್ಯ ನನ್ನ ಪ್ರಶ್ನೆಯಿಂದ ನಿಮಗೆ ನೋವಾಗಬಾರದು ?

ಅವನು ಚಂದ್ರಾನಿಲರಾಯರತ್ತ ನೋಡಿದ. ಅವರಿಗೆ ತಾನು ಹೇಳಿದ ಮಾತುಗಳಲ್ಲಿನ ಸಭ್ಯತೆ ಸ್ವಲ್ಪವೂ ಅರ್ಥವಾಗಲಿಲ್ಲ ಅಂತ ಅನಿಸಿತು. ಆದರೂ ಅವರ ಉತ್ತರಕ್ಕಾಗಿ ಕಾಯುತ್ತ, ಅವರತ್ತ ನೋಡುತ್ತಿದ್ದ.

ಪ್ರತಿಮಾ ಹೇಳಿದರು : ಕೇಳು ನಾಗರಾಜ. ಅವನೀಗೇನೂ ಬೇಸರ ವಾಗುವುದಿಲ್ಲ. ಅಲ್ಲವ ಚಂದ್ರು ?

ಚಂದ್ರಾನಿಲರಾಯರು ತಮಗೆ ಬೇಸರವಾಗುವುದಿಲ್ಲ ಅನ್ನುವ ಹಾಗೆ ತಲೆ ಹಾಕಿದರು.

ನಾಗರಾಜನಿಗೆ ತಾನು ಈ ವಿಷಯ ಎತ್ತಲೇಬಾರದಿತ್ತು ಅನ್ನಿಸಿತು. ಸುಮ್ಮನಾದ.

ಯಾಕೆ ಸುಮ್ಮನಾದೆ. ಕೇಳು ನಿನ್ನ ಪ್ರಶ್ನೆ. ಪ್ರತಿಮಾದೇವಿಯರು ಒತ್ತಾಯ ಪಡಿಸಿದರು. ಅವನಿಗೆ ಕೇಳಬೇಕೆಂದೇನೂ ಅನಿಸಲಿಲ್ಲ. ಯಾಕೆ ಈ ವಿಷಯ ತನ್ನ ತಲೆಗೆ ಬಂತು ಅಂತ ಹಿಂಸೆಯಾಯಿತು. ಪ್ರತಿಮಾದೇವಿಯರ ಒತ್ತಾಯದ ಆಮಿಷಕ್ಕೆ ಒಳಗಾಗಿ ಕೇಳಿಯೇ ಬಿಟ್ಟ.

'ನೀವು ಮದುವೆಗೆ ಮುಂಚೆ ಯಾರನ್ನೂ ಪ್ರೀತಿಸಿರಲಿಲ್ಲವ ಮಾವ ?'

ಚಂದ್ರಾನಿಲರಾಯರ ಮುಖ ಕ್ಷಣಮಾತ್ರದಲ್ಲಿ ಕೆಂಪಾಯಿತು. ಅವರ ಮೀಸೆಗಳು ಅಲುಗಿದುವು. ವ್ಯಾಘ್ರನ ಕೋಪಕ್ಕೆ ಸಂಬಂಧಿಗಳೆಂಬಂತೆ ಅವರಿಗೆ ಅಲ್ಲಿಂದೆದ್ದು ಹೋಗಿಬಿಡಲ ಎನಿಸಿತು. ಎದುರಿಗೆ ನಿಶ್ಚಲವಾಗಿ ಕುಳಿತ ಪ್ರತಿಮಾದೇವಿಯರು. ಅವರಿಗೆ ನಾಗರಾಜನ ಬುರುಡೆ ತರಿದುಹಾಕಿಬಿಡಬೇಕೆನ್ನುವಷ್ಟು ಕೋಪ. ಕೋಪಕ್ಕೆ ಪ್ರತಿಯಾಗಿ ಕೋಪಿಸಿಕೊಳ್ಳದ ಹೆಂಡತಿ. ಕುಳಿತಲ್ಲೇ ಚಡಪಡಿಸಿದರು.

ನಾಗರಾಜನಿಗೆ ಕುತೂಹಲವೆನ್ನಿಸಿತು. ಯಾಕೆ ಏನಾಯಿತೆಂದು ಅವರಿಗೆ ಇಷ್ಟೊಂದು ಹಿಂಸೆ. ತನ್ನ ಪ್ರಶ್ನೆಯಲ್ಲಿ ಬೇರೆಯದೇ ಧ್ವನಿ ಕೊಡುವಂಥದೇನಾದರೂ ಇದ್ದಿತೆ ಎಂದೂ ಅವನೂ ಚಡಪಡಿಸಿದ. ತಾನು ಪ್ರಶ್ನೆ ಕೇಳಿ ಎಂಥ ಅನಾಹುತ ಮಾಡಿಬಿಟ್ಟೆ ? ಆ ವ್ಯಕ್ತಿ ಕೋಪ ಮಾಡಿಕೊಳ್ಳುವುದರಲಿ, ಭಾವನೆಗಳೇ ಇಲ್ಲದ, ಅಥವಾ ಇದ್ದುದೇ ಆದರೆ ಅವು ಸತ್ತು ಹೋಗಿರುವ ನಿರ್ಜೀವ ವಸ್ತು ಎಂದು ಭಾವಿಸಿಕೊಂಡಿದ್ದೆ !

ಕ್ಷಮಿಸಿ ಮಾವ, ತಪ್ಪುಮಾಡಿದೆ ಕೇಳಬಾರದ್ದು ಕೇಳಿದೆ ಎಂದು ಅಪರಾಧಿ ತಲೆ ತಗ್ಗಿಸಿ ನುಡಿದ.

ಚಂದ್ರಾನಿಲರಾಯರು ಕ್ರೂರವಾಗಿ ಅವನತ್ತ ನೋಡಿದರು. ಅವರ ಕಣ್ಣುಗಳಲ್ಲಿದ್ದ ಬೆಂಕಿ ಕಂಡು ಪ್ರತಿಮಾದೇವಿಯರೇ ನಡುಗಿ ಹೋದರು. ನಾಗರಾಜನಂತೂ ತತ್ತರಿಸಿದ.

ಪ್ರತಿಮಾದೇವಿಯರು ಕೂಡಲೆ ಹೇಳಿದರು : ಚಂದ್ರೂ, ನೀನಿನ್ನು ಹೋಗು. ರಾತ್ರಿ ಹನ್ನೆರಡಾಗುತ್ತ ಬಂತು. ಮಲಗು. ನಾನು ಇನ್ನೊಂದು ಸ್ವಲ್ಪ ಹೊತ್ತು ಕೂತಿದ್ದು ಬರುತ್ತೇನೆ.

ಚಂದ್ರಾನಿಲರಾಯರು ಅನುಮಾನಿಸಿದರು. ಪ್ರತಿಮಾದೇವಿಯರು ಎದ್ದು, ಅವರೊಡನೆ ನಡೆದು, ಅವರನ್ನು ಒಳಕ್ಕೆ ಬಿಟ್ಟು ಬಂದರು.

ನೋಡಿದೆಯ ನಾಗರಾಜ, ಅಂಥ ಪ್ರಶ್ನೆ ಕೇಳಿ ನನಗೆಲ್ಲಿ ನೋವುಂಟು ಮಾಡುತ್ತೀಯೋ ಎಂದು ಅವನಿಗೆ ಭಯ ಅದಕ್ಕೇ ಅವನು ಅನುಮಾನಿಸಿದ್ದು. ಹಾಗೇನೂ ಇಲ್ಲ ಎಂದು ನಾನು ಹೇಳಿದ ಮೇಲೆಯೇ ಅವನಿಗೆ ನಂಬಿಕೆ ಬಂದದ್ದು.

ನಾಗರಾಜನಿಗೆ ನಗಬೇಕೋ ಅಳಬೇಕೋ ತಿಳಿಯಲಿಲ್ಲ. ಆದರೂ ಪ್ರತಿಮಾದೇವಿಯರು ಹೇಳಿದ ಮಾತು ಸತ್ಯ ಅನ್ನಿಸಿತು.

ಆಕೆ ನುಡಿದರು : ನೀನು ಅಂಥ ಪ್ರಶ್ನೆಯನ್ನು ಕೇಳಬಾರದಿತ್ತು. ಯಾಕೆಂದರೆ ಆ ಪ್ರಶ್ನೆಯನ್ನು ನಾನು ಕೇಳಿದರೂ ಅದಕ್ಕೆ ಉತ್ತರ ಸಿಗಲಾರದು, ಬಹುಶಃ ನಾನೇ ಆ ವಿಷಯದ ಬಗ್ಗೆ ಬೇರೆಯವರಿಂದ ಕೇಳಿ ತಿಳಿದಿದ್ದೇನೆ. ನಿನಗೆ ಆ ವಿಷಯ ತಿಳಿಯಲೇಬೇಕೆಂದಿದ್ದಲ್ಲಿ ಅವೊತ್ತು

ಹಾವು ತಂದಿದ್ದನಲ್ಲ, ಈರ, ಅವನನ್ನು ಕೇಳು.

ಪ್ರತಿಮಾದೇವಿಯರು ತಲೆ ಎತ್ತಿದಾಗ ನಾಗರಾಜನ ದೃಷ್ಟಿ ಅವರ ಅರ್ಧನಗ್ನ ವಕ್ಷಸ್ಥಲದ ಮೇಲಿತ್ತು. ಪ್ರತಿಮಾದೇವಿಯರನ್ನು ಕಂಡಾಗ ಅವನಿಗಾಗುತ್ತಿದ್ದ ರೋಮಾಂಚನ ನಿತ್ಯನೂತನ, ತಮ್ಮ ದಿವ್ಯಕುಚಗಳ ಮೇಲಿದ್ದ ಅವನ ದೃಷ್ಟಿಯನ್ನು ಕಂಡು ಪ್ರತಿಮಾ ಮೋಹಕವಾಗಿ ಮುಗುಳ್ನಕ್ಕರು. ಅವನು ಹತ್ತಿರ ಬಂದ. ಆಕೆ ಎದ್ದು ನಿಂತು ಅವನ ಕೊರಳ ಸುತ್ತ ತಮ್ಮ ಕೈಹಾಕಿ, ಅವನ ತುಟಿಗೆ ತಮ್ಮ ತುಟಿಯೊತ್ತಿದಾಗ, ಅವರ ನಿಧಾನವೂ ಸ್ಪಷ್ಟವೂ ಆದ ವರ್ತನೆಯನ್ನು ಕಂಡು ನಾಗರಾಜನಿಗೆ ತನ್ನ ಬಗ್ಗೆಯೇ ನಾಚಿಕೆಯಾಯಿತು. ಆಕೆ ಎಂದೂ, ಯಾವ ವಿಷಯಕ್ಕೂ ಅವಸರಗೊಂಡುದಿಲ್ಲ.

ಪ್ರತಿಮಾದೇವಿಯರ ಶ್ರೀಮಂತ ಮಧುರಾಧರಗಳು ಅವನ ತುಟಿಗೆ ತಗುಲಿದಾಗ, ಅವರ ಎದೆಯ ವೀಣಾಗಾನ ಅವನೆದೆಗೆ ತಾಕದೆ ತೇಂಕಿತು. ಅವರ ವಿಪುಲವಾದ ದೇಹಸಂಪತ್ತಿನಲ್ಲಿ ಈಜಾಡಿದ ನಾಗರಾಜನಿಗೆ ತಟ್ಟನೆ, ತನ್ನ ಸ್ನೇಹಿತನಿಗೆ ತಾನೇ ಹೇಳುತ್ತಿದ್ದ ಮಾತೊಂದರ ನೆನಪಾಯಿತು. ಅವನು ಹೇಳಿದ್ದ : 'ನೋಡು ಭಾನು, ಪ್ರತಿಯೊಬ್ಬನೂ ಪ್ರತಿಯೊಂದು ಹೆಣ್ಣು ದೇಹವನ್ನು ಬಯಸಬೇಕು. ಕಾಮಿಸುವುದರಲ್ಲಿ ಖಂಡಿತ ತಪ್ಪಿಲ್ಲ. ಕಾಮಿಸಲಾರದವನು ಷಂಡ, ಅಥವಾ ತತ್ವ ಸಿದ್ಧಾಂತಗಳ ಸರಿತಪ್ಪುಗಳ ಮೂಸೆಯಲ್ಲಿ ಕರಗಿಹೋಗಿರುವ ಕ್ರಿಮಿ. ಆದರೆ ಪ್ರೀತಿಸುವಾಗ, ದೇಹದ ಒಂದೊಂದು ಅಂಗಾಂಗ ನೆಕ್ಕಿ ತಿನ್ನುವಾಗ ಇದೊಂದು ದೇವಪೂಜೆ ಎಂಬ ನಿರಹಂಕಾರ ನಿರ್ವಿಕಾರತೆ ಇರಬೇಕು. ಒಂದು ಹುಡುಗಿಯ ಕೂಡ ಮಲಗುವಾಗ ನನ್ನ ಸರ್ವಸ್ವದ ಬಳುವಳಿ ಇದು ಅವಳಿಗೆ ಎಂಬ ನಿರಹಂಕಾರ, ನಿಃಸ್ವಾರ್ಥ ಪ್ರವೃತ್ತಿ ಇರಬೇಕು. ಇದ್ದಾಗ ಮಾತ್ರ ಅದು ಕರ್ಮಸಿದ್ಧವಾದ ಪ್ರಕೃತಿನಿಯಮವಾಗುತ್ತದೆ. ಹಾಗಿಲ್ಲದಿದ್ದಾಗ ಹೆಂಡತಿಯ ಕೂಡ ಮಲಗಿದಾಗಲೂ ಅದು ವ್ಯಭಿಚಾರವಾಗುತ್ತದೆ. ವ್ಯಭಿಚಾರವೆನ್ನುವುದು ಷಂಡತನಕ್ಕೆ ಇನ್ನೊಂದು ಕ್ರಿಯಾರೂಪ ಮಾತ್ರ. ಈಶ್ವರ ಪಾರ್ವತಿಯನ್ನು ಮದುವೆಯಾದ ತರುಣದಲ್ಲಿ ಅವಳ ಮುಂದೆ ಏಕಾಗ್ರಚಿತ್ತನಾಗಿ ಕುಳಿತು ಅವಳ ಮೊಲೆಗಳ ಮೇಲೆ ಚಿತ್ರ ಬಿಡಿಸುತ್ತಿದ್ದನಂತೆ. ಆದುದರಿಂದಲೆ ಅವಳ, ಅವನ ಪ್ರೇಮ ಅಜರಾಮರವಾಯಿತು. ಗಂಡ ಹೆಂಡಿರಾದುದರಿಂದ ಪಾರ್ವತಿ ಪರಮೇಶ್ವರರು ಜಗದ ಮಾತಾಪಿತೃಗಳಾದರು. ಅವರಿಬ್ಬರೂ ಒಬ್ಬರನ್ನೊಬ್ಬರು ಕಾಮಿಸಿದಾಗಲೂ ತಮ್ಮ ಶ್ರೇಷ್ಠತೆಯನ್ನು ತಮ್ಮ ಪ್ರೀತಿ ಕಾಮಗಳಲ್ಲಿ ಅಭಿವ್ಯಕ್ತಿಗೊಳಿಸುತ್ತಿದ್ದರು. ಆದುದರಿಂದಲೇ ಅವರಿಗೆ ಈ ಶ್ರೇಷ್ಠತೆ.

* * *

ನಾಗರಾಜ ಪ್ರತಿಮಾದೇವಿಯರ ತೆಕ್ಕೆ ಬಿಡಿಸಿಕೊಂಡು ಎದ್ದಾಗ ಹೊತ್ತು ಮೂಡುವ ಹೊತ್ತಾಗಿತ್ತು. ಮಬ್ಬು ಮಬ್ಬಾದ ಕತ್ತಲೆಯಲ್ಲಿ ಕುರುಡನ ಹಾಗೆ ನಾಗರಾಜ ತನ್ನ ಕೋಣೆಯತ್ತ ನಡೆದ. ಕೀರ್ತಿ ನಿದ್ದೆ ಹೋಗಿರುತ್ತಾಳೆಂಬ ಅವನೆಣಿಕೆ ತಪ್ಪಾಗಿತ್ತು. ಅವಳು ಕಣ್ಣು ತೆರೆದೇ ಮಲಗಿದ್ದಳು. ಅವಳ ಕೈಯಲ್ಲೊಂದು ಪುಸ್ತಕ. ನಾಗರಾಜನಿಗೆ ಕುತೂಹಲವೆನಿಸಿ ಪುಸ್ತಕದ ಹೆಸರು ಓದಬೇಕೆಂದುಕೊಂಡ. ಯಾಕೋ ಸೋಮಾರಿತನ, ಆಲಸ್ಯ ಅವನ ಮೈಯಲ್ಲಿ ಬೇರೂರಿತ್ತು. ಬೇಸರದಿಂದ ಒರಗಿಕೊಂಡ, ಕೀರ್ತಿ ಅವನ ಬರವೇ ಗಮನಕ್ಕೆ ಬಾರದವಳಂತೆ ಪುಸ್ತಕದಲ್ಲಿ ಮುಳುಗಿದ್ದಳು. ಅದು ನಟನೆಯೆಂದೆನಿಸಿತು ನಾಗರಾಜನಿಗೆ. ಮರುಕ್ಷಣದಲ್ಲೆ ತನ್ನ ಕ್ಷುದ್ರಯೋಚನೆಗಾಗಿ ನಾಚಿಕೊಂಡ.

ಅವನಿಗೂ ನಿದ್ದೆ ಬರಲಾರದೆಂದು ಕೀರ್ತಿ ಭಾವಿಸಿದ್ದಳು. ಅವಳು ಪುಸ್ತಕವನ್ನು ಬೈಯುತ್ತ, ಬಿಸಾಕಿ ಅವನತ್ತ ತಿರುಗಿದಾಗ, ಅವನು ಗಾಢ ನಿದ್ರೆಯಲ್ಲಿದ್ದ.

ದೂರದಲ್ಲೆಲ್ಲೋ ಕೋಳಿ ಕೂಗಿತು.

ಮಧ್ಯಾಹ್ನದವರೆಗೂ ಮಲಗಿಯೇ ಇದ್ದ ನಾಗರಾಜನಿಗೆ ಸೋಮಾರಿತನ, ಆಲಸ್ಯ ತುಂಬಿ ಸತ್ತುಹೋಗಿಬಿಡಬೇಕೆನ್ನುವಷ್ಟು ಚಿಂತೆ ತುಂಬಿ ತಲೆಭಾರವಾಗಿತ್ತು. ಅವನ ಮನಸ್ಸಿನಲ್ಲಿ ದೊಂಬರಾಟ. ಪಾತ್ರಧಾರಿಗಳು; ಪ್ರತಿಮಾದೇವಿ, ಚಂದ್ರಾನಿಲರಾಯರು. ಊಟ ತಿಂಡಿ ಕಾಫಿಗಳೂ ಬೇಡವೆಂದೆನಿಸಿದುವು. ಹಸಿವೆಯೂ ಇರಲಿಲ್ಲ. ಆದರೂ ಪ್ರತಿಮಾದೇವಿಯರು ಊಟಕ್ಕೇಳು ಎಂದಾಗ ಬೇಡ ಎಂದು ಹೇಳುವಷ್ಟು ಆತ್ಮಶಕ್ತಿ ಅವನಿಗಿರಲಿಲ್ಲ. ಎದ್ದು ಅಡುಗೆ ಮನೆಯತ್ತ ನಡೆಯುವಾಗ ಅವನ ಕಣ್ಣಿಗೆ ಹಾಲಿನಲ್ಲಿ ಕುಳಿತಿದ್ದ ಕೀರ್ತಿ ಕಾಣಿಸಿದಳು. ಆತ್ಮೀಯವಾಗಿ ತಂದೆಯ ಬಳಿ ಹರಟುತ್ತಿದ್ದಳು. ಅವನನ್ನು ಕಂಡು ಲಗುಬಗೆಯಿಂದೆದ್ದು ಅವನನ್ನು ಹಿಂಬಾಲಿಸಿದಳು. ಎದುರಿನಲ್ಲಿ ಕುಳಿತ ಪ್ರತಿಮಾದೇವಿಯರು, ಪಕ್ಕದಲ್ಲೇ ಪಟ್ಟಾಂಗ ಹಾಕಿದ್ದ ಕೀರ್ತಿ ಅವನನ್ನು ಕ್ರೂರ ದೃಷ್ಟಿಯಿಂದ ತಿನ್ನುತ್ತಿದ್ದಾರೆ, ಅಂತ ಅವನಿಗನ್ನಿಸಿತು. ಊಟಮಾಡುವುದಕ್ಕೂ ಹಿಂಸೆಯಾಗಿ ಅವನು ಅಲ್ಲಿಂದೆದ್ದುಬಿಟ್ಟ.

ಸಂಜೆ ಈರನನ್ನು ಕಾಣಲೇಬೇಕೆಂದು ಅವನಿಗೆ ತಟ್ಟನೆ ಅನಿಸಿತು. ಪ್ಯಾಂಟು ಧರಿಸಿ, ಎಸ್ಟೇಟಿನತ್ತ ನಡೆದ.

ಈರನ ಗುಡಿಸಲು ಸಮೀಪಿಸುತ್ತಿದ್ದಂತೆಯೆ, ಬೆಂಕಿಯೊಂದು ಉರಿಯುತ್ತಿದ್ದುದು ಅವನಿಗೆ ಗೋಚರವಾಯಿತು. ಹತ್ತಿರ ಹತ್ತಿರ ಸಮೀಪಿಸುತ್ತಿದ್ದ ಹಾಗೆ ಗಂಡು ಹೆಣ್ಣುಗಳು ನರ್ತನ ಮಾಡುತ್ತಿರುವುದು ಕಾಣಿಸಿತು. ಕುತೂಹಲದಿಂದ ನಾಗರಾಜ ಬೇಗ ಬೇಗ ಅವರತ್ತ ನಡೆದ. ದೊಂದಿಯ ಬೆಳಕಿನಲ್ಲಿ ನಾಲ್ಕೈದು ಹೆಂಗಸರು, ಅಷ್ಟೇ ಜನ ಗಂಡುಗಳು ಕುಣಿಯುತ್ತಿದ್ದರು. ಅವರು ಕುಡಿದಿದ್ದ ಹೆಂಡದ ವಾಸನೆ ಅವನ ಮೂಗನ್ನು ರಾಚಿಕೊಂಡಿತು. ಅಲ್ಲೇ ಬಿದ್ದಿದ್ದ ಹಲಗೆಯೊಂದರ ಮೇಲೆ ಕುಳಿತ.

ಈರ ಕುಣಿಯುತ್ತಿದ್ದ. ತನ್ನ ಪಕ್ಕದಲ್ಲಿದ್ದ ಹೆಂಗಸಿನ ಹೆಗಲ ಮೇಲೆ ಕೈಹಾಕಲು ಪ್ರಯತ್ನ ಪಡುತ್ತಿರುವವನಂತೆ ಕಂಡಿತು, ನಾಗರಾಜನಿಗೆ. ಈರನ ಹಾಗೇ ಕಾಣುತ್ತಿದ್ದ ಇನ್ನೊಬ್ಬ ವ್ಯಕ್ತಿ, ದೈತ್ಯನೃತ್ಯಗೈಯುತ್ತ, ಭಯಂಕರವಾಗಿ ಅರಚುತ್ತ, ಅಲ್ಲಿದ್ದವರನ್ನೂ ಇಲ್ಲದವರನ್ನೂ ಯುದ್ಧಕ್ಕೇ ಆಹ್ವಾನಿಸುತ್ತಿದ್ದ. ಈರಪ್ಪ ತನ್ನ ಮೈಮೇಲೊಂದು ಕೆಂಪು ವಸ್ತ್ರ ಧರಿಸಿ, ಅದರ ಕೊನೆಗೊಂದು ಗಂಟೆ ಕಟ್ಟಿದ್ದ. ಅವನು ಪ್ರಜ್ಞೆ ಇಲ್ಲದವನ ಹಾಗೆ ಕುಣಿಯುತ್ತಿದ್ದುದ ಕಂಡು ನಾಗರಾಜನಿಗೆ ಶಿವತಾಂಡವದ ನೃತ್ಯ ನೆನಪಿಗೆ ಬಂತು. ಹೋಲಿಕೆ ಸರಿಯಾಗಿಲ್ಲವೆಂದು ತನ್ನ ಬುದ್ಧಿಯನ್ನು ಅಮುಕಿ, ಉಸಿರು ಹಿಡಿದು, ಆ ನೃತ್ಯಪಟುಗಳನ್ನೇ ವೀಕ್ಷಿಸುತ್ತಾ ಕುಳಿತ.

ನಾಗರಾಜನಿಗೆ ಮೈ ಜುಂ ಎಂದಿತು. ಈರನ ಮೈಮೇಲೆ ಬಿದ್ದ ಹೊಡೆತ ನಾಗರಾಜನ ಕಿವಿಯಲ್ಲಿ ಇನ್ನೂ ಪ್ರತಿಧ್ವನಿಸುತ್ತಿತ್ತು. ತಾನು ಕಂಡು ಮಾತನಾಡಬೇಕೆಂದುಕೊಂಡ ಧೀರ, ನೆಲದ ಮೇಲೊರಗಿ, ಧೂಳಲ್ಲಿ ಪ್ರಾಣಬಿಡುವವನ ಹಾಗೆ ನಾಲಗೆ ಚಾಚುತ್ತಿದ್ದ. ಅವನ ಮೇಲೆ,—ಮೊದಲು ಯುದ್ಧಕ್ಕೆ ಆಹ್ವಾನಿಸುತ್ತಿದ್ದ ಸೇನಾನಿ,—ಹೆಣದ ಮೇಲೆ ಕುಳಿತು ಮಂತ್ರಸಿದ್ಧಿ ಬಯಸುವ ಪರಿವ್ರಾಜಕನ ಹಾಗೆ ಕುಳಿತು ಬಿಟ್ಟಿದ್ದ. ಈರನ ಬೆನ್ನಿನ ಮೇಲೆ ಏಟುಗಳ ಸುರಿಮಳೆ. ಪ್ರತಿಯೊಂದು ಏಟಿಗೂ ಕುಣಿಯುತ್ತಿದ್ದವರು ಹೋ ಎಂದು ಅರಚುತ್ತಿದ್ದರು. ನಾಗರಾಜ ನೋಡು ನೋಡುತ್ತಿದ್ದಂತೆಯೆ ಮೊದಲು ಈರ ಬೆನ್ನ ಮೇಲೆ ಕೈ ಹಾಕಲು ಪ್ರಯತ್ನಿಸುತ್ತಿದ್ದ ಹೆಂಗಸು ತಟಕ್ಕನೆ ಹಾರಿ ಈರನ ಮುಂದೆ ನಿಂತಳು. ಅವಳುಟ್ಟಿದ್ದ ವಸ್ತ್ರ ಅನಾಥವಾಗಿ ನೆಲದ ಮೇಲೆ ಬಿದ್ದು ಬಿಟ್ಟಿತ್ತು. ಆ ಹೆಂಗಸು ಈರನನ್ನು ವಾಚಾಮಗೋಚರವಾಗಿ ಬೈಯುತ್ತ, ಸಂಭೋಗಕ್ಕೆ ಅವನನ್ನು ಆಹ್ವಾನಿಸುತ್ತಿದ್ದಳು. ಅವಳ ಗಂಡನಿರಬೇಕು— ಈರನ ಬೆನ್ನ ಮೇಲೆ ಕೂತು ಅವನನ್ನು ಬಡಿದು ಹದ ಮಾಡುತ್ತಿದ್ದ

ಧೀರೋದಾತ್ತ ನಾಯಕ—ತನ್ನ ಹೆಂಡತಿಯನ್ನು ಕೇಯಲ ನನ್ನ ಮಗನೆ ಅಂತ ಜೋರು ಮಾಡುತ್ತಿದ್ದ. ಈರ ಕತ್ತರಿಸಿ ಬೀಳಲಿರುವ ಕುರಿಯ ಹಾಗೆ ಆರ್ತನಾದ ಮಾಡುತ್ತಿದ್ದ. ಅವನು ಕೂಗುತ್ತಿದ್ದಂತೆ ಅವನ ಮೇಲೆ ಬೀಳುವ ಏಟಿನ ಸುರಿಮಳೆಯೂ ಅಧಿಕವಾಯಿತು. ಆ ಹೆಂಗಸು ಬೆತ್ತಲೆಯಲ್ಲೇ ಈರನ ಮೇಲೆ ಕೂರ ಹೋದಳು. ನಾಗರಾಜನಿಗೆ ಭಯವಾಗತೊಡಗಿತು. ಕುಳಿತಿದ್ದ ಗಂಡಸನ್ನು ಏಳುವಂತೆ ಹೇಳಿದಳು. ಅವನು ಹೋಗಲೇ ಮುಂಡೆ ಎಂದು ಅರಚಿದ. ಅವಳು ರಪ್ ಎಂದು ಕೆನ್ನೆಗೊಂದು ಬಾರಿಸಿ ಅವನನ್ನು ಎಳೆದು ಹಾಕಿದಳು. ಅವಳೆಳೆದ ರಭಸಕ್ಕೆ ಆ ಗಂಡಸು ದೂರ ಸರಿದು ಬಿದ್ದ. ಸಿಕ್ಕಿದ ಕ್ಷಣಮಾತ್ರದಲ್ಲಿ ಮಂಗನ ಚುರುಕಿನಿಂದ ಈರ ಎದ್ದುಬಿಡಲು ಪ್ರಯತ್ನಿಸಿದ. ಮಿಂಚಿನಂತೆ ಅವಳು ಅವನ ಮೇಲೆರಗಿ, ಮತ್ತೆ ಬೀಳಿಸಿ ಅವನ ಹೊಟ್ಟೆಯ ಮೇಲೆ ಕೂತಳು. ಅವಳ ಗಂಡನಿದ್ದ ರಬಹುದಾದ ಗಂಡಿಗೆ ಬಾರಲೋ ನಾಮರ್ದ ನನ್ನಮಗನೆ, ಇಲ್ಲಿ ಕೂತುಕೋ ಎಂದು ಆಜ್ಞಾಪಿಸಿದಳು. ಅವನು ಲಗುಬಗೆಯಿಂದೆದ್ದು, ಈರನ ಕಾಲು ಹಿಡಿದುಕೊಂಡು ಅವುಗಳ ಮೇಲೆಯೇ ಬಿಗಿಯಾಗಿ ಕುಳಿತ. ಆ ಸಂಭಾವಿತ ಹೆಂಗಸು ಈರ ಹೊದ್ದಿದ್ದ ಕೆಂಪು ಬಟ್ಟೆಯನ್ನು ಸಡಿಲಿಸಿ ಅವನ ಶಿಶ್ನವನ್ನು ತನ್ನ ಒಂದು ಅಂಗೈಯಿಂದ ಹಿಡಿದು ಇನ್ನೊಂದರಿಂದ ತನ್ನ ಸೊಂಟದಲ್ಲಿ ಬಿಗಿದಿದ್ದ ದಾರದ ಕೊನೆಯಿಂದ ಚಾಕುವೊಂದನ್ನು ಸಡಿಲಿಸಿದಳು.

ನಾಗರಾಜನ ಕಣ್ಣು ಕತ್ತಲೆಕಟ್ಟಿತು. ಅವನ ಸರ್ವಾಂಗಾಂಗಗಳಲ್ಲೂ ಚೂರಿ ಇರಿದಂತೆ, ಅಲ್ಲಿಂದೆದ್ದು ಓಡಿಬಿಡಲೆ ಎಂದಕೊಂಡ. ಕಾಲು ಬರಲಿಲ್ಲ. ಕಣ್ಣುಮುಚ್ಚಬೇಕೆಂದುಕೊಂಡರೂ ರೆಪ್ಪೆಗಳು ಕೂಡಲಿಲ್ಲ.

ಆ ಹೆಂಗಸು ಈರನಿಗೆ ಚಾಕು ತೋರಿಸಿ, ಹಾದರ ಮಾಡ್ತೀಯ ಷಂಡ ಸೂಳೆಮಗನೆ ಅಂತ ಅಬ್ಬರಿಸಿದಳು. ಅವಳ ಗಂಡ ಎದ್ದು ನಿಂತ. ಹೆಂಡತಿಯನ್ನೊಮ್ಮೆ ಬಿದ್ದ ಶತ್ರುವನ್ನೊಮ್ಮೆ ದಿಟ್ಟಿಸಿ, ಹೆಂಡತಿಯತ್ತ ಒಪ್ಪಿಗೆಯಿಂದ, ಹೆಮ್ಮೆಯಿಂದ ನೋಡುತ್ತ, ತನ್ನ ಕೆಲಸವಾಯಿತೆಂಬಂತೆ, ತನ್ನ ಪಾಡಿಗೆ ನಡೆದು ಕುಣಿತದಲ್ಲಿ ಪಾಲ್ಗೊಂಡುಬಿಟ್ಟ. ಆಕೆ ಚಾಕು ಹಿಡಿದು ಭಯತರಿಸುವಷ್ಟು ನಿರ್ಲಿಪ್ತತೆಯಿಂದ ಕೈ ಮುಂದೆ ಹಾಕಿದಳು.

ನಾಗರಾಜನಿಗೆ ತಡೆಯಲಾಗಲಿಲ್ಲ. ತನ್ನ ಮರ್ಮಾಂಗವೇ ಬಿದ್ದು ಹೋಗುವಂಥ ಅನುಭವ. ತಾನು ತೊಟ್ಟಿದ್ದ ವಸ್ತ್ರದಲ್ಲೆ ಮೂತ್ರವಿಸರ್ಜನೆಯಾಯಿತು ಎಂದೆನಿಸಿತು. ವಿಪರೀತ ಭಯದಿಂದ ಅಯ್ಯೋ ಎಂದು ಕೂಗಿಬಿಟ್ಟ.

ಕಣ್ಣು ಮುಚ್ಚಿಬಿಡುವುದರಲ್ಲಿ ನರ್ತಕರು ಪರಾರಿಯಾಗಿದ್ದರು. ಈರ ಮತ್ತು ಆ ಹೆಂಗಸು ತಬ್ಬಿ ಮಲಗಿಬಿಟ್ಟಿದ್ದರು.

ನಾಗರಾಜನಿಗೆ ಕುತೂಹಲವೆನಿಸಿತು. ಅವರಿಬ್ಬರ ವರ್ತನೆ ಎಷ್ಟೊಂದು ಕೃತಕವಾದರೂ ಅಷ್ಟೇ ಸಹಜ ಅಂತ ಅನಿಸಿಬಿಟ್ಟಿತು. ಅಭಿಮಾನದಿಂದ ಆ ಪ್ರೇಮಿಗಳತ್ತ ನಡೆದ. ಅವರ ಸಂಭೋಗವಿಲಾಸಕ್ಕೆ ತನ್ನಿಂದ ಭಂಗ ಬಂದೀತೆಂದೂ ಅವನಿಗನಿಸಲಿಲ್ಲ. ಆದರೆ ಅವನ ಕಾಲಸಪ್ಪಳ ಕೇಳಿದಾಕ್ಷಣ ಈರ ಪುಟವೆದ್ದ ಚಂಡಿನ ಚಟುವಟಿಕೆಯಿಂದೆದ್ದು ನಾಗರಾಜನನ್ನು ಮುಖಾಮುಖಿ ವೀಕ್ಷಿಸಿದ. ಅವನ ಬಗ್ಗೆ ತನ್ನ ಮೆಚ್ಚಿಕೆ ಸೂಚಿಸಬೇಕೆಂದುಕೊಂಡ ನಾಗರಾಜ ಕೈ ಎತ್ತಲು ಪ್ರಯತ್ನಿಸಿದ. ಕ್ಷಣಾರ್ಧದಲ್ಲಿ ಅವನ ಕೆನ್ನೆಗೆ ರಪ್ಪೆಂದು ಹೊಡೆತ ಬಿತ್ತು. ಏನಾಯಿತೆನ್ನುವಷ್ಟರಲ್ಲಿ ಈರ ಮಾಯವಾಗಿಬಿಟ್ಟಿದ್ದ. ನಾಗರಾಜನ ಕಿವಿಯಲ್ಲಿ ಈರನ ಮಾತು—ಕಳ್ಳಮುಂಡೆ, ನನ್ನ ಮೋಸಮಾಡಬೇಕೂಂತಿದ್ದಿಯ ?—ರಿಂಗಣಗುಣಿಯಿಸುತ್ತಿತ್ತು.

ಎದುರಿಗೆ ಹೆಂಗಸು ನಿಂತಿದ್ದಳು. ನಾಗರಾಜ ಎವೆಯಿಕ್ಕದೆ ಅವಳನ್ನೇ ವೀಕ್ಷಿಸಿದ. ಆಕೆಯ ಕಪ್ಪಗಿನ ಮೈಮೇಲೆ ಬೆಂಕಿಯ ಜ್ವಾಲೆ ನರ್ತನಗೈಯುತ್ತಿತ್ತು. ಎಣ್ಣೆ ಹಚ್ಚಿದಂತೆ ಮಿರುಗುತ್ತಿದ್ದ ಆಕೆಯ ಶಿಲಾಬಾಲಿಕೆಯ ದೇಹದಲ್ಲಿ ರಕ್ತ ಚಿಲುಮೆಯಾಗಿ, ಚಟುವಟಿಕೆಯಿಂದ ಹರಿದಾಟ ನಡೆಸುತ್ತಿರುವುದು ದಷ್ಟಪುಷ್ಟ ಅಂಗಾಂಗಗಳಲ್ಲಿ ಪ್ರತಿಫಲಿತವಾಗಿತ್ತು. ಅವಳ ನಗ್ನ ದೇಹ ಅಷ್ಟೇನು ತರುಣವೂ ಆಗಿರದೆ, ವಯಸ್ಸಿನ ಭಾರದಿಂದ ಜಗ್ಗಿಯೂ ಇರದೆ, ನಿಮಿರಿನಿಂತಿತ್ತು. ಆಕೆಯ ಮುಖದಲ್ಲಿ ಕಾಣುತ್ತಿದ್ದ ಭಯ ಕ್ಷಣಮಾತ್ರದಲ್ಲಿ ಆತ್ಮವಿಶ್ವಾಸದಿಂದ ಮುಚ್ಚಿಹೋಯಿತು. ಕಿರುನಗೆ ನಕ್ಕಳು. ತಾನೇನು ಮಾಡುತ್ತಿದ್ದೇನೆಂಬ ಅರಿವೂ ಅವಳಿಗಿಲ್ಲ ಎಂದು ಅವನೆಂದುಕೊಂಡ. ಅವಳ ದೇಹದಿಂದ ಸೂಸುತ್ತಿದ್ದ ಮುರ್ಗಂಧ, ಅವಳ ಬಾಯಿಂದ ಬರುತ್ತಿದ್ದ ಹೆಂಡದ ನಾತದಲ್ಲಿ ಮಿಳಿತವಾಗಿ ಒಂದು ಥರ ಸಿಹಿಯಾದ ವಾಸನೆ, ನಾಗರಾಜನನ್ನು ಆಕರ್ಷಿಸಿತು. ತನ್ನ ನಗ್ನತೆಯ ಅರಿವೂ ಇರದೆ ನಟ್ಟು ನಿಂತಿದ್ದ ಆಕೆಯ ಭಂಗಿಯನ್ನು ಕಂಡು ನಾಗರಾಜನಿಗೆ ವ್ಹಾರೆವ್ಹ ಅನ್ನಿಸಿತು. ಹಾಗನ್ನಿಸಿದ ಕೂಡಲೆ ಅವಳ ಕಿರುನಗೆ ಕಂಡು ಭಯವೂ ಆಯಿತು. ಒಂದು ಹೆಜ್ಜೆ ಹಿಂದಿಟ್ಟ. ಆಕೆ ಗಹಗಹಿಸಿ ನಕ್ಕಳು. ನಾಗರಾಜ ಪುಕ್ಕನಾಗಿಬಿಟ್ಟ. ಅಲ್ಲಿಂದ ಓಡ ಹತ್ತಿದವನು ಮನೆ ತಲುಪುವ ತನಕ ಹಿಂದೆ ತಿರುಗಿ ನೋಡಲಿಲ್ಲ.

ಅಂದಿನ ರಾತ್ರಿ ನಡೆದ ಘಟನೆ ಅವನ ಮನಸ್ಸಿನ ಮೇಲೆ ಅಳಿಯಲಾರದಂತೆ ಅಚ್ಚೊತ್ತಿ ನಿಂತಿತ್ತು. ಕೀರ್ತಿಯ ಸಹವಾಸವಾಗಲಿ, ಪ್ರತಿಮಾದೇವಿಯರ ಮೈಸಿರಿಯಾಗಲೀ ಅವನಿಗೆ ಬೇಕೆನಿಸಲಿಲ್ಲ. ಈರನ ಪ್ರಣಯಿನಿಯ ವರ್ತನೆ ಅವನನ್ನು ಕೆಣಕುತ್ತಿತ್ತು. ಯಾಕೆ ಅವಳು ಹಾಗೆ ಮಾಡಿದಳು ? ಈರ ಹೇಳಿದ ಹಾಗೆ, ತಾನು ಅಲ್ಲಿಗೆ ಹೋಗುವುದಕ್ಕೆ ಅವಳೇನು

ಕಾರಣವಲ್ಲದಿದ್ದರೂ, ಅವನ ಸ್ನೇಹದ ಆಳವನ್ನು ಸಂದೇಹಿಸುವ ಹಾಗೆ ಅವಳು ನಡೆದುಕೊಂಡಿರಬೇಕು, ಹಿಂದೆಂದೋ ತನ್ನ ಗಂಡನಾಗಿರಬಹುದಾದವನು ಎದುರಿಗಿದ್ದಾಗ ಹಾದರವಾಡಿದ ತಪ್ಪೆಲ್ಲವನ್ನೂ, ಈರನೊಬ್ಬನ ಮೇಲೇ ಹೊರಿಸಿ, ಅವನ ಮೇಲೆ ಸೇಡು ತೀರಿಸಿಕೊಳ್ಳುವುದರಲ್ಲಿ ಎಲ್ಲರಿಗಿಂತ ಆಕೆ ಮುಂದು. ಆದರೆ ಗಂಡ ಆ ಸ್ಥಳ ಬಿಟ್ಟು ಜಾರಿದ ಕೂಡಲೆ ಮತ್ತೆ ಅವನೊಡನೆ ಒಂದಾಗಿಬಿಟ್ಟಳು. ಇದೆಂಥ ಸ್ನೇಹ? ತನ್ನ ಕಂಡಕೂಡಲೆ ಒಂದು ಕ್ಷಣ ಬೆಚ್ಚಿದಳು. ಆದರೆ ಮರುಗಳಿಗೆ ಸಾವರಿಸಿಕೊಂಡು ಮುಗುಳ್ನಗೆ ನಕ್ಕಳು. ತನ್ನ ಕೂಡ ಮಲಗಲು ಸಿದ್ಧಳಾಗಿದ್ದೇನೆ ಎಂದಿರಬಹುದೆ, ಆ ನಗುವಿನ ಅರ್ಥ ಇರಲಾರದು. ಇಲ್ಲದ್ದನ್ನು ನಾನು ಅಂದುಕೊಳ್ಳಬಾರದು ಎಂದು ಪ್ರಯತ್ನಪೂರ್ವಕವಾಗಿ, ಆ ಯೋಚನೆಯನ್ನು ಕಿತ್ತೊಗೆದ. ಓಹ್, ಅವಳ ದೇಹದ ಬಿಗಿ ಮೈಕಟ್ಟು! ಮೈ ಥಳಕು ಹಿಡಿಸುವಂಥ ವಿಹಿತಾಂಗಿ. ಹಾಯೆನಿಸಿತು. ಈರನದು ತಪ್ಪಿರಲಾರದು. ಅಂಥ ಸುಂದರ ಹೆಂಗಸು ಎದುರಿಗಿದ್ದಾಗಲೂ ಸುಮ್ಮನಿದ್ದವನು ಗಂಡಸು ಆದಾನು ಹೇಗೆ? ನಾಗರಾಜನಿಗೆ ತಟ್ಟನೆ, ತಾನು ಓಡಿಬಿಟ್ಟಿದ್ದು ನೆನಪಿಗೆ ಬಂದು, ಥೆ ಅವಳೇನೆಂದುಕೊಂಡಳೋ ಎಂದು ನಾಚಿಕೆಯಾಯಿತು.

ಅವನಿಗೆ ಅವಳ ಮಾದಕ ನಗೆ ನೆನಪಿಗೆ ಬಂತು. ಎಂಥ ವಿಚಿತ್ರ ಹೆಂಗಸು. ಅಲ್ಲಿಯವರೆಗೂ ಇದ್ದ ಈರನ ಜೊತೆ ಸಂಬಂಧ ಕತ್ತರಿಸಿ, ಅವನ ಶಿಶ್ನಕ್ಕೇ ಕೈ ಹಾಕಿದ್ದಳು. (ತನ್ನ ವಸ್ತ್ರ ಒದ್ದೆಯಾದದ್ದು ನೆನಸಿಕೊಂಡರೆ... ಅಬ್ಬಾ.) ಅದನ್ನೂ ಕ್ಷಣಮಾತ್ರದಲ್ಲಿ ಮರೆತು ಅವನೊಂದಿಗೆ ಸ್ನೇಹ ಬೆಳಸಬೇಕೆಂದುಕೊಂಡಳು. ಅದನ್ನು ಈರನಿಂದ ಸಂಪಾದಿಸಿಯೂಬಿಟ್ಟಳು. ನಿಚ್ಚಳವಾದ ಆಸೆಯೊಂದೇ ತುಂಬಿ ಭಯಕಾತರಹಿತವಾದ ಅವಳ ಮನಸ್ಸಿನ ಸೌಲಭ್ಯವನ್ನು ನೆನೆದು ಅವನಿಗೆ ಅಸೂಯೆಯಾಯಿತು. ನನ್ನ ಕಂಡು ಬೆದರಿದ ಳು, ನಗ್ನತೆಯ ಅರಿವೂ ಇಲ್ಲದೆ ಸೊಂಟದ ಮೇಲೆ ಕೈಯಿಕ್ಕಿ ನಗುತ್ತ ನಿಂತಳಲ್ಲ! ಬೆದರಿಕೆಯಿಂದ, ಮಾದಕ ಮೋಹಕ ನಗುವಿಗೆ ರೂಪಾಂತರ ಎಷ್ಟೊಂದು ಸುಲಭ, ಸುಂದರ, ಸರಳ!

ಕೀರ್ತಿ ಪ್ರತಿಮಾದೇವಿಯರಿಗು, ಅವಳಿಗೂ ಎಷ್ಟೊಂದು ವ್ಯತ್ಯಾಸವಿದೆ ಎನಿಸಿತು ಅವನಿಗೆ. ವ್ಯತ್ಯಾಸವಿದೆಯೆ ಅಂತಲೂ ಅನಿಸಿತು. ಪ್ರತಿಮಾರ ಸುಕುಮಾರ ಮುಖದ ಪರದೆಯ ಹಿಂದೆ ಅಡಗಿದ್ದ ನೂರು ಬಯಕೆಯ ಕೋಲಾಹಲ ಅವನಿಗೆ ತಟಕ್ಕನೆ ಗೋಚರವಾಗಿ ಅವನ ಯೋಚನಾಲಹರಿ ಕತ್ತರಿಸಿಬಿತ್ತು. ಇದಕ್ಕೆಂದೇ ಇರಬಹುದೆ, ಅವರನ್ನು ಕಂಡರೆ ನನ್ನ ಮೈಯಲ್ಲೆಲ್ಲ ಚಳಿಗಾಲದ ಮುಂಜಾವಿನ ಬಿಸಿಲ ಚುಮುಚುಮು?

ಚಂದ್ರಾನಿಲರಾಯರು ಹಿಂದಿನ ದಿನ ನಾನು ಪ್ರಶ್ನೆ ಕೇಳಿದಾಗ

ಕೋಪಗೊಂಡುದೇಕೆ? ಅವರಿಗೂ ಮನುಷ್ಯಸಹಜವಾದ ಭಾವನೆಗಳಿದ್ದವು ಅನ್ನಿಸಿದ್ದು ನೆನ್ನೆ ಮಾತ್ರ. ಹಿಂದೊಂದು ಸಾರಿ ವಿಶ್ವನಾಥನ ತಲೆ ತರಿದು ಹಾಕಿದ್ದೊಂದು ಬಿಟ್ಟರೆ ಆತ ಭಾವನಾತ್ಮಕವಾಗಿದ್ದು ನೆನಪಿಲ್ಲ. ಯಾವಾಗಲೂ ಹೆಂಡತಿಯ ಭಾವನೆಗಳನ್ನು ಅರಿತುಕೊಳ್ಳುವ, ಅಥವಾ ಅದಕ್ಕಾಗಿ ಹೆಣಗುವ ಪ್ರಸಂಗಜೀವಿ ಆತ ಎಂದುಕೊಂಡಿದ್ದ ನನ್ನ ಲೆಕ್ಕಾಚಾರಗಳು ಎಷ್ಟೊಂದು ತಪ್ಪಾದುವು! ಅವರ ಬದುಕಿನ ಬಗ್ಗೆ ತಿಳಿಯಲೇಬೇಕೆಂಬ ಆಸೆ ಅವನಿಗೆ ಅದಮ್ಯವಾಯಿತು. ತಿಳಿಯಲೆಂದು ಹೋದೆ. ಈರನ ಬಗ್ಗೆ ತಿಳಿಯಿತು. ಅಥವಾ ನನ್ನ ಬಗ್ಗೆ ಇರಬಹುದೆ?

ಈರ ಮತ್ತೆ ಸಿಗುತ್ತಾನೆಂದು ಅವನಿಗನ್ನಿಸಲಿಲ್ಲ. ಸಿಕ್ಕರೂ ನೆನ್ನೆಯ ಅವನ ವರ್ತನೆಯ ಹಿನ್ನೆಲೆಯಲ್ಲಿ ಮತ್ತೆ ಚಳಿಜ್ವರ ಬಿಟ್ಟು ಮಾತನಾಡಿಯಾನೆಂದು ನಾಗರಾಜನಿಗೆ ಅನ್ನಿಸಲಿಲ್ಲ. ಪ್ರತಿಮಾದೇವಿಯರೇ ಚಂದ್ರಾನಿಲರಾಯರ ಪ್ರಣಯಜೀವನದ ಬಗ್ಗೆ ಹೇಳಬಹುದಿತ್ತು. ಈರನನ್ನು ನಾನು ಕೇಳಿ ತಿಳಿದೆ, ನೀನೂ ಹಾಗೇ ಮಾಡು ಎಂದು ಆಕೆ ತಿಳಿಸಿದ್ದುದಾದರೂ ಏಕೆ?

ನಾಗರಾಜ ರಹಸ್ಯ ತಿಳಿಯುವ ಹಠದಲ್ಲಿ ಸುಮ್ಮನೆ ಮೈ ಪರಚಿಕೊಂಡ.

ಕೀರ್ತಿ ಬಂದು ಅವನ ಬಳಿ ಕುಳಿತುಕೊಂಡಾಗ ರಾತ್ರಿ ಸುಮಾರು ಹೊತ್ತಾಗಿತ್ತು. ಆ ಹುಡುಗಿ ಹಾಗೆಂದೂ ತನ್ನ ದಿನಚರಿಯನ್ನು ತಪ್ಪಿಸುತ್ತಲೇ ಇರಲಿಲ್ಲ. ಬೇಗಬೇಗನೆ, ಸೂರ್ಯಚಂದ್ರರ ಲಗುಬಗೆಯಿಂದ ಹಾಸಿಗೆ, ಊಟದ ಟೇಬಲ್ ಬಳಿಗೆ ಹಾಜರಾಗಿಬಿಡುತ್ತಿದ್ದಳು. ನಾಗರಾಜನಿಗೆ, ನಾನು ಅವಳ ಜೀವನದಲ್ಲಿ ಸರಿಪಡಿಸಲಾರದ ಬದಲಾವಣೆ ಮಾಡಿಬಿಟ್ಟಿದ್ದೇನೆ ಎಂದು ದುಃಖವಾಯಿತು. ಹಾಗೆಂದು ಅವಳಲ್ಲಿ ಹೇಳಿಕೊಳ್ಳುವಂತೆಯೂ ಇಲ್ಲ. ಹೇಳಿದರೆ ಹಿಂದಿನ ಹಾಗೆ ಆಕೆ ಬೇಸರಿಸಿಕೊಳ್ಳುವುದಕ್ಕಿಂತ ಮಿಗಿಲಾಗಿ ನೊಂದುಕೊಳ್ಳುತ್ತಾಳೆ. ಏನು ಮಾಡಲಿ ನಾನು?

ಕೀರ್ತಿ ಮಾತನಾಡಿದಳು:

ನೀನು ನನ್ನ ಮದುವೆಯಾಗಲಿ ಅಂತ ಆಸೆಪಟ್ಟೆ ಅಂತ ನೀನೇನು ತಿಳಿದುಕೋಬೇಡ. ನಾಗರಾಜನಿಗೆ ಈ ಹುಡುಗಿ ಇನ್ನೂ ತನ್ನ ಅಭಿಮಾನ ಅಹಂಕಾರ ಬಿಡದೆ ವೃಥಾ ನೋಯುತ್ತಾಳಲ್ಲ ಅನ್ನಿಸಿತು. ಬಿಟ್ಟಿಲ್ಲವಲ್ಲ ಎಂದು ಸಮಾಧಾನವೂ ಆಯಿತು.

"ನೀನೇನೂ ಕೇಳಿಕೊಳ್ಳಲಿಲ್ಲ ಕೀರ್ತಿ. ಮದುವೆ ಆಗು ಅಂತ ಯಾರನ್ನೂ ನೀನು ಕೇಳಿಕೊಳ್ಳಬೇಕಾಗಿಲ್ಲದಷ್ಟು ಸೌಂದರ್ಯ ನಿನಗಿದೆ" ಕೀರ್ತಿಗೆ ಸಮಾಧಾನವಾಯಿತು.

'ನೆನ್ನೆ ಕನಸಲ್ಲಿ ಚಂದ್ರು ಬಂದುಬಿಟ್ಟಿದ್ದ'—ಕೀರ್ತಿ ಹಾಗೆ ಹೇಳಿದಾಗ

ನಾಗರಾಜನಿಗೆ ಕರುಳು ಚುರ್ ಎಂದಿತು. ಚಂದ್ರಶೇಖರ ತನ್ನ ಸಂಕ್ಷಿಪ್ತ ವೈವಾಹಿಕ ಜೀವನದಲ್ಲಿ ಸುಖವೇನೆಂಬುದೇ ಅರಿಯದೆ ಸತ್ತ ಮದುಮಗ. ಅವನನ್ನು ಮದುವೆಯಾಗಿ ಕೀರ್ತಿ, ಅವನನ್ನು ಕೊಂದು, ತನ್ನನ್ನೂ ಕೊಂದುಕೊಳ್ಳುತ್ತಿದ್ದಾಳೆ. ಹಿಷ್ಟೊಂದು ಸುಲಭವಾಗಿ ಅವನನ್ನ ಮರೆತೆ ಎಂದು ತೋರಿಸಿಕೊಳ್ಳುವುದಕ್ಕೆ ನನ್ನ ಜೊತೆ ಬೇಕು ಬೇಕಾದ ಹಾಗೆ ಕುಣಿದಳು. ಕೇಕೆ ಹಾಕಿದಳು. ಅವಳ ಕುಣಿತ, ಕೇಕೆಗಳೇ ತಾನು ಅವನನ್ನು ಮರೆತಿಲ್ಲವೆನ್ನುವುದಕ್ಕೆ ಸಾಕ್ಷಿ ಎನ್ನುವುದನ್ನೂ ಅರಿಯ ಲಾರದಷ್ಟು ಅವಿದ್ಯೆ ಅವಳದ್ದು. ಪ್ರತಿಮಾದೇವಿಯರ ಹಾಗೆ ಕಲಕದ ನೀರಿನ ಸರೋವರದ ಹಾಗೆ ಇರಲು ಕೀರ್ತಿಗೆಂದಾದರೂ ಸಾಧ್ಯವೆ? ಕೀರ್ತಿಗೂ ಊರಿನ ಜಾರಿಣಿಗೂ ಎಷ್ಟೊಂದು ವ್ಯತ್ಯಾಸ! ಇದರಲ್ಲಿ ನನ್ನ ಪಾಲಿನ ಗೋಸುಂಬೀತನವನ್ನೂ ನಾನು ಮಾಡಲಿಲ್ಲವೆ?

"ಇವತ್ತು ನಿನ್ನ ಜೊತೆ ಮಲಗಿಕೋಬೇಕೊಂತ ಬಂದಿದೀನಿ. ನನ್ನ ದೇನೂ ಬಲವಂತ ಇಲ್ಲ. ನಿನಗೆ ಬೇಕಾಗಿದ್ದರೆ ಆಗಬಹುದು."— ನಾಗರಾಜ ಉಕ್ಕಿಬರುತ್ತಿದ್ದ ನಗುವನ್ನು ತಡೆದು ಸೀರಿಯಸ್ಸಾದ.

ಕೀರ್ತಿಗೆ ಆಶ್ಚರ್ಯವಾಯಿತು: ನಾಗರಾಜ ಮೊದಲಿನಂತೆಯೆ ಆಗಿಬಿಟ್ಟನೆ!

ಅವನು ಅವಳ ಕೈ ತೆಗೆದುಕೊಂಡು ಅವಳನ್ನು ಎಬ್ಬಿಸಿದ. ಅವಳು ನಾನೇನೂ ಅವನನ್ನು ಬಯಸಿಬಂದವಳಲ್ಲ. ಅವನೇ ಮೊದಲು ನನ್ನ ಕೈ ಹಿಡಿದಿದ್ದಾನೆ ಎಂದು ಸಮಾಧಾನ ಪಟ್ಟುಕೊಂಡಳು. ಬೆಳಿಗ್ಗೆ ಕೀರ್ತಿಯ ಬದುಕಿನಲ್ಲಿ ಹೊಸ ಅಧ್ಯಾಯ ಶುರುವಾಗಿತ್ತು. ಆಕೆ ನಗು ನಗುತ್ತ ಇರುವ ಸುಂದರ ಕೋಮಲ ಪುಷ್ಪವಾಗಿದ್ದಳು. ಕೆಲಸದವರನ್ನು ಬೈಯುತ್ತ, ಅವರು ಮಾಡಿದ ಪ್ರತಿಯೊಂದು ಕೆಲಸದಲ್ಲೂ ತಪ್ಪು ಕಾಣುತ್ತ ಚೈತನ್ಯದ ಬುಗ್ಗೆಯಾಗಿ ಓಡಾಡುತ್ತಿದ್ದ ಅವಳನ್ನು ಕಂಡು ಚಂದ್ರಾನಿಲ ರಾಯರು ಮೊದಲ ಬಾರಿಗೆ ಹಿಗ್ಗಿನಿಂದ ನಕ್ಕರು. ಅವಳ ಕೊರಳಸುತ್ತ ಕೈ ಹಾಕಿ, ತಲೆ ನೇವರಿಸಿ, ಮಗುವಿನ ಹಾಗೆ ಅವಳ ಕೈ ಹಿಡಿದು ಪಕ್ಕ ದಲ್ಲಿ ಕುಳ್ಳಿರಿಸಿಕೊಂಡು,ಊಟ ಮಾಡಿದಾಗ ನಾಗರಾಜನಿಗೆ, 'ಅಬ್ಬಾ,ಈ ಮನೆಯಲ್ಲಿ ಮತ್ತೆ ಜೀವ ತುಂಬಿತಲ್ಲ ಎಂದು ಮನಸ್ಸು ಹಗುರವಾಯಿತು. ಆದರೂ ಇದು ಎಷ್ಟು ದಿನವಿದ್ದೀತು? ನಾನು ನಿನ್ನೆ ಅವಳೊಡನೆ ನಡೆದು ಕೊಂಡ ರೀತಿ ಕೃತಕವೆಂದು ಅವಳೊಡನೆ ಮುಚ್ಚಿಡುವುದು ಎಷ್ಟು ದಿನ ಸಾಧ್ಯ? ಯಾರಿಂದ ವಂಚಿಸಿ ನಡೆದರೂ ಪ್ರತಿಮಾದೇವಿಯರ ಪರೀಕ್ಷಕನ ಕಣ್ಣು ತಪ್ಪಿಸಲು ಸಾಧ್ಯವೆ?

ನಾಗರಾಜ ಕೀರ್ತಿಯ ಕೂಡ ಎಸ್ಟೇಟಿನಲ್ಲಿ ತಿರುಗಾಡಿ ಬರಲೆಂದು ಹೊರಟ. ಅವನು ಹೋಗುವುದಕ್ಕೆ ಮುಂಚೆಯೆ ಪ್ರತಿಮಾದೇವಿಯರೂ,

ಕೂಡಿ, ಚಂದ್ರಾನಿಲರಾಯರೂ ಹೋಗಿದ್ದರು. ಪ್ರತಿವಾದೇವಿಯರೂ, ಚಂದ್ರಾನಿಲರಾಯರೂ ಹಾಗೆ ಹೊರಟದ್ದು ಕಂಡೇ ಇರದ ನಾಗರಾಜನಿಗೂ, ಕೀರ್ತಿಗೂ ಒಂದು ರೀತಿಯಲ್ಲಿ ಅಸಂಪಕ್ಕಿಂತ ಮಿಗಿಲಾಗಿ ಆಶ್ಚರ್ಯವೇ ಆಗಿತ್ತು. ಕೀರ್ತಿ ಹಕ್ಕಿಯಂತೆ ಹಾರಾಡುತ್ತ, ನಾಗರಾಜ ಬಳುವಳಿಯಾಗಿ ಕೊಟ್ಟ ಕೆಂಪು ಫ್ರಾಕ್ ಧರಿಸಿ ಸೌಂದರ್ಯ ಚಿಮ್ಮುತ್ತ ನಡೆಯುತ್ತಿದ್ದಾಗ ಸಂಜೆಯ ಸೂರ್ಯನಿಗೂ, ಓಹ್ ಎಂದು ಮೈ ಕೆಂಪೇರುತ್ತಿತ್ತು. ನಾಗರಾಜನಿಗೂ ಅವಳು ಸೌಂದರ್ಯದ ಪರಾಕಾಷ್ಠೆಯಲ್ಲಿದ್ದಾಳೆ ಎಂದೆನಿಸಿಬಿಟ್ಟಿತ್ತು. ಹೀಗೆ ಅವನಿಗನ್ನಿಸುತ್ತಿದ್ದುದು ಇದು ಮೊದಲನೆಯ ಬಾರಿಯೇನಲ್ಲ. ಅವಳನ್ನು ಪ್ರತಿಸಾರಿ ನೋಡಿದಾಗಲೂ ಅವನಿಗೆ ಹಾಗನ್ನಿಸುತ್ತದೆ. ಅವಳು ದಿನದಿನವೂ ಹೊಸಹೊಸತಾಗಿ ಕಾಣುತ್ತಾಳೆ. ಅವಳ ಸೌಂದರ್ಯ ಅಂಥದು. ಅವಳು ನಿತ್ಯನೂತನ, ಚಿರಯೌವನದ ರೂಪರಾಜ್ಞಿ.

ಎಸ್ಟೇಟಿನ ಕೆಲಸದ ಆಳುಮಕ್ಕಳು ದಾರಿಯ ಇಕ್ಕೆಲಗಳಲ್ಲೂ ನಿಂತು ಕೀರ್ತಿ ನಾಗರಾಜರು ನಡೆಯುತ್ತಿರುವುದನ್ನು ನೋಡುತ್ತಿದ್ದರು. ನಾಗರಾಜನಿಗೆ ಇವರೆಲ್ಲ ಯಾಕೆ ಹೀಗೆ ಕದ್ದು ಪೊದೆಗಳ ಹಿಂದಿನಿಂದ, ಮರಗಳ ಮೇಲಿನಿಂದ ನಮ್ಮತ್ತ ನೋಡುತ್ತಿದ್ದಾರೆ ಎಂದು ಆಶ್ಚರ್ಯ. ಕೀರ್ತಿಗೆ ಸ್ಪಷ್ಟವಾಗಿಯೂ ಗೊತ್ತು : ಇವರೆಲ್ಲ ನಿಂತಿರುವುದು ನನ್ನ ರೂಪಸಾಮ್ರಾಜ್ಯದಲ್ಲಿ ಪ್ರಜೆಗಳಾಗಿ ಒಂದೆರಡು ಕ್ಷಣವಾದರೂ ಬದುಕಿರೋಣವೆಂದು ಮಹತ್ವಾಕಾಂಕ್ಷೆ ಹೊತ್ತು ಬಂದಿದ್ದಾರೆ ಅಂತ. ಅವಳಿಗೆ ಅದರಿಂದ ಖುಶಿಯೂ ಆಯಿತು. ತನ್ನ ಯೌಜವಮಾನ್ಯಕ್ಕೆ ತಾನಾಗಿ ಕರೆಯದೆ, ತಾವಾಗಿ ಬಂದು ಅವಳು ನೀಡಿದ ಶಿಕ್ಷೆಯನ್ನೂ ಮಹಾಪ್ರಸಾದವೆಂದು ಶಿರಸಾವಹಿಸಿ ಸ್ವೀಕರಿಸುವ ಕೃತಾರ್ಥತೆಯನ್ನು ಅವರು ಪಡೆದುಕೊಳ್ಳಲಿ ಎಂದು ಅವಳು ಎಷ್ಟೋ ಸಾರಿ ಬಯಸಿದ್ದಳು. ಆದರೆ ಅವಳು ಅತ್ಯಂತ ಕೋಪಗೊಂಡಾಗಲೂ ಅತ್ಯಂತ ರೂಪಸಿಯಾಗಿ ಕಾಣುತ್ತಾಳೆಂದು ಆಳುಮಕ್ಕಳೆಲ್ಲ ಒಪ್ಪಿಕೊಂಡರೂ,ಅವಳ ರೂಪ ಅವಳ ಕೈಯಲ್ಲಿರುವ ಬೆತ್ತಕ್ಕೂ ಮೃದುತ್ವ ನೀಡಲು ಸಾಧ್ಯವಿಲ್ಲ ಎಂಬುದನ್ನು ಸ್ವಂತ ಅನುಭವದಿಂದ ಕಲಿತ ಚಾಣಕ್ಯರು ಅವರು. ಅವರ ಎಲುಬುಗಳು ಅಲ್ಲಲ್ಲಿ ಮುಗ್ಗಾಗಿ, ಮೈಮೇಲೆ ಬಾರುಗಳು ಎದ್ದು ವ್ರಣವಾದಾಗ. ಇದು ತಪ್ಪಿಸಿಕೊಳ್ಳಲಾರದ ಪಿಡುಗು ಎಂದು ಅವರಿಗೇನೂ ಅನಿಸಿರಲಿಲ್ಲ. ಅವಳ ರೂಪವನ್ನು ಮರಗಳ ಹಿಂದೆ ನಿಂತೂ ಸವಿಯಬಹುದು. ಕದ್ದಾದರೂ, ಕೊನೆಗೆ ಏಟು ತಿಂದಾದರೂ ನೋಡಲೇಬೇಕಾದ ದಿವ್ಯಸ್ವರೂಪ ಅವಳದ್ದಲ್ಲವೆ?

ಕೀರ್ತಿ ಕೈನಲ್ಲೊಂದು ಬೆತ್ತ ಹಿಡಿದು, ದಾರಿಯಲ್ಲಿ ಸಿಕ್ಕ ಚಿಕ್ಕಪುಟ್ಟ ಮಕ್ಕಳಿಗೊಂದು ಕೊಡುತ್ತ, ಅದರ ರುಚಿ ನೋಡಿ ಓಡುವುದನ್ನು

ಮರೆತು, ಅಥವಾ ಓಡಲಾರದೆ ನಿಂತವಕ್ಕೆ ಅವು ತೃಪ್ತಿಯಾಗಿ ಸಾಕು ಎಂದುಕೊಂಡು ಓಡುವುದನ್ನು ಕಲಿಯುವ-ತನಕ ನೀಡಬಹುದಾದ್ದು ನೀಡುತ್ತ ಹೋಗುತ್ತಿರಬೇಕಾದರೆ ಸುಮಾರು ಐದು ಗಂಟೆಯ ಸಮಯ. ಆಕಾಶದಲ್ಲಿ ಮೋಡ ಪಸರಿಸಿ, ಗಾಳಿ ಮಂದವಾಗಿ ಬೀಸುತ್ತಿತ್ತು. ಎಸ್ಟೇಟಿನ ಆಳುಮಕ್ಕಳು ಸಾಕಿದ ಆಕಳು ಎಮ್ಮೆಗಳು ಕೀರ್ತಿ ಬಂದಳು, ಪ್ರತಿಮಾದೇವಿಯರು ಬಂದರು ಎಂಬುದನ್ನು ಅರಿತುಕೊಂಡವೆಂಬಂತೆ, ತಲೆಯೆತ್ತಿ, ಕಿವಿಯಗಲಿಸಿ ನಿಂತುಬಿಟ್ಟಿದ್ದವು—ಮೈಮೇಲೆ ಕೂತು ಪೀಡಿಸುತ್ತಿದ್ದ ಸೊಳ್ಳೆ ಗುಂಗಡಗಳನ್ನು ಬಾಲದಿಂದ ಹೊಡೆದೋಡಿಸುವುದನ್ನೂ ಮರೆತು.

ನಾಗರಾಜ ಗಕ್ಕನೆ ನಿಂತ. ದೂರದಲ್ಲಿ ಚಂದ್ರಾನಿಲರಾಯರು ನಿಂತಿದ್ದರು. ಅವರ ಮುಂದೆ ವಿನೀತರಾಗಿ ಇಬ್ಬರು-ಒಂದು ಗಂಡಸು, ಒಂದು ಹೆಂಗಸು. ಅವನು ಈರನೇ ಎಂಬುದರಲ್ಲಿ ನಾಗರಾಜನಿಗೆ ಸಂಶಯವಿರಲಿಲ್ಲ. ಅವನ ತಲೆಯ ಮೇಲಿದ್ದ, ನಕ್ಷತ್ರರಾಶಿಯ ರುಮಾಲು ಅವನ ಅನುಮಾನವನ್ನು ಪುಷ್ಟೀಕರಿಸಿತ್ತು.

ನಾಗರಾಜನಿಗೆ ಭಯ—ತನ್ನ ಬಗ್ಗೆ ಈರ ಏನು ಹೇಳುತ್ತಾನೆಂದಲ್ಲ—ಅದರ ಬಗ್ಗೆ ನಾಗರಾಜ, ಚಂದ್ರಾನಿಲರಾಯರಿಗೆ ಹೆದರಿಕೊಳ್ಳುವುದನ್ನು ಎಂದೋ ಮರೆತುಬಿಟ್ಟಿದ್ದ. ಅವನಿಗಿದ್ದ ಹೆದರಿಕೆಯೆಂದರೆ ಈರ ಚಂದ್ರಾನಿಲರಾಯರ ಮುಂದೆ ಅಷ್ಟೊಂದು ವಿನೀತವಾಗಿ—ನಿಂತಿರುವುದು ಕಂಡರೆ ಅವನು ಅವರ ಬಗ್ಗೆ ಚಕಾರವೆತ್ತಲು ಸಾಧ್ಯವೆ ಎನ್ನುವುದು. ಪ್ರತಿಮಾದೇವಿಯರು ತಮ್ಮ ಪತಿದೇವರ ಪ್ರಣಯ ಕಥಾನಕದ ಬಗ್ಗೆ ಈರನನ್ನು ಕೇಳು ಅಂದಾಗಲೇ ಅವನಿಗೆ ಅನುಮಾನವಾಗಿತ್ತು. ಯಾವ ಹೆಂಗಸು ತಾನೆ ತನ್ನ ಗಂಡನ ಬಗ್ಗೆ ಇನ್ನೊಬ್ಬರಿಂದ ತಿಳಿಯಲು ಅಪೇಕ್ಷಿಸುತ್ತಾಳೆ, ಮತ್ತು ಇತರರನ್ನು ತಿಳಿದುಕೊಳ್ಳಿ ಎಂದು ಹುರಿದುಂಬಿಸುತ್ತಾಳೆ? ಅಂದರೆ ತಾನಂದುಕೊಂಡುದೆಲ್ಲ ಸುಳ್ಳು!

ಕೀರ್ತಿಯೊಂದಿಗೆ ಬೇಗಬೇಗನೆ ಹೆಜ್ಜೆ ಹಾಕಿದ. ಅವನು ಹತ್ತಿರ ಬರುತ್ತಿದ್ದಂತೆ, ಈರನೂ ಅವನ ಪಕ್ಕದಲ್ಲಿದ್ದ ಹೆಂಗಸೂ ಅವನಿಗೆ ಸ್ಪಷ್ಟವಾಗಿ ಕಂಡರೂ ಇವಳೇ ಅಲ್ಲವೆ ನೆನ್ನೆ ನನ್ನ ಮುಂದೆ ನಿಂತು ಬತ್ತಲೆ ನಗೆ ನಕ್ಕ ಪ್ರಕೃತಿ! ನಾಗರಾಜನ ಎದೆ ಝುಲ್ ಎಂದಿತು. ತಲೆಯಮೇಲೆ ಸೆರಗೆಳೆದು ನಾಚಿನಿಂತಿದ್ದಳು ಅವಳು, ಈರನ ಹಾಗೆ. ವಿನೀತರಾಗಿ, ವಿನಯದಿಂದ ಕುಸಿದು ಬಿದ್ದವರ ಹಾಗೆ ಕೈಮುಗಿದುಕೊಂಡು ಚಂದ್ರಾನಿಲರಾಯರ ಎದುರು ನಿಂತಿದ್ದ ಆ ನಾಟ್ಯರತ್ನಗಳನ್ನು ಕಂಡಾಗ ನಾಗರಾಜನಿಗೆ ನಗು ಬಂತು. ನೆನ್ನೆಯ ದಿನದ ಅವರ ಬದುಕಿಗೂ, ಇಂದಿನ ಅವರ ಜೀವನಕ್ಕೂ ಎಷ್ಟೊಂದು ವ್ಯತ್ಯಾಸ!

ಚಂದ್ರಾನಿಲರಾಯರು ಅವರಿಗೇನೋ ಹೇಳುತ್ತಿದ್ದರು. ಏನಿರ ಬಹುದು, ಈತನಿಂದ ಇವರು ಪಡೆಯಬಹುದಾದ ಉಪದೇಶ ಎಂದು ನಾಗರಾಜ ಅಚ್ಚರಿಗೊಂಡ. ಅವರ ಹತ್ತಿರ ಹೋದಾಗ ಚಂದ್ರಾನಿಲ ರಾಯರು ಕೀರ್ತಿಯ ಹೆಗಲ ಮೇಲೆ ಕೈ ಹಾಕಿ ನಿಂತು ನಾಗರಾಜನತ್ತ ದಿಟ್ಟಿಸಿದರು. ಅವರು ಅವನತ್ತಲೇ ದಿಟ್ಟಿಸಿನೋಡುತ್ತಿದ್ದ ಭಂಗಿ ನಾಗ ರಾಜನನ್ನು ತಳಮಳಕ್ಕೀಡಿಸಿತು. ಅವರಿಂದ ದೃಷ್ಟಿ ಬದಲಿಸಿ ಈರನತ್ತ ನೋಡಿದ. ಅವನು ಚಂದ್ರಾನಿಲರಾಯರ ಮುಂದೆ ನಾಚಿನಿಂತ ಮದು ವಣಗಿತ್ತಿಯಂತೆ ತಲೆತಗ್ಗಿಸಿ ನಿಂತಿದ್ದ. ಅವನ ಪಕ್ಕದಲ್ಲಿದ್ದ ಹೆಣ್ಣು ಮಾತ್ರ ಭೀತಿಯಿಂದ ನಾಗರಾಜನತ್ತ ದೃಷ್ಟಿ ಹರಿಸಿದಳು. ನಾಗರಾಜ ಕೀರ್ತಿಯತ್ತ ಸರಿದ. ಆ ಹೆಂಗಸು ಉಕ್ಕಿ ಬರುತ್ತಿರುವ ಅಳುವನ್ನು ತಡೆದು ತಡೆದು ಸೋಲುತ್ತಿದ್ದಾಳೆನಿಸಿತು.

ಚಂದ್ರಾನಿಲರಾಯರು ಹೇಳಿದರು : ಈರ !

'ಬುದ್ಧಿ' ಈರ ತನ್ನಿಂದೆಲ್ಲಿ ಮಹಾಪರಾಧವಾಯಿತೋ ಎಂದುಕೊಳ್ಳು ವವನ ವಿನಯದಿಂದ ಚಡಪಡಿಸಿದ.

ಯಜಮಾನರು ಹೇಳಿದರು : ಅವಳನ್ನು ಕಟ್ಟು.

ಯಜಮಾನರ ಆದೇಶವನ್ನು ಪಾಲಿಸಿದ ಭಂಟ, ಕ್ಷಣಾರ್ಧದಲ್ಲಿ ಅವಳ ದೇಹವೆಲ್ಲ ಭೂತಾಳೆ ನಾರಿನಿಂದ ಬಿಗಿಯಲ್ಪಟ್ಟು ಅವಳ ದೇಹದ ಉಬ್ಬು ತಗ್ಗಿನ ವಕ್ರವಿನ್ಯಾಸ ಸ್ಪಷ್ಟವಾಗಿ ಗೋಚರಿಸಿದವು. ಚಂದ್ರಾನಿಲರಾಯರ ಸಮ್ಮತಿಯ ದೃಷ್ಟಿಯನ್ನು ಗಮನಿಸಿದ ಈರ ಅವಳನ್ನು ಥಳಿಸಲು ಪ್ರಾರಂಭಿಸಿದ. ಅವಳು ಸಂಗೀತದ ಸಪ್ತಸ್ವರಗಳನ್ನೂ ಮೀರಿ ಒರಲಿದಳು. ನೋವಿನಿಂದ ಕೂಗಿದಳು. ಅವಳ ಒಂದೊಂದು ಕೂಗೂ ಅವನ ದೇಹ ದಲ್ಲಿ ಒಂದೊಂದು ದೇವರನ್ನು ಸೇರಿದ ಹಾಗೆ ಈರ ಅವಳನ್ನು ಅಪ್ಪಳಿಸಿ ಬಡಿದ. ಹಣೆಯ ಮೇಲೆ ರಾಸಿ ರಾಸಿಯಾಗಿ ಬರುತ್ತಿದ್ದ ಬೆವರನ್ನು ಒರಸಿ ನೆಲಕ್ಕೆ ಒದರುತ್ತ ಅವಳಿಗೆ ಹಣ್ಣುಗಾಯಿ ನೀರುಗಾಯಿ ಮಾಡಿದ.

ನಾಗರಾಜನಿಗೆ ಇದೆಂಥ ಬದುಕು ಎಂದು ಅಸಹ್ಯವಾಯಿತು. ಹೆಂಗ ಸೊಬ್ಬಳನ್ನು ಹೊಡೆಯುವ ಹಾಗೆ ಆದೇಶ ನೀಡಿದ್ದ ಚಂದ್ರಾನಿಲರಾಯರ ನೀತಿಯೇನು ಎಂದು ಅವನು ಬೇಜಾರು ಮಾಡಿಕೊಂಡ. ತನ್ನ ಕೂಡ ಮಲಗಿದ್ದ ಹೆಂಗಸನ್ನೇ ಹೊಡೆಯುವುದಕ್ಕೆ ಆತ್ಮಸಾಕ್ಷಿಯಿದ್ದ ಈರನೆಂಥ ಪಶು ಎಂದು ಅವನು ಜಿಜ್ಞಾಸೆ ಮಾಡಿದ.

ಕೀರ್ತಿ ಏಕಾಗ್ರಚಿತ್ತಳಾಗಿ ಆ ಹೆಂಗಸನ್ನೇ ನೋಡುತ್ತಿದ್ದಳು.

ಈರ ಹೊಡೆದು ಹೊಡೆದು ಸೋತ. ಚಂದ್ರಾನಿಲರಾಯರು ಅಲ್ಲಿಂದೆದ್ದು ಹೊರಟರು. ನಾಗರಾಜ ಕೀರ್ತಿಯರೂ ಅವರನ್ನು ಹಿಂಬಾ ಲಿಸಿದಾಗ ಆ ಹೆಂಗಸಿನ ಮೇಲಿದ್ದ ಕಟ್ಟುಗಳನ್ನು ಈರ ಬಿಚ್ಚುತ್ತಿದ್ದ.

ಹೋಗುವಾಗೊಂದು ಮಾತು ಹೇಳಿದರು ಚಂದ್ರಾನಿಲರಾಯರು "ಮಾಳಿ, ಜೋಪಾನ. ಆದದ್ದು ಆಗಿಹೋಯಿತು. ಇನ್ನೊಂದು ಸಾರಿ ಹಾಗೇನಾದರೂ ಆದರೆ ನಿನ್ನ ಕೈಕಾಲುಗಳು ನಿನ್ನ ವಶದಲ್ಲಿರುವುದಿಲ್ಲ, ನೆನಪಿಟ್ಟುಕೋ."

ಅವರ ಮಾತು ನಿಷ್ಕೃಷ್ಟವಾಗಿತ್ತು : ಕ್ರೂರವಾದ ಅಲಗಿನ ಹರಿತ ಅದಕ್ಕೆ. ಇಷ್ಟೊಂದು ಕಾಠಿಣ್ಯದಿಂದ, ದೋಸೆಯ ಗರಿಯ ಶಿಸ್ತಿನಿಂದ ಮಾತನಾಡುವ ಚಂದ್ರಾನಿಲರಾಯರು ಅರ್ಥವೇ ಆಗದ ಒಂದು ಮನುಷ್ಯ ಆಕಾರ ಎಂದು ನಾಗರಾಜನಿಗೆ ಅನ್ನಿಸಿತು. ಯಾಕೆ ಈ ವ್ಯಕ್ತಿ ಇದೇ ವೈಯಕ್ತಿಕ ನಿಷ್ಠೆಯನ್ನು ತನ್ನ ಹೆಂಡತಿಯ ಬಗ್ಗೆ ವ್ಯವಹರಿಸುವಾಗ ತೋರುವುದಿಲ್ಲ. ಮಗಳು ನಡೆದರೆ ಎಲ್ಲಿ ನೋಯುತ್ತಾಳೊ ಎಂದು ಅಂದುಕೊಳ್ಳುವ ಅವರ ಹೃದಯ ಏಕೆ ಮಾಳಿಯಂಥವರ ವಿಷಯದಲ್ಲಿ ಇಷ್ಟೊಂದು ಕಠಿಣ ? ಅವಳು ಮಾಡಿದ್ದಾದರೂ ಏನು ?

ನಾಗರಾಜ ಹಿಂತಿರುಗಿ ನೋಡಿದ. ಈರ ಮಾಳಿಯನ್ನು ತಬ್ಬಿಕೊಂಡು ಗೋಳೋ ಎಂದು ಅಳುತ್ತಿದ್ದ. ಅವಳು ಅವನೆದೆಯಲ್ಲಿ ತಲೆ ಹುದುಗಿಸಿ, ಬಿಕ್ಕಳಿಸುತ್ತ ಮುಲುಗುಡುತ್ತಿದ್ದಳು.

ಕೀರ್ತಿ ಪ್ರಶ್ನಾರ್ಥಕನಾಗಿ ಚಂದ್ರಾನಿಲರಾಯರತ್ತ ನೋಡಿದಳು. ಅವರು ಅವಳ ಪ್ರಶ್ನೆಗೆ ಉತ್ತರ ನೀಡುವಷ್ಟು ವ್ಯವಧಾನವಿದ್ದವರಂತೆ ಕಾಣಲಿಲ್ಲ. ಅವರಿಗೆ ಹೆಂಡತಿ ಎಲ್ಲಿರುವರೋ, ಅವರಿಗೇನಾಗಿದೆಯೋ ಅನ್ನುವ ಆತಂಕ. ಪ್ರತಿಮಾದೇವಿಯರು ಒಂದು ಮರದ ಕೆಳಗೆ ಹಚ್ಚಗೆ ಕಾಲುಚಾಚಿ ಕುಳಿತಿದ್ದರು.

ಚಂದ್ರಾನಿಲರಾಯರನ್ನು ಕಂಡವರೆ ಆಯಿತ ಅನ್ನುವ ಹಾಗೆ ನೋಡಿದರು. ಅದಕ್ಕೆ ಉತ್ತರ ಮೌನಮಾತ್ರ.

ಏನಾಗಿತ್ತು ಎಂದು ನಾಗರಾಜ ಪ್ರತಿಮಾದೇವಿಯರನ್ನು ಕೇಳಿದ. ಪ್ರತಿಮಾದೇವಿಯರು ಉತ್ತರ ಹೇಳುವುದರಲ್ಲಿ ತೋರಿದ ನಿರಾಸಕ್ತಿ ಅವನಿಗೆ ಕುತೂಹಲವೆಂದೇನೂ ಅನ್ನಿಸಲಿಲ್ಲ. ಆಕೆ ನುಡಿದರು: ಇದ್ದೇ ಇರುತ್ತೆ ಎಂಥದೋ ಒಂದು ಗೋಳು. ಹಾಗೆ ಇದೂ.

ಚಂದ್ರಾನಿಲರಾಯರನ್ನೂ ಕೀರ್ತಿ ಕೇಳಿದಾಗ ಆತ ತಮ್ಮ ಪತ್ನಿಯತ್ತ ನೋಡಿದರು. ಪತ್ನಿಯ ಮುಖದಲ್ಲಿ ಹೇಳಬೇಕೂಂದರೆ ಹೇಳು ಅನ್ನುವ ಭಾವ. ಕೇಳಿದವಳು ಕೀರ್ತಿ. ಮಗಳ ತಲೆಯನ್ನು ತೊಡೆಯ ಮೇಲಕ್ಕೆ ಹಾಕಿಕೊಂಡು, ಅದನ್ನು ತಾಯಿ ಮಗುವನ್ನು ಮಲಗಿಸಲಿಕ್ಕೆ ತಟ್ಟುವಂತೆ ತಟ್ಟುತ್ತ ಹೇಳಿದರು :

ಇಲ್ಲೊಬ್ಬ ಮಾಳ ಅಂತ ಇದ್ದಾನೆ. ಇದಾನೆ ಏನು ಇದ್ದ. ನಾಮರ್ದ ಸೂಳೆಮಗ. ಅವನ ಹೆಂಡತಿ ಇದು. ಈರ ಹಾವು ಹಿಡಿಯುವವನು ;

ನಿಮಗೆ ಗೊತ್ತೇ ಇದೆಯಲ್ಲ. ಇವಳನ್ನು ಹಿಡಿದ.

ಅವರಿಗೆ ಇಷ್ಟು ಸರಾಗವಾಗಿ ಮಾತನಾಡುತ್ತಿದ್ದೇನಲ್ಲ ಎಂದು ಆಶ್ಚರ್ಯ. ತಮ್ಮ ಜೋಕಿನ ಬಗ್ಗೆ ಹೆಮ್ಮೆಯೂ ಆಗಿ, ಅವರು ಹೆಂಡತಿಯತ್ತ ನೋಡಿದರು. ಆಕೆಯ ಮುಖದಲ್ಲಿ ಕಿರುನಗೆ ಲಾಸ್ಯವಾಡುತ್ತಿತ್ತು. ಭಲ ಅನ್ನುವ ಹಾಗಿತ್ತು ಆಕೆಯ ಮಂದಹಾಸ. ಚಂದ್ರಾನಿಲರಾಯರಿಗೆ ಜನುಮ ಸಾರ್ಥಕವಾಯಿತು ಅಂತ ಅನಿಸಿತು. ಮುಂದುವರೆಸಿದರು.

ಕದ್ದು ಕದ್ದು ಸ್ವಲ್ಪ ದಿನ ಮಾಡಿದರು. ಆಮೇಲೆ ಗಂಡನಿಗೆ ಗೊತ್ತಾಯಿತು. ಅವನು ಮನೆಯೊಳಗೆ ಬಾಯಿಬಾಯಿ ಬಡಿದುಕೊಂಡ. ಇವಳು ಒದ್ದು ಮೂಲೇಲಿ ಕೂರಿಸಿದಳು ಅವನನ್ನು. ಹೊಡೆದೂ, ಬಡಿದೂ ಹೆದರಿಸಿದಳು. ಈರನಿಗೆ ವಿಷಯ ತಿಳಿದು ದಿಗಿಲು ಬಿದ್ದ. ಗಂಡ ಎಲ್ಲಿ ನಿಮ್ಮಮ್ಮನ ಕಿವಿಗೆ ಹಾಕುತ್ತಾನೋ ಅಂತ ಹೆದರಿಕೊಂಡು, ಗಂಡನಿಗೆ ಹೊಡೀಬೇಡವೆ, ಅವನೇನಾರು ಚಾಡಿಗೀಡಿ ಹೇಳಾನು ಅಂತ ಕಾಲಿಗೆ ಬಿದ್ದು ಕೇಳಿಕೊಂಡನಂತೆ. ಅವಳೆಲ್ಲಿ ಬಿಡ್ತಾಳೆ; ನಿಜವಾಗಿ ಗಂಡುಸಾಗಿ ಹುಟ್ಟಬೇಕಾಗಿತ್ತು. ಈಗ ಮೂರು ದಿನದ ಕೆಳಗೆ ನಿಮ್ಮಮ್ಮನಿಗೆ ವಿಷಯ ಗೊತ್ತಾಯ್ತು. ಅವನನ್ನೇನೂ ಯಾರೂ ಬೈದಿಲ್ಲ. ಹಾಳಾಗಿ ಹೋಗಲಿ ಅಂತ ಬಿಟ್ಟಿದ್ದಾಯ್ತು. ನಿಮ್ಮಮ್ಮನ ದೊಡ್ಡತನ ಆ ಮುಂಡೇವಕ್ಕೆಲ್ಲಿ ಅರ್ಥವಾಗುತ್ತೆ?

ಚಂದ್ರಾನಿಲರಾಯರು ಕತ್ತು ತಗ್ಗಿಸಿ ನಾಚಿದರು. ಆ ಮಾತನ್ನು ಹೆಂಡತಿಯ ಮುಂದೆ ಹೇಳಬಾರದಿತ್ತೇನೋ ಎಂದು ಅವರಿಗನ್ನಿಸಿತು. ಪ್ರತಿಮಾದೇವಿಯರಿಗೆ ಗಂಡನ ಸ್ವಾಭಿಮಾನ ತನ್ನ ಪೂಜೆಮಾಡುವಾಗಲೂ ಇಣುಕಿ ಹಾಕುತ್ತದಲ್ಲ ಎಂದು ಹೆಮ್ಮೆಯಾಯ್ತು. ಹೇಳು ಚಂದ್ರು, ಪರವಾಗಿಲ್ಲ ಎಂದು ಒತ್ತಾಯಿಸಿದರು. ಅವರಿಗೆ ಗಂಡ ಇಷ್ಟು ಹೊತ್ತು ನಿರರ್ಗಳವಾಗಿ ಮಾತನಾಡಿದ್ದು ಕೇಳಿದ್ದು ಇದೇ ಮೊದಲು. ಮನೆಯಲ್ಲೆಂದರೆ ಕೀರ್ತಿಯೊಬ್ಬಳನ್ನು ಬಿಟ್ಟು ಯಾರೊಂದಿಗೂ ಮಾತನಾಡುವುದಿಲ್ಲ. ಮನೆಯ ಯಾಜಮಾನ್ಯವೆಲ್ಲವೂ ಪ್ರತಿಮಾದೇವಿಯರದೆ. ಚಂದ್ರಾನಿಲರಾಯರೇನಿದ್ದರೂ ಯಾವಾಗಲಾದರೊಮ್ಮೆ ಯಾರೊಡನೆಯಾದರೂ ಕೂಗಾಡಿಬಿಡುತ್ತಿದ್ದರು.

ಈ ವಿಷಯ ಆ ಮುಂಡೇಗೆ ಹೇಗೋ ತಿಳೀತು. ಗಂಡನ್ನ ಮೆತ್ತಗೆ ಒಳಗೆ ಹಾಕಿಕೊಂಡು ನೆನ್ನೆ ಈರನ್ನ ಮುಗಿಸಿಬಿಡಬೇಕೂಂತ ನೋಡಿದ್ಲಂತೆ. ಆದರೆ ಅಷ್ಟರಲ್ಲಿ ಯಾರೋ ಅಲ್ಲಿಗೆ ಹೋಗಿ ಗಲಾಟೆ ಮಾಡಿಬಿಟ್ಟಿದ್ದಾರೆ. ಸರಿ ಅವರೆಲ್ಲ ಓಡಿಹೋಗಿಬಿಟ್ಟರು. ಈರನೂ ತಪ್ಪಿಸಿಕೊಂಡು ಓಡಿಹೋದ. ಇವಳು ಅದ್ಯಾರನ್ನೋ—ಅಲ್ಲಿಗೆ ಹೋಗಿದ್ರಲ್ಲ ಅವರನ್ನ–ಹಿಡಕೊಂಡು ಅಲ್ಲೇ ಮಲಗಿಕೊಂಡಳು. ಯಾವಾಗಲೂ

ಹಾಸಿಗೆ, ಮುಂಡೇದು. ರಾತ್ರಿ ಹೋಗಿ ಗಂಡನನ್ನು ನೀನೇ ಅವರನ್ನ ಅಲ್ಲಿಗೆ ಕರಕೊಂಡು ಬಂದಿದ್ದೆ. ಈರಾನು ನೀನೂ ಶಾಮೀಲಾಗಿಬಿಟ್ಟಿದ್ದೀರ, ಮುಂಡೆ ಹೆತ್ತವನೆ ಅಂತ ನಾಲ್ಕು ಬಡಿದಳು. ಅವನು ಹೆದರಿಕೊಂಡು ಬಾಯಿಬಿಡಲಿಲ್ಲ. ಇವಳಿಗೆ ಅನುಮಾನ ಬಂದು ಚಾಕು ಅವನಿಗೆ ಕೊಟ್ಟು ಎದೇಲಿ ಇರಿದುಕೋ ಮಿಂಡನನ್ಮಗನೆ. ಇಲ್ಲದಿದ್ದರೆ ನಾನೇ ಕೊಂದು ಹಾಕ್ತೀನಿ ಅಂತ ಬಾರುಕೋಲಿನಲ್ಲಿ ನಾಲ್ಕು ಬಿಟ್ಟಳು. ಅವನು ಕಾಲಿಗೆ ಬಿದ್ದು ಗೋಳೋ ಅಂತ ಅತ್ತ. ಇವಳು ಕಂಬಿ ಕೆಂಪಗೆ ಕಾಯಿಸಿ ಎರಡು ಬರೆ ಹಾಕಿದ ಕೂಡಲೆ ಅವನೆ ಅಲ್ಲಿಗೆ ಬಂದವರನ್ನು ನಾನೇ ಕರೆದುಕೊಂಡು ಬಂದವನು ತಪ್ಪಾಯ್ತು, ಇನ್ನು ಮಾಡುವುದಿಲ್ಲ ಅಂತ ಗೋಗರೆದ. ಕಾಲುಹಿಡಿದುಕೊಂಡು ನಿನ್ನ ಸೀರೆ ಒಗೆದುಕೊಂಡು ಇರ್ತೀನಿ ಬೇಡ ಕಣೆ, ಸಾಯಿಸಬೇಡ, ನಿನ್ನ ದಮ್ಮಯ್ಯ ಅಂತ ಬಾಯ್ಬಿಡುಕೊಂಡ. ಇವಳು ಕುಡಿದಿದ್ಲು. ಅವನನ್ನು ಕೊಂದು ಹಾಕಿದ್ಲು. ಈಗ ಈರನ ಜೊತೆ ಕೂಡಿಕೋ ಬೇಕು ಅಂತ ನಿಮ್ಮಮ್ಮನ ಕೇಳಕ್ಕೆ ಬಂದಿದ್ದಳು. ನಿಮ್ಮಮ್ಮ ಏನು ಮಾಡೋದಿಕ್ಕಾಗುತ್ತೆ? ಗಂಡನ್ನ ಕೊಂದು ಹಾಕಿದ್ದಕ್ಕೆ ನಾಲ್ಕು ಬೀಡೋದು, ಹಾಳಾಗಿ ಹೋಗಿ ನಾಯಿಗಳ ಅಂತ ಸುಮ್ನಿರೋದು."

ಚಂದ್ರಾನಿಲರಾಯರು ನಾನು ಚೆನ್ನಾಗಿ ಮಾತನಾಡಿದೆನೆ ಎಂದು ಪ್ರತಿಮಾದೇವಿಯರತ್ತ, ನಾಗರಾಜನತ್ತ ನೋಡಿದರು.

ನಾಗರಾಜನಿಗೆ ಇಂಥ ಕಥೆ ಹೊಸದು. ನಂಬಲಿಕ್ಕೆ ಅಸಾಧ್ಯ ಎಂದುಕೊಂಡ. ಗಂಡನನ್ನು ಕೊಂದುಹಾಕಿದ ಆ ವೀರಾಗ್ರಣಿ ಎಷ್ಟೊಂದು ಕೋಮಲವಾಗಿ ಕಾಣುತ್ತಾಳೆ ಎಂದು ಅವನಿಗೆ ಆಶ್ಚರ್ಯವಾಯಿತು. ತನ್ನನ್ನು ಅವಳ ಗಂಡ ಅಲ್ಲಿಗೆ ಕರೆದುಕೊಂಡು ಹೋಗಿದ್ದು, ತಾನು ಅವಳ ಜೊತೆಯಲ್ಲಿ ಮಲಗಿದ್ದು ಇವೆಲ್ಲ ಯಾರ ಕಲ್ಪನೆ? ಚಂದ್ರಾನಿಲರಾಯರೆ ಅದನ್ನು ಸೇರಿಸಿಬಿಟ್ಟರೆ? ಅವನಿಗೆ ಅದು ಖಂಡಿತ ಸಾಧ್ಯವಿಲ್ಲ ಅನ್ನಿಸಿತು. ಅವರಿಬ್ಬರ ಬದುಕು ಎಷ್ಟು ವಿಚಿತ್ರ! ಗಂಡನನ್ನು ಕೊಲ್ಲುವಂಥ ಧೈರ್ಯ ಈ ಜನಕ್ಕಿದೆ. ಸುಮ್ಮಸುಮ್ಮನೆ ಅನುಮಾನಪಡುವಷ್ಟು ಬುದ್ಧಿ ದಾರಿದ್ರ್ಯವಿದೆ. ಮುಂದೆ ಕೂಡಿ ಬಾಳುವವಳನ್ನೇ ಬಡಿದುಹಾಕುವಂಥ ಅಮಾನುಷತೆಯಿದೆ, ಮತ್ತೆ ಕ್ಷಣಾರ್ಧದಲ್ಲಿ ಅಪ್ಪಿ ಅಳುವಂಥ ಭಾವಭಾಗಿಗಳು ಇವರು.

ಅವನಿಗೆ ಪ್ರತಿಮಾದೇವಿಯರ, ಕೀರ್ತಿಯ—ಇಬ್ಬರ ಸ್ನೇಹವೂ ಮಾಳಿಯಂಥ ಹೆಂಗಸಿನ ಅರ್ಧ ತಾಸಿನ ಸಖ್ಯಕ್ಕೂ ಸಮವಾಗಲಾರದೆಂದು ಅನ್ನಿಸಿತು. ಕುತೂಹಲವೆಂದರೆ ಮಾಳಿಯ ಜೊತೆ ಅರ್ಧತಾಸು ಸ್ನೇಹ ಮಾತ್ರ ಸಾಧ್ಯ. ಮುಂದೇನಾಗುತ್ತದೋ ಎಂದು ಯಾರೂ ಹೇಳುವಂತಿಲ್ಲ. We must be prepared for the worst.

ಕೀರ್ತಿ ಚಂದ್ರಾನಿಲರಾಯರ ತೊಡೆಯ ಮೇಲೆ ನಿದ್ದೆ ಹೋಗಿಬಿಟ್ಟಿದ್ದಳು. ನಾಗರಾಜನಿಗೆ ಕಾಲದ ಪರಿವೆ ಇರಲಿಲ್ಲ. ಅವನ ಮನಸ್ಸಿನಲ್ಲಿ ತುಮುಲ ನಡೆದಿತ್ತು. ಮಾಳಿಯಂಥ ಹೆಂಗಸಿನ ಪಕ್ಕದಲ್ಲಿ ನಿಂತಾಗ ಚಂದ್ರಾನಿಲ ರಾಯರು, ಕೀರ್ತಿ, ಪ್ರತಿಮಾದೇವಿಯರು, ನಾನು–ಯಾವ್ಯಾವ ಸ್ಥಾನ ಪಡೆಯುತ್ತೇವೆ? ಚಂದ್ರಾನಿಲರಾಯಂತೆ ದೌಷ್ಟ್ಯವನ್ನು ಬೆಳಸಿಕೊಂಡೂ ಅದನ್ನು ಕಾಪಾಡುವ, ಅದನ್ನು ಕಾಲಕಾಲಕ್ಕೆ ತಿದ್ದಿ, ಸಂಪನ್ನಗೊಳಿಸಿ, ನಿರ್ದೇಶಿಸುವ ಭಾರವನ್ನೂ, ಹಕ್ಕನ್ನೂ ಸಹ–ಇನ್ನೊಬ್ಬರಿಗೆ ನೀಡಿಬಿಟ್ಟಿರುವ ವ್ಯಕ್ತಿಯ ಮುಂದೆ ಮಾಳಿ ಎಷ್ಟೊಂದು ಕ್ಷುದ್ರ ಇದ್ದಾಳು!

ಅವನಿಗೆ ಇನ್ನೂ ಅನೇಕ ಚಿಂತೆ. ಅವನೆಷ್ಟು ಯೋಚಿಸಿದರೂ, ತಾಳೆ ಹಾಕಿದರೂ ಕೀರ್ತಿ, ಪ್ರತಿಮಾದೇವಿಯರು ಯಾರಿಗಿಂತಲಾದರೂ ಕಡಿಮೆಯಾದಾರು ಎಂದು ತಪ್ಪಿತಸ್ಥನಾದ ಅವನ ಆತ್ಮಸಾಕ್ಷಿ ಒಪ್ಪಲಿಲ್ಲ.

ಪ್ರತಿಮಾದೇವಿಯರು ಅವನ ಭುಜವನ್ನೂ ಮೃದುವಾಗಿ ತಟ್ಟಿದರು. ನಾಗರಾಜನಿಗೆ ಗಕ್ಕನೆ ಎಚ್ಚರವಾಯಿತು. ತಾನೂ ನಿದ್ದೆಮಾಡಿಬಿಟ್ಟಿದ್ದೇನೆ ಅನ್ನಿಸಿತು. ಕಣ್ಣುಬಿಟ್ಟು ನೋಡಿದ. ಎದುರಿನಲ್ಲಿ ಪ್ರತಿಮಾದೇವಿಯರು ತಮ್ಮ ಸದಾಸಿದ್ಧವಾದ ಮಂದಹಾಸವನ್ನು ಬೀರುತ್ತಿದ್ದರು.

ಕೀರ್ತಿ ಎಲ್ಲಿ ಎಂದು ಕೇಳಿದ.

ಅವಳೂ ಮಲಗಿಬಿಟ್ಟಿದ್ದಳು. ಚಂದ್ರೂ ಅವಳನ್ನು ಮನೆಗೆ ಕರೆದುಕೊಂಡ ಹೋದ.

ನಾಗರಾಜ ಎದ್ದ. ಮನೆಯತ್ತ ತಿರುಗಿದ.

ಪ್ರತಿಮಾದೇವಿಯರು ಹೇಳಿದರು: ಈಗಲೇ ಬೇಡ. ಇಲ್ಲೇ ತೊರೆಯ ತಡಿಯ ಮರಳಲ್ಲಿ ಕೂರೋಣ. ಅವರ ಮಂದಹಾಸಕ್ಕೆ ಜೋಡಿಯಾಗಿ ಚಂದ್ರ ತನ್ನ ಕಿರಣಗಳನ್ನು ಪಸರಿಸಿದ. ನಾಗರಾಜ ಅವರನ್ನು ಹಿಂಬಾಲಿಸಿದ ಕುರುಡನ ಹಾಗೆ.

ದಾರಿಯಲ್ಲಿ ಸಿಕ್ಕ ಒಬ್ಬ ಮುದುಕನಿಗೆ ಪ್ರತಿಮಾದೇವಿಯರು ಈಕನನ್ನು ನಾನು ಕರೀತಾ ಇದ್ದೀನಿ. ಇಲ್ಲೇ ಹೊಳೆಯ ಮರಳ ಮೇಲೆ ಕೂತಿರ್ತೀವಿ ಅಂತ ಹೇಳು ಎಂದು ಆದೇಶವಿತ್ತರು.

ಅವನು ಕೈನಲ್ಲಿ ಹಿಡಿದಿದ್ದ ಚೊಂಬನ್ನು ಅಲ್ಲೇ ಬಿಸುಡಿ, ಚಡ್ಡಿ ಸಿಕ್ಕಿಸಿ ಕೊಳ್ಳುತ್ತ, ಈರನ ಮನೆಯತ್ತ ದೌಡಾಯಿಸಿದ. ಅವನಿಗೆ ಪ್ರತಿಮಾದೇವಿಯರ ಆಜ್ಞೆ ಪಾಲಿಸುವ ಅವಕಾಶ ಬಹಳ ದಿನಗಳ ಮೇಲೆ ಮೊತ್ತಮೊದಲ ಬಾರಿಗೆ ಬಂದಿತ್ತು. ಅವನ ಚಟುವಟಿಕೆಯನ್ನೂ, ಅವನ ಎಪ್ಪತ್ತರ ಇಳಿವಯಸ್ಸನ್ನೂ ಗಮನಿಸಿದ ನಾಗರಾಜನಿಗೆ ಪ್ರತಿಮಾದೇವಿಯರ ಪ್ರಭುತ್ವ ಎಂಥದು ಎಂದು ಆಶ್ಚರ್ಯವಾಯಿತು.

ಪ್ರತಿಮಾದೇವಿಯರತ್ತ ನೋಡಿದ. ಆಕೆ ಮುಂದೆ ನೋಡುತ್ತ ನಿಧಾನವಾಗಿ ನಡೆಯುತ್ತಿದ್ದರು.

ಚಂದ್ರನ ಹಿತವಾದ ಬೆಳಕಲ್ಲಿ ನಿಶೆಯ ಸುವಾಸನೆಯನ್ನು ಹೊತ್ತ ಗಾಳಿ ಪ್ರತಿಮಾದೇವಿಯರ ಕುರುಳಲ್ಲಿ ಸರಸವಾಡುತ್ತಿತ್ತು. ನಾಗರಾಜನಿಗೆ ಆಕೆ ಆಗ ಕಂಡಷ್ಟು ಸುಂದರಳಾಗಿ ಹಿಂದೆಂದೂ ಕಂಡಿರಲಿಲ್ಲವೆನಿಸಿತು. ಎದ್ದು ಹೋಗಿ, ಆಕೆಯ ಪಕ್ಕದಲ್ಲಿ ಕೂತ. ಆಕೆ ಬೇಡವೆನ್ನಲಿಲ್ಲ. ವಿಶಾಲವಾಗಿ ಹರಡಿದ್ದ ಮರಳು: ಬೇಸಿಗೆಯಲ್ಲಿ ಮರ್ತ್ಯನಾಕದ ಪಾತ್ರ ಕಿರಿದಾಗಿ ನೀರು ನಾಲ್ಕೈದು ಅಡಿ ಅಗಲ ಮಾತ್ರ ಹರಿಯುತ್ತಿತ್ತು. ನಾಗರಾಜನ ತಲೆಯಲ್ಲಿ ಚಂದ್ರಾನಿಲರಾಯರು ಕೋಲಾಹಲವನ್ನೆಬ್ಬಿಸಿದರು. ಪ್ರತಿಮಾದೇವಿಯರ ಸುಂದರಮೂರ್ತಿ ಅವನ ಚಿತ್ತೈಕಾಗ್ರತೆಗೆ ಸಾಕಷ್ಟು ಸಹಾಯ ಮಾಡಿದ್ದರೂ ಅವನ ಮನಸಿನಿಂದ ಚಿಂತೆಯನ್ನು ಸಂಪೂರ್ಣವಾಗಿ ತೊಡೆದುಹಾಕಲು ಅಸಮರ್ಥವಾಗಿತ್ತು. ಕೀರ್ತಿಯ ಬದುಕೊಂದು ಹದಕ್ಕೆ ಬರುತ್ತಿದೆ. ಈಗೆರಡು ದಿನಗಳಿಂದ ಆಕೆ ಚೆಲುವಿನ, ಚಟುವಟಿಕೆಯ ಆರೋಗ್ಯಶಾಲೀ ಮಗುವಾಗಿದ್ದಾಳೆ....

ಪ್ರತಿಮಾ ನುಡಿದರು: ನದಿಯ ನೀರಿನ ಶಬ್ದ ಎಷ್ಟು ಮಂಜುಳವಾಗಿದೆ!

ಅವರು ಇದ್ದಕ್ಕಿದ್ದಂತೆ ಯಾಕೆ ಈ ವಿಷಯ ಎತ್ತಿದರು ನಾಗರಾಜನಿಗೆ ಅರ್ಥವಾಗಲಿಲ್ಲ. ಅದು ಮಂಜುಳವಾಗಿದ್ದುದಂತೂ ನಿಜ ಎಂದು ಅವನಿಗನಿಸಿದ್ದರಿಂದ ಹೌದು ಎಂದಷ್ಟೇ ಹೇಳಿದ.

ಕೀರ್ತಿ ಇತ್ತೀಚೆಗೆ ತುಂಬ ಬಡವಾಗುತ್ತಿದ್ದಾಳೆ. ನೋಡುತ್ತಿದ್ದೀಯಲ್ಲ, ನಾಗರಾಜ! ಪ್ರತಿಮಾ ಅಂದರು.

ನಾಗರಾಜನಿಗೆ ಹಾಗೆಂದೇನೂ ಅನಿಸಿರಲಿಲ್ಲ. ಶಾರೀರಕವಾಗಿ ಕೀರ್ತಿ ಮೊದಲಿನಂತೆಯೆ ಇದ್ದಾಳೆ, ಅಂತಲೂ ಅನ್ನಿಸಿತು. ಅವನು ಅಲ್ಲಿಯತನಕ ಆ ವಿಷಯವನ್ನೇ ಯೋಚಿಸಿರಲಿಲ್ಲ. ಬಹುಶಃ ತನ್ನ ಅಭಿಪ್ರಾಯ ತಪ್ಪಿರಬಹುದು. ಅವಳನ್ನು ಯಾವಾಗಲೂ ಕಾಣುತ್ತಿರುವುದರಿಂದ ಅವಳಲ್ಲಿನ ಬದಲಾವಣೆ ನನಗೆ ಕಾಣುತ್ತಿಲ್ಲ, ಎಂದುಕೊಂಡ. ಆದರೂ ಪ್ರತಿಮಾದೇವಿಯವರ ಮಾತು ಅವನನ್ನು ಚುಡಾಯಿಸಿತು. ನಾನೇನು ಮಾಡಬಹುದು ಎಂದು ಹೇಳುತ್ತಿದ್ದಾರೆ ಈಕೆ? ನನ್ನ ಇವರ ಪ್ರಣಯಸಲ್ಲಾಪಗಳಿಗೆ, ಚೇಷ್ಟೆಗಳಿಗೆ ನನ್ನಷ್ಟೇ ಇವರೂ ಭಾಗಿಗಳು. ಅದುದರಿಂದ ನನ್ನ ನಡವಳಿಕೆಯನ್ನು ಈಕೆ ವಿಮರ್ಶಿಸುವುದು ಸರಿಯೆ?

ಪ್ರತಿಮಾದೇವಿಗೆ ಅವನ ಯೋಚನೆ ಅರ್ಥವಾಗಿರಬೇಕು: ನಾನು ಆ ವಿಷಯ ಹೇಳುತ್ತಿಲ್ಲ ನಾಗರಾಜ. ಕೀರ್ತಿಗೆ ಬೇಕಾಗಿರುವುದು ನಿನ್ನ ಸಹವಾಸ ಅಲ್ಲ. ನಿನ್ನ ವ್ಯಕ್ತಿತ್ವ. ಆದರೂ ಅದಕ್ಕೆ ನೀನು ಅಭಿವ್ಯಕ್ತಿ ಕೊಟ್ಟಾಗ ಅವಳಿಗೆ ಅಸಹ್ಯವಾಗುತ್ತದೆ. ಯಾಕೆ ಗೊತ್ತ? ಅದು ಅವಳಿಗೆ

ಇಲ್ಲ ಅಂತ ; ನೀನು ಅವಳ ಮಾತು ಕೇಳಿ ಮನಸ್ಸಿನೊಳಗೇ ನಗಬಹುದು ಅಂತ ; ತನಗೆ ನಿನ್ನಷ್ಟು ಬುದ್ಧಿ ಇಲ್ಲ ಅನ್ನುವುದಕ್ಕಿಂತ ಹೆಚ್ಚಾಗಿ ಅದನ್ನು ಬೆಳಸಿಕೊಳ್ಳಲು ತನಗೆ ಸಾಧ್ಯವಿಲ್ಲ ಅಂತ. ಯಾವ ವಿಷಯವೇ ಆಗಲಿ, ಯಾರೇ ಆಗಲಿ ಸ್ವಲ್ಪ ಹಳೆಯದಾಯಿತು ಅಂದರೆ ಅದು ಅವಳಿಗೆ ಬೇಸರ ವಾಗುತ್ತದೆ, ಬೇಡವೆನಿಸುತ್ತದೆ. ನೀನು ಅವಳೊಂದಿಗೆ ದೇಹಸ್ನೇಹ ಬೆಳ ಸುವ ಮೊದಲು ನಿತ್ಯನೂತನವಾಗಿದ್ದೆ. ನೀನು ಮೊದಲಿನ ಹಾಗೆ ಅವಳ ಬುದ್ಧಿ ಮೀರಿ ಬೆಳೆಯಬೇಕು. ಅಂದರೆ ಅವಳಿಗೆ ತಾನು ದಡ್ಡಿ ಅಂದು ಅರ್ಥವಾಗಿ ನೋವಾಗುವ ಹಾಗಲ್ಲ ; ಅವಳು ನಿನ್ನನ್ನು ಕಂಡು, ಅಸೂಯೆ ಪಟ್ಟು, ಅಭಿಮಾನದಿಂದ ನಿನ್ನತ್ತ ನೋಡುವ ಹಾಗೆ ನೀನು ಅಮೂರ್ತ ನಾಗಬೇಕು.

ನಾಗರಾಜನಿಗೆ ಅವರ ಈ ಮಾತು ತೀರ ಕೃತಕ ಅನ್ನಿಸಿತು. ಆತ್ಮ ಪ್ರಶಂಸೆ ಮಾಡಿಕೊಳ್ಳುವಷ್ಟೇ ಹೀನವಾದದ್ದು ಇನ್ನೊಬ್ಬರು ಮಾಡುವ ಪ್ರಶಂಸೆಗೆ ಕಿವಿಗೊಡುವುದಾಗಲಿ, ಅಥವಾ ಅದು ಸರಿ ಅಲ್ಲ ಎಂದು ಹೇಳುವುದಾಗಲೀ ಎಂದು ತಿಳಿಯುವಷ್ಟು ಸಂಸ್ಕೃತಿ ಅವನಿಗಿಲ್ಲದೆ ಇರ ಲಿಲ್ಲ. ಹಾಗನ್ನಿಸದೆ ಇರಲು ಅವನೇನೂ ಬರಹಗಾರನೂ ಅಲ್ಲ. ನೀವು ಹೇಳುತ್ತಿರುವುದು ಸರಿ ಅಲ್ಲ ಎಂದು ಹೇಳಬೇಕೆಂದು ಅವನ ಆತ್ಮಸಾಕ್ಷಿ ನುಡಿದರೂ, ಅದು ನಾಟಕೀಯವಾಗಿಬಿಡಬಹುದೆಂದೆಣಿಸಿ ಸುಮ್ಮನಾದ. ಒಂದು ರೀತಿಯ ಇಕ್ಕಟ್ಟು. ಅವನಿಗೆ ಪ್ರತಿಮಾದೇವಿಯರು ಮಾತ ನಾಡುವುದೂ ಬೇಕಿತ್ತು. ಏಕೆಂದರೆ ಅವರು ಅವನ ಮತ್ತು ಕೀರ್ತಿಯ ಸ್ನೇಹದ ಬಗ್ಗೆ ಎಂದೂ ಮಾತನಾಡಿದವರಲ್ಲ. ಅದುದರಿಂದ ಆಕೆಯ ಅಭಿಪ್ರಾಯವನ್ನು ತಿಳಿಯುವುದು ಅತ್ಯವಶ್ಯಕವಾಗಿತ್ತು. ಆದರೆ ಹಾಗೆಂದು ಹೇಳುವುದು ಹೇಗೆ ? ಸುಮ್ಮನಿರುವುದೆಂದರೆ ಅವರ ಮಾತಿಗೆ ಒಪ್ಪಿಗೆ ಕೊಟ್ಟಂತಾಗಬಹುದು. ಅಥವಾ ನಿಮ್ಮ ಅಭಿಪ್ರಾಯಗಳು ನನಗೆ ಹಿಡಿಸುವುದಿಲ್ಲ ಅನ್ನುವುದನ್ನೂ ಸಂಭಾವ್ಯವಾಗಿ ಹೇಳಿದಂತಾಗಬಹುದು. ಮೌನ ಅಸಹನೀಯ, ನಾಗರಾಜ ವಿಲಿವಿಲಿ ಒದ್ದಾಡಿದ.

ಪ್ರತಿಮಾದೇವಿಯರು ಸುಮ್ಮನಾದರು. ಅವರಲ್ಲಿ ನೊಂದುಕೊಂಡರೋ ಎಂದು ನಾಗರಾಜ ಮತ್ತೆ ನೊಂದುಕೊಂಡ.

ಮೌನ ಅವನನ್ನ ಹೀಯಾಳಿಸಿತು.

ಪ್ರತಿಮಾದೇವಿಯರು ನಾನು ಹೇಳಬೇಕಾದ್ದನ್ನು ಹೇಳಿಯಾಯ್ತು ಎಂದು ಸಮಾಧಾನದಿಂದ ನಿರಾಳ ಉಸಿರುಬಿಡುತ್ತ ಕಾಲು ಚಾಚಿ ಮರಳ ಮೇಲೆ ಮಲಗಿಬಿಟ್ಟರು.

ನಾಗರಾಜನಿಗೆ ಅವರ, ತನ್ನ ಮೌನ ಅಸಹ್ಯವಾಗತೊಡಗಿತ್ತು. ಸುಂದರವಾದ, ಕೋಮಲವಾದ ಬೆಳದಿಂಗಳು. ಹೊಳೆಯ ನೀರಿನ

ಮಂಜುಳಗಾನ; ಹಚ್ಚನೆಯ ಮರಳು–ಸ್ವಲ್ಪ ಬೆಚ್ಚಗೆ; ಮುಖದ ಮೇಲೆ ಹಿತವಾಗಿ ಹರಡುವ ಮಂದಮಾರುತ.

ಅವನಿಗೆ ಪ್ರತಿಮಾ ಒಂದು ಸುಂದರವಾದ ದೇವತೆಯಂತೆ ಕಂಡರು. ತಾನೆಷ್ಟು ನಿಕೃಷ್ಟ ಅವರ ಭವ್ಯ ವ್ಯಕ್ತಿತ್ವದ ಮುಂದೆ ಅನ್ನಿಸಿತು.

ಎದ್ದ. ಅವರ ಕಾಲಬಳಿ ಕುಳಿತ. ಅವರ ಪಾದಗಳನ್ನು ತನ್ನ ತೊಡೆಯ ಮೇಲಿಟ್ಟುಕೊಂಡು, ವಸ್ತ್ರಸರಿಸಿ ಅವುಗಳನ್ನು ಒತ್ತಲು ತೊಡಗಿದ. ಪ್ರತಿಮಾದೇವಿಯರು ಬೇಡವೆನ್ನಲಿಲ್ಲ. ಆಕಾಶದತ್ತ ನೋಡುತ್ತಿದ್ದವರು ಅವನತ್ತ ತಿರುಗಿಯೂ ನೋಡಲಿಲ್ಲ. ಮೌನದಲ್ಲಿ ಸಣ್ಣವನಾಗುವುದಕ್ಕಿಂತ ಉತ್ತಮವಾದೊಂದು ಉದ್ಯೋಗ ದೊರಕಿದ್ದುದಕ್ಕಾಗಿ ನಾಗರಾಜನಿಗೆ ನಿಜವಾಗಿಯೂ ಹಿಗ್ಗಾಯಿತು. ಪ್ರತಿಮಾದೇವಿಯರು, ನೊಂದಿದ್ದ ಕಾಲುಗಳ ಮೇಲೆ ಬಿದ್ದ ಅವನ ಬೆರಳುಗಳ ಒತ್ತಡದ ಹಿತಕ್ಕೆ ಕಣ್ಣು ಮುಚ್ಚಿದರು. ಅವರಿಗೆ ನಿದ್ರೆ ಬಂದುದು ಅವರಿಗಾಗಲೀ ಅವನಿಗಾಗಲೀ ತಿಳಿಯಲಿಲ್ಲ. ಈರ ಬಂದು ಅಡ್ಡಬಿದ್ದ ಎಂದಾಗ ನಾಗರಾಜ ಅವನತ್ತ ತಿರುಗಿದ. ಅವನು ತನ್ನುದ್ದಕ್ಕೂ ಮರಳ ಮೇಲೆ ಅಂಗಾತ ಮಲಗಿಬಿಟ್ಟಿದ್ದ. ಅವನ ಪಕ್ಕದಲ್ಲೇ ಮಾಳಿಯೂ ತನ್ನ ದೇಹವನ್ನು ಬೀಸಾಡಿದ್ದಳು. ಅವಳ ಮೈಮೇಲೆ ಬಾಸುಂಡೆಗಳು ಬೆಳದಿಂಗಳಿನಲ್ಲಿ ಪಳಪಳ ಮಿನುಗಿದವು.

ನಾಗರಾಜನಿಗೆ ಪ್ರತಿಮಾದೇವಿಯರು ಯೋಗನಿದ್ರೆಯಲ್ಲಿ ಮಲಗಿದ್ದಾರೆ, ಅವರನ್ನೇಕೆ ಎಬ್ಬಿಸಲಿ ಅನ್ನುವುದಕ್ಕಿಂತ ಹೆಚ್ಚಾಗಿ ಅವರ ಸುಖಕ್ಕೆ ತಾನು ಅಡ್ಡಬರಬಾರದು ಅಂತ ಅನ್ನಿಸಿತು. ಈರ ಬಂದಿದ್ದನೆಂಬುದಷ್ಟೇ ಕಾರಣಕ್ಕೆ ಅವರನ್ನೆಬ್ಬಿಸುವುದು ಅವನ ವಿದ್ಯಾವಂತ ಮನಸ್ಸಿಗೆ ಸರಿತೋರಲಿಲ್ಲ. ಅವರು ನಿದ್ರೆ ಮಾಡಿರುವಾಗಲೇ ತಾನು ಅವನನ್ನ ಚಂದ್ರಾನಿಲರಾಯರ ವಿವಾಹಪೂರ್ವ ಜೀವನದ ಬಗ್ಗೆ ಕೇಳಿಬಿಡಬಹುದೆ ಎನ್ನುವ ಯೋಚನೆ ಬಂದು, ಅದು ಸಣ್ಣತನವೆನ್ನಿಸಿ, ಕಷ್ಟಪಟ್ಟು ತನ್ನ ಮನಸ್ಸಿನಿಂದ ಅದನ್ನು ಚಿವುಟಿ ಹಾಕಲು ಪ್ರಯತ್ನಪಟ್ಟ. ಅವನಿಗೆ ತಟ್ಟನೆ ಹಿಂದಿನ ದಿನವಷ್ಟೆ ಈರ ತನ್ನ ಕೆನ್ನೆಗೆ ಅಪ್ಪಳಿಸಿದ್ದು, ಮಾಳಿ ಮೋಹಕವಾಗಿ ತನ್ನ ಮುಂದೆ ರಂಡೆಯ ಹಾಗೆ ನಿಂತಿದ್ದು, ತನ್ನೆದುರಿಗೇ ಈರ ಅವಳಿಗೆ ರಾಕ್ಷಸಪೂಜೆ ಮಾಡಿದ್ದು ನೆನಪಿಗೆ ಬಂತು. ಈರನಾಗಲಿ ಮಾಳಿಯೇ ಆಗಲಿ ತನ್ನ ಮುಂದೆ ನಿಸ್ಸಂಕೋಚವಾಗಿ ಮಾತನಾಡುವುದಿಲ್ಲ ಅನ್ನಿಸಿತು. ಆದುದರಿಂದ ತಾನು ಮಾಡುತ್ತಿದ್ದ ಪಾದಪೂಜೆಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡ.

ಈರ ಮಾಳಿಯರು ಎದ್ದು ವಿನೀತರಾಗಿ ನಿಂತರು. ನಾಗರಾಜನನ್ನು ಈರನೇ ಮಾತನಾಡಿಸಿದ. ಚೆನ್ನಾಗಿದ್ದೀರ ಬುದ್ಧಿ ಎಂದು ಆತ್ಮೀಯವಾಗಿ

ವಿಚಾರಿಸಿಕೊಂಡ. ಇವರು ಯಜಮಾನಿತಿಯ ಅಳಿಯಂದಿರು ಎಂದು ಮಾಳಿಗೆ ಪರಿಚಯಿಸಿದ. ಅವನು ಮಾತುಗಳನ್ನು ಕೇಳುತ್ತಿದ್ದಂತೆಯೆ ನಾಗರಾಜನಿಗೆ ಇವನು ಬುದ್ಧಿವಂತಿಕೆಯಿಂದ ಮಾತನಾಡುತ್ತಿದ್ದಾನೆಯೆ ಅಂತ ಅನುಮಾನವಾಯಿತು. ಛೆ: ಎಂಥ ಸಣ್ಣತನ ನನ್ನದು ಎಂದು ಬೇಜಾರು ಮಾಡಿಕೊಂಡ.

ಈರ ಪಿಸುಮಾತಿನಲ್ಲಿ ನಾಗರಾಜನ ಬಗ್ಗೆ ಮಾಳಿಗೆ ಹೇಳುತ್ತಿದ್ದ ಅವನ ಓದಿನ ಬಗ್ಗೆ, ಅವನು ಓದಿನಲ್ಲಿ ಎಲ್ಲರನ್ನೂ ಮಿಾರಿಸಿ ಮುಂದೆ ಬಂದುದರ ಬಗ್ಗೆ, ಹೇಗೆ ಕೀರ್ತಿಯೂ ಓದಿನಲ್ಲಿ ಎಲ್ಲರನ್ನೂ ಮಿಾರಿಸಿದುದರ ಬಗ್ಗೆ, ಚಂದ್ರಾನಿಲರಾಯರು ಅವನೇ ತಮ್ಮ ಅಳಿಯನಾಗಬೇಕು ಅಂತ ಹಠ ಹಿಡಿದುದರ ಬಗ್ಗೆ, ಪ್ರತಿಮಾದೇವಿಯರು ಹೇಗೆ ತಮ್ಮ ವಿಶಾಲ ಮನಸ್ಸಿನಿಂದ ಅದಕ್ಕೆ ಒಪ್ಪಿದುದರ ಬಗ್ಗೆ, ಕೀರ್ತಿ ಮತ್ತು ನಾಗರಾಜನ ಮದುವೆ ಅದ್ದೂರಿಯಾಗಿ ನಡೆದು, ಏಳೆಂಟು ದಿನಗಳು ಅಷ್ಟೇ ಹಳ್ಳಿಗಳಿಂದ ಬಂದ ಲಕ್ಷಾಂತರ ಜನಕ್ಕೆ ಪೊಗದಸ್ತಾದ ಊಟ ಉಪಚಾರಗಳು ನಡೆದ ಬಗ್ಗೆ, ಕೀರ್ತಿ ನಾಗರಾಜರು ಒಬ್ಬರನ್ನೊಬ್ಬರು ಒಂದು ಕ್ಷಣವೂ ಅಗಲಿಯೂ ಇರಲಾರದುದರ ಬಗ್ಗೆ, ತನಗೆ ಕೊಟ್ಟ ಹೊಸಪಂಚೆ ಶರಟುಗಳ ಭಕ್ಷೀಸಿನ ಬಗ್ಗೆ, ಕೊನೆಗೆ ಚಂದ್ರಾನಿಲರಾಯರು ಹೇಗೆ ತನ್ನನ್ನು ಉಳಿದೆಲ್ಲ ಆಳುಮಕ್ಕಳಿಂದ ಬೇರ್ಪಡಿಸಿ ತಮ್ಮ ಹಳೆಯ ಆದರೂ ಆಗ ತಾನೆ ಹೊಲಿಸಿಟ್ಟಿದ್ದಕ್ಕಿಂತಲೂ ಚೆನ್ನಾಗಿರುವ ಒಂದು ಪ್ಯಾಂಟು ಕೊಟ್ಟ ಬಗ್ಗೆ ಇತ್ಯಾದಿ. ಪ್ರತಿಮಾದೇವಿಯರು ಎದ್ದು ಕೂತಾಗ ಈರ ಹೇಳುತ್ತಿದ್ದ: "ಅಮ್ಮನವರು ಹೇಳಿದರು, 'ನೋಡೋ ಈರ; ನೀನೊಬ್ಬ ಈ ಮನೆಗೆ ನಂಬಿಕೆಯಿಂದ ನಡೆದುಕೊಂಡು ಬಂದಿರುವುದರಿಂದ ಎಸ್ಟೇಟ್ ವ್ಯವಹಾರ ಎಲ್ಲ ಚೆನ್ನಾಗಿ ನಡೆದಿದೆ. ನೀನೊಬ್ಬ ಮುಂಡೆಗಂಡ ಇರೋ ಹಾಗೆ ಬಾಕಿಯವರು ಇಲ್ಲ,' ಅಂತಂದರು. ಅದೊಂದು ಮಾತು ಸಾಕು ನಮ್ಮಮ್ಮನವರ ಗುಣ ಎತ್ತಿ ಹಿಡಿಯೋದಕ್ಕೆ ಅನೇನ ಹೊಗಳಕ್ಕಾಗುತ್ತ. ನನ್ನ ಚರ್ಮ ಸುಲಿದು ಅವರಿಗೆ ಎಕ್ಕಡ ಮಾಡಿ ತೊಡಿಸುವ ಯೋಗ್ಯತೆಯೂ ಇಲ್ಲದ ಭಂಡಬಡ್ಡಿ ಮಗ ನಾನು......"

ಪ್ರತಿಮಾದೇವಿಯರು ಆ...ಎಂದು ಆಕಳಿಸಿದರು. ಈರನ ಮಾತು ಬಾಯಲ್ಲಿ ಗಕ್ಕನೆ ನಿಂತುಹೋಯಿತು. ಕೂಡಲೆ ಅವನು ಮರಳ ಮೇಲೆ ಬಿದ್ದ ಚಟುವಟಿಕೆಗೆ ಸಮನಾದ ತಾಕ್ಷಣ್ಯದಿಂದ ಮಾಳಿಯೂ ಉರುಳಿದಳು. ಪ್ರತಿಮಾದೇವಿಯರು ಅವರಿಬ್ಬರನ್ನೇ ವೀಕ್ಷಿಸಿದರು. ಹಲವು ನಿಮಿಷಗಳೇ ಉರುಳಿದುವು. ಅವರಿಬ್ಬರೂ ಅಂಟಿಕೊಂಡಿದ್ದ ಭೂಮಿತಾಯಿಯ ಉದರದಿಂದ ತಮ್ಮಿಬ್ಬರನ್ನೂ ಕಿತ್ತುಕೊಂಡು, ಮತ್ತೆ ಎದ್ದು ನಿಂತು ನೂರು ಸಲಾಮಗಳ ಪೂಜೆ ಮುಗಿಸುವ ಹೊತ್ತಿಗೆ. ನಾಗರಾಜ

ಪ್ರತಿಮಾದೇವಿಯರನ್ನೇ ವೀಕ್ಷಿಸಿದ. ಆಕೆಯ ಕಣ್ಣುಗಳಲ್ಲಿ ಇನ್ನೂ ನಿದ್ರೆಯ ಪೊರೆ. ಅವರನ್ನೂ ಸಂಪೂರ್ಣ ಎಚ್ಚರಾಗಿರಲೇ ಇಲ್ಲ. ಮಾಳ ಮಾಳಿಯರು ಭಯಭಕ್ತಿಯಿಂದ ವಿನೀತರಾಗಿ ನಿಂತಿದ್ದರು.

ಪ್ರತಿಮಾದೇವಿಯರು ನಾಗರಾಜನಿಗೆ ಈರನನ್ನು ಕೇಳು ಅನ್ನುವ ಹಾಗೆ ಅವನ ಮುಖ ನೋಡಿದರು. ಅವನು ಕೇಳಿದ.

'ಈರ, ನಮ್ಮ ಮಾವನವರು ನಿನಗೆ ತುಂಬ ಬೇಕಾದವರು. ಅವರಿಗೂ ನಿನಗೂ ಪರಿಚಯ ತುಂಬ ಹಳೆಯದಲ್ಲವೆ?

'ಪರಿಚಯ ಎಂಥದು ಬುದ್ದಿ. ಅವರ ಎಕ್ಕಡ ತಿನ್ನಲಿಕ್ಕು ಹುಟ್ಟಲಿಲ್ಲ ನಾನು. ನಾನು ಅವರ ಆಳಲ್ವೆ? ಅಮ್ಮನವರಂಥ ಧಣಿ ಇರಬೇಕಾದರೆ ಯಾರು ಅವರ ಆಳಾಗಲ್ಲ ಹೇಳಿ?'

'ಅಂದ್ರೆ, ಅವರ ಜೀವನದಲ್ಲಿ ಏನೇನಾಗಿದೆ ಎಲ್ಲ ನಿನಗೊತ್ತು ಅಂತ ಅನ್ನು'

ಗೊತ್ತೇನು ಬುದ್ದಿ... ಪ್ರತಿಮಾದೇವಿಯರು ಆಕಳಿಸಿದರು ಇನ್ನೊಮ್ಮೆ. ಈರ ಗಪ್ಪುಚಿಪ್ಪು ಆದ. ನಾಗರಾಜನಿಗೂ ಸುತ್ತಿ ಬಳಸಿ ಮಾತನಾಡು ವುದು ಬೇಕಿರಲಿಲ್ಲ. ನೇರವಾಗಿಯೇ ಕೇಳಿಬಿಟ್ಟ.

'ನಮ್ಮ ಮಾವನವರು ಮದುವೆಯಾಗುವುದಕ್ಕೆ ಮೊದಲು ಯಾರ ನ್ನಾದರೂ ಪ್ರೀತಿಸಿದ್ದರೆ? ಅಂದರೆ ಯಾರನ್ನಾದರೂ ಮದುವೆಯಾಬೇಕು ಅಂತ ಅಂದುಕೊಂಡಿದ್ದರ?'

ಈರನಿಗೆ ಈ ಪ್ರಶ್ನೆ ಅನಿರೀಕ್ಷಿತವಾಗಿತ್ತು. ಅದಕ್ಕಿಂತ ಮಿಗಿಲಾಗಿ ಪ್ರತಿಮಾದೇವಿಯರ ಪ್ರಸ್ತಾಪವಿಲ್ಲದೆ, ಆತ್ಮನಿಂದೆಯಿಲ್ಲದೆ ನಡೆಯಬೇಕಾ ದುದು. ಎದುರಿಗೆ ಪ್ರತಿಮಾದೇವಿಯರು ಕುಳಿತಿರಬೇಕಾದರೆ, ತನ್ನ ಯಜಮಾನರ ಬಗ್ಗೆ ಎಂಥ ಪ್ರಶ್ನೆ ಕೇಳಿ ಇಕ್ಕಟ್ಟಿಗೆ ಸಿಕ್ಕಿಸಿಬಿಟ್ಟ ಎಂದು ನಾಗರಾಜನನ್ನು ಅವನು ಶಪಿಸಿದ. ಪೆದ್ದುಮುಂಡೇದು ಅಂತ ಬೈದು ಕೊಂಡ.

ಅವನು ಅನುಮಾನಿಸುತ್ತಿರುವುದನ್ನು ಗಮನಿಸಿದ ನಾಗರಾಜನಿಗೆ ಇವನು ಖಂಡಿತ ಹೇಳುವುದಿಲ್ಲ; ಅವನಿಗೂ ನೆನ್ನೆಯ ವಿಷಯ ಜ್ಞಾಪ ಕಕ್ಕೆ ಬಂದಿರಬೇಕು ಅನಿಸಿತು. ಚಂದ್ರಾನಿಲರಾಯರು ಹೇಳಿದ್ದ, ತಾನು ಮಾಳಿಯ ಜೊತೆ ಮಲಗಿದ್ದ ವಿಷಯವೂ ಮನಸ್ಸಿನಲ್ಲಿ ಹೊಳೆದು ಹೇಗೆ ತಾನು ಹೇಳಿಯಾನು ಎಂದು ಗಲಿಬಿಲಿಯಾಯಿತು. ಜೊತೆಗೆ ಚಂದ್ರಾನಿಲ ರಾಯರ ಬಗ್ಗೆ ಇದ್ದ ಗೌರವಭಾವ ಎಲ್ಲಿ ಕಡಿಮೆಯಾಗುವುದೋ ಎಂದು ಭಯವಾಗಿ ಹೇಳದಿರಲಿ ಅಂತಲೂ ಅನಿಸಿತು.

ಈರ ಪ್ರತಿಮಾದೇವಿಯರತ್ತ ನೋಡುತ್ತಿದ್ದ. ಮಾಳಿ ಹೆದರಿ ಹುಲ್ಲೆ ಯಾಗಿಬಿಟ್ಟಿದ್ದಳು. ಅವಳ ಮೈ ಭಾರವನ್ನೆಲ್ಲ ಅಂಗೈನಲ್ಲಿ ಮಡಿಚಿಡ

ಬಹುದೇನೋ ಎಂದು ಸಂಶಯ ಹುಟ್ಟಿಸುವ ಹಾಗೆ. ಪ್ರತಿಮಾದೇವಿಯರು ನಾಗರಾಜನತ್ತ ಬೆರಳು ತೋರಿ ತಲೆಯಲ್ಲಾಡಿಸಿದರು.

ತಕ್ಷಣ ಈರ ಹೇಳಲು ತೊಡಗಿದ: ಪ್ರತಿಮಾದೇವಿಯರು ಮಾಳಿಗೆ ನೀನು ಹೋಗು ಅನ್ನುವ ಹಾಗೆ ಕೈನಿಂದ ಸಂಜ್ಞೆ ಮಾಡಿದರು: ಆ ಸುಭದ್ರಾಂಗಿ ಒಂದು ಸಲಾಮುಹಾಕಿ, ಹತ್ತಾರು ಗಜ ದೂರ, ಈರನ ಮಾತು ತನಗೆ ಕೇಳದಿರವಷ್ಟು ದೂರ ಹೋಗಿ ನಿಂತಳು: ಪ್ರತಿಮಾದೇವಿಯರು ಮರಳ ಮೇಲೆ ಕಾಲು ಚಾಚಿ ಮಲಗಿದರು: ನಾಗರಾಜ ಅವರ ಕಾಲುಗಳನ್ನು ಕೈನಲ್ಲಿ ತೆಗೆದುಕೊಂಡು ಒತ್ತಲು ತೊಡಗಿದ. ಆಲಿಸಿದ: ಈರ ಅಂದ:

ನಮ್ಮ, ಯಾಜಮಾನರು ಚಿಕ್ಕಂದಿನಲ್ಲೇ ತಂದೆ ತಾಯಿ ಕಳೆದುಕೊಂಡರು. ಏನು ಆಸ್ತಿ ಇದ್ದರೂ ಅಪ್ಪ ಅವ್ವ ಇದ್ದಂಗಾಗಲ್ಲ ನೋಡಿ. ...ಾಗಿ ಮೊದಲನಿಂದಲೂ ಆಳುಮಕ್ಕಳ ಜೊತೆಯಲ್ಲೇ ಬೆಳೆದು ... ಇಲ್ಲೊಬ್ಬ ಸೂರಪ್ಪ ಅಂತಿದ್ದ. ಸೂರ, ಸೂರಪ್ಪ ಅಂತ ... ಮುದಿಯ ಹೋದ ವರ್ಷ ತೀರ್ಕೊಂಡ. ಇವೆಲ್ಲ ನಿಮಗೆ ...ವೆ. ಯಾಕೆ ಹೇಳ್ತಿದೀನಿ ಅಂದರೆ ನೀವು ಕೇಳಿದಿರಿ, ...ಿ ಅಪ್ಪಣೆ ಕೊಡಿಸಿದರು, ಅಂತ. ಆ ಸೂರ ...ಸ್ತೀನ ಒಂದು ಪೈಸ ಕಳೀದಂಗೆ ನೋಡಿಕೊಂಡು ಬಂದ. ಸುಮ್ಮಸುಮ್ಮನೆ ಹೇಳಬಾರದು. ಗುಣಕ್ಕೆ ಮತ್ಸರವಿಲ್ಲ ಅಂತಾರೆ. ಅಯ್ಯನವರನ್ನು ಎದೆಯಾಗಿನ ತಾಯಿತರ ಕಾಪಾಡ್ಕೊಂಡು ಬಂದ. ನಮ್ಮ ಅದೃಷ್ಟ. ಅಯ್ಯನವರಿಗೆ ಭರ್ಜರಿಯಾದ, ದೇವರಂಥ ಹೆಂಡಿರು ಸಿಕ್ರು ಅನ್ನಿ. ನಮ್ಮ ಅಯ್ಯನವರ ಪುಣ್ಯ, ಏಳು ಜನ್ಮದ ಪುಣ್ಯ, ಏಳು ತಲೆ ಪುಣ್ಯ ಅಂತ ಅನ್ನಿ, ನಮಗೆ ಸರಿಯಾದ ಅಮ್ಮನವರೇ ಬಂದರು.

ಈಗಲ್ಲಿದ್ದಲ್ಲಿ ಮಳ್ಳಿ ಮುಂದೆ, ಇವಳೇ ಸೂರಪ್ಪನಿಗೆ ಮಗಳು. ಬಂದು ಹೋಗದು ಅಪಾರ. ಅಯ್ಯನವರಿಗೂ ಪ್ರಾಯ. ಅಲ್ಲದೆ ಇವಳದು ಇಲ್ಲದೇ ಇರೋ ನಾಟಕ, ವೈಯಾರ. ಮನೇಲಿ ಬೆಳೆದ ಹುಡುಗಿ ಅಲ್ವ, ಜನಕ್ಕೆ ಹೇಗೆ ಗೊತ್ತಾಗಬೇಕು. ಈ ಲೌಡಿ ಏನು ಮಾಟ ಮಾಡಿದಳೋ ಏನೋ—ಅಯ್ಯನವರದ್ದು ತಪ್ಪಿಲ್ಲ ಅನ್ನಿ. ಈಗಲೇ ಹಿಂಗೆ ಈ ಲೌಡಿ. ವಯಸ್ಸಾದ್ರು ಇನ್ನೂ ಕೈಯಿ ಕಾಲು ಕುಣಿಸೋದು, ತಿರುವೋದು ಬಿಟ್ಟಿದಾಳ ಇವಳು? ಕಲಿತದ್ದು ಬಿಡೆ ಲೌಡಿ ಅಂದರೆ ಅದನ್ನು ಬಿಟ್ಟೇನು ಕಲ್ಲು ಬಡಿದುಕೊಳ್ಳಲ ಅಂತ ಅಂದ್ಲಂತೆ ಹಂಗೆ—ಅಯ್ಯನವರನ್ನು ಬುಟ್ಟಿಗೆ ಹಾಕಿಕೊಂಡಳು. ನೆನ್ನೆ ದಿನ ಸಾಯಂಕಾಲಾನು ನನಗೇ ಮೋಸಮಾಡಿ ಯಾರ ಜತಿಗೋ ಮಲಗಿ

ಕೊಂಡವಳೆ—ಇವಳ ಜಾತಿಗೊಂದಿಷ್ಟು ಎಕ್ಕಡ ಹೊಡಿಯ.

ಸೂರಪ್ಪನಿಗೆ ಅಯ್ಯನವರು ಹಿಂಗಾದ್ರಲ್ಲ ಅಂತ ಮೊದಮೊದಲು ಚಿಂತೆ. ಆಮೇಲೆ ಅದೂ ಒಂತರ ಚಂದ ಅಂತ ಅಂದುಕೊಂಡ. ಮಗಳಲ್ವ ? ಮಗಳಿಗೆ ಒದ್ದು ಬುದ್ಧಿ ಕಲಿಸೋದು ನೋಡಲಿಲ್ಲ ಸೂರ ನನ್ನ ಮಗ—ನಡೀಲಿ, ಅದಷ್ಟು ದಿನ ನಡೀಲಿ. ನನಗೂ ಅನ್ನಗಿನ್ನ, ಚೂರುಪಾರು, ಎಂಜಲು ಪಂಜಲು ಸಿಕ್ತದೆ ಪಸಂದಾಗಿ, ಅಂತ ಕಣ್ಣು ಮುಚ್ಚಿಗೊಂಡ.

ಒಂದು ರಾತ್ರಿ. ಅವತ್ತು ಹೆತ್ತೂರಮ್ಮನ ಪೂಜೆ. ನೆನ್ನೆ ದಿನ ಕೂಡ ಅದೇ ಪೂಜೆ ಇತ್ತು ಅನ್ನಿ. ನಮ್ಮ ಹಟ್ಟಿ ತಾವೆ ಅದೆ ಗುಡಿ. ಅದಕ್ಕೆ ಈ ಐನೋರ ಅಪ್ಪ ಬಂದು ಚಪ್ಪಡಿ ಹೊದಸಿ ನೀರು ನಿಡಿ ಕಾಣಿಸಿದ್ರಂತೆ—ಸೂರನೇ ಎಡೆ ಇಡುವವನು. ಇಡಬೇಕಾಗಿತ್ತು, ದೇವರು ದಿಂಡಿರು ಎಲ್ಲ ಮಡಿಕ್ಕಂಡಿದ. ಅವನೇ ಹೆತ್ತೂರಮ್ಮನ ಪೂಜೇನೂ ಮಾಡೋನು. ಎಡೆ ಮಡಗಾಕೆ ನೇಮ ನಿಷ್ಠೆ ಬೇಕಲ್ಲ. ಹೆಂಡ್ತಿ ಇಲ್ಲ. ಮಗಳ್ಗೆ ಹೇಳಿ ಸ್ನಾನ ಮಾಡ್ಕೊಂಡು ಬರ್ತೀನಿ ಅಂತ ಹೊಳೆ ತಾಕೆ ಹೋದ. ಬರೋ ಹೊತ್ತಿಗೆ ಮಗಳು ಮನೇಲಿಲ್ಲ. ಅಯ್ತಲ್ಲ !

ಇಲ್ಲೇ ಒಂದಾಗಿಂದಾ ಮಾಡಾಕೆ ಹೋಗವಳೆ ಅಂದುಕೊಂಡು ಪೂಜಾರಯ್ಯ ಸುಮ್ಮನಾದ. ಎಡೆಗಡೆ ಎಲ್ಲ ಮಾಡಿ ಮಡಗಿದ್ದಳು. ಸರಿ ಅವನ್ನೂ ಹೊಟ್ಟೆಗೇನೂ ತಿನ್ನಂಗಿರಲಿಲ್ವಲ್ಲ. ನಿದ್ದೆ ಬಂದು ಬಿಡ್ತು ಮಲಗಿಕೊಂಡುಬಿಟ್ಟ.

ಸಂಜೀ ಹೊತ್ತಿಗೆದ್ದ. ಎಡೆ ಮಡಗಾಕೆ ಮೊದಲು ಒಂದಪ ಸ್ನಾನ ಮಾಡ್ಬೇಕು. ಸರಿ ಹೋಳೀತಕ್ಕೆ ಹೋದ. ನೀರಲ್ಲಿ ಮುಳುಗಿದ್ದ. ದೇವರೆ, ಈದಪ ಯಾವ ತೊಂದರೇನೂ ಆಗದ್ದಂಗೆ ನಡೆಸಿಬಿಡವ್ವ ಅಂತ ಕತ್ತೆತ್ತ ತಾನೆ—ಎದೆ ಧಸ್ ಅಂತು. ಎದುರಿಗೆ ಯಾರೋ ಬೆಳ್ಳಕ್ಕೆ ನಿಂತವರೆ. ಬರೀ ಬೆಳ್ಳಕ್ಕೆ. ಉದ್ದ ಕೂದಲು ಹೆಂಗಸಂಗೆ. ಕಾಲೇ ಇಲ್ಲ. ಅವಮ್ಮಂಗೆ ಇದನ್ನೇ ನೋಡ್ತ ಅದೆ ಸುಮ್ಮಗೆ ಅಲ್ಲಿ ಐತಲ್ಲ ಗರಡುಗಂಬ ಅದರ ಬದೀಲಿ ಅದು ನಿಂತಿರೋದು. ಸೂರ ನಿಂತಿರೋದು ನೋಡಿ ಆ ಮಾಳಿ ನಿಂತವಳಲ್ಲ ಆ ಸಮುಕ್ಕೆ.

ಮುಸ್ಸಂಜೆ. ಕತ್ತಲಾಗ್ಯೆತೆ. ಯಾರೂ ಇಲ್ಲ. ಸೂರ ಉಚ್ಚೆ ಹುಯ್ಕಂಡು ಬಿಟ್ಟ. ದೇವರಿಗಪಚಾರ ಅಗ್ಯೆತೆ: ಬಡ್ಡಿ ಮದೀಲಿ ಎಡೆ ಮಾಡವಳೋ ಇಲ್ವೊ. ಅನುಮಾನ ಬಂದ್ಮೇಲೆ ಇನ್ನೇನೈತೆ. ಹೆಂಗಪ್ಪ ದೇವರಿಗಿಡಲಿ ಅಂತ ಓಡೋಡಿ ಬಂದ. ಉಚ್ಚೆ ಹುಯ್ಕಂಡವನೆ, ಸ್ನಾನಾನೂ ಮಾಡನಿಲ್ಲ. ಮೈಯೆಲ್ಲ ಕಾಯ್ತಾ ಅದೆ. ಚಾಪೆ ಮೇಲೆ ಮಲಗಿಕ್ಕೊಂಡವನು ಬೆಳಗಿಂತಂಕ ಏಳ್ನಿಲ್ಲ. ಅವನು ಎಡೆ ಮಡಗೋ

ಹಂಗಿಲ್ಲ. ಮಗಳಿಲ್ಲ ಹುಡ್ಗೋ ಹಂಗೆ ಅವನಿಲ್ಲ. ಹೆಂಗೆ ಅಂತ ನಮಗೆ ಹೇಳಾನು? ಸರಿ ನಾವೇ ಕೇಳ್ದೊ: ನೀನು ಮಡಗದೆ ಇದ್ದರೆ, ಅವಳೇ ಮಡಗಲೇಳು. ಅವಳೆಲ್ಲವಳೆ?

ಅಷ್ಟೊತ್ತಿಗೆ ಸರಿಯಾಗಿ ಬಂದ್ರಪ್ಪ, ಇವಳು, ಅಯ್ಯೋ ಅಂತ ಎದೆ ಎದೆ ಚಚ್ಚಿಗೊಂಡು. ನಮ್ಮಪ್ಪಂಗೆ ಯಾರೋ ಆಗದವರು ಮಾಟ ಮಾಡಿ ಬಿಟ್ಟವರೆ, ದೆವ್ವ ಹಿಡಕೊಂಡು ಬಿಟ್ಟೈತೆ, ಹಂಗೆ ಹಿಂಗೆ ಅಂತ. ನಾವು ಹೆಂಗೆ ತಾನೆ ಇವಳ ಮಾತು ನಂಬ್ದಿರೋದು? ಸರಿ ಇವನಿಗೆ ಹುಶಾರಿಲ್ಲ. ಅವಳಿಗೆ ಅಪ್ಪ ಹಿಂಗಾದ ಅಂತ ಚಿಂತೆ. ದೇವರಿಗೆ ಎಡೆ ಇಡೋ ಹಂಗಿಲ್ಲ ಅಂತ ಮನೀಕೆ ಬಂದಿವಿ. ರಾತ್ರಾ ರಾತ್ರಿ ಮುಂಡೆ ಅಯ್ನೋರ ಮನೆಗೆ ಹೋದ್ಲು. ಹೋಗಾಕ ಮೊದ್ಲು ಅವರಪ್ಪಂಗೆ ಯಾರ್ಗಾರ ಸೊಲ್ಲು ಬುಟ್ರೆ ಅಂದ್ರೆ ಸೊಂಟ ಮುರೀತೀನಿ ಮುದಿಯ ಅಂತ ಹೆದರಿಸಿ ಹೋದಳು.

ಮುದುಕನಿಗೆ ದೆವ್ವ ಹಿಡಿದಿತ್ತು. ಅವನೂ ಹೋದ. ಅಯ್ನನವರ ಮುಂದೆ ಅತ್ತ, ಕರೆದ. ಗೋಳಾಡಿದ. ಕೂಗಾಡಿದ. ಅವರೂ, ಮಗಳೂ ಇಬ್ಬರು ಹಿಡಕೊಂಡು ತದಕಿದರು. ದೆವ್ವನೂ ಬುಟ್ಟು ಹೊಯ್ತು ತಿಗ ಮುಚ್ಚಿಕೊಂಡು ಬಂದ.

ಸರಿ ಅವತ್ನಿಂದ ಅವಳು ಅಲ್ಲೆ. ಆ ಧಿಮಾಕೇನು ಲಾಡೀದು. ಆಳು ಮಕ್ಕಳ ಕೈಲಿ ಸೀರೆ ಒಗಿಸಿಕೊಂಡಳು. ನನ್ನ ಕೈಲಿ, ನನ್ನ ಕೈಲಿ ಕಾಲು ನೀವಿಸಿಕೊಂಡವಳೆ! ಐನೋರು ಎಲ್ಲಾನೂವೆ ಇವಳ ಕೈಗೇ ಕೊಟ್ಟು ನೀ ಮಾಡ್ದಂಗೆ ಮಾಡು ಅಂತ ಸುಮ್ಮನಿದ್ದರು. ಈ ಮುಂಡೆ ನಮಗೆ ಬಯ್ಯೋದೇನು, ಹೊಡೆಯೋದೇನು—, ಎಲ್ಲಿ ಮಾಡವಳೆ! ಬೇಕೊಂತಲೆ ಸೆರಗನ ಬೀಳಿಸಿ ಎಲ್ಲ ತೋರ್ಸೋದು. ನಾವೇನರ ನೋಡ್ತೊಂದರೆ ನಾನು ಐನೋರ ಹೆಂಡ್ತಿ ಇದ್ದಂಗೆ, ನನ್ನೇ ನೋಡ್ತೀರ ಪೋಲಿ ನನ್ಮಕ್ಕಳ ಅಂತ ಚಾವಟೇಲಿ ಹೊಡೆಯೋದು. ಬೇಕಾದಷ್ಟು ಮಾಡಿದ್ಲು. ಅಗ ಅವಳದ್ದು ಕಾಲ.

ಇನ್ನೊಂದು ವಿಚಿತ್ರ ನಡೀತು. ಐನೋರು ಮೂರು ಮೂರು ದಿನಕ್ಕು ಸಿಟಿಗೆ ಹೋಗೋರು. ಯಾಕೋ ಹೋಗ್ತಾರೆ ನಮಗ್ಯಾಕೆ ಅಂತ ನಾವೆಲ್ಲ ಸುಮ್ಕಿದ್ವಿ. ಆ ಮೇಲೆ ತಿಳೀತು. ಅಲ್ಯಾರ್ನೊ ಮಡಿಕ್ಕಂಡವರೆ ಅಂತ! ಅವರು ಓದ್ತಾ ಇರಬೇಕಾದ್ರೆ ಯಾವ್ದೋ ಒಂದು ಹುಡಗೀನ ಖಾಯಶ್ ಪಟ್ಟವರೆ. ಧೊರೆ ಮಗ ಇದ್ದಂಗಿದ್ರು. ಅವಳ್ಯಾಕೆ ಬೇಡಂದಾಳು? ಅದ್ರೆ ಅವರಪ್ಪ, ಅಮ್ಮ ನಿಂಗೆ ಮದುವೆ ಆಗೈತಲ್ಲ ಅಂದ್ರಂತೆ. ಅವ್ಳು ಅಯ್ನೋರ ತಾವ ಬಂದು ಅಪ್ಪ ಅಮ್ಮ ನಿಂಗೆ ಲಗ್ನ ಆಗೈತಲ್ಲ ಬೇಡ ಅಂತಂದರು ಅಂದ್ರಂತೆ. ಸರಿ ಇವರು ಕಾಡಿದರು

ಬೇಡಿದರು. ಅವಳೂ ಹಲ್ಕಾ ಲೌಡೀನೇ—ಬೇರೆ ಊರಿಗೆ ಹೊಂಟೋದಳು.—ಗಂಡನಿಗೆ ವರ್ಗ ಮಾಡಿಸಿಕೊಂಡು.

ನಮ್ಮಯ್ನೋರು ಹಿಡಿದ ಕೆಲಸ ಬಿಡೋವ್ರಲ್ಲ. ಆ ಊರಿಗೆ ಹೋದರು ತಮ್ಮ ಕಡೆ ಜನ ಕರ್ಕೊಂಡು. ಊರಲ್ಲಿ ಅಲ್ಲಲ್ಲಿ ಅವಿತುಕೊಂಡ್ರು. ರಾತ್ರಿ ಅವಳು ಒಂದಾ ಮಾಡಾಕೆ ಅಂತ ಹಿತ್ತಲಿಗೆ ಹೋದಾಗ ಇವರು ಮೆತ್ತಗೆ, 'ಬತ್ತೀಯ' ಅಂದ್ರಂತೆ. ಅವಳು ಹೂಂ ಅಂದಳಂತೆ. ಬಾ ಅಂದರು. ಬತ್ತೀನಿ. ಸೀರೆ ಪಾರೆ ತತ್ತೀನಿ ಅಂತ ನಂಬಿಸಿ, ಒಳಗೆ ಹೋದ ಮುಂಡೆ ಬರಲೇ ಇಲ್ಲ. ಕಾದರು. ಕಾದರು. ಸಿಟ್ಟು ಬಂತು ನೋಡಿ. ಮನೆ ಹೆಂಚು ಕಿತ್ತು ಒಳಕ್ಕಿಳಿದರು. ಅವಳ ಗಂಡನ ಕತ್ತು ಹಿಡಕೊಂಡು, ಕಳಸ್ತೀಯೋ ಇಲ್ಲ ನಿನ್ನ ಮುಗಿಸಿ ಅವಳನ್ನ ಹಾರಿಸಿಕೊಂಡು ಹೋಗ್ಲೋ ಅಂತ ಚಾಕು ತೆಗೆದರು. ಅವನು ಹಾಳಾಗಿ ಹೋಗು ಅಂದ. ಅವಳು ಕುಯ್ಯೋ ಮರ್ರೋ ಅನ್ನದಂಗೆ ಬಾಯಿಗೆ ಬಟ್ಟೆ ತುರುಕಿ ಬೇರೆ ಊರಿಗೆ ಕರಕೊಂಡು ಬಂದು ಮಡಗಿದ್ರು. ಕಾವಲು ಕಾಯಾಕೆ ಜನಾನು ಮಡಗಿದ್ರು ಅನ್ನಿ. ಅವಳಿಗೆ ಹೊಡೆದೂ ಬಡಿದೂ, ಕೊನೆಗೆ ಅವಳೇ ಇವರ ತಾಕ್ಕೆ ಬರಬೇಕು ಹಂಗೆ ಮಾಡ್ಕೊಂಡರು. ದುಡ್ಡು ಗಿಡ್ಡು ಬೇಕಾದಷ್ಟು ಕೊಟ್ರು.

ಇದಾಗಿದ್ದು ಇವಳ್ನ ಕೂಡಕೊಳಕ್ಕೆ ಮೊದಲು. ಸರಿ ಈ ಮಳ್ಳಿ ತಾಕ್ಕೆ ಬಂದಮೇಲೆ, ಅವಳ ಮೇಲೆ ಜ್ಞಾನ ಕಡಿಮೆಯಾಯ್ತು. ಇವಳೂ ಬಲವಾಗಿದ್ಲು ಆಗ. ಇನ್ನೂ ಹುಡಗಿ. ದುಡ್ಡು ಕಳಿಸ್ಲಿಲ್ಲ ಅಂತಾನೋ, ಅಥವಾ ಸಿಟಿಗೆ ಹೋಗಿ ಮಾತಾಡಿಸಲಿಲ್ಲ ಅಂತಾನೋ ಅಂತೂ ಅವಳಿಗೆ ಅನುಮಾನ ಬಂತು. ಕಾಗದ ಗೀಗದ ಬರೆದ್ಲು. ಅಯ್ನಾವರು ಜಪ್ಪಯ್ಯ ಅನ್ನಲಿಲ್ಲ. ಅವಳೇ ಇಲ್ಲಿಗೆ ಬಂದಳು. ಬಂದ ಮೇಲನದೆ—ಇವಳಿಗೂ, ಅವಳಿಗೂ ಶುರುವಾಯಿತು ಯುದ್ಧ. ನೀನು ಮುಂಡೆ ಅಂತ ಅವಳು, ನೀನು ಕಣೆ ಗಂಡನ್ನ ಬಿಟ್ಟು ಕದ್ದು ಬಂದೋಳು, ಕಳ್ಳಮುಂಡೆ ಅಂತ ಇವಳು. ಕೊನೆಗೆ ಬೇಜಾರಾಗಿ ಅಯ್ನಾವರೆ ಇಬ್ಬರನ್ನೂ ಕಟ್ಟಿಹಾಕಿ, ಚಚ್ಚಿ, ರಕ್ತ ಬರೋಹಂಗೆ ಬಡಿದು ನಿನ್ನ ಜೊತೆ ಒಂದಿವಸ, ನಿಂಜೊತೆ ಒಂದಿವಸ ಅಂತ ತೀರ್ಮಾನ ಹೇಳಿದ್ರಂತೆ. ಈ ಹಲ್ಕಾಮುಂಡೇರ ಸಹವಾಸ ಯಾವಾಗ ಬಿಡ್ತಾರಪ್ಪ ಅಂತ ನಮಗೆ ಅನ್ನಿಸಿಬಿಟ್ಟಿತ್ತು ಸ್ವಾಮಿ! ಅಂಥದು ಅವರ ಗೋತ್ರ. ಅದೇನೋ, ದೇವರೇ ನಮಗೆ ಸಹಾಯ ಮಾಡಾನ ಅಂತ ಬಂದ, ಅಮ್ಮನವರ ವೇಶ ಹಾಕ್ಕೊಂಡು. ಅಮ್ಮನವರು ಬಂದ ಮೇಲೆ ಆ ಸಿಟಿ ಮುಂಡೇನ ಅಯ್ನಾವರೆ ಒಂದಿನ ಇದೇ ಹೊಳೆಗೆ ಎತ್ತಿ ಹಾಕಿದ್ರು. ಅಮ್ಮನವರು ಮನೆಗೆ ಬಂದ ಮೇಲೆ ಈ ಮಾಳಿಮುಂಡೆ ಮುದಿ ನಾಯಿಹಂಗೆ ಬಾಲನ ಮುದುರಿಕೊಂಡು, ಮನೆಗೆ ಬಂದಳು;

ಮಾಳಿನ್ನ ಕೂಡಿಕೊಂಡಳು. ಅಮ್ಮನವರ ದಯೆ, ಅಯ್ಯನವರ ಪುಣ್ಯ...

ಈರ ಇನ್ನೂ ಹೇಳುತ್ತಲೇ ಇದ್ದ. ಪ್ರತಿಮಾದೇವಿಯರು ನಿಡಿದಾಗಿ ನೀಡಿದ್ದ ಕಾಲನ್ನು ಸ್ವಲ್ಪ ಮಡಿಸಿಕೊಂಡರು. ಅವನಿಗೆ ಮುಂದಿನ ಕಥೆ ಮರೆತು ಹೋಯಿತೋ, ಅಥವಾ ಪ್ರತಿಮಾದೇವಿಯರ ಚಲನೆಯ ವಾಸ್ತವ್ಯದ ಮುಂದೆ ಅದು ಅಮುಖ್ಯವೆನಿಸಿತೋ, ಸುಮ್ಮನಾದ. ನಾಗರಾಜನಿಗೆ ಚಂದ್ರಾನಿಲರಾಯರ ಪ್ರೇಮಕಥೆಗಳು ಇನ್ನೂ ಎಷ್ಟೊಂದು ಇರಬಹುದು ಎಂದೆನಿಸಿತು. ಈರನ ಈ ಕಥೆಗಳನ್ನು ನಂಬಬಹುದೆ? ಅವುಗಳಲ್ಲಿ ಸತ್ಯ ಎಷ್ಟು? ಈರನ ಕವಿತ್ವ ಎಷ್ಟು ಎಂದು ಸಂದೇಹವಾಯಿತು. ಅವನು ಹೇಳಿದುದೆಲ್ಲ ನಿಜವಾಗಿರಲಾರದು. ಈಗ ಸ್ವಲ್ಪ ಮುಂಚೆ ತನ್ನ ಮತ್ತು ಕೀರ್ತಿಯ ಮದುವೆ ಅದ್ಧೂರಿಯಾಗಿ ನಡೆಯಿತೆಂದು ಕವಿಪ್ರಜ್ಞೆ ಇರುವವನ ಹಾಗೆ ಬಣ್ಣಿಸಿದ. ಅಥವಾ ಅವನು ಮಾತನಾಡುವ ರೀತಿಯೆ ಹಾಗಿರಬಹುದೆ? ಇರಲಾರದು ಅಂತ ಅವನಿಗನ್ನಿಸಲಿಲ್ಲ. ಪ್ರತಿಮಾದೇವಿಯರತ್ತ ನೋಡಿದ. ಆಕೆ ಕಣ್ಣು ಮುಚ್ಚಿದ್ದರು. ಎಬ್ಬಿಸುವುದು ಬೇಡ ಎಂದುಕೊಂಡ.

ಚಂದ್ರಾನಿಲರಾಯರು ಎಂಥವರು ಎಂದು ತಿಳಿಯುವುದು ಸಾಧ್ಯವೇ ಇಲ್ಲ ಎಂದು ಅವನಿಗನ್ನಿಸಿತು. ಪ್ರತಿಮಾದೇವಿಯರಂತೆಯೆ ಅವರದೂ ಬಹು ಆಳವಾದ ವ್ಯಕ್ತಿತ್ವ. ಅರಿವಿನ, ವಿಮರ್ಶೆಯ ಹಿಡತಕ್ಕೆ ಸಿಕ್ಕಲಾರದಂಥದ್ದು. ಅವನಿಗೆ ಹಿಂದೊಮ್ಮೆ ಯಾರೋ ಹೇಳಿದ್ದದು. ತಟ್ಟನೆ ನೆನಪಿಗೆ ಬಂದಿತು :

ಚಂದ್ರಾನಿಲರಾಯರು ಪ್ರತಿಮಾದೇವಿಯರನ್ನು ಮದುವೆಯಾಗುವುದಕ್ಕೆ ಮುಂಚೆ ಯಾವುದೋ ಕೊಲೆಯ ಕೇಸೊಂದರಲ್ಲಿ ಸಿಕ್ಕಿ ಬಿದ್ದಿದ್ದರಂತೆ. ಸಿಟಿಯಲ್ಲಿ ಮಾಡಿದ ಹತ್ಯೆ. ಊರಿನ ತಮ್ಮ ರಹಸ್ಯ ಕೋಟೆ, ಎಸ್ಟೇಟಿಗೆ ಬಂದಮೇಲೂ ಕಾಡಿತು, ಪೋಲೀಸಿನವರ ರೂಪದಲ್ಲಿ. ಚಂದ್ರಾನಿಲರಾಯರಿಗೆ ಅವರು ಬಂದ ವಿಷಯ ತಿಳಿಯಿತು. ಯಾರಿಗೂ ತಿಳಿಯದಂತೆ ಮರ್ತ್ಯನಾಕದ ಬಳಿ ಒಂದು ದಡದಲ್ಲಿ ಕುಳಿತುಬಿಟ್ಟರು. ಎಸ್ಟೇಟಿನಲ್ಲೆಲ್ಲ ಹುಡುಕಿ ದಣಿದ ಪೋಲೀಸಿನವರು ಕೊನೆಗೊಮ್ಮೆ ಮರ್ತ್ಯನಾಕದ ಬಳಿ ನೋಡುವ ಎಂದು ಬಂದರಂತೆ. ಅವರು ಬಂದ ಸಮಯ—ಚಂದ್ರಾನಿಲರಾಯರು ಯಾವುದೋ ಹುಡುಗಿಯ ಜೊತೆ ಸರಸವಾಡುತ್ತಿದ್ದರಂತೆ. ಪೋಲೀಸಿನವರನ್ನು ಕಂಡೊಡನೆಯೆ ದಿಗಿಲಾಯಿತು. ಎತ್ತಲೂ ಓಡುವಂತಿಲ್ಲ. ಮುಂದೆ ನದಿ. ನದಿಯಲ್ಲಿ ಪಾತ್ರ ಹತ್ತಿ ಉಕ್ಕಿ ಹರಿಯುವ ನೀರು. ಪಕ್ಕದಲ್ಲಿ ಆಸೆ ತಣಿಸಲೆಂದು ಬಂದ ಎಸ್ಟೇಟಿನ ಹರೆಯದ ಹುಡುಗಿ (ಮಾಳಿ ಇರಬಹುದೆ?)

ಪೋಲೀಸಿನವರು ಸಿಕ್ಕ ಎಂದು ಓಡಿ ಬಂದುಬಿಟ್ಟರು. ರಾಯ

ರಿಗೆ ಉಳಿದದ್ದು ಒಂದೇ ದಾರಿ. ನೀರಿಗೆ ಚಂಗನೆ ಹಾರಿ ಮುಳುಗಿದರು. ಮುಳುಗಿದವರು ಏಳಲಿಲ್ಲ. ಪೋಲೀಸರಿಗೆ ಭಯವಾಯಿತು. ವಾರಂಟ್ ಒಯ್ದು ಬಂದಿದ್ದ ನಾವು ಅಪರಾಧಿಯನ್ನು ಕೊಂದ ಅಪರಾಧ ಮಾಡು ವಂತಾಯಿತೆ ಎಂದು. ಅವರು ಹಾಗೆ ಚಿಂತೆಯಲ್ಲಿ ತಲೆಯಮೇಲೆ ಕೈ ಹೊತ್ತು, ಆಸೆಯಿಂದ, ನಿರಾಸೆಯಿಂದ, ಜುಗುಪ್ಸೆಯಿಂದ ನದಿಯನೀರಿ ನತ್ತ ನೋಡುತ್ತಿರಬೇಕಾದರೆ, ಆ ಕನ್ಯಾಮಣಿ ಯಾವಾಗಲೋ ಜಾರಿ ಹೋಗಿಬಿಟ್ಟಿದ್ದಳು.

ನದಿಯಲ್ಲಿ ಮುಳುಗಿದ ಚಂದ್ರಾನಿಲರಾಯರು ನೀರಿನೊಳಗೇ ಈಜಿ ಆಚೆಯ ದಡವನ್ನು ತಲುಪಿದರು. ಅವರು ಅಲ್ಲಿ ಎದ್ದುದನ್ನು ಕಂಡ ಪೋಲೀಸರಿಗೆ ಹೋದಜೀವ ಮರಳಿ ಬಂದಿತ್ತು. ನೀನು ಬದುಕಿದೆಯಲ್ಲ. ಅಷ್ಟೇ ಸಾಕು. ನೀನು ಸತ್ತುಹೋಗಿದ್ದೀಯ ಅಂತ ಸುಳ್ಳು ಸಾಕ್ಷಿ ಹಾಕಿಸಿಕೊಂಡು ಹೋಗಿಬಿಡುತ್ತೇವೆ, ಬಾರಯ್ಯ, ಚಂದ್ರಾನಿಲರಾಯ ಅಂತ ಕೂಗಿ ಹೇಳಿದರು. ಚಂದ್ರಾನಿಲರಾಯರು, ನನ್ನನ್ನ ಹಿಡಿದು ಕೊಳ್ಳೋದಕ್ಕೆ ಬರ್ತೀಯೇನೋ ನನ್ನ ಮಗನೆ, ಹಿಡಿದುಕೋ ನಂದ ಅಂತ ಪಂಚೆ ಎತ್ತಿ ತೋರಿಸಿ ಓಡಿಹೋಗಿದ್ದರಂತೆ.

ನಾಗರಾಜನಿಗೆ ಅನ್ನಿಸಿತು: ಈ ಕಥೆಯೂ ಈರನ ಕಥೆಯ ಹಾಗೆ ಸತ್ಯ ಅಸತ್ಯಗಳ ಮಿಶ್ರಣವಿರಬಹುದು. ಪ್ರತಿಮಾದೇವಿಯರ ಭಾವನೆ ಗಳಿಗಷ್ಟೇ ಬೆಲೆ ಕೊಡುವ ಆ ವ್ಯಕ್ತಿಯಲ್ಲಿ ತನಗೂ ತನ್ನದೇ ಆದ ಭಾವನೆಗಳೂ ಇದ್ದಾವು ಎಂದು ಅನ್ನಿಸುವುದೇ ಇಲ್ಲ. ಸ್ವಾರ್ಥವೇ ಇಲ್ಲದ ತ್ಯಾಗಮೂರ್ತಿಯ ಹಾಗೆ ಕಾಣಿಸುತ್ತಾರೆ. ಚಂದ್ರಾನಿಲರಾಯರ ಕೊಲೆಯ ಕಥೆಯನ್ನು ಬಹಳ ಹಿಂದೆ ಕೇಳಿದ್ದ ನಾಗರಾಜನಿಗೆ ಅದರಲ್ಲಿ ಒಂದಂಶ ಸತ್ಯವೂ ಇರಲಾರದು ಎಂದೆನಿಸುತ್ತಿತ್ತು. ವಿಚಿತ್ರವೆಂದರೆ ಅದು ಸಂಪೂರ್ಣ ಅಸತ್ಯವಾಗಿರಲಾರದು ಎಂದೆನ್ನಿಸತೊಡಗಿತು. ಈ ಕಥೆಗಳ ತಿರುಳಷ್ಟೇ ಸತ್ಯವಾಗಿದ್ದರೂ ಚಂದ್ರಾನಿಲರಾಯರಂಥ ಧೀರೋದಾತ್ತ ಪ್ರಾಣಿ!

ಅವನಿಗೆ ಚಂದ್ರಾನಿಲರಾಯರ ವ್ಯಕ್ತಿತ್ವದ ಬಗ್ಗೆ ಅಸೂಯೆ ಗೌರವ ಗಳು ಉಂಟಾದುದು ಇದೇ ಮೊದಲಬಾರಿಗಲ್ಲ. ಹಾಗೆಷ್ಟೋ ಬಾರಿ ಅವನೆಂದುಕೊಂಡಿದ್ದ. ಅವರಷ್ಟು ಆತ್ಮಸ್ಥೈರ್ಯ, ಚಿತ್ತಸರಳತೆ ತನಗಿದ್ದಿದ್ದರೆ ಎಂದು ಅಸೂಯೆ ಪಟ್ಟುಕೊಂಡಿದ್ದ. ಆದರೆ ಇಂದು ಅವನಿಗೆ ಚಂದ್ರಾನಿಲರಾಯರ ವ್ಯಕ್ತಿತ್ವಕ್ಕೆ ಇದ್ದಿರಬಹುದಾದ ಹೊಸ ಆಯಾಮ ವೊಂದರ ಪರಿಚಯವಾಗಿತ್ತು. ನಾಗರಾಜ ಚಂದ್ರಾನಿಲರಾಯರ ಕಾಮುಕ ವ್ಯಕ್ತಿತ್ವವನ್ನು ಕಲ್ಪಿಸಿಕೊಳ್ಳಲು ಪ್ರಯತ್ನಿಸಿದ. ಅವನೆಷ್ಟು ಪ್ರಯತ್ನಪಟ್ಟರೂ ಚಂದ್ರಾನಿಲರಾಯರು ಈಗ ಪ್ರತಿಮಾದೇವಿಯರನ್ನು ಬಿಟ್ಟುಬೇರೆ ಹೆಂಗಸರೊಂದಿಗೆ ಸಹವಾಸ ಮಾಡಿಯಾರು ಎಂಬುದನ್ನು

ಕಲ್ಪಿಸಿಕೊಳ್ಳಲಿಕ್ಕೂ ಬಾರಲಿಲ್ಲ. ತನ್ನಂತೆಯೆ ಚಂದ್ರಾನಿಲರಾಯರಿಗೂ ಕೀರ್ತಿ, ಪ್ರತಿಮಾದೇವಿಯರು ಆದರ್ಶಪ್ರಾಯರಾಗಿದ್ದಾರೆ. ಆದುದರಿಂದಲೇ ಇರಬೇಕು, ನನಗೆ ಯಾವಾಗಲೂ ಕೀರ್ತಿ, ಪ್ರತಿಮಾದೇವಿಯರದೇ ಚಿಂತೆ, ಮಲಕು.

ಅಂದುಕೊಂಡ: ನಾನು ನೋಡಿದ ಎಲ್ಲ ಹೆಣ್ಣುಗಳಿಗಿಂತಲೂ ಕೀರ್ತಿ ಪ್ರತಿಮಾದೇವಿಯರು ಗುಣದಲ್ಲಿ ಶ್ರೇಷ್ಠರೇನಲ್ಲ. ಆದರೂ ಅವರಿಬ್ಬರಲ್ಲಿ ಯಾರಲ್ಲಿಯೂ ಇರದಂಥ ಆಕರ್ಷಕಶಕ್ತಿ, ಅಯಸ್ಕಾಂತದ ವಿದ್ಯುಚ್ಛಲನೆ ಇದೆ. ಆದುದರಿಂದಲೇ ಇರಬೇಕು, ಗುಣಪಲ್ಲಿ, ಮನೋಧರ್ಮದಲ್ಲಿ ಎರಡು ಧ್ರುವಗಳಿಂತಿರುವ ನಾನೂ ಹಾಗು ಚಂದ್ರಾನಿಲರಾಯರು— ಇಬ್ಬರೂ ಅವರ ಮಾತನ್ನು ಮೀರಲಾರೆವು. ಆದಕ್ಕಿಂತ ವಿಚಿತ್ರವೆಂದರೆ ಅವರ ಊಳಿಗ ಮಾಡುವುದು ಹೆಮ್ಮೆಪಡುವಂಥ ವಿಷಯವೇನಲ್ಲವೆಂದು ತಿಳಿದರೂ ಅದಕ್ಕಾಗಿ ಹಾತೊರೆಯುತ್ತಿರುತ್ತೇವೆ. ಚಂದ್ರಾನಿಲರಾಯರಿಗೆ ಈ ವಿಷಯ ಅರಿವಿಗೆ ಬಂದಿಲ್ಲದಿರಬಹುದು. ಪ್ರಾಯಶಃ ಬರುವುದೂ ಸಾಧ್ಯವಿಲ್ಲ. ಆದರೂ ಪ್ರತಿಮಾ ಕೀರ್ತಿಯರ ಊಳಿಗದ ಅವಕಾಶ ದೊರೆಯಲಿ ಎಂಬ ಅವರ ಒತ್ತಾಸೆ ನನ್ನ ಆಸೆಯಷ್ಟೇ, ಬಹುಶಃ ಇನ್ನೂ ಹೆಚ್ಚು ತೀಕ್ಷ್ಣವಾದುದು. ನಮ್ಮಿಬ್ಬರ ಮಾತು ಹಾಗಿರಲಿ, ಮಾಳಿಯಂಥ ರಕ್ಕಸಿಯೂ ಪ್ರತಿಮಾದೇವಿಯರ ದೃಷ್ಟಿಯನ್ನೆದುರಿಸುವುದೆಂದರೆ ನೈತಿಕವಾಗಿ ಪುಕ್ಕಳಾಗಿಬಿಡುತ್ತಾಳೆ. ಈರನ ಮಾತು—ಚಂದ್ರಾನಿಲರಾಯರು ಪ್ರತಿಮಾರನ್ನು ಮದುವೆಯಾದ ಮೇಲೆ ಮಾಳಿ ಬಾಲಮುದುರಿದ ನಾಯಿಯಹಾಗೆ ಮನೆಗೆ ಹಿಂತಿರುಗಿದಳು ಎನ್ನುವುದು ಸತ್ಯವಿಲ್ಲದಿರಬಹುದಾದರೂ ಉತ್ಪ್ರೇಕ್ಷೆಯಂತೂ ಆಗಿರಲಾರದು.

ಪ್ರತಿಮಾದೇವಿಯರು ಎದ್ದು ನಿಂತರು. ಮಾಳಿ ಮುಂದೆ ಬಂದು ಈರನ ಜೊತೆಯಲ್ಲಿ ಅಡ್ಡಬಿದ್ದು ಕೈಮುಗಿದುಕೊಂಡು ನಿಂತಳು. ನಾಗರಾಜ ಅವರಿಬ್ಬರ ವರ್ತನೆಯನ್ನೇ ಗಮನಿಸುತ್ತಿದ್ದ. ಪ್ರತಿಮಾದೇವಿಯರು ಆ...ಎಂದು ದೊಡ್ಡದಾಗಿ ಆಕಳಿಸಿ ಮೈಮುರಿದಾಗ ಮಾಳಿ ಈರ ಇಬ್ಬರೂ ಆ ಪವಾಡ ಸದೃಶ 'ಘಟನೆ'ಯನ್ನು ಎವೆಯಿಕ್ಕದೆ ನೋಡುತ್ತಿದ್ದರು. ಪ್ರತಿಮಾದೇವಿಯರು ಅಲ್ಲಿಂದ ಸರಿದಾಗಲೂ ಅವರಿಬ್ಬರ ದೇಹದಲ್ಲಿ ವಿದ್ಯುಲ್ಲತೆಯೊಂದು ಹರಿಯುತ್ತಿತ್ತು. ಸುರಚಾಪದಿಂದಾಚೆಯ ವಸ್ತುವೊಂದು ದಕ್ಕಿದ ಹಾಗೆ ಅನುಭವ ಅವರಿಬ್ಬರಿಗೂ ಆಗುತ್ತಿದೆ ಎಂದು ನಾಗರಾಜ ಆಶ್ಚರ್ಯಪಟ್ಟ. ಪ್ರತಿಮಾದೇವಿಯರನ್ನೇ ಹಿಂಬಾಲಿಸಿದ.

ದಾರಿಯುದ್ದಕ್ಕೂ ಇಬ್ಬರೂ ಮಾತನಾಡಲಿಲ್ಲ. ಪ್ರತಿಮಾದೇವಿಯರ ನಡೆ ಆರಾಮವಾಗಿ, ನಿಧಾನವಾಗಿ ಮನೆಗೆ ಬಂದಾಗ ಆಗಲೆ ಹನ್ನೆರಡರ

ಸಮಯ. ಕೀರ್ತಿ ಪುಸ್ತಕವೊಂದನ್ನು ಹಿಡಿದು ಕುರ್ಚಿಯೊಂದರ ಮೇಲೆ ಕುಳಿತಿದ್ದಳು. ಚಂದ್ರಾನಿಲರಾಯರು ಹಾಲಿನಲ್ಲಿ ಉದ್ದಕ್ಕೂ ಆ ಕಡೆಗು, ಈಕಡೆಗೂ ಕಾಲು ಹಾಕುತ್ತಿದ್ದರು. ಪ್ರತಿಮಾದೇವಿಯರ ಕಣ್ಣುಗಳು ಅವರ ಕಣ್ಣುಗಳನ್ನು ಕೂಡಿದಾಗ ಚಂದ್ರಾನಿಲರಾಯರ ಅಕ್ಷಿಕಾತರತೆ ಅವರ ಪತ್ನಿಯಲ್ಲಿ ಎಂದಿನ ಹಾಗೆ ಅಯ್ಯೋ ಪಾಪ ಅನ್ನುವ ಭಾವನೆ ಯನ್ನು ಹುಟ್ಟಿಸಲಿಲ್ಲ. ಬದಲಾಗಿ ಅವರು ನಾನು ತಪ್ಪು ಮಾಡಿಬಿಟ್ಟೆ ಅಂದುಕೊಂಡರು.

ನಾಗರಾಜನಿಗೆ ಚಂದ್ರಾನಿಲರಾಯರನ್ನು ಮುಖಾಮುಖಿ ನೋಡು ವುದು ಸಾಧ್ಯವೇ ಇಲ್ಲ ಎನಿಸಿಬಿಟ್ಟಿತು. ಅವನ ಕಣ್ಣು ಕೀರ್ತಿಯತ್ತ ಯಾಂತ್ರಿಕವಾಗಿ ಸರಿಯಿತು. ಅವಳ ಕಣ್ಣುಗಳಲ್ಲಿದ್ದ ಕಠೋರತೆ, ಬೆಂಕಿ ಅವನ ಕೈಕಾಲುಗಳನ್ನು ನಡುಗಿಸಿದುವು. ಅವನು ಕಣ್ಣುಗಳು ಅವನ್ನು ಕೂಡುತ್ತಿದ್ದಂತೆಯೆ ಅವಳ ಕೈಲಿದ್ದ ಪುಸ್ತಕ ಜಾರಿಬಿತ್ತು. ಆಕೆ ತನ್ನ ಕೋಣೆಯತ್ತ ನಡೆದಳು. ನಾಗರಾಜ ಮಂತ್ರಮುಗ್ಧನಂತೆ, ಯಾಂತ್ರಿಕ ವಾಗಿ ಅವಳನ್ನು ಹಿಂಬಾಲಿಸಿದ : ಅವನು ಅವಳ ಪಕ್ಕ ಹಾಸಿಗೆಯಲ್ಲಿ ಉರುಳಿಕೊಂಡಾಗ, ಕೀರ್ತಿ ಮಗ್ಗಲು ಬದಲಿಸಿ ಕಣ್ಣುಮುಚ್ಚಿದಳು. ಕ್ಷಣಾರ್ಧದಲ್ಲಿ ಅವಳನ್ನು ಗಾಢನಿದ್ರೆ ಆವರಿಸಿತು. ನಾಗರಾಜ ಕಣ್ಣು ರೆಪ್ಪೆ ಕೂಡಿಸುವುದಕ್ಕೆ ವ್ಯರ್ಥ ಪ್ರಯಾಸಪಟ್ಟ. ಅವನು ಅವುಗಳನ್ನು ಕಷ್ಟಪಟ್ಟು ಕೂಡಿಸಿದ ಕೂಡಲೆ ರೆಪ್ಪೆಗಳು ಇಕ್ಕಳದಿಂದ ಬಿಡಿಸಲ್ಪಟ್ಟವಂತೆ ಬೇರ್ಪಡುತ್ತಿದ್ದವು. ಅವನಿಗೆ ಬೆಳಗಿನ ಕೋಳಿ ಕೂಗಿದ್ದು, ಪ್ರತಿಮಾ ದೇವಿಯರು ಸುಖದಿಂದ ನರಳುತ್ತಿದ್ದುದು ಸ್ಪಷ್ಟವಾಗಿ ಕೇಳಿಸುತ್ತಿತ್ತು.

ಮುಂಜಾನೆ ನಾಗರಾಜ ಬೇಗನೆ ಎದ್ದು ಸ್ನಾನ ಮತ್ತು ಇನ್ನಿತರ ನಿತ್ಯ ಕರ್ಮಗಳನ್ನು ಮುಗಿಸಿದ. ಅವನಿಗೆ ಪ್ರತಿಮಾದೇವಿಯರ ಜೊತೆ ಇನ್ನಷ್ಟು ಸಮಯ ಕಳೆಯಬೇಕೆನ್ನಿಸಿತು. ಕೀರ್ತಿಯ ಮುಖದಲ್ಲಿ ಮಿಂಚಿ ಮಾಯವಾಗುತ್ತಿದ್ದ ಕೋಪ ನಿರಾಸೆಗಳು ಆತಂಕವನ್ನುಂಟುಮಾಡದಿದ್ದರೂ ಅವನ ಮನಸ್ಸನ್ನು ಕಾಡಿದವು. ಹಾಲಿಗೆ ಬಂದಾಗ ಚಂದ್ರಾನಿಲರಾಯರು ಒಂದು ಮೂಲೆಯಲ್ಲಿ ಕೂತು ಕುಡುಗೋಲಿನಿಂದ ಬೆತ್ತವೊಂದನ್ನು ಹೆರೆಯುತ್ತಿದ್ದರು. ಅದು ನುಣ್ಣಗೆ ಆಯಿತೆ,ಸಪುರವಾಗಿದೆಯೆ ಎಂದು ಅದನ್ನ ಕೈಯಿಂದ ತಿದ್ದಿ, ತೀಡಿ, ಬಗ್ಗಿಸಿ ನೋಡುತ್ತಿದ್ದರು. ಬೆತ್ತದುದ್ದಕ್ಕೂ ಓಡಾಡುತ್ತಿದ್ದ, ಅವರ ಕೈಯಲ್ಲಿನ ಕತ್ತಿಯನ್ನು ಕಂಡಾಗ ಅವನಿಗೆ ವಿಶ್ವನಾಥನ ನೆನಪು ಬಂದು ಮೈ ಜುಂ ಎಂದಿತು. ವಿಶ್ವನಾಥನ, ಹುಲಿಯ ಕಣ್ಣುಗಳಷ್ಟು ಕ್ರೂರವಾದ ಕಣ್ಣುಗಳು, ಸಣ್ಣಕ್ಕೆ ಸಪುರಾಗಿದ್ದ ಅವನ ಬಾಹುಗಳು ನೆನಪಿಗೆ ಬಂದವು. ಈರ ಮಾಳಿಯನ್ನು ಹಿಂದಿನ ದಿನ ಬಡಿದು ಜಜ್ಜಿ ಹಾಕಿದ್ದುದು, ಅದರ ಹಿಂದಿನ ದಿನ ಮಾಳಿ ಅವನ ಮೇಲೆ ನಡೆಸಬೇಕೆಂದುಕೊಂಡಿದ್ದ ಅಮಾನುಷ ಹಿಂಸೆ ಮನಸ್ಸಿಗೆ ಬಂದ ಕೂಡಲೆ, ಕೈಕಾಲು ನಡುಗಿದುವು. ಕಣ್ಣು ಕತ್ತಲು ಕಟ್ಟಿದಂತಾಯಿತು.

ತನ್ನ ಕೋಣೆಗೆ ಹೋಗಿ ಕುರ್ಚಿಯಲ್ಲಿ ಕುಳಿತ. ಅವನೆಷ್ಟು ಯೋಚಿಸಿದರೂ ಅವನ ಭಯ, ಆತಂಕ–ತನಗಾಗಿ, ಕೀರ್ತಿಗಾಗಿ ಕಡಿಮೆಯಾಗಲಿಲ್ಲ. ತಾನು ಇರುವಷ್ಟು ಪ್ರತಿಯೊಂದು ಕ್ಷಣವೂ ಜೀವಹತ್ಯೆ ಅಥವ ಜೀವಹಿಂಸೆಯ ಮರಣಗಳಿಗೆಗಳು ಎಂದೆನಿಸಿತು. ಬಾಗಿಲು ಹಾಕಿ ಹಾಸಿಗೆಯ ಮೇಲೊರಗಿದ. ಅವನ ಮನಸ್ಸಿನಲ್ಲಿ ಅಪ್ಪಳಿಸಿ ನುಗ್ಗುವ ವೇದನೆ ನಿದ್ದೆ ಮಾಡಿಬಿಡುತ್ತೇನೆ ಎಂದು ಗಡಿಯಾರ ನೋಡಿಕೊಂಡ. ಎಂಟು ಘಂಟೆ ಸಮಯ. ಕಣ್ಣು ಮುಚ್ಚಿದ.

ನಿದ್ದೆ ಬರಲಿಲ್ಲ. ಭಯದೊಂದಿಗೆ ಹೋರಾಡಿದ. ಅವನ ಸಮಸ್ತ ಅಂಗಾಂಗಳನ್ನೂ ಮೆಟ್ಟಿ ನುಗ್ಗಿ ಬರುತ್ತಿರುವ ವ್ಯಾಕುಲ ಕೈಕಾಲುಗಳು ಜೋಮು ಹಿಡಿದು ತನ್ನ ಸ್ವಾಧೀನದಲ್ಲಿಲ್ಲವೇನೊ – ಪಾರ್ಶ್ವವಾಯು ಬಡಿದವರ ಹಾಗೆ ಅಂತ ಅನಿಸಿತು. ಕಿವಿಯಲ್ಲಿ ಗುಂಯ್ ಎಂದು ಭಯಂಕರವಾದ ಗದ್ದಲ. ತಲೆಯಲ್ಲಿ ಭಾರವಾಗಿ ಹೊಟ್ಟೆಯಲ್ಲಿ ವೇದನೆ. ಮಗ್ಗಲು ಬದಲಿಸಿ, ಮಂಡಿ ಮಡಿಚಿ ಮಲಗಿದವನಿಗೆ ಕೀರ್ತಿ ಒಳಗೆ ಬಂದು ತನ್ನನ್ನೇ ನೋಡುತ್ತಿದ್ದಾಳೆ ಅನ್ನುವುದೂ ತಿಳಿಯಲಿಲ್ಲ. ಕೀರ್ತಿಗೆ ಅವನ ಅವಸ್ಥೆಯನ್ನು ಕಂಡು ಪಾಪ ಅನಿಸಿತು. ಅವನ ಮನಸ್ಸಿನಲ್ಲಿ, ಮೈನಲ್ಲಿ ಉಂಟಾಗುತ್ತಿದ್ದ ಪ್ರತಿಯೊಂದು ನೋವಿಗು ಪ್ರತಿಸ್ಪಂಧಿಯಾಗಿ

ಅವಳ ಮನ ತುಡಿಯಿತು. ನೀಟಾಗಿ ಬಾಚಿದ ಅವನ ತಲೆ ಎದೆಯಲ್ಲಿ ಹೂತುಹೋಗಿತ್ತು. ಅವನ ನೀಳವಾದ ಬಾಹುಗಳು ಮಂಡಿಗಳ ಮಧ್ಯೆ ಹುದುಗಿ ಕುಬ್ಜವಾಗಿದೆಯೆಂದು ಅನಿಸಿತು. ತನ್ನನ್ನು ಅಷ್ಟೊಂದು ಮೃದುವಾಗಿ ತಟ್ಟಿ, ಭಯ, ಕಾತರ, ಬಯಕೆ ಇತ್ಯಾದಿ ನೂರು ಭಾವ ತರಂಗಗಳನ್ನು ಒಟ್ಟಿಗೇ ತಲ್ಲಣಗೊಳಿಸಿಬಿಡುತ್ತಿದ್ದ ಅವನ ನಿಶ್ಚಲವಾದ ಬೂದುಕಣ್ಣುಗಳನ್ನು ಅವಳು ಹುಡುಕಿದಳು. ಅವನು ಕಣ್ಣು ಮುಚ್ಚಿದ್ದ.

ಅವಳಿಗೆ ಅಳು ಬಂದುಬಿಟ್ಟಿತು, ತನ್ನ ಪ್ರಿಯಕರ ನಾಗರಾಜನಿಗಾದ ಅವಸ್ಥೆ ತನಗೇ ಉಂಟಾಯಿತೆಂಬ ಭ್ರಮೆಯಲ್ಲಿ ಕೀರ್ತಿ ನೊಂದಳು. ಅವಳ ಒಂದೊಂದು ನೋವು ಅವಳ ಮುಖ್ಯ ವೇದನೆಗೆ ಸ್ವರಗೂಡಿಸಿ ತೇನೋ ಎನ್ನುವ ಹಾಗೆ ದುಃಖ, ಕಟ್ಟೆಯೊಡೆದು ಬಂದ ನೀರಿನ ಹಾಗೆ, ಇತರ ಭಾವಗಳನ್ನು ಮುಳುಗಿಸಿ, ನುಗ್ಗಿ ಬಂತು. ಕೈಕಾಲುಗಳಲ್ಲಿನ ಶಕ್ತಿ, ಚೈತನ್ಯ ಉಡುಗಿ ಹೋದಂತೆನಿಸಿ, ಅವಳು ಕುಸಿದಳು. ತಕ್ಷಣ ಸಾವರಿಸಿಕೊಂಡು, ತಾನು ಮೂಕವಾಗಿ ಅಳುತ್ತಿರುವುದು ನಾಗರಾಜನೆಲ್ಲಿ ನೋಡಿಬಿಟ್ಟನೋ ಎಂದು ಅನುಮಾನವಾಗಿ, ಅವನತ್ತ ನೋಡಿದಳು. ಅವನು ಹಾವು ಕಡಿದವರಂತೆ ವಿಲಿವಿಲಿಗುಟ್ಟುತ್ತಿದ್ದ. ಪ್ರಪಂಚದ ಎಲ್ಲ ದುಷ್ಟಶಕ್ತಿಗಳೂ ತನ್ನನ್ನು ತುಳಿದು, ವ್ಯಭಿಚಾರ ಹಾಗು ಆತ್ಮವಧೆಯ ಅಮಾನುಷವಾದ ಚಿತ್ರಹಿಂಸೆಯಲ್ಲಿ ತೊಡಗಿದೆ ಎನ್ನುವ ಭಾವನೆಗೆ ಸಮನಾದ ಆತ್ಮರತಿ ಕೀರ್ತಿಯನ್ನಾವರಿಸಿತ್ತು. ಬಾಯಿಗೆ ಅಡ್ಡ ಕೈಯಿಕ್ಕಿ ತನ್ನ ಕೋಣೆಯತ್ತ ಓಡಿಬಿಟ್ಟಳು.

ಅವಳು ಹೊರಕ್ಕೆ ಬಂದಾಗ ನಾಗರಾಜ ತನ್ನ ಬ್ರೀಫ್‌ಕೇಸ್ ಹಿಡಿದು ಬಾಗಿಲಲ್ಲಿ ನಿಂತಿದ್ದ. ಬಹಳ ಸರಳವಾಗಿ ಬಟ್ಟೆ ಧರಿಸಿದ್ದ. ಅವನ ಕಾಲಲ್ಲಿ ಚಪ್ಪಲಿ. ಸರಿಯಾಗಿ ತೀಡಿಬಾಚದ ಅವನ ಮುಂಗುರುಳು ಮುಖದ ಮೇಲೆ ಬಿದ್ದು ಅವನು ತುಡುಗನ ಹಾಗೆ ಕಾಣುತ್ತಿದ್ದ. ಕೀರ್ತಿ ಅವನ ಇನ್ನೊಂದು ಕಣ್ಣನ್ನು ಹುಡುಕಿದಳು. ಅದರಲ್ಲಿ ಅದೇ ಬೂದು, ಅದೇ ಅಂತರ್ಯಕಲಕುವ ಅಮೂರ್ತತೆ, ಅದೇ ಅರ್ಥವಾಗಲಾರದ ಬಾದ್ಧಿಕತೆ. ಓಹ್.... ಎಷ್ಟು ಚೆನ್ನಾಗಿದ್ದಾನೆ ಅಂದುಕೊಂಡಳು ಕೀರ್ತಿ.

ನಾಗರಾಜ ಕಾಲು ಹಾಕಿದ. ಚಂದ್ರಾನಿಲರಾಯರು ಹೆಂಡತಿಯ ಮುಖದ ಮೇಲೆ ಅಂಟಿಕೊಂಡಿದ್ದ ಮಸಿ ಹೇಗೆ ಅಲ್ಲಿ ಬಂತು ಎಂದು ಅದನ್ನೇ ವೀಕ್ಷಿಸುತ್ತ ಯೋಚಿಸುತ್ತಿದ್ದರು. ಪ್ರತಿಮಾ ದೇವಿಯರು, ಕೀರ್ತಿ ಇಬ್ಬರೂ ನಾಗರಾಜ ನಡೆಯುವುದನ್ನೇ ದಿಟ್ಟಿಸುತ್ತಿದ್ದರು. ಎಲ್ಲಿಗೆ, ಏಕೆ? ಎಂಬ ಪ್ರಶ್ನೆ ಇಬ್ಬರಿಗೂ. ಹೋಗುವುದೇ ಆದರೆ ಉಳಿದ ಬಟ್ಟೆ ಬರೆಗಳನ್ನು ಯಾಕೆ ಇಲ್ಲಿ ಬಿಟ್ಟ. ಯಾವಾಗಲೂ ಎಲ್ಲಾದರೂ ಹೋಗ

ಬೇಕಾದರೆ, ಎಸ್ಟೇಟನಲ್ಲಿ ತಿರುಗಾಡುವಾಗಲು, ಶೂ ಕಟ್ಟಿಕೊಂಡೇ ಇರುವವನು ಚಪ್ಪಲಿ ತೊಟ್ಟು ಎಲ್ಲಿ ಹೊರಟ ಎಂಬ ಏಕಪ್ರಕಾರ ಪ್ರಶ್ನೆ.

ನಾಗರಾಜ ತಟ್ಟನೆ ನಿಂತ. ಹಿಂತಿರುಗಿದ. ಕೀರ್ತಿ ತಲೆತಗ್ಗಿಸಿ ಪುಸ್ತಕ ನೋಡುತ್ತ ನಿರಾಸಕ್ತಳಂತೆ ಕಂಡಳು.

ಅವನು ವಾಪಸು ಬಂದ. ನಿಧಾನ, ನೇರ ಸೈನಿಕನ ಹಾಗೆ, ದೃಢವಾಗಿ. ಕೈನಲ್ಲಿದ್ದ ಬ್ರೀಫ್‌ಕೇಸನ್ನು ನೆಲದಮೇಲೆ ಕೂರಿಸಿ ಚಂದ್ರಾನಿಲರಾಯರತ್ತ ನಡೆದ. ಅದು ತಪ್ಪು ಅನ್ನುವ ಹಾಗೆ ತಳಮುಳಿಸಿ, ಪ್ರತಿಮಾರತ್ತ ತಿರುಗಿದ. ಬಾಗಿ ಅವರ ಕಾಲುಮುಟ್ಟಿ ನಮಸ್ಕರಿಸಿದ. ಪ್ರತಿಮಾದೇವಿಯರು ವಿಚಲಿತರಾಗದೆ ನಿಂತಿದ್ದರು. ಅವರ ದೃಷ್ಟಿ ಮುಂದೆ, ಶೂನ್ಯದಲ್ಲಿ. ಅವರ ಪಾದಗಳ ಮೇಲೆ ಅವನ ಕೈ ಮುತ್ತಿಡುವಷ್ಟು ಮೃದುವಾಗಿ ಜಾರಿತು. ಎದ್ದು ನೇರ ನಿಂತ. ತನಗಿಂತ ಅರ್ಧ ಮುಕ್ಕಾಲು ಅಡಿ ಕಡಿಮೆ ಎತ್ತರವಾಗಿದ್ದ ಅವರ ಕಣ್ಣುಗಳೊಳಗೆ ನೋಡಿದ. ಅಲ್ಲಿ ಅವನಿಗೆ ಏನೋ ಅರಿಯದ ಆಳ ಕಾಣಿಸಿತು. ಅಷ್ಟೊಂದು ನಿರ್ಲಿಪ್ತ ಅವರ ಕಣ್ಣುಗಳು. ಆ ನಿರ್ಲಿಪ್ತತೆಯಲ್ಲಿ ಸೊಬಗಿನ ಪುಷ್ಪ ಗುಚ್ಛಗಳು. ಓಹ್, ಚೆಲುವಿನ ದೇವತೆಯೆ ಎಂದೆನಿಸಿ, ಹೆಮ್ಮೆಯಿಂದ ತಲೆಯೆತ್ತಿ ನಿಂತಿದ್ದ ಅವರ ವಕ್ಷಸ್ಥಲದತ್ತ ನೋಡಿದ. ಗಕ್ಕನೆ ತಿರುಗಿ ಚಂದ್ರಾನಿಲರಾಯರತ್ತ ನಡೆದ.

ಅವರ ಕಾಲು ಮುಟ್ಟಿದ. ಚಂದ್ರಾನಿಲರಾಯರು ಕುಳಿತಲ್ಲಿಂದ ಗಡಿಬಿಡಿಸಿ ಎದ್ದರು. ಅವರಿಗೆ ಅವನ ವರ್ತನೆ ಎಷ್ಟು ಅನಿರೀಕ್ಷಿತವೊ? ಅಷ್ಟೇ ಅನಪೇಕ್ಷಣಿಯವೂ ಆಗಿತ್ತು. ಪ್ರತಿಮಾದೇವಿಯರು ಅವರತ್ತಲೇ ನೋಡುತ್ತಿದ್ದರು. ಚಂದ್ರಾನಿಲರಾಯರ ಗೊಂದಲ ಮತ್ತಷ್ಟು ಹೆಚ್ಚಾಯಿತು.

ನಾಗರಾಜ ಕೀರ್ತಿಯನ್ನು ನೋಡಿದ. ಅವಳು ಪುಸ್ತಕ-ಓದುವುದರಲ್ಲಿ ತಲ್ಲೀನಳಾಗಿದ್ದಳು. ಅವಳು ಹೊಸದಾಗಿ ಕಲಿತ ವಿದ್ಯಾಶ್ರದ್ಧೆ ಅವನಿಗೆ ನಗುತರಿಸಿತು. ಅವಳಿಗೇಕೆ ನೋವಾಗಬೇಕು ಎಂದು ಅವಳತ್ತ ಹೋಗಿ ಕೀರ್ತಿಯ ಮುಖವನ್ನ ತನ್ನ ಕೈಗಳಲ್ಲಿ ತೆಗೆದುಕೊಂಡ. ಮುದ್ದಿಟ್ಟ. ಅವಳೂ ಸ್ವಲ್ಪವೂ ಕೊಸರಾಡದೆ ಅವನ ಪ್ರೇಮಾಭಿವ್ಯಕ್ತಿಗೆ ತನ್ನನ್ನು ಒಪ್ಪಿಸಿಕೊಂಡಳು. ಅವನ ಸುತ್ತ ಕೈ ಹಾಕಿ ಅವನಿಗೆ ಅಂಟಿಕೊಂಡಳು.

ನಾಗರಾಜ ಅವಳಿಂದ ಬಿಡಿಸಿಕೊಳ್ಳಬೇಕೆಂದುಕೊಂಡ. ಅವಳ ಅಭಿಮಾನಕ್ಕೆ ನೋವಾಗಬೇಕೇಕೆ ಎಂದು ಸುಮ್ಮನಾದ. ಅವಳೇ ಅವನನ್ನು ಬಿಟ್ಟುಬಿಟ್ಟಳು. ನಾಗರಾಜ ಅವಳ ಹೇಗಲ ಮೇಲೆ ಕೈಯಿಟ್ಟು ಅವಳನ್ನೆ ದಿಟ್ಟಿಸಿ ನೋಡಿದ. You are lovely, a goldess of beauty ಎಂದು ಹೇಳಿದ. ಅವಳಿಗೆ ಖುಶಿಯಾಯಿತು. ಅವನು ಸರಕ್ಕನೆ

ತಿರುಗಿ ಬ್ರೀಫ್ ತೆಗೆದುಕೊಂಡು ನಡೆದುಬಿಟ್ಟ. ಕೀರ್ತಿ ಗಮನಿಸಿದಳು. ನಾನು ತಂದುಕೊಟ್ಟ ಶರಟನ್ನೇ ಹಾಕಿಕೊಂಡಿದ್ದಾನೆ.

ಪ್ರತಿಮಾದೇವಿಯರು ಕೀರ್ತಿ ಅವನನ್ನೇ ನೋಡುತ್ತಿದ್ದರು. ಚುರುಕಾಗಿ, ಓಡುತ್ತಿದ್ದವನ ಹಾಗೆ ನಡೆಯುತ್ತಿದ್ದ ಅವನ ನಟ್ಟನೆಯ ಭಂಗಿಯನ್ನು ಹಿಂಬದಿಯಿಂದ ಕಂಡ ಕೀರ್ತಿಗೆ ದುಃಖವಾಯಿತು. ಕರೆಯಲೆ ಎಂದುಕೊಂಡು ಕೈ ಎತ್ತಿದಳು. ಬೇಡ. ಹೋದರೆ ಹೋಗಲಿ. ನಾನೇನು ಅವನ ಮೈಮೇಲೆ ಬಿದ್ದು ಕರೆದವಳಲ್ಲ. ಅವನಾಗಿ ಓಡಿ ಬರುತ್ತಾನೆ ಎಂದುಕೊಂಡು ಸುಮ್ಮನಾದಳು.

ನಾಗರಾಜ ತಿರುಗಿ ನೋಡಲಿಲ್ಲ. ಅವನು ಮತ್ತೆ ಬರುವವನು ಎಂದು ಪ್ರತಿಮಾ ದೇವಿಯರಿಗೆ ಅನಿಸಲಿಲ್ಲ. ಅವರು ಬಂದು ಕೀರ್ತಿಯ ಪಕ್ಕದಲ್ಲಿ ಕುಳಿತು ಅವಳ ಹೆಗಲ ಮೇಲೆ ಕೈಯಿಟ್ಟರು. ಅವಳು ಬಿಕ್ಕಳಿಸಿದ್ದು ಅವರಿಗೆ ಸ್ಪಷ್ಟವಾಗಿಯೂ ಕೇಳಿಸಿತು. ಚಂದ್ರಾನಿಲರಾಯರು ಹೆಂಡತಿಯ ಕೆನ್ನೆಯ ಮೇಲಿದ್ದ ಮಸಿಯ ಬಗ್ಗೆಯೇ ಚಿಂತಿಸುತ್ತಿದ್ದರು.

ಆ ವೇಳೆಗೆ ಸರಿಯಾಗಿ ಈರನ ಧ್ವನಿ ಕೇಳಿಸಿತು : ಅಮ್ಮನವರೆ, ಅಡ್ಡಬಿದ್ದೆ.

ಎದುರಿಗೆ ಹೆಂಗಸು ನಿಂತಿದ್ದಳು. ನಾಗರಾಜ ಎವೆಯಿಕ್ಕದೆ ಅವಳನ್ನೇ ವೀಕ್ಷಿಸಿದ. ಆಕೆಯ ಕಪ್ಪಗಿನ ಮೈಮೇಲೆ ಬೆಂಕಿಯ ಜ್ವಾಲೆ ನರ್ತನಗೈಯುತ್ತಿತ್ತು. ಎಣ್ಣೆ ಹಚ್ಚಿದಂತೆ ಮಿರುಗುತ್ತಿದ್ದ ಆಕೆಯ ಶಿಲಾಬಾಲಿಕೆಯ ದೇಹದಲ್ಲಿ ರಕ್ತ ಚಿಲುಮೆಯಾಗಿ, ಚಟುವಟಿಕೆಯಿಂದ ಹರಿದಾಟ ನಡೆಸುತ್ತಿರುವುದು ದಷ್ಟಪುಷ್ಟ ಅಂಗಾಂಗಗಳಲ್ಲಿ ಪ್ರತಿಫಲಿತವಾಗಿತ್ತು. ಅವಳ ನಗ್ನ ದೇಹ ಅಷ್ಟೇನು ತರುಣವೂ ಆಗಿರದೆ, ವಯಸ್ಸಿನ ಭಾರದಿಂದ ಜಗ್ಗಿಯೂ ಇರದೆ, ನಿಮಿರಿ ನಿಂತಿತ್ತು. ಆಕೆಯ ಮುಖದಲ್ಲಿ ಕಾಣುತ್ತಿದ್ದ ಭಯ ಕ್ಷಣಮಾತ್ರದಲ್ಲಿ ಆತ್ಮವಿಶ್ವಾಸದಿಂದ ಮುಚ್ಚಿಹೋಯಿತು. ಕಿರುನಗೆ ನಕ್ಕಳು. ತಾನೇನು ಮಾಡುತ್ತಿದ್ದೇನೆಂಬ ಅರಿವೂ ಅವಳಿಗಿಲ್ಲ ಎಂದು ಅವನೆಂದುಕೊಂಡ. ಅವಳ ದೇಹದಿಂದ ಸೂಸುತ್ತಿದ್ದ ದುರ್ಗಂಧ, ಅವಳ ಬಾಯಿಂದ ಬರುತ್ತಿದ್ದ ಹೆಂಡದ ನಾತದಲ್ಲಿ ಮಿಳಿತವಾಗಿ ಒಂದು ಥರ ಸಿಹಿಯಾದ ವಾಸನೆ, ನಾಗರಾಜನನ್ನು ಆಕರ್ಷಿಸಿತು. ತನ್ನ ನಗ್ನತೆಯ ಅರಿವೂ ಇರದೆ ನಟ್ಟು ನಿಂತಿದ್ದ ಆಕೆಯ ಭಂಗಿಯನ್ನು ಕಂಡು ನಾಗರಾಜನಿಗೆ ವ್ಯಾಘ್ರವೆಂದು ಅನ್ನಿಸಿತು. ಹಾಗನ್ನಿಸಿದ ಕೂಡಲೆ ಅವಳ ಕಿರುನಗೆ ಕಂಡು ಭಯವೂ ಆಯಿತು. ಒಂದು ಹೆಜ್ಜೆ ಹಿಂದಿಟ್ಟ. ಆಕೆ ಗಹಗಹಿಸಿ ನಕ್ಕಳು. ನಾಗರಾಜ ಪುಕ್ಕನಾಗಿಬಿಟ್ಟ. ಅಲ್ಲಿಂದ ಓಡ ಹತ್ತಿದವನು ಮನೆ ತಲುಪುವ ತನಕ ಹಿಂದೆ ತಿರುಗಿ ನೋಡಲಿಲ್ಲ.

ತಲೆ ಎತ್ತಿದ. ಕೀರ್ತಿ ಬಾಗಿಲಲ್ಲಿ ನಿಂತಿದ್ದಳು. ಅವನಿಗೆ ಭಯವಾದಂತಾಯಿತು. ಬಾ ಕೀರ್ತಿ ಎಂದು ಕರೆದ. ನಗುನಗುತ್ತ ಕೈಯಾಡಿಸಿ ಕರೆದ: ಅವಳು ಬಂದಳು. ಕೂತುಕೋ ಎಂದ. ಕೂತುಕೊಂಡಳು. ಹೇಗಿದ್ದೀಯ ಎಂದ. ಅವಳಿಗೆ ಕೆನ್ನೆಗೆ ಅಪ್ಪಳಿಸಿದಂತಾಗಿ ದುಃಖ ಒತ್ತರಿಸಿ ಬಂತು. ಅದನ್ನು ತೋರಿಸಿಕೊಂಡರೆ ಅವನಿಗೆಲ್ಲಿ ಖುಶಿಯಾಗಿಬಿಡಬಹುದೋ ಎಂದು ಹೆದರಿಕೆಯಿಂದ ಚೆನ್ನಾಗಿದ್ದೇನೆ ಎಂದಳು. ಅವನ ಕಣ್ಣುಗಳಲ್ಲಿ ದೃಷ್ಟಿ ನಟ್ಟ, ತನ್ನಲ್ಲಿ ಅಲ್ಲಿಯವರೆಗೂ ಸುಪ್ತವಾಗಿದ್ದ ಶೃಂಗಾರ ಭಾವನೆಗಳನ್ನೆಲ್ಲ ಕೇಂದ್ರೀಕರಿಸಿ ಕೆನ್ನೆಗಳನ್ನು ಅಳಗೈದಳು. ಮೂಗನ್ನು ತುಸುವೆ ಬಾಗಿಸಿದಳು. ತುಟಿಗಳನ್ನು ಕೊಂಕು ಮಾಡಿ, ತುಸುವೆ ಗುಂಡಾಗಿಸಿ ಮುಗುಳ್ನಕ್ಕಳು. ಅವಳು ಹೆಚ್ಚು ಹೆಚ್ಚು ಸುಂದರಳಾಗುತ್ತಿದ್ದಂತೆ ಕ್ಷಣಕ್ಷಣಕ್ಕು ಕಾಮದೇವಿಯನ್ನೂ ಮೀರಿ ಬೆಳೆಯುತ್ತಿದ್ದಂತೆ ನಾಗರಾಜ ಮೂಕನಾಗಿ ಕಲ್ಲಾಗುತ್ತಿದ್ದ. ಅವಳ ಮೋಹಕ ಮುಗುಳ್ನಗುವೂ ಅವಳ ವೈಫಲ್ಯವನ್ನು ಪ್ರತಿಫಲಿಸಿತು. ಉಸಿರುಕಟ್ಟಿ, ತೊಟ್ಟಿದ್ದ ಫ್ರಾಕಿನಿಂದ ಮುಕ್ಕಾಲು ಭಾಗ ಹೊರಗೆ ಕಾಣುವಂತೆ ಎದೆಯುಬ್ಬಿಸಿ ಕುಳಿತಾಗಲೂ ವಿಶ್ವಾಮಿತ್ರನಂತೆ ಕಣ್ಣುಮುಚ್ಚಿ ಕುಳಿತದ್ದು ಕಂಡು ಅವಳಿಗೆ ಅಳು ಬರುವಂತಾಯಿತು.

**ಬೆಲೆ : ರೂ.6-50**